"ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ದಲಿತರ ಸಹಭಾಗಿತ್ವ"

(ಬಳ್ಳಾರಿ ಜಿಲ್ಲೆಯ ಅಧ್ಯಯನ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕ

ದುರುಗಪ್ಪ ಬಿ.

ಮಾರ್ಗದರ್ಶಕರು

ಡಾ.ಜನಾರ್ದನ

ಸಹಾಯಕ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ೫೮೩ ೨೭೬

೨೦೧೮

“ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ದಲಿತರ ಸಹಭಾಗಿತ್ವ”

(ಬಳ್ಳಾರಿ ಜಿಲ್ಲೆಯ ಅಧ್ಯಯನ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕ:

ದುರುಗಪ್ಪ ಟಿ.

ಮಾರ್ಗದರ್ಶಕರು:

ಡಾ.ಜನಾರ್ದನ

ಸಹಾಯಕ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ

೨೦೧೮

ದೃಢೀಕರಣ ಪತ್ರ

ಶ್ರೀ ದುರುಗಪ್ಪ ಟಿ. ಅವರು "ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ದಲಿತರ ಸಹಭಾಗಿತ್ವ" (ಬಳ್ಳಾರಿ ಜಿಲ್ಲೆಯ ಅಧ್ಯಯನ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

13/11/18

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಡಾ.ಜನಾರ್ದನ)

ಮಾರ್ಗದರ್ಶಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಪ್ರಮಾಣ ಪತ್ರ

"ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ದಲಿತರ ಸಹಭಾಗಿತ್ವ" (ಬಳ್ಳಾರಿ ಜಿಲ್ಲೆಯ ಅಧ್ಯಯನ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಜನಾರ್ದನ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೨-೧೧-೨೦೧೮

ಸ್ಥಳ : ವಿದ್ಯಾರಣ್ಯ

(ದುರುಗಪ್ಪ ಟಿ.)

ಸಂಶೋಧಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಪರಿವಿಡಿ

ಪ್ರಸ್ತಾವನೆ

೧. ಅಧ್ಯಯನದ ಮಹತ್ವ
೨. ಸಮಸ್ಯೀಕರಣ
೩. ಅಧ್ಯಯನದ ಉದ್ದೇಶ
೪. ಅಧ್ಯಯನದ ವಿಧಾನ
೫. ಅಧ್ಯಯನದ ಮಿತಿಗಳು
೬. ಅಧ್ಯಯನದ ಸ್ವರೂಪ

ಪ್ರಸ್ತಾವನೆ

ಬಳ್ಳಾರಿ ಜಿಲ್ಲೆಯ ಕೆಳಸ್ತರದ ಪಂಚಾಯತ್ ಸಂಸ್ಥೆಗಳಾದ ಗ್ರಾಮ ಪಂಚಾಯತ್‌ಗಳಲ್ಲಿ ದಲಿತರ ಸಹಭಾಗಿತ್ವವನ್ನು ಅರ್ಥಮಾಡಿಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶ. 'ದಲಿತರು' ಎಂಬ ಶಬ್ದವು ವ್ಯಾಪಕ ಮತ್ತು ವಿಶಾಲವಾದ ಪರಿಕಲ್ಪನೆಯಾಗಿದೆ. ದಲಿತರು ಎಂಬ ಪದವನ್ನು ಪರಿಶಿಷ್ಟ ಜಾತಿಗೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಪರಿಶಿಷ್ಟ ಜಾತಿ ಶಬ್ದವು ಸಂವಿಧಾನದಲ್ಲಿ ಸ್ಥಾನವನ್ನು ಪಡೆದುಕೊಂಡಿದೆ. ಭಾರತದ ಅಸ್ಪೃಶ್ಯರನ್ನು ಆಧುನಿಕ ಭಾರತದಲ್ಲಿ ದಲಿತರು ಎಂದು ಕರೆಯಲಾಗುತ್ತಿದೆ. ಜಾತಿ ವ್ಯವಸ್ಥೆ ಹಾಸುಹೊಕ್ಕಾಗಿರುವ ಭಾರತೀಯ ಸಮಾಜದಲ್ಲಿ ದಲಿತರನ್ನು ತಾರತಮ್ಯಕ್ಕೆ ಮತ್ತು ಶೋಷಣೆಗೆ ಒಳಪಡಿಸಲಾಗಿದೆ. ಭಾರತದ ಸಂವಿಧಾನ ಪ್ರತಿಯೊಬ್ಬ ನಾಗರಿಕರಿಗೂ ಸಮಾನ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ನೀಡಿದೆ. ಆದರೆ ಇಂದಿಗೂ ದಲಿತರನ್ನು ಸುಲಭವಾಗಿ ಶೋಷಣೆಗೆ ಈಡುಮಾಡಲಾಗುತ್ತಿದೆ. ದೇಶದಾದ್ಯಂತ ದಲಿತರನ್ನು ಧಾರ್ಮಿಕವಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಅಪರಾಧಿಗಳನ್ನಾಗಿ ಮಾಡಲಾಗುತ್ತಿದೆ. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ದಲಿತರು ದ್ವಂದ್ವಗಳ, ಅಸಮಾನತೆ ಮತ್ತು ಶೋಷಣೆಯ ಅಭಿವ್ಯಕ್ತಿಗಳಾಗಿದ್ದಾರೆ. ದಲಿತರನ್ನು ಚಾಂಡಾಲರು, ಅವರ್ಣರು, ಅಚ್ಯುತ್, ಆದಿದ್ರಾವಿಡ, ಆದಿಕರ್ನಾಟಕ, ನಿರ್ಲಕ್ಷಿತ ವರ್ಗಗಳು, ತುಳಿತಕ್ಕೊಳಗಾದ ಹಿಂದೂಗಳು, ಹರಿಜನ, ಪರಿಶಿಷ್ಟ ಜಾತಿಗಳು ಮುಂತಾದ ಪಾರಿಭಾಷಿಕ ಶಬ್ದಗಳಿಂದ ಗುರುತಿಸಲಾಗುತ್ತಿದೆ.[೧]

ದಲಿತರು ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಸಮುದಾಯವಾಗಿದ್ದಾರೆ. ಭಾರತದ ಜಾತಿ ಪದ್ಧತಿಯು ತೀವ್ರವಾಗಿದೆ ಮತ್ತು ಅಸ್ಪೃಶ್ಯತೆಯೂ ಜಾತಿಯಲ್ಲಿ ಅಂತರ್ಗತವಾಗಿದೆ. ದಲಿತರು ಸಾಮಾಜಿಕ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನಿರ್ಲಕ್ಷಿತ ಸಮುದಾಯವಾಗಿದೆ. ಈ ಹಿನ್ನೆಲೆಯಲ್ಲಿ ದಲಿತರು ಜಾತಿ ಪ್ರಾಬಲ್ಯದ ಸಮಾಜದಿಂದ ತಾರತಮ್ಯ, ಅಸಮಾನತೆ ಮತ್ತು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಜಾತಿ ಪದ್ಧತಿಯ ಸಿದ್ಧಾಂತ ವರ್ಣ ವ್ಯವಸ್ಥೆಯೊಂದಿಗೆ ಅಂತರ್ಗತಗೊಂಡಿದ್ದು ಇದು ಹಿಂದೂ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎನ್ನುವ ನಾಲ್ಕು ಹಂತಗಳಲ್ಲಿ ವರ್ಗೀಕರಿಸಿದೆ.[೨] ಮೊದಲ ಮೂರು ವರ್ಣಗಳನ್ನು ದ್ವಿಜರೆಂದು ಪರಿಗಣಿಸಲಾಗುತ್ತದೆ. ಈ ವರ್ಣದ ಜನರು ವೇದಗಳಲ್ಲಿ ಪ್ರಸ್ತಾಪಿಸಿರುವ ಪ್ರಕಾರ ಉಪನಯನದಲ್ಲಿ ಪವಿತ್ರ ದಾರವನ್ನು ಧರಿಸುತ್ತಾರೆ. ಆದರೆ ಈ ಆಚರಣೆಗಳನ್ನು ನಿರ್ವಹಿಸಲು ದಲಿತರಿಗೆ ಅವಕಾಶ ನೀಡಿಲ್ಲ.[೩] ಭೂಮಿ ಉಳುವುದು, ಚಪ್ಪಲಿ ತಯಾರಿಕೆ, ಬಟ್ಟೆ ತೊಳೆಯುವುದು ಮುಂತಾದ ದೈಹಿಕ ಶ್ರಮದ ಕೆಲಸಗಳನ್ನು ಶೂದ್ರ ಸಮುದಾಯಗಳು ನಿರ್ವಹಿಸುತ್ತಿದ್ದರು. ಈ ಕೆಲಸಗಳ ಜೊತೆಗೆ ಅಸ್ಪೃಶ್ಯತೆ ಆಚರಣೆಯು

ಜಾರಿಯಲ್ಲಿದೆ. ದಲಿತರಿಗೆ ಉನ್ನತ ಜಾತಿಯ ಜನರೊಂದಿಗೆ ಊಟ ಮಾಡುವ ಅಥವಾ ಕುಳಿತುಕೊಳ್ಳುವ ಸಮಾನ ಅವಕಾಶವನ್ನು ನಿರಾಕರಿಸಲಾಗಿತ್ತು.[೪] ಪರಿಶಿಷ್ಟ ಜಾತಿ ಸಮುದಾಯ ಬಹುತೇಕ ಗ್ರಾಮೀಣ ಭಾಗದಲ್ಲಿ ವಾಸಿಸುತ್ತಾರೆ. ಅವರಲ್ಲಿ ಕೇವಲ ಶೇ.೧೪ರಷ್ಟು ಮಾತ್ರ ನಗರವಾಸಿಗಳಾಗಿದ್ದಾರೆ. ದಲಿತರಲ್ಲಿ ಕಡಿಮೆ ಜನಸಂಖ್ಯೆಯಷ್ಟು ಸಣ್ಣಹಿಡುವಳಿದಾರರಾಗಿದ್ದು, ಬಹುಸಂಖ್ಯಾತರು ಕೃಷಿ ಕಾರ್ಮಿಕರಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಚರ್ಮ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕರು ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ್ದಾರೆ. ಪಶ್ಚಿಮ ಭಾರತದ ಬಹುಸಂಖ್ಯಾತ ಪರಿಶಿಷ್ಟ ಜಾತಿ ಸಮುದಾಯಗಳು ನೇಕಾರಿಕೆಯನ್ನು ಅವಲಂಬಿಸಿವೆ. ನಗರ ಭಾಗದ ಬಹುತೇಕರು ಅಸಂಘಟಿತ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಮುದಾಯವು ಅಸ್ಪೃಶ್ಯತೆ, ಮಾನವ ಹಕ್ಕುಗಳಿಂದ ವಂಚಿತರಾಗಿ ಸಾಮಾಜಿಕ ಶೋಷಣೆಗೆ ಒಳಗಾಗಿವೆ. ಈ ದೇಶದ ೨/೩ರಷ್ಟು ಜೀತದಾಳುಗಳು ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಅಭಿಪ್ರಾಯಪಟ್ಟಿರುವ ಪ್ರಕಾರ ದಲಿತ ಸಮುದಾಯ ಅತ್ಯಂತ ಬಡವರಾಗಿದ್ದು, ಅನಕ್ಷರಸ್ಥರಾಗಿದ್ದು, ವೃತ್ತಿ ಕೌಶಲ್ಯಗಳಿಲ್ಲದೆ ಆಧುನಿಕ ಯುಗದಲ್ಲಿ ಸ್ಪರ್ಧೆ ಮಾಡುವ ಸಾಮರ್ಥ್ಯ ಪಡೆದುಕೊಂಡಿಲ್ಲ. ಹಾಗಾಗಿ ಈ ಸಮುದಾಯದಲ್ಲಿ ಭೂಮಿ ಸಾಂಪ್ರದಾಯಿಕ ವೃತ್ತಿಗೆ ಸಂಬಂಧಪಟ್ಟಂತೆ ಮೇಲ್ಮುಖ ಚಲನೆ ಸಾಧ್ಯವಾಗಿಲ್ಲ. ಈ ಸಮುದಾಯದಲ್ಲಿ ಒಂದು ಸಣ್ಣ ಮಧ್ಯಮ ವರ್ಗ ಸೃಷ್ಟಿಯಾಗಿದ್ದರೂ ಅವರ ಅಭಿವೃದ್ಧಿ ವೇಗ ತೀವ್ರಗೊಂಡಿಲ್ಲ.[೫] ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ಸಮುದಾಯಕ್ಕಾಗಿ ಹೋರಾಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿ ಸಮುದಾಯಗಳಿಗೆ ಶೈಕ್ಷಣಿಕ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ನೀಡುವ ಕ್ರಮವನ್ನು ಸಂವಿಧಾನಬದ್ಧಗೊಳಿಸಿದರು. ಇಂದು ಶೈಕ್ಷಣಿಕ ಸಂಸ್ಥೆ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ.೧೫ರಷ್ಟು ಮೀಸಲಾತಿ ದೊರೆಯುತ್ತಿದೆ. ರಾಜಕೀಯವಾಗಿ ನಿರ್ಲಕ್ಷ್ಯತೆಗೆ ಒಳಗಾಗಿದ್ದ ನಿರ್ಲಕ್ಷಿತ ಸಮುದಾಯಗಳಿಗೆ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ವಿಶೇಷ ಪ್ರಾತಿನಿಧ್ಯ ನೀಡಲಾಯಿತು. ದಲಿತರಿಗೆ ನೀಡಿರುವ ರಾಜಕೀಯ ಮೀಸಲಾತಿಯನ್ನು ೩೩೦ನೇ ವಿಧಿ, ೩೩೨ನೇ ವಿಧಿ ಮತ್ತು ೩೩೪ನೇ ವಿಧಿಗಳು ಖಾತ್ರಿಪಡಿಸುತ್ತವೆ. ಈ ಮೀಸಲಾತಿಯು ಸಂವಿಧಾನ ಜಾರಿಗೊಂಡ ದಿನದಿಂದ ಮುಂದಿನ ೧೦ ವರ್ಷಗಳವರೆಗೆ ನಿಗದಿ ಮಾಡಲಾಗಿತ್ತು. ಸಂವಿಧಾನ ಕರ್ತೃಗಳಿಗೆ ೧೦ ವರ್ಷಗಳ ಒಳಗೆ ಪರಿಶಿಷ್ಟ ಜಾತಿ ಸಮುದಾಯವನ್ನು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮೇಲೆತ್ತುವ ವಿಶ್ವಾಸವಿತ್ತು. ಆದರೆ ದುರದೃಷ್ಟವಶಾತ್ ಈ ಗುರಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಸರ್ಕಾರ ಇಲ್ಲಿನವರೆಗೂ ಮೀಸಲಾತಿಯನ್ನು

ಮುಂದುವರೆಸುತ್ತಿದೆ.[೬] ಭಾರತವು ಸಂವಿಧಾನವನ್ನು ಅಂಗೀಕರಿಸಿ ೭೦ ದಶಕಗಳು ಕಳೆದರೂ ಇಂದಿಗೂ ದಲಿತರ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳಲ್ಲಿ ಸುಧಾರಣೆ ಕಂಡು ಬಂದಿಲ್ಲ. ದಲಿತರನ್ನು ಮುಖ್ಯವಾಹಿನಿಗೆ ಸೇರ್ಪಡೆಗೊಳಿಸುವ ಸಂಗತಿಯನ್ನು ಚರ್ಚಿಸುವ ಸಂದರ್ಭದಲ್ಲಿ ಅವರ ಬಣ್ಣ, ಜಾತಿ, ಮೂಢನಂಬಿಕೆಗಳು ಮತ್ತು ಆಚರಣೆಗಳು ಮತ್ತು ಅವರಿಗೆ ನೀಡುತ್ತಿರುವ ಶೈಕ್ಷಣಿಕ, ಉದ್ಯೋಗದ ಮತ್ತು ರಾಜಕೀಯ ಮೀಸಲಾತಿಗಳು ಹೆಚ್ಚು ಚರ್ಚೆಗೆ ಒಳಗಾಗುತ್ತವೆಯೇ ಹೊರತು ಅವರ ಶೈಕ್ಷಣಿಕ ಹಿಂದುಳಿವಿಕೆ, ಬಡತನ, ಅಸ್ಪೃಶ್ಯತೆ, ಮುಂತಾದ ಸಂಗತಿಗಳು ಚರ್ಚೆಗೆ ಒಳಪಡುವುದಿಲ್ಲ.

ಪ್ರಜಾಪ್ರಭುತ್ವ ಯಶಸ್ವಿಗೊಳ್ಳಲು ರಾಜಕೀಯ ಮತ್ತು ಸಾಮಾಜಿಕ ಸಮಾನತೆಗಳು ಎರಡೂ ಅಗತ್ಯವಾಗಿವೆ. ಭಾರತವು ಸ್ವಾತಂತ್ರ್ಯ ಪಡೆದಾಗ ಎಲ್ಲರಿಗೂ ರಾಜಕೀಯ ಸಮಾನತೆ ದೊರೆಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಇತರೆ ಸಮುದಾಯಗಳ ಜೊತೆಗೆ ಮತದಾನದ ಹಕ್ಕು ಮತ್ತು ಇತರೆ ರಾಜಕೀಯ ಹಕ್ಕುಗಳನ್ನು ಪಡೆದುಕೊಂಡರು. ಆದರೆ ಸಮಾಜ ರಾಜಕೀಯ ಹಕ್ಕುಗಳ ಜೊತೆಗೆ ಸಾಮಾಜಿಕ ಹಕ್ಕುಗಳನ್ನು ನೀಡಲು ಮುಂದಾಗದಿರುವುದು ದುರಂತವೇ ಸರಿ. ಡಾ.ಬಿ.ಆರ್.ಅಂಬೇಡ್ಕರ್‌ರವರು ನವೆಂಬರ್ ೨೬, ೧೯೪೯ರಂದು ಸಂವಿಧಾನ ರಚನಾ ಸಮಿತಿಯನ್ನು ಉದ್ದೇಶಿಸಿ ಮಾತನಾಡುತ್ತಾ, "ಜನವರಿ ೨೬, ೧೯೫೦ರಂದು ನಾವು ದ್ವಂದ್ವಗಳನ್ನು ಪ್ರವೇಶಿಸುತ್ತೇವೆ. ರಾಜಕೀಯವಾಗಿ ಎಲ್ಲರಿಗೂ ಸಮಾನತೆ ಇರುತ್ತದೆ. ಆದರೆ ಸಾಮಾಜಿಕ ಅಸಮಾನತೆ ಮುಂದುವರೆಯುತ್ತದೆ. ರಾಜಕಾರಣದಲ್ಲಿ ಒಬ್ಬ ವ್ಯಕ್ತಿಗೆ ಒಂದು ಮತ. ಒಂದು ಮತಕ್ಕೆ ಒಂದು ಮೌಲ್ಯ ಎಂಬ ತತ್ವವನ್ನು ಜಾರಿಗೊಳಿಸಿದ್ದೇವೆ. ಆದರೆ ಮತ್ತೊಂದೆಡೆ ಸಾಮಾಜಿಕವಾಗಿ ಅಸಮಾನತೆ ಮುಂದುವರೆಯುತ್ತದೆ. ಅಂದರೆ ಕೆಲವರಿಗೆ ಉತ್ತಮ ಸ್ಥಾನಗಳು, ಕೆಲವರಿಗೆ ಕೆಳಮಟ್ಟದ ಸ್ಥಾನಗಳು ಪ್ರಾಪ್ತಿಯಾಗುತ್ತವೆ. ಆರ್ಥಿಕವಾಗಿ ಕೆಲವರು ಉತ್ತಮ ಸಂಪತ್ತನ್ನು ಹೊಂದಿರುತ್ತಾರೆ. ಬಹುತೇಕರು ಬಡವರಾಗಿ ಮುಂದುವರೆಯುತ್ತಾರೆ. ಇಂತಹ ಅಸಮಾನ ಸಮಾಜವನ್ನು ತೊಡೆದು ಹಾಕದಿದ್ದಲ್ಲಿ ನಾವು ಶ್ರಮವಹಿಸಿ ಕಟ್ಟಿದ ರಾಜಕೀಯ ಪ್ರಭುತ್ವವನ್ನು ಜನರು ಧ್ವಂಸ ಮಾಡುತ್ತಾರೆ" ಎಂದು ಹೇಳಿದ್ದಾರೆ.[೭] ಏಳು ದಶಕಗಳ ಹಿಂದೆ ಅಂಬೇಡ್ಕರ್ ಅವರು ವ್ಯಕ್ತಪಡಿಸಿದ್ದ ಆತಂಕ ಇಂದಿಗೂ ದೂರವಾಗಿಲ್ಲ. ದಲಿತರ ಸ್ಥಿತಿ ಇಂದಿಗೂ ಅದೇ ತೆರನಾಗಿ ಮುಂದುವರೆದಿದೆ. ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ವಾಸಿಸುವ ದಲಿತ ಸಮುದಾಯಗಳು ಅಭಿವೃದ್ಧಿ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಸ್ವಾತಂತ್ರ್ಯದ ನಂತರ ಅಧಿಕಾರ ವಿಕೇಂದ್ರೀಕರಣದ ಕ್ರಮಗಳನ್ನು ಕೈಗೊಳ್ಳಲಾಯಿತು. ಅಧಿಕಾರ

ವಿಕೇಂದ್ರೀಕರಣವು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಹುಮುಖ್ಯ ಆಯಾಮವೆಂದು ಪರಿಭಾವಿಸಲಾಗಿದೆ.

ಪ್ರಜಾಪ್ರಭುತ್ವವು ಅತ್ಯುತ್ತಮ ಸರಕಾರದ ಪದ್ಧತಿಯೆಂದು ಪರಿಭಾವಿಸಲಾಗುತ್ತದೆ. ಈ ಸರಕಾರ ಆಡಳಿತವನ್ನು ಸ್ವಾತಂತ್ರ್ಯ, ಸಮಾನತೆ, ಬ್ರಾತೃತ್ವ ಮತ್ತು ನ್ಯಾಯ ಎಂಬ ನಾಲ್ಕು ಆಧಾರ ಸ್ತಂಭಗಳ ಮೂಲಕ ನಡೆಸಲಾಗುತ್ತಿದೆ. ಅಧಿಕಾರ ವಿಕೇಂದ್ರೀಕರಣವು ಪ್ರಜಾಸತ್ತಾತ್ಮಕ ರಾಜಕಾರಣದಲ್ಲಿ ಅತೀಮುಖ್ಯವಾದುದು ವಿಕೇಂದ್ರೀಕರಣ ಪ್ರಕ್ರಿಯೆಯು ಆಡಳಿತವನ್ನು ಸಾಮಾನ್ಯ ಜನರತ್ತ ಕೊಂಡೊಯ್ಯುತ್ತದೆ ಮತ್ತು ಅವರನ್ನು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತದೆ. ಸಮಾಜದ ಎಲ್ಲಾ ಸಮುದಾಯಗಳು ಸಕ್ರೀಯವಾಗಿ ಪಾಲ್ಗೊಂಡಾಗ ಮಾತ್ರ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ ಅರ್ಥಪೂರ್ಣವಾಗುತ್ತದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ ಸಮುದಾಯಗಳು ನಿರ್ಣಯಕ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಾಗ ಮಾತ್ರ ವಿಕೇಂದ್ರೀಕರಣ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.[೮]

ಅಧಿಕಾರವು ಮೇಲುಸ್ತರದಿಂದ, ಕೆಳಸ್ತರದವರೆಗೆ ವಿಕೇಂದ್ರೀಕರಣಗೊಳಿಸಲ್ಪಟ್ಟಾಗ ಮಾತ್ರ ಸಕ್ರೀಯ ಪಾಲ್ಗೊಳ್ಳುವಿಕೆ ಅರ್ಥಪೂರ್ಣವಾಗುತ್ತದೆ. ಭಾರತದ ಸಂವಿಧಾನದ ೪೦ನೇ ವಿಧಿಯ ಪ್ರಕಾರ ರಾಜ್ಯ ಸರ್ಕಾರಗಳು ಪಂಚಾಯತ್‌ಗಳನ್ನು ಸಂಘಟಿಸಿ ಅವುಗಳು ಸ್ವಯಂ ಸರಕಾರಗಳಾಗಿ ಕಾರ್ಯನಿರ್ವಹಿಸಲು, ಅಗತ್ಯವಾದ ಅಧಿಕಾರಗಳನ್ನು ನೀಡಲು ಕ್ರಮ ಕೈಗೊಳ್ಳತಕ್ಕದ್ದು ಎಂದು ವಿವರಿಸುತ್ತದೆ.[೯] ಸಂವಿಧಾನದಲ್ಲಿ ಉಲ್ಲೇಖಗೊಂಡಿರುವ ರಾಜ್ಯ ನಿರ್ದೇಶಕ ತತ್ವಗಳ ಅಶಯದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಧಿಕಾರ ವಿಕೇಂದ್ರೀಕರಣಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಂಡಿದ್ದರೂ, ರಾಜ್ಯ ಸರ್ಕಾರಗಳು ನಿಯಮಿತವಾಗಿ ಪಂಚಾಯಿತಿ ಸಂಸ್ಥೆಗಳನ್ನು ಸಂಘಟಿಸುವ ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾದವು. ಈ ಹಿನ್ನಲೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಗಳನ್ನು ನಿಯಮಿತವಾಗಿ ನಡೆಸುವುದನ್ನು ಸಂವಿಧಾನ ಬದ್ಧಗೊಳಿಸುವ ಪ್ರಯತ್ನಗಳನ್ನು ಕೈಗೊಂಡು ಅಂತಿಮವಾಗಿ ಸಂವಿಧಾನದ ೭೩ನೇ ತಿದ್ದುಪಡಿಯ ಮೂಲಕ ಪಂಚಾಯತ್ ಸಂಸ್ಥೆಗಳ ಚುನಾವಣೆಗಳನ್ನು ಸಂವಿಧಾನ ಬದ್ಧಗೊಳಿಸಲಾಯಿತು. ೨ನೇ ಅಕ್ಟೋಬರ್ ೧೯೫೯ರಂದು ರಾಜಸ್ತಾನದ ನಾಗೋರ್‌ನಲ್ಲಿ ಪಂಚಾಯತ್ ವ್ಯವಸ್ಥೆಯನ್ನು ಉದ್ಘಾಟಿಸಿ ಮಾತನಾಡಿದ ಅಂದಿನ ಭಾರತದ ಪ್ರಧಾನ ಮಂತ್ರಿ ದಿವಂಗತ ಜವಾಹರ್‌ಲಾಲ್ ನೆಹರು ಅವರು "ಗ್ರಾಮೀಣ ಭಾರತದಲ್ಲಿ ವಾಸಿಸುವ ಜನರು ರಾಜಕೀಯವಾಗಿ ಪ್ರಜ್ಞಾವಂತರಾದಾಗ ಮಾತ್ರ ಭಾರತದ ನೈಜ ಅಭಿವೃದ್ಧಿ ಸಾಕಾರಗೊಳ್ಳುತ್ತದೆ. ಪಂಚಾಯತ್

ವ್ಯವಸ್ಥೆಯ ಸಂಘಟನೆ ಆಧುನಿಕ ಭಾರತದ ದೃಷ್ಟಿಯಲ್ಲಿ ಐತಿಹಾಸಿಕ ಮತ್ತು ಕ್ರಾಂತಿಕಾರಿ ಕ್ರಮವಾಗಿದೆ" ಎಂದು ವಿವರಿಸಿದರು.[೧೦]

ಸ್ವಾತಂತ್ರ್ಯ ನಂತರ ಅಧಿಕಾರ ವಿಕೇಂದ್ರೀಕರಣಕ್ಕಾಗಿ ಮತ್ತು ಪಂಚಾಯತ್ ವ್ಯವಸ್ಥೆಗಳನ್ನು ಸಶಕ್ತಗೊಳಿಸಲು ಸರ್ಕಾರ ನಿಯಮಿಸಿದ ವಿವಿಧ ಆಯೋಗಗಳು ಶಿಫಾರಸ್ಸುಗಳನ್ನು ನೀಡಿವೆ. ೧೯೫೭ರಲ್ಲಿ ಬಲವಂತರಾವ್ ಮೆಹತಾರವರ ಅಯೋಗವು ಸರ್ಕಾರಕ್ಕೆ ಎರಡು ಪ್ರಮುಖ ಸಲಹೆಗಳನ್ನು ನೀಡಿತು. ಮೊದಲನೆಯದಾಗಿ ಅಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ, ಆಡಳಿತಾತ್ಮಕ ವಿಕೇಂದ್ರೀಕರಣಗೊಳ್ಳುವುದು. ಎರಡನೆಯದಾಗಿ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಗೊಂಡ ಸಮಿತಿಯ ನಿಯಂತ್ರಣಕ್ಕೆ ತರುವುದು. ೧೯೭೭ರಲ್ಲಿ ನೇಮಿಸಿದ ಅಶೋಕ ಮೆಹತಾ ಸಮಿತಿಯ ವರದಿಯ ಕುರಿತು ಎರಡು ಹಂತದ ಸಶಕ್ತ ಪಂಚಾಯಿತಿ ವ್ಯವಸ್ಥೆಯನ್ನು ರೂಪಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು.[೧೧] ಸುಮಾರು ೮೦ರ ದಶಕದಲ್ಲಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಂಚಾಯತ್ ಸಂಸ್ಥೆಗಳ ಪಾಲ್ಗೊಳ್ಳುವಿಕೆ ಅಗತ್ಯತೆಯ ಚರ್ಚೆಗಳು ತೀವ್ರವಾಗಿ ನಡೆದವು. ೬ನೆಯ ಮತ್ತು ೭ನೆಯ ಪಂಚವಾರ್ಷಿಕ ಯೋಜನೆಗಳ ಸಂದರ್ಭದಲ್ಲಿ ಪಂಚಾಯತ್ ಸಂಸ್ಥೆಗಳ ಸಶಕ್ತೀಕರಣ ಪ್ರಸ್ತಾಪ ಮಾಡಲಾಯಿತು. ೧೯೮೫ರಲ್ಲಿ ಯೋಜನಾ ಆಯೋಗವು ಜಿ.ವಿ.ಕೆ. ನೇತೃತ್ವದ ೧೨ ಸದಸ್ಯರ ಸಮಿತಿಯನ್ನು ರಚಿಸಿತು. ಈ ಸಮಿತಿಯು ಜನಪ್ರತಿನಿಧಿಗಳ ಸಾಮರ್ಥ್ಯ ಹೆಚ್ಚಳದ ಅಗತ್ಯ ಹಾಗೂ ಕಡ್ಡಾಯವಾಗಿ ನಿಯಮಿತ ಚುನಾವಣೆಗಳನ್ನು ನಡೆಸುವ ಬಗ್ಗೆ ಶಿಫಾರಸ್ಸು ಮಾಡಿತು. ೧೯೮೬-೮೭ರಲ್ಲಿ ಕೇಂದ್ರ ಸರ್ಕಾರವು ಎಲ್.ಎಂ.ಸಿಂಘ್ವಿಯವರ ನೇತೃತ್ವದಲ್ಲಿ ಮತ್ತೊಂದು ಸಮಿತಿಯನ್ನು ರಚಿಸಿತು. ಅಧ್ಯಯನದ ನಂತರ ಈ ಸಮಿತಿಯು ಪಂಚಾಯತ್ ಸಂಸ್ಥೆಗಳನ್ನು ಸ್ಥಳೀಯ ಸ್ವಯಂ ಸರ್ಕಾರಗಳೆಂದು ಕರೆಯುವಂತೆ ಹಾಗೂ ಸ್ಥಳೀಯ ಮಟ್ಟದಲ್ಲಿ ಯೋಜನೆ ಮತ್ತು ಕಾರ್ಯಾಚರಣೆಯಲ್ಲಿ ಪಂಚಾಯತ್ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವ ಬಗ್ಗೆ ಶಿಫಾರಸ್ಸು ಮಾಡಿತು. ೧೯೮೮ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂದರ್ಭಗಳನ್ನು ಕುರಿತು ಅಧ್ಯಯನ ಮಾಡಲು ನೇಮಿಸಿದ ಸರ್ಕಾರದ ಆಯೋಗವು ಎಲ್ಲಾ ರಾಜ್ಯಗಳಲ್ಲಿ ಏಕರೂಪಿ ಪಂಚಾಯತ್ ಕಾಯಿದೆಗಳನ್ನು ರೂಪಿಸಲು ಹಾಗೂ ನಿಯಮಿತ ಚುನಾವಣೆಗಳನ್ನು ನಡೆಸುವ ಕುರಿತು ಶಿಫಾರಸ್ಸು ಮಾಡಿತು. ೧೯೮೮ರ ತುಂಗನ್ ಸಮಿತಿಯು ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡುವುದು, ಕಡ್ಡಾಯ ಮತ್ತು ನಿಯಮಿತ ಚುನಾವಣೆ ಹಾಗೂ ಜಿಲ್ಲಾ ಪಂಚಾಯತ್ ಮಾತ್ರ ಜಿಲ್ಲೆಯ ಯೋಜನೆ ಮತ್ತು ಅಭಿವೃದ್ಧಿಯ ಸಂಸ್ಥೆಯನ್ನಾಗಿ ರೂಪಿಸುವ ಬಗ್ಗೆ ಶಿಫಾರಸ್ಸು ನೀಡಿತು. ಸಿಂಘ್ವಿ ಸಮಿತಿ ಹಾಗೂ ಇತರೆ ಸಮಿತಿಗಳ ಶಿಫಾರಸ್ಸಿನ

ಹಿನ್ನಲೆಯಲ್ಲಿ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನ–ಮಾನ ನೀಡುವ ಸಾಂಸ್ಥಿಕ ಪ್ರಯತ್ನ ನಡೆದದ್ದು ೧೯೮೯ರಲ್ಲಿ, ಕೇಂದ್ರ ರಾಜೀವ್ ಗಾಂಧಿ ಸರ್ಕಾರ ಸ್ಥಳೀಯ ಸರ್ಕಾರಗಳ ಬಗ್ಗೆ ೬೪ನೆಯ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಆದುದರಿಂದ ಮಸೂದೆಯು ಲೋಕಸಭೆಯಲ್ಲಿ ಅನುಮೋದಿಸಲ್ಪಟ್ಟಿತು. ದುರದೃಷ್ಟವಶಾತ್ ರಾಜ್ಯಸಭೆಯಿಂದ ತಿರಸ್ಕರಿಸಲ್ಪಟ್ಟಿತ್ತು. ಇದು ಸ್ವಾತಂತ್ರ್ಯ ಭಾರತದ ಮೊದಲ ರಚನಾತ್ಮಕ ಪ್ರಯತ್ನವಾಗಿತ್ತು. ೯೦ರ ದಶಕದಲ್ಲಿ ಪಂಚಾಯತ್ ಸಂಸ್ಥೆಗಳನ್ನು ಸಶಕ್ತಿಗೊಳಿಸುವ ಪ್ರಯತ್ನಗಳು ಮತ್ತೊಮ್ಮೆ ಚರ್ಚೆಗೆ ಬಂದವು. ವಿವಿಧ ಪ್ರಯತ್ನಗಳ ನಂತರ ೧೯೯೨ರಲ್ಲಿ ಸಂವಿಧಾನದ ತಿದ್ದುಪಡಿ ೭೩ನ್ನು ಜಾರಿಗೊಳಿಸಲಾಯಿತು. ಈ ತಿದ್ದುಪಡಿಯಿಂದಾಗಿ ಭಾರತವು ಮೂರು ಹಂತಗಳ ಫೆಡರಲ್ ವ್ಯವಸ್ಥೆಯಾಗಿ ರೂಪುಗೊಂಡಿತು.[೧೨]

ಕರ್ನಾಟಕ ಮತ್ತು ಪಂಚಾಯತ್ ವ್ಯವಸ್ಥೆ:– ಕರ್ನಾಟಕದಲ್ಲಿ ೧೮೮೧ರ ಸುಮಾರಿಗೆ ದಿವಾನ್ ಸಿ.ರಂಗಾಚಾರ್ಲು ಅವರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆ ಪ್ರಾರಂಭಗೊಂಡಿತು. ೧೯೦೩ರ ಹೊತ್ತಿಗೆ ಸ್ಥಾನಿಕ ಸರ್ಕಾರ ಸಂಸ್ಥೆಗಳು ಆರಂಭಗೊಂಡು ೮ ಜಿಲ್ಲಾ ಬೋರ್ಡುಗಳು, ೭೭ ತಾಲ್ಲೂಕು ಬೋರ್ಡುಗಳು, ೧೮೦ ಪಂಚಾಯತ್ ಯೂನಿಯನ್‌ಗಳಿದ್ದಿದ್ದು ಕಂಡು ಬರುತ್ತವೆ. ನಂತರ ೧೯೧೮ ಸ್ಥಾನಿಕ ಸಂಸ್ಥೆಗಳ ಮತ್ತು ಗ್ರಾಮ ಪಂಚಾಯತ್ ಅಧಿನಿಯಮ ೧೯೩೭ರಲ್ಲಿ ಬದಲಾವಣೆಗೊಂಡು ತದನಂತರ ೧೯೫೨ರಲ್ಲಿ ಮೈಸೂರು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಬೋರ್ಡುಗಳು ಅಧಿನಿಯಮ ಜಾರಿಯಲ್ಲಿದ್ದುದ್ದನ್ನು ಕಾಣುತ್ತೇವೆ. ಸ್ವಾತಂತ್ರ್ಯದ ನಂತರ ಸಂವಿಧಾನದ ನಿರ್ದೇಶಿತ ತತ್ವ ೪೦ಸಿ ಅನ್ವಯ ಹಾಗೂ ೧೯೫೭ರಲ್ಲಿ ಬಂದ ಬಲವಂತರಾಯ್ ನೇತಾ ವರದಿಯ ಪ್ರಕಾರ ಪಂಚಾಯತ್ ರಾಜ್ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಕರ್ನಾಟಕದ ಪ್ರಥಮ ಹೆಜ್ಜೆ ಹಾಕಿದ ರಾಜ್ಯಗಳಲ್ಲಿ ಮೊದಲನೆಯದು. ಇದಕ್ಕಾಗಿ ಕೊಂಡಜ್ಜಿ ಬಸಪ್ಪ ಸಮಿತಿ ರಚಿಸಿದ ಹೆಗ್ಗಳಿಕೆಯೂ ಈ ರಾಜ್ಯದ್ದು, ತತ್ಪರಿಣಾಮವಾಗಿ ಜಾರಿಗೆ ಬಂದ ೧೯೫೯ರ ಗ್ರಾಮ ಪಂಚಾಯತ್ ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿ ಕಾಯ್ದೆ ಆಡಳಿತ ವಿಕೇಂದ್ರೀಕರಣದತ್ತ ಇಟ್ಟ ಮೊದಲ ಹೆಜ್ಜೆ ಗಮನಾರ್ಹವಾದುದು. ಕೇಂದ್ರ ಸರ್ಕಾರ ನೇಮಿಸಿದ್ದ ೧೯೭೮ರಲ್ಲಿ ಪ್ರಕಟವಾದ ಅಶೋಕ್ ಮೆಹತಾ ವರದಿಯಲ್ಲಿ ಆಡಳಿತ ವಿಕೇಂದ್ರೀಕರಣ ತತ್ವದ ಹಿನ್ನಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪುನರ್ ರೂಪಿಸುವ ದಿಕ್ಕಿನಲ್ಲಿ ಬಂದ ಸಮಗ್ರ ವರದಿ. ಈ ವರದಿಯ ಆಧಾರದ ಮೇಲೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಪುನರ್‌ರಚಿಸಿದ ಪ್ರಪ್ರಥಮ ರಾಜ್ಯ ಕರ್ನಾಟಕ. ೧೯೮೩ರಲ್ಲಿ ಜಿಲ್ಲಾ ಪರಿಷತ್ ಕಾಯ್ದೆಯೇ ಅದು. ಗಾಂಧೀಜಿಯವರ "ಗ್ರಾಮ ಸ್ವರಾಜ್ಯ" ಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ

ಗ್ರಾಮಸಭೆಯು ವಿನೂತನ ಕಲ್ಪನೆಯನ್ನು ಜಾರಿಗೊಳಿಸುವಲ್ಲಿ ಇಡೀ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಮಹಿಳೆಯರಿಗೆ ಶೇ.೨೫ರಷ್ಟು ಸ್ಥಾನಗಳನ್ನು ಮೀಸಲಿಡುವಲ್ಲಿ ಹಾಗೂ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ದೊರಕಿಸುವಲ್ಲಿ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆ ಇಡೀ ರಾಷ್ಟ್ರದಲ್ಲೇ ಒಂದು ಮೊಟ್ಟಮೊದಲ ಕ್ರಾಂತಿಕಾರಕ ಹೆಜ್ಜೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಸಂಸ್ಥೆಗಳು ನಿರ್ವಹಿಸುವ ಕೆಲಸ, ಕಾರ್ಯಗಳಲ್ಲಿ ಆಡಳಿತ ನಿರ್ವಹಣೆಯಲ್ಲಿ ಸಂಪೂರ್ಣ ಅಧಿಕಾರದ ಜವಾಬ್ದಾರಿ ಮತ್ತು ಹೊಣೆಗಾರಿಕೆ ಇದ್ದುದು ಹೊಸ ಕಾಯ್ದೆಯ ವಿಶೇಷ. ಇಡೀ ರಾಷ್ಟ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏಕರೂಪವಾಗಿ ಸಂವಿಧಾನಾತ್ಮಕ ರಕ್ಷಣೆಯ ಹಿನ್ನಲೆಯಲ್ಲಿ ಬದಲಾಯಿಸಲು ನಡೆಸಿದ ಪ್ರಯತ್ನವೇ ೭೩ನೇ ಸಂವಿಧಾನದ ತಿದ್ದುಪಡಿ(ಅನುಚ್ಛೇಧ ೨೪೩ಜಿ). ಭಾರತ ಸಂವಿಧಾನದ ೭೩ನೇ ತಿದ್ದುಪಡಿಯನ್ನು ಹೆಚ್ಚು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಿದ ರಾಜ್ಯಗಳಲ್ಲಿ ಕರ್ನಾಟಕವು ಅಗ್ರಸ್ಥಾನದಲ್ಲಿದೆ. ರಾಜ್ಯ ವಿಧಾನಮಂಡಲವು ೧೯೯೩ರಲ್ಲಿ ರೂಪಿಸಿ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ದೇಶದಲ್ಲೇ ಹೆಚ್ಚು ಪ್ರಗತಿಪರವೆಂದು ಭಾವಿಸಲಾಗಿದೆ.[೧೩] ರಾಮಕೃಷ್ಣ ಹೆಗಡೆ ಮತ್ತು ಅಬ್ದುಲ್ ನಜೀರ್ ಸಾಬ್ ಅವರು ಪಂಚಾಯಿತಿ ರಾಜ್ ವ್ಯವಸ್ಥೆಯನ್ನು ಕೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಇಂದಿನ ಪಂಚಾಯತ್ ರಾಜ್ ಅಧಿನಿಯಮವು ೭೩ರ ಸಂವಿಧಾನ ತಿದ್ದುಪಡಿಯ ನಂತರ ಎಂ.ವೈ. ಘೋರ್ಪಡೆಯವರ ಕಾಲದಲ್ಲಿ ರೂಪುಗೊಂಡಿತು. ಪ್ರಸ್ತುತ ಸಂದರ್ಭದಲ್ಲಿ ಗ್ರಾಮೀಣ ಸ್ಥಳೀಯ ಸರಕಾರಗಳ ವ್ಯಾಪ್ತಿಯಲ್ಲಿ ನಾಲ್ಕು ಹಂತಗಳ ವಿಕೇಂದ್ರೀಕರಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ಗ್ರಾಮೀಣ ಭಾಗದಲ್ಲಿ ಗ್ರಾಮಸಭೆಯು ಸಾಮೂಹಿಕ ನಿರ್ಣಯಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ನೇರ ಪ್ರಜಾಪ್ರಭುತ್ವದ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಗ್ರಾಮ ಪಂಚಾಯಿತಿಯ ಜನಪ್ರತಿನಿಧಿಗಳು ಗ್ರಾಮಸಭೆಗೆ ಉತ್ತರದಾಯಿಯಾಗಿ ಕಾರ್ಯನಿರ್ವಹಿಸುವ ವ್ಯವಸ್ಥೆಯನ್ನು ರೂಪಿಸಲಾಗಿದೆ. ಗ್ರಾಮದ ಅಭಿವೃದ್ಧಿಗೆ ಗ್ರಾಮ ಪಂಚಾಯಿತಿ, ತಾಲ್ಲೂಕು ಅಭಿವೃದ್ಧಿಗೆ ತಾಲ್ಲೂಕು ಪಂಚಾಯಿತಿ ಮತ್ತು ಒಟ್ಟಾರೆ ಜಿಲ್ಲೆಗೆ ಜನಪರ ಕಾರ್ಯಕ್ರಮವನ್ನು ರೂಪಿಸುವ ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಏಕೈಕ ಜಿಲ್ಲಾ ಸಂಸ್ಥೆಯನ್ನಾಗಿ ಜಿಲ್ಲಾ ಪಂಚಾಯಿತಿಯನ್ನು ರೂಪಿಸಲಾಗಿದೆ.[೧೪]

ಪಂಚಾಯಿತಿ ವ್ಯವಸ್ಥೆ ಕಾರ್ಯಾಚರಣೆಯ ವಾಸ್ತವಿಕತೆ: ವಿಕೇಂದ್ರೀಕರಣ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ೧೯೮೭ರ ನಂತರ ಈಗಾಗಲೇ ನಾಲ್ಕು ಚುನಾವಣೆಗಳು ನಡೆದಿವೆ. ಈ ವಿಕೇಂದ್ರೀಕರಣ ವ್ಯವಸ್ಥೆಗೆ ಈಗ ೨೦ ವರ್ಷಗಳು ತುಂಬಿವೆ. ಇಷ್ಟು ವರ್ಷಗಳ ನಂತರವೂ ಕರ್ನಾಟಕಕ್ಕೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ವ್ಯವಸ್ಥೆಯು ಹಲವಾರು ಸಮಸ್ಯೆಗಳನ್ನು ಮತ್ತು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಗ್ರಾಮೀಣ ಭಾರತದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ದ್ವಂದ್ವಗಳನ್ನು ಸೃಷ್ಟಿಸಿದೆ. ಒಂದೆಡೆ ಗ್ರಾಮೀಣ ಅಭಿವೃದ್ಧಿಯ ಬಾಹ್ಯ ಚಿತ್ರಗಳು ಸಕಾರಾತ್ಮಕವಾಗಿ ನೋಟಗಳನ್ನು ಬಿಂಬಿಸುತ್ತಿವೆ. ಇನ್ನೊಂದೆಡೆಗೆ ಗ್ರಾಮೀಣ ಬಡತನ, ನಿರುದ್ಯೋಗ, ಜಾತಿ ವ್ಯವಸ್ಥೆ, ನಿರ್ಲಕ್ಷಿತ ಸಮುದಾಯಗಳ ಸಮಸ್ಯೆಗಳು ಮುಂತಾದ ಸೂಕ್ಷ್ಮ ವಾಸ್ತವಿಕತೆಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬುನಾದಿಯನ್ನು ಅಲುಗಾಡಿಸುತ್ತಿವೆ.

ಸಮಸ್ಯೀಕರಣ :

ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣಗಳು ನಿರೀಕ್ಷಿಸಿದ ಮಟ್ಟದಲ್ಲಿ ಫಲಗಳನ್ನು ನೀಡುತ್ತಿಲ್ಲ. ಅಲ್ಲಿ ಅನೇಕ ಸಮಸ್ಯೆಗಳಿವೆ. ಇಲ್ಲಿರುವ ಸಮಸ್ಯೆಗಳು ಕೇವಲ ಶಾಸನಾತ್ಮಕವಾದವುಗಳಲ್ಲ. ಗ್ರಾಮೀಣ ಅಭಿವೃದ್ಧಿ–ವಿಕೇಂದ್ರೀಕರಣ– ಇವು ಒಂದು ಸಾಮಾಜಿಕ ಚೌಕಟ್ಟಿನಲ್ಲಿ ಸಂಭವಿಸಬೇಕಾದ ಸಂಗತಿಗಳಾಗಿವೆ. ಜೀನ್‌ಡ್ರೀಜ್ ಮತ್ತು ಅಮರ್ತ್ಯಸೇನ್ ಅವರುಗಳು 'ಅನುಚಾನವಾಗಿ ಹರಿದುಕೊಂಡು ಬಂದಿರುವ, ಬೇಧಿಸಲಾಗದಂತಹ ಅಸಮಾನತೆಗಳು' ಎಂದು ಯಾವುದನ್ನು ಕರೆದಿದ್ದಾರೆಯೋ ಅವು ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣಗಳ ವೈಫಲ್ಯದ ಮೂಲದಲ್ಲಿವೆ.[೧೫] ವಿಕೇಂದ್ರೀಕರಣಗಳ ವೈಫಲ್ಯವನ್ನು ಎರಡು ನೆಲೆಗಳಲ್ಲಿ ನೋಡುವ ಕ್ರಮ ಚಾಲ್ತಿಯಲ್ಲಿದೆ. ಮೊದಲನೆಯದು ಕಾರ್ಯಕ್ಷಮತೆಯ ನೆಲೆಯಲ್ಲಿ ನೋಡುವುದು, ಮತ್ತೊಂದು ಸಾಮಾಜಿಕ ಬದಲಾವಣೆಯ ನೆಲೆಯಿಂದ ನೋಡುವುದು. ಮೊದಲನೆಯದು ತಾಂತ್ರಿಕ ವಿಧಾನವಾದರೆ, ಎರಡನೆಯದು ಕ್ರಿಟಿಕಲ್ ಆದ ವ್ಯಕ್ತಿನಿಷ್ಠವಾದ ವಿಧಾನವಾಗಿದೆ.[೧೬]

ಅಧಿಕಾರ ವಿಕೇಂದ್ರೀಕರಣ, ಪಂಚಾಯತ್ ವ್ಯವಸ್ಥೆ ಅಥವಾ ಜನರ ಕೈಗೆ ಅಧಿಕಾರ ಎನ್ನುವ ಪರಿಕಲ್ಪನೆಗಳು ಎಷ್ಟರ ಮಟ್ಟಿಗೆ ಸಾಕಾರಗೊಂಡಿವೆ ಎಂಬುದನ್ನು ಅರಿಯಲು ಪಂಚಾಯತ್ ವ್ಯವಸ್ಥೆಯನ್ನು ಕಾರ್ಯಕ್ಷಮತೆ ಹಾಗೂ ಸಾಮಾಜಿಕ ಬದಲಾವಣೆ ಈ ಎರಡೂ ನೆಲೆಗಳಲ್ಲಿ ನೋಡಿದಾಗ ಮಾತ್ರ ಅಧಿಕಾರ ವಿಕೇಂದ್ರೀಕರಣ ಪರಿಕಲ್ಪನೆಯ ಸಮಗ್ರ ನೋಟ ಕಂಡುಕೊಳ್ಳಲು ಸಾಧ್ಯ. ೭೩ನೇ ಸಂವಿಧಾನ ತಿದ್ದುಪಡಿಯ ಅನ್ವಯ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ

ಸ್ಥಾನ ಲಭ್ಯವಾಗಿದೆ. ಸ್ಥಳೀಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪಂಚಾಯತ್‌ಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ, ಜನಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗಗಳು ವಿಕೇಂದ್ರೀಕರಣದ ಆಶಯಗಳಿಗೆ ಹೇಗೆ ಸ್ಪಂದಿಸುತ್ತಿದ್ದಾರೆ, ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆಯನ್ನು ಪಾಲಿಸಲಾಗುತ್ತಿದೆಯೇ? ಮುಂತಾದ ಸಂಗತಿಗಳ ಮೂಲಕ ಪಂಚಾಯತ್‌ಗಳ ಕಾರ್ಯಕ್ರಮತೆಯನ್ನು ಪರೀಕ್ಷಿಸುವುದು. ಈ ನೆಲೆಯಲ್ಲಿ ನೋಡುವುದು ಜನರ ಕೈಗೆ ಅಧಿಕಾರದ ಪರಿಕಲ್ಪನೆಯನ್ನು ಭಾಗಶಃ ಪರಿಚಯಿಸುವ ಕ್ರಮವಾಗುತ್ತದೆ. ಪಂಚಾಯತ್ ವ್ಯವಸ್ಥೆಯನ್ನು ಸಾಮಾಜಿಕ ನೆಲೆಯಲ್ಲಿ ನೋಡುವ ಮೂಲಕ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಬಹುದು. ಅಭಿವೃದ್ಧಿ ಕಾರ್ಯಕ್ರಮಗಳು ಯಾವ ವರ್ಗವನ್ನು ಒಳಗೊಂಡಿವೆ. ಸಮಾಜದ ಯಾವ ವರ್ಗಗಳು ಫಲಾನುಭವಿಗಳಾಗಿದ್ದಾರೆ. ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಯಾವ ಸ್ವರೂಪದ ಜನರನ್ನು ಒಳಗೊಂಡಿದೆ ಎನ್ನುವ ದೃಷ್ಟಿಕೋನದ ಮೂಲಕ ಪಂಚಾಯತ್ ವ್ಯವಸ್ಥೆಯ ಸಾಮಾಜಿಕ ನೆಲೆಯನ್ನು ಅರ್ಥೈಸಿಕೊಳ್ಳಬಹುದು.[೧೭] ಪಂಚಾಯತ್ ಸಂಸ್ಥೆಗಳಲ್ಲಿ ದಲಿತರಿಗೆ ಶೇ.೩೩ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಒಟ್ಟು ಸದಸ್ಯರಲ್ಲಿ ಶೇ.೩೩ರಷ್ಟು ದಲಿತರು ಪ್ರಾತಿನಿಧ್ಯ ಪಡೆಯುತ್ತಾರೆ.

ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ದಲಿತರಿಗೆ ಸಂವಿಧಾನ ಬದ್ಧವಾದ ಹಕ್ಕುಗಳನ್ನು ತರಲಾಗಿದೆ. ಪರಿಚ್ಛೇಧ – ೩೩೦, ೩೩೨ ಮತ್ತು ೩೩೪ ವಿಧಿಗಳ ಪ್ರಕಾರ ದಲಿತರಿಗೆ ಶಾಸನ ಸಭೆ ಮತ್ತು ಲೋಕಸಭೆಗಳಲ್ಲಿ ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ಮೇಲ್ವರ್ಗದವರ ಅಧಿಕಾರ ಪ್ರಾಬಲ್ಯಕ್ಕೆ ಒಳಗಾಗಿದ್ದ ಅಧಿಕಾರ ಸ್ಥಾನಗಳಿಗೆ ಸಂವಿಧಾನದ ಮೂಲಕ ದಲಿತರಿಗೆ ಸ್ಥಾನಗಳನ್ನು ಮೀಸಲಿರಿಸಿದೆ.[೧೮]

ಸಂಸತ್, ವಿಧಾನಸಭೆಗಳಲ್ಲಿ ಪ್ರಾತಿನಿಧ್ಯ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಸಂವಿಧಾನ ಬದ್ಧಗೊಳಿಸಲಾಯಿತು. ಸಂವಿಧಾನದ ೭೩ನೇ ತಿದ್ದುಪಡಿಯ ಅನ್ವಯ ಪಂಚಾಯಿತಿ ಅಧಿನಿಯಮದಲ್ಲಿ ೨೪೩(ಡಿ) ವಿಧಿಯ ಪ್ರಕಾರ ಪಂಚಾಯ್ತಿ ಸಂಸ್ಥೆಗಳ ಒಟ್ಟು ಸದಸ್ಯರಲ್ಲಿ ೧/೩ರಷ್ಟು ಅಥವಾ ೩೩.೩% ಸ್ಥಾನಗಳನ್ನು ಅನುಸೂಚಿತ ಜಾತಿಗಳಿಗೆ ಮೀಸಲಿಡುವುದನ್ನು ಕಡ್ಡಾಯಗೊಳಿಸಲಾಗಿದೆ. ರಾಜ್ಯದ ಮೂರು ಸ್ತರಗಳ ಪಂಚಾಯಿತಿ ಸಂಸ್ಥೆಗಳ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೨೩%ರಷ್ಟು ಪ್ರಾತಿನಿಧ್ಯವನ್ನು ಪಡೆದಿರುವುದು ವಿಕೇಂದ್ರೀಕರಣ ಪ್ರಕ್ರಿಯೆಯಲ್ಲಿ ಒಂದು ಕ್ರಾಂತಿಕಾರಕ ಹೆಜ್ಜೆಯಾಗಿದೆ.

ದಲಿತ ಸಮುದಾಯದ ಸಮಸ್ಯೆಗಳ ಪರಿಹಾರ ಪ್ರತಿನಿಧಿಗಳ ಆದ್ಯತೆಯಾಗಬೇಕು. ಸಾಮಾಜಿಕ ಅಸಮಾನತೆಯನ್ನು ನಿವಾರಿಸುವ ಪ್ರಯತ್ನಗಳನ್ನು ಕೈಗೊಳ್ಳಬೇಕು. ಆದರೆ, ಈ ನಿಟ್ಟಿನಲ್ಲಿ ಪಂಚಾಯತ್‌ಗಳು ಯಶಸ್ವಿಯಾದಂತೆ ಕಂಡು ಬರುವುದಿಲ್ಲ. ಸಮಾಜದ ಮೇಲ್‌ಸ್ತರದ ಸಮುದಾಯಗಳ ಹಿತಾಸಕ್ತಿಯನ್ನೇ ಕಾಪಾಡಿಕೊಂಡು ಬರುವಂತೆ ಹಾಗೂ ದಲಿತ ಸಮುದಾಯಗಳ ಅಗತ್ಯಗಳನ್ನು ಈಡೇರಿಸುವಲ್ಲಿ ವಿಫಲಗೊಂಡಂತೆ ಕಂಡುಬರುತ್ತಿದೆ. ಈ ಸ್ಥಿತಿಯನ್ನು ಗ್ರಹಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು, ಪಂಚಾಯತ್ ವ್ಯವಸ್ಥೆಯ ಬಗ್ಗೆ ನಕಾರಾತ್ಮಕ ನಿಲುವನ್ನು ಹೊಂದಿದ್ದರು. ಅವರ ಪ್ರಕಾರ ಪಂಚಾಯತ್ ಸಂಸ್ಥೆಗಳು ಅತ್ಯಂತ ಕೆಳಮಟ್ಟದ ಮತ್ತು ಸ್ವಾರ್ಥದ ಮಟ್ಟದಲ್ಲಿ ನಿರ್ವಹಿಸುವ ಸಂಸ್ಥೆಗಳು, ಗ್ರಾಮಗಳ ಬಗ್ಗೆ ಅಂಬೇಡ್ಕರ್ " Sink of localism, a den of ignorance, narrow, mindedness and communalism" ಎಂದು ವರ್ಣಿಸಿದ್ದಾರೆ.[೧೯] ಅಂದು ಅಂಬೇಡ್ಕರ್ ಅವರು ಪಂಚಾಯತ್‌ಗಳ ಬಗ್ಗೆ ಹೊಂದಿದ ಗ್ರಹಿಕೆ ಇಂದಿಗೂ ಬದಲಾದಂತೆ ಕಂಡುಬರುವುದಿಲ್ಲ. ಈ ಎಲ್ಲಾ ಸಂಗತಿಗಳ ಹಿನ್ನಲೆಯಲ್ಲಿ ಅಧ್ಯಯನ ಮುಖ್ಯವಾಗುತ್ತದೆ.

ಮೇಲಿನ ಎಲ್ಲಾ ಅಧ್ಯಯನಗಳು ದಲಿತರು ಪಂಚಾಯತ್‌ಗಳಲ್ಲಿ ಭಾಗವಹಿಸುವಿಕೆಯನ್ನು ಸ್ಥೂಲವಾಗಿ ಪರಿಚಯಿಸುತ್ತವೆ. ಅನನ್ಯತೆ ರಾಜಕಾರಣದ ಬಗ್ಗೆ ಇಂದು ನಡೆಯುತ್ತಿರುವ ಚರ್ಚೆಗಳ ಹಿನ್ನೆಲೆಯಲ್ಲಿ ದಲಿತರ ರಾಜಕೀಯ ಪಾಲ್ಗೊಳ್ಳುವಿಕೆಯ ಸ್ಥೂಲ ಚರ್ಚೆಗಳನ್ನು ಒಪ್ಪುವುದಿಲ್ಲ. ಇದುವರೆಗೂ ಕೈಗೊಂಡಿರುವ ಅಧ್ಯಯನಗಳು ದಲಿತರು ತಮ್ಮ ಅಸ್ಮಿತೆಗಳೊಂದಿಗೆ ಹೇಗೆ ಗುರುತಿಸಿಕೊಳ್ಳುತ್ತಾರೆ ಮತ್ತು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಗುರುತಿಸುವುದಿಲ್ಲ. ಈ ಅಧ್ಯಯನಗಳು ದಲಿತ ಪ್ರತಿನಿಧಿಗಳಿಗೆ ಅಗತ್ಯವಾಗಿ ಬೇಕಾಗಿರುವ ಗ್ರಾಮ ಪಂಚಾಯತ್ ಕಾಯಿದೆಯ ಜ್ಞಾನ, ಪಂಚಾಯತ್ ಪ್ರಕ್ರಿಯೆಯ ಅರಿವು ಮುಂತಾದ ಮುಂತಾದ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುವುದಿಲ್ಲ. ೧೯೯೩ರ ಅಧಿನಿಯಮದ ಪ್ರಕಾರ ಪಂಚಾಯತ್ ಪ್ರತಿನಿಧಿಗಳಿಗೆ ಪ್ರದತ್ತವಾದ ಅಧಿಕಾರಗಳನ್ನು ಪರಿಣಾಮಕಾರಿಯಾಗಿ ಅನುಭವಿಸುತ್ತಿದ್ದಾರೆಯೇ? ಮೀಸಲಾತಿಯ ನೆಲೆಯಲ್ಲಿ ಪಂಚಾಯತ್‌ಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಪಡೆದುಕೊಂಡಿರುವ ದಲಿತರು ಪರಿಣಾಮಕಾರಿಯಾಗಿ ಅಧಿಕಾರವನ್ನು ಚಲಾಯಿಸುತ್ತಿದ್ದಾರೆಯೇ? ಅವರ ಅಧಿಕಾರದ ಮೂಲಕ ದಲಿತ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸಿ ಸಮುದಾಯದ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಸಾಧ್ಯವಾಗಿದೆಯೆ? ಶ್ರೇಣಿಕೃತ ವ್ಯವಸ್ಥೆಯಲ್ಲಿ ಪಂಚಾಯತಿಯ ದಲಿತ ಪ್ರತಿನಿಧಿಗಳು, ದಲಿತ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ಹಕ್ಕುಗಳ ಅನುಭವಿಸುವಿಕೆ ಮತ್ತು

ಅಧಿಕಾರ ನಿರ್ವಹಣೆಯಲ್ಲಿ ಎದುರಿಸುತ್ತಿರುವ ಸವಾಲುಗಳೇನು ಎನ್ನುವ ಸಂಗತಿಗಳ ಮೇಲೆ ಅಧ್ಯಯನಗಳು ಬೆಳಕು ಚೆಲ್ಲುವುದಿಲ್ಲ. ಇಂತಹ ಸಂಗತಿಗಳ ಮೇಲೆ ಬೆಳಕು ಚೆಲ್ಲುವುದು ಮತ್ತು ದಲಿತರ ಅಧಿಕಾರ ನಿರ್ವಹಣೆಯ ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು ಕರ್ನಾಟಕದ ಮಟ್ಟಿಗೆ ಅಗತ್ಯವಾಗಿದೆ. ಈ ಎಲ್ಲಾ ಚರ್ಚೆಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕಾಗಿ ಮುಂದಿನ ನಿರ್ದಿಷ್ಟ ಉದ್ದೇಶಗಳನ್ನು ರೂಪಿಸಿಕೊಳ್ಳಲಾಗಿದೆ.

೧. ಅಧ್ಯಯನದ ಉದ್ದೇಶಗಳು:

ಕರ್ನಾಟಕದ ಪ್ರಸ್ತುತ ಪಂಚಾಯತ್ ವ್ಯವಸ್ಥೆಯ ನಿರ್ವಹಣೆ ಹಾಗೂ ದಲಿತ ಸಹಭಾಗಿತ್ವ ಕುರಿತ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ರೂಪಿಸಿಕೊಂಡಿದೆ.

೧. ಭಾರತ ಮತ್ತು ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಉಗಮ ಮತ್ತು ಚಾರಿತ್ರಿಕ ಬೆಳವಣಿಗೆಯನ್ನು ದಾಖಲಿಸುವುದು.

೨. ರಾಜಕೀಯ ಸಹಭಾಗಿತ್ವ ಮತ್ತು ದಲಿತರ ಸಹಭಾಗಿತ್ವದ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವುದು.

೩. ದಲಿತರ ಸಂವಿಧಾನಾತ್ಮಕ ರಕ್ಷಣೆ ಮತ್ತು ಸಮಾಜೋ ಆರ್ಥಿಕ ಸ್ಥಿತಿಗತಿಗಳನ್ನು ಗುರುತಿಸುವುದು.

೪. ದಲಿತ ಪ್ರತಿನಿಧಿಗಳ ದಲಿತ ಅಸ್ಮಿತೆ ಗ್ರಹಿಕೆ ಹಾಗೂ ಪಂಚಾಯತ್ ಕಾನೂನುಗಳ ಗ್ರಹಿಕೆಯನ್ನು ಮೌಲ್ಯಮಪನ ಮಾಡುವುದು.

೫. ಪಂಚಾಯತ್ ಅಧಿಕಾರ ಪ್ರಕ್ರಿಯೆಯಲ್ಲಿ ದಲಿತ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ ಹಾಗೂ ದಲಿತ ಅಧ್ಯಕ್ಷರುಗಳ ಅಧಿಕಾರ ನಿರ್ವಹಣೆ ಹಾಗೂ ಅದರ ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು.

೧. ಅಧ್ಯಯನದ ವಿಧಾನ :

ಬಳ್ಳಾರಿ ಜಿಲ್ಲೆಯ ಒಟ್ಟು ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು ೧೮೬ ಗ್ರಾಮ ಪಂಚಾಯಿತಿಗಳು ಇದ್ದು, ತಾಲೂಕುವಾರು ಗ್ರಾಮ ಪಂಚಾಯ್ತಿಗಳ ಸಂಖ್ಯೆಗಳಲ್ಲಿ ವ್ಯತ್ಯಾಸವಿದೆ. ಸಂಡೂರು–೨೬, ಸಿರುಗುಪ್ಪ–೨೭, ಬಳ್ಳಾರಿ ೩೮, ಹೊಸಪೇಟೆ–೨೨, ಹೂವಿನ ಹಡಗಲಿ–೨೫,

ಹಗರಿಬೊಮ್ಮನಹಳ್ಳಿ-೨೪ ಮತ್ತು ಕೂಡ್ಲಿಗಿ ೨೪ ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದೆ. ಅತಿಹೆಚ್ಚು ಗ್ರಾಮ ಪಂಚಾಯಿತಿಗಳು ಬಳ್ಳಾರಿ ತಾಲ್ಲೂಕಿನಲ್ಲಿದ್ದು, ಅತೀ ಕಡಿಮೆ ಗ್ರಾಮ ಪಂಚಾಯಿತಿಗಳು ಹೊಸಪೇಟೆ ತಾಲ್ಲೂಕಿನಲ್ಲಿವೆ. ಸಂಡೂರು ತಾಲ್ಲೂಕುಗಳಲ್ಲಿ ಒಟ್ಟು ೫೯೩ ಗ್ರಾಮ ಪಂಚಾಯಿತಿ ಸದಸ್ಯರು ಅದರಲ್ಲಿ ೩೫೬ ಪುರುಷರು ಮತ್ತು ೨೩೭ ಮಹಿಳಾ ಸದಸ್ಯರಿದ್ದಾರೆ. ಅದೇ ತಾಲ್ಲೂಕಿನಲ್ಲಿ ೧೧೧ ದಲಿತ ಪ್ರತನಿಧಿಗಳಲ್ಲಿ ಅವುಗಳಲ್ಲಿ ೫೭ ಪುರುಷರು ಮತ್ತು ೫೪ ಮಹಿಳೆಯರಿದ್ದು, ಸಿರುಗುಪ್ಪ ತಾಲ್ಲೂಕುಗಳಲ್ಲಿ ೭೪೫ ಗ್ರಾಮ ಪಂಚಾಯಿತಿ ಕ್ರಮವಾಗಿ ಅವರಲ್ಲಿ ೪೮೬ ಪುರುಷರು ಮತ್ತು ೨೪೯ ಮಹಿಳಾ ಸದಸ್ಯರಿದ್ದಾರೆ.

ತಾಲ್ಲೂಕಿನಲ್ಲಿ ಒಟ್ಟು ೧೧೬ ದಲಿತ ಪ್ರತಿನಿಧಿಗಳಲ್ಲಿ ಅವರಲ್ಲಿ ೫೪ ಪುರುಷರು ಮತ್ತು ೬೨ ದಲಿತ ಮಹಿಳಾ ಪ್ರತಿನಿಧಿಗಳಿದ್ದಾರೆ. ಬಳ್ಳಾರಿ ತಾಲ್ಲೂಕಿನಲ್ಲಿ ೧೧೮೯ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೭೯೧ ಪುರುಷರು ಪ್ರತಿನಿಧಿಗಳು ಹಾಗೂ ೩೯೮ ಮಹಿಳಾ ಪ್ರತಿನಿಧಿಗಳಿದ್ದಾರೆ. ಈ ತಾಲ್ಲೂಕಿನಲ್ಲಿ ಒಟ್ಟು ೧೭೨ ದಲಿತ ಪ್ರತಿನಿಧಿಗಳಿದ್ದು, ಅದರಲ್ಲಿ ೮೫ ಪುರುಷರು ಮತ್ತು ೮೭ ದಲಿತ ಮಹಿಳಾ ಪ್ರತಿನಿಧಿಗಳಿದ್ದಾರೆ. ಹೊಸಪೇಟೆ ತಾಲ್ಲೂಕಿನಲ್ಲಿ ಒಟ್ಟು ೬೨೯ ಗ್ರಾಮ ಪಂಚಾಯಿತಿ ಪ್ರತಿನಿಧಿಗಳಿದ್ದು, ಅವರಲ್ಲಿ ೪೨೨ ಪುರುಷರು ಪ್ರತಿನಿಧಿಗಳಿದ್ದು, ೨೦೭ ಮಹಿಳಾ ಪ್ರತಿನಿಧಿಗಳಿದ್ದಾರೆ. ಈ ತಾಲ್ಲೂಕಿನಲ್ಲಿ ಒಟ್ಟು ೧೨೬ ದಲಿತ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೬೬ ಪುರುಷ ಪ್ರತಿನಿಧಿಗಳು ಮತ್ತು ೬೦ ಮಹಿಳಾ ಪ್ರತಿನಿಧಿಗಳಿದ್ದಾರೆ.

ಹೂವಿನಹಡಗಲಿ ತಾಲ್ಲೂಕಿನಲ್ಲಿ ೬೫೯ ಗ್ರಾಮ ಪಂಚಾಯಿತಿ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೪೩೦ ಪುರುಷ ಪ್ರತಿನಿಧಿಗಳು ಮತ್ತು ೨೨೯ ಮಹಿಳಾ ಪ್ರತಿನಿಧಿಗಳಿದ್ದಾರೆ. ಈ ತಾಲ್ಲೂಕಿನಲ್ಲಿ ೧೩೮ ದಲಿತ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೬೬ ಪುರುಷರು ಮತ್ತು ೭೨ ಮಹಿಳಾ ಪ್ರತಿನಿಧಿಗಳಿದ್ದಾರೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ೫೭೪ ಗ್ರಾಮ ಪಂಚಾಯಿತಿಗಳಿದ್ದು, ತಾಲ್ಲೂಕಿನಲ್ಲಿ ೫೭೪ ಗ್ರಾಮ ಪಂಚಾಯಿತಿ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೩೮೫ ಪುರುಷ ಮತ್ತು ೧೮೯ ಮಹಿಳಾ ಪ್ರತಿನಿಧಿಗಳಿದ್ದಾರೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಒಟ್ಟು ೬೧೦ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೪೧೦ ಪುರುಷ ಪ್ರತಿನಿಧಿಗಳು ಮತ್ತು ೨೦೦ ಮಹಿಳಾ ಪ್ರತಿನಿಧಿಗಳಿದ್ದಾರೆ. ಈ ತಾಲ್ಲೂಕಿನಲ್ಲಿ ಒಟ್ಟು ೮೭ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ೪೪ ಪುರುಷ ಮತ್ತು ೪೩ ಮಹಿಳೆಯರಿದ್ದಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯಲ್ಲಿ ೪೯೯೯ ಗ್ರಾಮ ಪಂಚಾಯಿತಿ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೩೨೮೦ ಪುರುಷರು ಹಾಗೂ ೧೭೦೯ ಮಹಿಳಾ ಪ್ರತಿನಿಧಿಗಳಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ೮೬೧ ದಲಿತ ಪ್ರತಿನಿಧಿಗಳು, ಅವುಗಳಲ್ಲಿ ೪೩೩ ಪುರುಷ ಪ್ರತಿನಿಧಿಗಳು ಮತ್ತು ೪೨೮

ಮಹಿಳಾ ಸದಸ್ಯರಿದ್ದಾರೆ.[೨೮] ಪ್ರಾದೇಶಿಕ ಆಸಮತೋಲನ ನಿವರಣಾ ಉನ್ನತಾಧಿಕಾರ ಸಮಿತಿಯ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ಮತ್ತು ಹೊಸಪೇಟೆ ತಾಲ್ಲೂಕುಗಳು ಸಾಪೇಕ್ಷವಾಗಿ ಮುಂದುವರೆದ ತಾಲ್ಲೂಕುಗಳಾಗಿದ್ದು, ಸಿರುಗುಪ್ಪ ಮತ್ತು ಇತರೆ ತಾಲ್ಲೂಕುಗಳು ಅತಿ ಹಿಂದುಳಿದ ತಾಲ್ಲೂಕುಗಳಾಗಿದ್ದು, ಕೂಡ್ಲಿಗಿ ತಾಲ್ಲೂಕುಗಳು. ಅತ್ಯಂತ ಹಿಂದುಳಿದ ತಾಲ್ಲೂಕಾಗಿದೆ. ಈ ವರದಿಯನ್ನು ಆಧರಿಸಿ ಗ್ರಾಮ ಪಂಚಾಯಿತಿಗಳಲ್ಲಿ ದಲಿತ ಸಹಭಾಗಿತ್ವದ ಭಿನ್ನತೆಗಳನ್ನು ಕಂಡುಕೊಳ್ಳಲು ಸಾಪೇಕ್ಷವಾಗಿ ಮುಂದುವರೆದ ಬಳ್ಳಾರಿ ತಾಲ್ಲೂಕು, ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕು ಮತ್ತು ಅತ್ಯಂತ ಹಿಂದುಳಿದ ಕೂಡ್ಲಿಗಿ ತಾಲ್ಲೂಕನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಸಾಪೇಕ್ಷವಾಗಿ ಮುಂದುವರೆದ ಬಳ್ಳಾರಿ ತಾಲ್ಲೂಕಿನಲ್ಲಿ ಒಟ್ಟು ೩೮ ಗ್ರಾಮ ಪಂಚಾಯಿತಿಗಳಿದ್ದು, ಅವುಗಳಲ್ಲಿ ಶೇ. ೧೦ರಷ್ಟು ಸಂಖ್ಯೆಯ ಒಟ್ಟು ೪ ಗ್ರಾಮ ಪಂಚಾಯಿತಿಗಳನ್ನು ಆಯ್ದುಕೊಳ್ಳಲಾಗಿದೆ. ಇವುಗಳ ಆಯ್ಕೆಯಲ್ಲಿ ತಾಲ್ಲೂಕು ಕೇಂದ್ರಕ್ಕೆ ಅತೀ ಸಮೀಪವಿರುವ, ತಾಲ್ಲೂಕು ಕೇಂದ್ರದಿಂದ ಮಧ್ಯಮ ದೂರದಲ್ಲಿರುವ ಈ ತಾಲ್ಲೂಕು ಕೇಂದ್ರದಿಂದ ಅತ್ಯಂತ ದೂರದಲ್ಲಿರುವ ಮಾನದಂಡವನ್ನು ರೂಪಿಸಿಕೊಂಡು ಬಳ್ಳಾರಿ ತಾಲ್ಲೂಕಿನಿಂದ ಅತೀ ಸಮೀಪವಿರುವ ಸಂಗನಕಲ್ಲು ಮತ್ತು ಹಲಕುಂದಿ ಗ್ರಾಮ ಪಂಚಾಯಿತಿಯನ್ನು ಮಧ್ಯಮ ದೂರದಲ್ಲಿರುವ ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯನ್ನು ಹಾಗೂ ತಾಲ್ಲೂಕು ಕೇಂದ್ರದಿಂದ ಅತ್ಯಂತ ದೂರದಲ್ಲಿರುವ ಬೆಳಗಲ್ಲು ಗ್ರಾಮ ಪಂಚಾಯಿತಿಯನ್ನು ಆಯ್ದುಕೊಳ್ಳಲಾಗಿದೆ.

ಬೆಳಗಲ್ಲು ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೧೨ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ೪ ಪುರುಷರು ಮತ್ತು ೮ ಮಹಿಳೆಯರಿದ್ದಾರೆ. ಹಲಕುಂದಿ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೧೦ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ೫ ಪುರುಷರು ೫ ಮಹಿಳೆಯರಿದ್ದಾರೆ. ಅದೇ ರೀತಿಯಾಗಿ ಸಂಗನಕಲ್ಲು ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೯ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ೪ ಪುರುಷರು ಮತ್ತು ೫ ಮಹಿಳೆಯರಿದ್ದಾರೆ. ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೮ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ಪುರುಷ ಮತ್ತು ೩ ಮಹಿಳೆಯರಿದ್ದಾರೆ. ಪ್ರಾದೇಶಿಕ ಅಸಮತೋಲನ ನಿವಾರಣೆ ಸಮಿತಿಯ ವರದಿಯನ್ವಯ ದಲಿತರ ರಾಜಕೀಯ ಸಹಭಾಗಿತ್ವದ ಭಿನ್ನತೆಯನ್ನು ಕಂಡುಕೊಳ್ಳಲು ಅತೀ ಹಿಂದುಳಿದ ಜಿಲ್ಲೆಯ ಪೂರ್ವ ತಾಲ್ಲೂಕು ಸಿರುಗುಪ್ಪವನ್ನು ಆಯ್ದುಕೊಳ್ಳಲಾಗಿದ್ದು, ಈ ತಾಲ್ಲೂಕಿನಲ್ಲಿ ಒಟ್ಟು ೨೭ ಗ್ರಾಮ ಪಂಚಾಯಿತಿಗಳಿದ್ದು, ಶೇ. ೧೦ರಷ್ಟು ಮಾನದಂಡದಂತೆ ೩ ಪಂಚಾಯಿತಿಗಳನ್ನು ಆಯ್ದುಕೊಳ್ಳಲಾಗಿದೆ. ತಾಲ್ಲೂಕು ಕೇಂದ್ರಕ್ಕೆ ಅತ್ಯಂತ ಸಮೀಪವಿರುವ, ಮಧ್ಯಮ ದೂರದಲ್ಲಿರುವ, ಹಾಗೂ ತಾಲ್ಲೂಕು ಕೇಂದ್ರದಿಂದ ಅತ್ಯಂತ ದೂರವಿರುವ ಮಾನದಂಡದ ಮೂಲಕ ಕೆಂಚನಗುಡ್ಡ ಗ್ರಾಮ ಪಂಚಾಯಿತಿ ತಾಲ್ಲೂಕು ಕೇಂದ್ರಕ್ಕೆ

ಅತೀ ಸಮೀಪವಿದ್ದು, ಈ ಪಂಚಾಯಿತಿಯಲ್ಲಿ ಒಟ್ಟು ೧೧ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ೭ ಪುರುಷರು ಮತ್ತು ೪ ಮಹಿಳೆಯರಿದ್ದಾರೆ. ಸಿರಿಗೇರಿ ಗ್ರಾಮ ಪಂಚಾಯಿತಿಯು ತಾಲ್ಲೂಕು ಕೇಂದ್ರದಿಂದ ಮಧ್ಯಮ ದೂರವಿದ್ದು, ಈ ಪಂಚಾಯಿತಿಯಲ್ಲಿ ಒಟ್ಟು ೭ ದಲಿತ ಪ್ರತಿನಿಧಿಗಳಿದ್ದು, ಅವುಗಳಲ್ಲಿ ೨ ಪುರುಷರು ಮತ್ತು ೫ ಮಹಿಳೆಯರಿದ್ದಾರೆ. ಹಚ್ಚೊಳ್ಳಿ ಗ್ರಾಮ ಪಂಚಾಯಿತಿಯು ತಾಲ್ಲೂಕು ಕೇಂದ್ರದಿಂದ ಅತ್ಯಂತ ದೂರದ ಗ್ರಾಮ ಪಂಚಾಯಿತಿಯಾಗಿದ್ದು, ಈ ಪಂಚಾಯಿತಿಯಲ್ಲಿ ಒಟ್ಟು ೮ ದಲಿತ ಪ್ರತಿನಿಧಿಗಳಿದ್ದು, ಅವರುಗಳಲ್ಲಿ ೩ ಪುರುಷರು ಮತ್ತು ೫ ಮಹಿಳೆಯರಿದ್ದಾರೆ. ಈ ಮೂರು ಪಂಚಾಯಿತಿಗಳಲ್ಲಿ ಒಟ್ಟು ೨೬ ದಲಿತ ಪ್ರತಿನಿಧಿಗಳನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಪ್ರಾದೇಶಿಕ ಆಸಮತೋಲನ ನಿವಾರಣಾ ಸಮಿತಿಯಲ್ಲಿ ಕೂಡ್ಲಿಗಿ ತಾಲ್ಲೂಕನ್ನು ಅತ್ಯಂತ ಹಿಂದುಳಿದ ತಾಲ್ಲೂಕೆಂದು ಗುರುತಿಸಿದೆ.

ಈ ತಾಲ್ಲೂಕಿನಲ್ಲಿ ಒಟ್ಟು ೩೭ ಗ್ರಾಮ ಪಂಚಾಯಿತಿಗಳಿದ್ದು, ಶೇ.೧೦ ರಷ್ಟು ಮಾನದಂಡದಂತೆ ೪ ಪಂಚಾಯತ್‌ಗಳನ್ನು ಆಯ್ದುಕೊಳ್ಳಲಾಗಿದೆ. ತಾಲ್ಲೂಕು ಕೇಂದ್ರಕ್ಕೆ ಅತ್ಯಂತ ಸಮೀಪವಿರುವ, ಮಧ್ಯಮ ದೂರದಲ್ಲಿರುವ, ಹಾಗೂ ಅತ್ಯಂತ ದೂರವಿರುವ ಮಾನದಂಡವನ್ನು ಅನ್ವಯಿಸಲಾಗಿದೆ. ಕೂಡ್ಲಿಗಿ ತಾಲ್ಲೂಕು ಕೇಂದ್ರಕ್ಕೆ ಶಿವಪುರ ಗ್ರಾಮ ಪಂಚಾಯಿತಿ ಅತ್ಯಂತ ಸಮೀಪದ ಗ್ರಾಮ ಪಂಚಾಯಿತಿಯಾಗಿದ್ದು, ಈ ಪಂಚಾಯಿತಿಯಲ್ಲಿ ಒಟ್ಟು ೧೦ ದಲಿತ ಪ್ರತಿನಿಧಿಗಳಿದ್ದು, ಅದರಲ್ಲಿ ೫ ಪುರುಷರು ಮತ್ತು ೫ ಮಹಿಳೆಯರಿದ್ದಾರೆ. ಮಾಕನಡಕು ಮತ್ತು ಹ್ಯಾಳ್ಯಾ ಪಂಚಾಯತಿಗಳು ತಾಲ್ಲೂಕು ಕೇಂದ್ರದಿಂದ ಮಧ್ಯಮ ದೂರದಲ್ಲಿವೆ. ಮಾಕನಡಕು ಪಂಚಾಯಿತಿಯಲ್ಲಿ ಒಟ್ಟು ೧೧ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ೪ ಪುರುಷರು ಮತ್ತು ೭ ಮಹಿಳೆಯರಿದ್ದಾರೆ. ಹ್ಯಾಳ್ಯಾ ಪಂಚಾಯ್ತಿಯಲ್ಲಿ ಒಟ್ಟು ೯ ದಲಿತ ಪ್ರತಿನಿಧಿಗಳಿದ್ದು, ಅವರಲ್ಲಿ ೪ ಪುರುಷರು ಮತ್ತು ೫ ಮಹಿಳೆಯರಿದ್ದಾರೆ. ಗುಡೇಕೋಟೆ ಗ್ರಾಮ ಪಂಚಾಯಿಯು ತಾಲ್ಲೂಕು ಕೇಂದ್ರದಿಂದ ಅತ್ಯಂತ ದೂರದಲ್ಲಿದ್ದು, ಈ ಪಂಚಾಯಿತಿಯಲ್ಲಿ ಒಟ್ಟು ಪ್ರತಿನಿಧಿಗಳಿದ್ದು, ಅವರಲ್ಲಿ ೪ ಪುರುಷರು ಮತ್ತು ೩ ಮಹಿಳೆಯರಿದ್ದಾರೆ. ಒಟ್ಟು ಈ ೪ ಪಂಚಾಯಿತಿಗಳಲ್ಲಿ ೩೭ ದಲಿತ ಪ್ರತಿನಿಧಿಗಳಿದ್ದಾರೆ. ಸಾಪೇಕ್ಷವಾಗಿ ಮುಂದುವರಿದ ಬಳ್ಳಾರಿ ತಾಲ್ಲೂಕಿನ ೪ ಪಂಚಾಯಿತಿಗಳಿಂದ ೩೯ ದಲಿತ ಪ್ರತಿನಿಧಿಗಳನ್ನು ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕಿನ ೩ ಪಂಚಾಯಿತಿಗಳಿಂದ ಒಟ್ಟು ೨೬ ದಲಿತ ಪ್ರತಿನಿಧಿಗಳನ್ನು ಅತ್ಯಂತ ಹಿಂದುಳಿದ ತಾಲ್ಲೂಕಾದ ಕೂಡ್ಲಿಗಿಯಿಂದ ಒಟ್ಟು ನಾಲ್ಕು ಪಂಚಾಯತ್‌ಗಳಿಂದ ೩೭ ಪ್ರತಿನಿಧಿಗಳನ್ನು ಜಿಲ್ಲೆಯ ಒಟ್ಟು ೩ ತಾಲ್ಲೂಕುಗಳಿಂದ ಆಯ್ದುಕೊಂಡ ೧೧ ಪಂಚಾಯತ್‌ಗಳಿಂದ ೧೦೨ ದಲಿತ ಪ್ರತಿನಿಧಿಗಳನ್ನು (೪೭ ದಲಿತ ಪುರುಷ ಪ್ರತಿನಿಧಿಗಳು ಮತ್ತು ೫೫ ದಲಿತ ಮಹಿಳಾ ಪ್ರತಿನಿಧಿಗಳು) ಒಟ್ಟಾರೆ ೧೦೨

ದಲಿತ ಪ್ರತಿನಿಧಿಗಳನ್ನು ರಚಿತ ಪ್ರಶ್ನಾವಳಿಯ ಮೂಲಕ ನೇರವಾಗಿ ಸಂದರ್ಶಿಸಿ, ಅವರ ಪಾಲ್ಗೊಳ್ಳುವಿಕೆಯನ್ನು ಕಂಡುಕೊಳ್ಳಲಾಗಿದೆ.

ದಲಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ :

ಬಳ್ಳಾರಿ ತಾಲ್ಲೂಕಿನಲ್ಲಿ ಒಟ್ಟು ೩೮ ಗ್ರಾಮ ಪಂಚಾಯಿತಿಗಳಿದ್ದು, ಅವುಗಳಲ್ಲಿ ೨೦ ಗ್ರಾಮ ಪಂಚಾಯಿತಿಗಳಲ್ಲಿ ದಲಿತ ಪುರುಷ ಅಥವಾ ಮಹಿಳೆಯರು ಅಧ್ಯಕ್ಷರಾಗಿ ಅಥವಾ ಉಪಾಧ್ಯಕ್ಷರಾಗಿ ಅಧಿಕಾರ ಸ್ಥಾನವನ್ನು ನಿರ್ವಹಿಸುತ್ತಿದ್ದಾರೆ. ಈ ತಾಲ್ಲೂಕಿನ ಕಲ್ಲುಕಂಬ, ಹೆಚ್.ವೀರಾಪುರ, ವಣೇನೂರು, ಶಂಕರಬಂಡೆ, ಮತ್ತು ಚಾನಾಳ್, ಒಟ್ಟು ೫ ಪಂಚಾಯತ್‌ಗಳಲ್ಲಿ ದಲಿತ ಪುರುಷರು ಅಧ್ಯಕ್ಷರಾಗಿ ಅಧಿಕಾರ ಸ್ಥಾನ ನಿರ್ವಹಿಸುತ್ತಿದ್ದಾರೆ. ಈ ತಾಲ್ಲೂಕಿನ ಸೋಮಸಮುದ್ರ, ಸಿರವಾರ, ಎರ್ರಗುಡಿ, ಕಾರೇಕಲ್ ಮತ್ತು ಸಂಜೀವರಾಯನಕೋಟೆ ಒಟ್ಟು ೫ ಪಂಚಾಯತ್‌ಗಳಲ್ಲಿ ದಲಿತ ಮಹಿಳೆಯರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ತಾಲ್ಲೂಕಿನಲ್ಲಿ ೫ ದಲಿತ ಪುರುಷರು ಮತ್ತು ೫ ದಲಿತ ಮಹಿಳೆಯರ ಒಟ್ಟು ೧೦ ಅಧ್ಯಕ್ಷರುಗಳನ್ನು ರಚಿತ ಪ್ರಶ್ನಾವಳಿಯ ಮೂಲಕ ಸಂದರ್ಶಿಸಿ ಅವರ ಅಧಿಕಾರ ನಿರ್ವಹಣೆಯನ್ನು ಮಾಪನ ಮಾಡಲಾಗಿದೆ. ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕಿನ ಒಟ್ಟು ೭ ಗ್ರಾಮ ಪಂಚಾಯಿತಿಗಳಲ್ಲಿ ದಲಿತ ಪುರುಷರು ಅಥವಾ ಮಹಿಳೆಯರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ತಾಲ್ಲೂಕಿನ ಒಟ್ಟು ೩ ಬೀರಲಹಳ್ಳಿ (ಬೀರಳ್ಳೀ) ನಡವಿ ಮತ್ತು ಹಳೇಕೋಟೆ ಗ್ರಾಮ ಪಂಚಾಯಿತಿಗಳಲ್ಲಿ ದಲಿತ ಪುರುಷರು ಅಧ್ಯಕ್ಷರಾಗಿ ಅಧಿಕಾರ ನಿರ್ವಹಿಸುತ್ತಿದ್ದಾರೆ. ಇದೇ ತಾಲ್ಲೂಕಿನ ಬಗ್ಗೂರು, ಕೆ.ಬೆಳಗಲ್, ಮಣ್ಣೂರು ಸೂಗೂರು ಮತ್ತು ಬೈರಾಪುರ ಈ ನಾಲ್ಕು ಗ್ರಾಮ ಪಂಚಾಯಿತಿಗಳಲ್ಲಿ ದಲಿತ ಮಹಿಳೆಯರು ಅಧ್ಯಕ್ಷರುಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗಾಗಿ ಒಟ್ಟು ೭ ಅಧ್ಯಕ್ಷರುಗಳ ಅಧಿಕಾರ ನಿರ್ವಹಣೆಯನ್ನು ಮಾಪನ ಮಾಡಲು ಸಂದರ್ಶನಕ್ಕೆ ಆಯ್ದುಕೊಳ್ಳಲಾಗಿದೆ. ಅತ್ಯಂತ ಹಿಂದುಳಿದ, ಕೂಡ್ಲಿಗಿ ತಾಲ್ಲೂಕಿನಲ್ಲಿ ಪೂಜಾರಹಳ್ಳಿ, ಹೊಸಳ್ಳಿ, ಹಾರಕ್‌ಬಾವಿ, ಹಿರೇ ಹೆಗ್ಡಾಳ್ ಮತ್ತು ಚಿರಬಿ. ಈ ೫ ಪಂಚಾಯತ್‌ಗಳಲ್ಲಿ ದಲಿತ ಪುರುಷರು, ಅಧ್ಯಕ್ಷರುಗಳಾಗಿ ಅಧಿಕಾರ ಸ್ಥಾನವನ್ನು ನಿರ್ವಹಿಸುತ್ತಿದ್ದಾರೆ. ಇಡೀ ತಾಲ್ಲೂಕಿನ ಹಿರೇಕುಂಬಳಗುಂಟೆ, ಉಜ್ಜಿನಿ, ಕೆ.ಅಯ್ಯನಹಳ್ಳಿ, ನಾಗರಕಟ್ಟೆ ಮತ್ತು ಕಕ್ಕುಪ್ಪಿ ಈ ಐದು ಪಂಚಾಯತ್‌ಗಳಲ್ಲಿ ದಲಿತ ಮಹಿಳೆಯರು ಅಧ್ಯಕ್ಷರುಗಳಾಗಿ ಅಧಿಕಾರ ನಿರ್ವಹಿಸುತ್ತಿದ್ದಾರೆ. ಹಾಗಾಗಿ ಬಳ್ಳಾರಿ ತಾಲ್ಲೂಕಿನ ೫ ಪುರುಷ ಅಧ್ಯಕ್ಷರುಗಳು ಹಾಗೂ ೫ ಮಹಿಳಾ ಅಧ್ಯಕ್ಷರುಗಳನ್ನು ಒಟ್ಟು ೧೦ ಅಧ್ಯಕ್ಷರುಗಳನ್ನು ಅದೇ ಪ್ರಕಾರ ಒಟ್ಟು ೩ ಪುರುಷ

ಅಧ್ಯಕ್ಷರು ಹಾಗೂ ೪ ಮಹಿಳಾ ಅಧ್ಯಕ್ಷರುಗಳು ಒಟ್ಟು ೭ ಅಧ್ಯಕ್ಷರುಗಳು ಕೂಡ್ಲಿಗಿ ತಾಲ್ಲೂಕಿನಿಂದ ೫ ಪುರುಷ ಅಧ್ಯಕ್ಷರುಗಳು ಹಾಗೂ ೫ ಮಹಿಳಾ ಅಧ್ಯಕ್ಷರುಗಳು ಒಟ್ಟು ೧೦ ಅಧ್ಯಕ್ಷರುಗಳು ಜಿಲ್ಲೆಯ ೩ ತಾಲ್ಲೂಕುಗಳಿಂದ ಒಟ್ಟು ೧೩ ದಲಿತ ಪುರುಷ ಅಧ್ಯಕ್ಷರುಗಳು ಹಾಗೂ ೧೪ ದಲಿತ ಮಹಿಳಾ ಅಧ್ಯಕ್ರುಗಳನ್ನು ಒಟ್ಟು ೨೭ ದಲಿತ ಅಧ್ಯಕ್ಷರುಗಳನ್ನು ಸಂದರ್ಶನಕ್ಕೆ ಒಳಪಡಿಸಿ ಅವರ ಅಧಿಕಾರ ನಿರ್ವಹಣೆ ಹಾಗೂ ಆಡಳಿತ ನಿರ್ವಹಣೆ ಎದುರಿಸುತ್ತಿರುವ ಸವಾಲುಗಳನ್ನು ಕಂಡುಕೊಂಡು ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೨. ಅಧ್ಯಯನದ ಮಿತಿಗಳು:

ಪ್ರಸ್ತುತ ಅಧ್ಯಯನವು ಪಂಚಾಯತ್ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ದಲಿತರ ಸಹಭಾಗಿತ್ವ ಕುರಿತಾದ ಅಧ್ಯಯನವಾಗಿದ್ದು, ಇಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಾಪೇಕ್ಷವಾಗಿ ಮುಂದುವರೆದಿರುವ ಬಳ್ಳಾರಿ ತಾಲ್ಲೂಕು, ಕಡಿಮೆ ಹಿಂದುಳಿದ ತಾಲ್ಲೂಕು ಸಿರುಗುಪ್ಪ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕು ಕೂಡ್ಲಿಗಿ ಇವುಗಳನ್ನು ಅಧ್ಯಯನಕ್ಕೆ ಗುರಿಪಡಿಸಲಾಗಿದೆ. ಈ ತಾಲ್ಲೂಕುಗಳಿಗೆ ಒಳಪಡುವ ಗ್ರಾಮ ಪಂಚಾಯತಿಗಳನ್ನು, ಗ್ರಾಮ ಪಂಚಾಯಿತಿಯ ದಲಿತ ಪ್ರತಿನಿಧಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ತಾಲ್ಲೂಕು ಕೇಂದ್ರಕ್ಕೆ ಅತಿ ಸಮೀಪವಿರುವ, ತಾಲ್ಲೂಕು ಕೇಂದ್ರದಿಂದ ಮಧ್ಯದಲ್ಲಿರುವ ಮತ್ತು ಮತ್ತು ತಾಲ್ಲೂಕು ಕೇಂದ್ರದಿಂದ ಅತ್ಯಂತ ದೂರದಲ್ಲಿರುವ ಗ್ರಾಮ ಪಂಚಾಯತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಅಧ್ಯಯನ ನಡೆಸಲು ಇತಿಮಿತಿಯನ್ನು ರೂಪಿಸಿಕೊಳ್ಳಲಾಗಿದೆ. ಬಳ್ಳಾರಿ ತಾಲ್ಲೂಕಿನಲ್ಲಿ ಸಂಗನಕಲ್ಲು, ಹಲಕುಂದಿ, ಬೆಳಗಲ್ಲು ಮತ್ತು ಶ್ರೀಧರಗಡ್ಡೆ, ಸಿರುಗುಪ್ಪ ತಾಲ್ಲೂಕಿನಲ್ಲಿ ಮೂರು ಗ್ರಾಮಪಂಚಾಯಿತಿಗಳಾದ ಹಚ್ಚೊಳ್ಳಿ, ಸಿರಿಗೇರಿ ಮತ್ತು ಕೆಂಚನಗುಡ್ಡ ಮತ್ತು ಕೂಡ್ಲಿಗಿ ತಾಲ್ಲೂಕಿನ ಮಾಕನಡಕು, ಹ್ಯಾಳ್ಯಾ, ಶಿವಪುರ ಮತ್ತು ಗುಡೇಕೋಟೆ ಗ್ರಾಮಪಂಚಾಯಿತಿಗಳು ಅಧ್ಯಯನದ ವ್ಯಾಪ್ತಿಗೆ ಬಂದಿವೆ.

೩. ಅಧ್ಯಯನದ ವಿನ್ಯಾಸ:

ಅಧ್ಯಯನದ ಪ್ರಸ್ತಾವನೆ ಮತ್ತು ಸಮಾರೋಪಗಳನ್ನು ಹೊರತುಪಡಿಸಿ ಒಟ್ಟು ೬ ಅಧ್ಯಾಯಗಳನ್ನು ರಚಿಸಲಾಗಿದೆ.

ಅಧ್ಯಾಯ ೦೧

ಈ ಅಧ್ಯಾಯದಲ್ಲಿ ಭಾರತ ಮತ್ತು ಕರ್ನಾಟಕದ ಪಂಚಾಯತ್ ರಾಜ್ ಸಂಸ್ಥೆಗಳ ಉಗಮ ಮತ್ತು ಚಾರಿತ್ರಿಕ ಬೆಳವಣಿಗೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಸ್ಥಳೀಯ ಸರ್ಕಾರಗಳ

ಪರಿಕಲ್ಪನೆ, ಸ್ಥಳೀಯ ಸ್ವಯಂ ಸರ್ಕಾರಗಳ ಸ್ವರೂಪ ಪಂಚಾಯತ್ ಸಂಸ್ಥೆಗಳ ಮಹತ್ವ ಮತ್ತು ಪ್ರಾಚೀನ ಭಾರತದಲ್ಲಿ ಪಂಚಾಯತಿಗಳು ಎನ್ನುವ ವಿಷಯಗಳನ್ನು ಚರ್ಚಿಸಲಾಗಿದೆ. ಮುಂದುವರೆದ ಮಧ್ಯಯುಗೀನ ಕಾಲದ ಪಂಚಾಯತಿಗಳು, ಬ್ರಿಟೀಷರ ಆಳ್ವಿಕೆಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಚಾಯತ್ ವ್ಯವಸ್ಥೆಯನ್ನು ಸಮಗ್ರವಾಗಿ ಅವಲೋಕಿಸಲಾಗಿದೆ.

ಅಧ್ಯಾಯ ೦೨

ಈ ಅಧ್ಯಾಯದಲ್ಲಿ ದಲಿತರ ರಾಜಕೀಯ ಸಹಭಾಗಿತ್ವ ಪರಿಕಲ್ಪನೆಯನ್ನು ಚರ್ಚಿಸಲಾಗಿದೆ.

ದಲಿತರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಆಯಾಮಗಳನ್ನು ವರ್ಗ, ಜಾತಿ, ಲಿಂಗ ಸಂಬಂಧಿ ಅಸಮಾನತೆಗಳನ್ನು ಚರ್ಚಿಸುವುದರ ಮೂಲಕ ದಲಿತರ ಸಮಗ್ರ ಪರಿಕಲ್ಪನೆ, ದಲಿತ ಪದದ ಕುರಿತು ವ್ಯಾಖ್ಯಾನಗಳು, ದಲಿತರ ರಾಜಕೀಯ ಸಹಭಾಗಿತ್ವ ಕುರಿತು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ರಾಜಕೀಯ ಸಹಭಾಗಿತ್ವದ ಮನಃಶಾಸ್ತ್ರೀಯ ಸೂಚಿಗಳು, ಸಾಮಾಜಿಕ ಸೂಚಿಗಳು ಹಾಗೂ ರಾಜಕೀಯ ಸೂಚಿಗಳನ್ನು ಕುರಿತು ಚರ್ಚಿಸಲಾಗಿದೆ. ಭಾರತದಲ್ಲಿ ದಲಿತರ ರಾಜಕೀಯ ಪ್ರಜ್ಞೆ, ಅದರ ಸರಿಯಾದ ಅನುಷ್ಠಾನ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ದಲಿತರ ಪ್ರತಿನಿಧಿಕರಣ ಕುರಿತ ಆಲೋಚನಾ ಕ್ರಮವಿದೆ.

ಅಧ್ಯಾಯ ೦೩

ಈ ಅಧ್ಯಾಯದಲ್ಲಿ ದಲಿತರ ಸಂವಿಧಾನಾತ್ಮಕ ರಕ್ಷಣೆ ಮತ್ತು ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದ್ದು, ದಲಿತರಿಗೆ ಸಂವಿಧಾನಾತ್ಮಕ ರಕ್ಷಣೆಗಳು, ಭಾರತದಲ್ಲಿ ವಿಧಿಗಳಲ್ಲಿ ದಲಿತರ ರಕ್ಷಣೆ, ದಲಿತರ ಸಬಲೀಕರಣ ಮತ್ತು ಸ್ವಾತಂತ್ರ್ಯೋತ್ತರ ಭಾರತದ ದಲಿತರ ಸ್ಥಿತಿಗತಿಗಳನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ದಲಿತರಲ್ಲಿ ದಲಿತ ಮಹಿಳೆ, ಮಹಿಳೆ ಅನುಭವಿಸುವ ಲೈಂಗಿಕ ಹಿಂಸಾಚಾರ, ದಲಿತ ಮಹಿಳೆಯ ಅತಂತ್ರ ಆರ್ಥಿಕ ಸ್ಥಿತಿ ಹಾಗೂ ದಲಿತ ಮಹಿಳೆಯ ಶಿಕ್ಷಣವನ್ನು ಕುರಿತು ಚರ್ಚಿಸಲಾಗಿದೆ. ಭಾರತೀಯ ಅಸಮಾನ ಸಮಾಜದಲ್ಲಿ ಮಹಿಳೆ ಅನುಭವಿಸುವ ನೋವುಗಳನ್ನು ಪ್ರಸ್ತುತ ಅಧ್ಯಯನವು ಅತ್ಯಂತ ಪ್ರಜ್ಞಾಪೂರ್ವಕವಾಗಿ ಅವಲೋಕಿಸಿದೆ.

ಅಧ್ಯಾಯ ೦೪

ಈ ಅಧ್ಯಾಯದಲ್ಲಿ ದಲಿತ ಪ್ರತಿನಿಧಿಗಳ ಅಸ್ಮಿತೆಯನ್ನು ಮತ್ತು ಪಂಚಾಯತ್ ಕಾನೂನು ಗ್ರಹಿಕೆಯನ್ನು ಕುರಿತು ಚರ್ಚಿಸಲಾಗಿದೆ. ದಲಿತ ಅಸ್ಮಿತೆ ಮತ್ತು ರಾಜಕೀಯ ಸಂಸ್ಕೃತಿ,

ಪಂಚಾಯತ್ ಸದಸ್ಯರ ಅರಿವು, ದಲಿತ ಪ್ರತಿನಿಧಿಗಳ ಮೀಸಲಾತಿಯ ನಿಲುವುಗಳು ಮತ್ತು ದಲಿತ ಸಂಘಟನೆಗಳು, ಮತ್ತು ದಲಿತ ಅಭಿವೃದ್ಧಿಯ ಕುರಿತು ಅಧ್ಯಯನ ಮಾಡಲಾಗಿದೆ. ದಲಿತ ಸಂಘರ್ಷ ಸಮಿತಿಗಳು, ದಲಿತ ಜೀವನ ಪರಿವರ್ತನೆಗಳು, ದಲಿತ ಸಂಘರ್ಷ ಸಮಿತಿಯ ವಿರೋಧಭಾಸಗಳನ್ನು ಚರ್ಚಿಸುವುದರ ಜೊತೆಗೆ ಅಸ್ಪೃಶ್ಯತೆ ಆಚರಣೆ ಮತ್ತು ದಲಿತ ಪ್ರತಿನಿಧಿಗಳ ಗ್ರಹಿಕೆಗಳನ್ನು ವಿಶ್ಲೇಷಿಸಲಾಗಿದೆ. ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳ ಬಗ್ಗೆ ದಲಿತ ಪ್ರತಿನಿಧಿಗಳ ನಿಲುವುಗಳು ಮತ್ತು ದಲಿತ ಸಮುದಾಯದ ವಿಮೋಚನೆಗಾಗಿ ಹೋರಾಡಿದವರ ಗ್ರಹಿಕೆಗಳನ್ನು ಕೋಷ್ಟಕಗಳ ಮೂಲಕ ಅಂಕಿ-ಅಂಶಗಳನ್ನು ವಿವಿಧ ವರದಿಗಳು ನೀಡಿರುವ ಅಂಕಿ ಅಂಶಗಳೊಂದಿಗೆ ಹೋಲಿಸಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ೦೫

ಪ್ರಸ್ತುತ ಅಧ್ಯಾಯದಲ್ಲಿ ಪಂಚಾಯತ್ ಅಧಿಕಾರ ಪ್ರಕ್ರಿಯೆಯಲ್ಲಿ ದಲಿತ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯನ್ನು ಕುರಿತು ಚರ್ಚಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ದಲಿತರ ರಾಜಕೀಯ ಸಹಭಾಗಿತ್ವ ಮತ್ತು ಅಭಿವೃದ್ಧಿ ನಡುವಿನ ಸಂಬಂಧಗಳನ್ನು ವಿಶ್ಲೇಷಿಸಲಾಗಿದೆ. ಗ್ರಾಮ ಸಭೆಯಲ್ಲಿ ದಲಿತ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯನ್ನು ಕೋಷ್ಟಕಗಳಲ್ಲಿ ಸೂಚಿಸಿದ ದತ್ತಾಂಶಗಳ ಮೂಲಕ ಚರ್ಚಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಮೂರು ತಾಲ್ಲೂಕಗಳ ಪ್ರಾತಿನಿಧಿಕ ಗ್ರಾಮ ಪಂಚಾಯಿತಿಗಳನ್ನು ಅಧ್ಯಯನಕ್ಕೆ ಗುರಿಪಡಿಸಲಾಗಿದೆ. ಪ್ರಸ್ತುತ ಅಧ್ಯಯನವು ದಲಿತ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಕುರಿತು ಚರ್ಚಿಸುವುದರ ಜೊತೆಗೆ ಆಡಳಿತ ನಿರ್ವಹಣೆಯಲ್ಲಿ ಅವರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ-೬

ಪ್ರಸ್ತುತ ಅಧ್ಯಾಯವು ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಕುರಿತು ಹೇಳಲಾಗಿದೆ. ಕರ್ನಾಟಕದ ಗ್ರಾಮ ಪಂಚಾಯಿತಿ ವ್ಯವಸ್ಥೆ ಅದರ ಕಾರ್ಯ ವಿಧಾನಗಳನ್ನು ಮತ್ತು ದಲಿತರ ರಾಜಕೀಯ ಅಸ್ಮಿತೆಯನ್ನು, ಮೀಸಲಾತಿಯನ್ನು ಕುರಿತು ವಿಶ್ಲೇಷಿಸಲಾಗಿದೆ. ದಲಿತರ ಅಭಿವೃದ್ಧಿಯಲ್ಲಿ ದಲಿತ ಸಂಘಟನೆಗಳ ಪಾತ್ರ ಮತ್ತು ದಲಿತರ ಜೀವನ ಪರಿವರ್ತನೆಗಳನ್ನು ಅವರು ಅನುಭವಿಸುವ ಜೀವನ ಗ್ರಹಿಕೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಸ್ಪೃಶ್ಯತೆ ಆಚರಣೆಯ ಸ್ಥಳಗಳು, ದಲಿತ ವಿಮೋಚನಗಾರರ ಗ್ರಹಿಕೆಗಳ ಜೊತೆಗೆ ಸಂವಿಧಾನಾತ್ಮಕ ಹಕ್ಕುಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸ್ಥಾಯಿ ಸಮಿತಿಗಳ ಸಾಮಾಜಿಕ ನ್ಯಾಯದ

ಅರಿವು ಮತ್ತು ದಲಿತ ಪ್ರತಿನಿಧಿಗಳ ಪ್ರಜ್ಞಾಪೂರ್ವಕ ಪಾಲ್ಗೊಳ್ಳುವಿಕೆಯನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

ಸಮಾರೋಪ

ಈ ಭಾಗದಲ್ಲಿ ದಲಿತರ ರಾಜಕೀಯ ಸಂಸ್ಕೃತಿಗೆ ಸಂಬಂಧಿಸಿದ ಮನೋಗ್ರಹ್ಯ ಮನೋಭಾವನೆ, ಮೌಲ್ಯಮಾಪನ ಮನೋಭಾವನೆ ಮತ್ತು ಮನೋವಿರೋಧಿ ಮನೋಭಾವನೆಗಳ ಬಗ್ಗೆ ಕಂಡು ಬಂದ ಅಂತಿಮ ಫಲಿತಗಳನ್ನು ನೀಡಲಾಗಿದೆ. ದಲಿತರು ರಾಜಕೀಯ ಪ್ರಕ್ರಿಯೆಯ ಯಾವ ಹಂತಗಳಲ್ಲಿ, ಎಷ್ಟು ಪ್ರಮಾಣದಲ್ಲಿ ಹಾಗೂ ಯಾವ ಶೈಕ್ಷಣಿಕ ಮತ್ತು ಆರ್ಥಿಕ ಹಿನ್ನಲೆಯ ದಲಿತರು ಸಕ್ರೀಯವಾಗಿ ಪಾಲ್ಗೊಳ್ಳುತ್ತಾರೆ ಎಂಬುದರ ಫಲಿತಾಂಶ ನೀಡಲಾಗಿದೆ. ವಿವಿಧ ವರದಿಗಳು ಮತ್ತು ಪ್ರಾಥಮಿಕ ಮಾಹಿತಿಯ ಮೂಲಕ ದಲಿತರ ವಾಸ್ತವಿಕ ಸಮಾಜೋ-ಆರ್ಥಿಕ ಸ್ಥಿತಿಗಳ ಫಲಿತಾಂಶ ನೀಡಲಾಗಿದೆ. ರಾಜಕೀಯ ಸಹಭಾಗಿತ್ವದ ಮೂಲಕ ದಲಿತರು ಸಾಧಿಸಿಕೊಂಡ ಅಭಿವೃದ್ಧಿಯ ಫಲಿತಗಳನ್ನು ನೀಡಲಾಗಿದೆ.

ಕೊನೆಟಿಪ್ಪಣಿ:

೧. ವಿವೇಕ್‌ಕುಮಾರ್, ಸಿಚುಯೇಟಿಂಗ್ ದಲಿತ್ಸ್ ಇನ್ ಇಂಡಿಯನ್ ಸೊಸೈಟಿ, ಸೋಷಿಯಲಾಜಿಕಲ್ ಬುಲಿಟಿನ್, ಸಂಪುಟ ಸಂ.೫೪., ಸಂ.೩, ಸೆಪ್ಟಂಬರ್–ಡಿಸೆಂಬರ್, ೨೦೧೫, ಪು.೫೧೪

೨. ಜಾನ್ ಕ್ಯಾಂಪಬೆಲ್, ರಿಲೀಜಿಯಸ್ ಫೆಸ್ಟಿವಲ್ಸ್ ಆಂಡ್ ಕಾಸ್ಟ್ ಸಿಸ್ಟಮ್ ಇನ್ ಇಂಡಿಯಾ, ನ್ಯೂಡೆಲ್ಲಿ, ಖಾನಾ ಪಬ್ಲಿಷರ್ಸ್, ೨೦೦೩, ಪು.೪೨

೩. ರಂಜಿತ್, ರಾಜ್ಯಾಧ್ಯಕ್ಷ, ಎನ್‌ಸೈಕ್ಲೋಪಿಡಿಯಾ ಆಫ್ ಸೋಷಿಯಲ್ ಪ್ರಾಬ್ಲಮ್ಸ್, ಆಂಡ್ ಸೋಷಿಯಲ್ ಛೇಂಜ್, ನ್ಯೂಡೆಲ್ಲಿ, ಡಾಮಿನೆಂಟ್ ಪಬ್ಲಿಷರ್ಸ್, ೨೦೦೪, ಪು.೨೩೫

೪. ಮಾರ್ಕ್ ಜುಗೆನ್ಸ್‌ಮೇಯರ್, ರಿಲಿಜಿಯನ್ ರೆಬೆಲ್ ಇನ್ ಪಂಜಾಬ್: ದಿ ಸೋಷಿಯಲ್ ವಿಜನ್ ಆಂಡ್ ಅನ್‌ಟಚೆಬಿಲಿಟಿ, ನ್ಯೂಡೆಲ್ಲಿ, ಅಜಂತಾ ಪಬ್ಲಿಕೇಷನ್ಸ್, ೧೯೮೮, ಪು.೧೪

೫. ದ ಪ್ರಾಬ್ಲಮ್, ಸೆಮಿನಾರ್, ಸಂಪುಟ ಸಂಖ್ಯೆ ೪೭೧, ನವೆಂಬರ್ ೧೯೮೮, ಪು.೧೨

೬. ನರೇಂದ್ರಕುಮಾರ್, ಆಂಡ್ ಮನೋಜ್‌ರಾಜ್, ದಲಿತ್ ಲೀಡರ್‌ಶಿಪ್ ಇನ್ ಪಂಚಾಯತ್ ಎ ಸ್ಟಡಿ ಆಫ್ ಫೋರ್ ಸ್ಟೇಟ್ಸ್–ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೧೯೯೫, ಪು.೧೩

೭. ಶಿವ ಬಿ.ರಾವ್, ಸಂಪಾದಿತ , "ದ ಫ್ರೇಮಿಂಗ್ ಆಫ್ ಇಂಡಿಯಾಸ್ ಕಾನ್ಸಿಟಿಟ್ಯೂಷನ್, ನ್ಯೂಡೆಲ್ಲಿ, ಮನೋಹರ್ ಪಬ್ಲಿಕೇಷನ್, ೧೯೬೮, ಪು.೪೫

೮. ಮಾಳವಿಕ ಎಂ.ದೇಶಪಾಂಡೆ ಮತ್ತು ಎಸ್.ಎಸ್.ಪಟಗುಂಡಿ, ರೆಪ್ರೆಂಜೆಂಟೇಷನ್ ಆಫ್ ವುಮೆನ್ ಇನ್ ಲೋಕಲ್ ಗವರ್ನಮೆಂಟ್ ವಿಥ್ ಸ್ಪೇಷೆಲ್ ರೆಫರೆನ್ಸ್ ಟು ಕರ್ನಾಟಕ, ಕರ್ನಾಟಕ ಗವರ್ನಮೆಂಟ್ ಆಂಡ್ ಪಾಲಿಟಿಕ್ಸ್, (ಸಂ), ಹರೀಶ್ ರಾಮಸ್ವಾಮಿ ಮತ್ತು ಇತರರು, ಕಾನ್ಸೆಪ್ಟ್ ಪಬ್ಲಿಷಿಕಂಗ್ ಕಂಪನಿ, ನ್ಯೂಡೆಲ್ಲಿ, ೨೦೦೭, ಪು.೧೯೨–೧೯೩

೯. ದುರ್ಗದಾಸ್ ಬಸು, ಇಂಟ್ರಡಕ್ಷನ್ ಟು ದ ಕಾನ್ಸಿಟಿಟ್ಯೂಷನ್ ಆಫ್ ಇಂಡಿಯಾ, ನ್ಯೂಡೆಲ್ಲಿ, ವಾಡ್ವಾ ಆಂಡ್ ಕಂಪನಿ, ಲಾ ಪಬ್ಲಿಕೇಷನ್ಸ್, ೨೦೦೭, ಪು.೧೫೧

೧೦. ಡಿ.ಸುಂದರಾಮ್, ಗ್ರಾಸ್ ರೂಟ್ಸ್ ಗವರ್ನೆನ್ಸ್ ಇನ್ ಇಂಡಿಯಾ, "ಎ ಡ್ರೀಮ್ ಆರ್ ರಿಯಾಲಿಟಿ, ೯, ಡೈನಾಮಿಕ್ಸ್ ಆಫ್ ಗ್ರೇಟ್ ರೆಸ್ಟ್ ಗವರ್ನೆನ್ಸ್ ಇನ್ ಇಂಡಿಯಾ, ಡ್ರೀಮ್ಸ್ ಆಂಡ್ ರಿಯಾಲಿಟೀಸ್, (ಸಂ), ಡಿ.ಸುಂದರರಾಮ್, ಕಾನಿಷ್ಕ ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ, ೨೦೦೭, ಪು.೧೯

೧೧. ಸುಂದರ್‌ರಾಮ್, (ಸಂ) ಪಾರ್ಟಿಸಿಪೇಷನ್, ಡಿಸೆಂಟ್ರಲೈಜೇಷನ್ ಪ್ಲಾನಿಂಗ್ ಆಂಡ್ ಪಂಚಾಯತಿ ರಾಜ್ ಇನ್ ಇಂಡಿಯಾ: ಎ ರಿವಿವ್ಯೂ, ಎಸ್.ಪಿ.ಜೈನ್, ಡೈನಮಿಕ್ಸ್ ಆಫ್ ಗ್ರಾಸ್ ರೂಟ್ಸ್, ಗವರ್ನೆನ್ಸ್ ಇನ್ ಇಂಡಿಯಾ: ಡ್ರೀಮ್ಸ್ ಆಂಡ್ ರಿಯಾಲಿಟೀಸ್, ನ್ಯೂಡೆಲ್ಲಿ, ಕಾನಿಷ್ಕ ಪಬ್ಲಿಷರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್, ೨೦೦೭, ಪು.೭೫-೯೦

೧೨. ಸಾಹಿಬ್ ಸಿಂಗ್ ಮತ್ತು ಸ್ವಿಂದುರ್ ಸಿಂಗ್, ಲೋಕಲ್ ಗವರ್ನಮೆಂಟ್ ಇನ್ ಇಂಡಿಯಾ, ನ್ಯೂ ಅಕಾಡೆಮಿಕ್ ಪಬ್ಲಿಷಿಂಗ್ ಕಂಪನಿ, ೨೦೦೭, ಪು.೫೭-೭೬

೧೩. ನೇರಿ ಕರ್ನೇಲಿಯಾ-ಕರ್ನಾಟಕ ಗ್ರಾಮ ಪಂಚಾಯತ್‌ಗಳು ಗ್ರಾಮಸ್ವರಾಜ್ಯದೆಡೆಗೆ ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್- ಪೊಲಿಟಿಕಲ್ ಸೈನ್ಸ್ ಟೀಚರ್ಸ್ ಅಕಾಡೆಮಿ ಮೈಸೂರು,ಇಸ್ಯೂ ನಂ.೧೧, ಸಂಪುಟ ೧, ಡಿಸೆಂಬರ್ ೨೦೦೯. ಪು. ೨೨೦-೨೨೫.

೧೪. ಎಂ.ಗಾಜಿರೆಡ್ಡಿ, ಆಂಡ್ ಮಧುಸೂದನ ಬಂಡಿ, ದ ಸ್ಟೇಟಸ್ ಆಫ್ ಪಂಚಾಯತ್ ರಾಜ್ ಇನ್ಸಿಟಿಟ್ಯೂಷನ್ ಇನ್ ಆಂಧ್ರಪ್ರದೇಶ ಆಂಡ್ ಕರ್ನಾಟಕ: (ಸುಂದರಾಮ್, (ಸಂ) ಪಾರ್ಟಿಸಿಪೇಷನ್, ಡಿಸೆಂಟ್ರಲೈಜೇಷನ್ ಪ್ಲಾನಿಂಗ್ ಆಂಡ್ ಪಂಚಾಯತಿ ರಾಜ್ ಇನ್ ಇಂಡಿಯಾ: ಎ ರಿವಿವ್ಯೂ, ಎಸ್.ಪಿ.ಜೈನ್, ಡೈನಮಿಕ್ಸ್ ಆಫ್ ಗ್ರಾಸ್ ರೂಟ್ಸ್, ಗವರ್ನೆನ್ಸ್ ಇನ್ ಇಂಡಿಯಾ: ಡ್ರೀಮ್ಸ್ ಆಂಡ್ ರಿಯಾಲಿಟೀಸ್, ನ್ಯೂಡೆಲ್ಲಿ, ಕಾನಿಷ್ಕ ಪಬ್ಲಿಷರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್, ೨೦೦೭, ಪು.೭೫-೯೦ ಮತ್ತು ಎ.ಟಿ.ಕಿತ್ತೂರ್ ಆಂಡ್ ಹರೀಶ್ ರಾಮಸ್ವಾಮಿ, 'ಪಂಚಾಯತ್‌ರಾಜ್ ಇನ್ ಕರ್ನಾಟಕ ಆಂಡ್ ಎಂಪೀರಿಕಲ್ ಇವಾಲ್ಯೂವೇಷನ್, ಕರ್ನಾಟಕ ಗವರ್ನಮೆಂಟ್ ಆಂಡ್ ಪೊಲಿಟಿಕ್ಸ್, ಹರೀಶ್ ರಾಮಸ್ವಾಮಿ,

ಎಸ್.ಎಸ್.ಪಟಗುಂಡಿ, ಆಂಡ್ ಎಸ್.ಎಚ್.ಪಾಟೀಲ್, (ಸಂ) ನ್ಯೂಡೆಲ್ಲಿ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, ೨೦೦೭, ಪು.ಸಂ.೧೭೩-೨೦೫.

೧೫. ಟಿ.ಆರ್.ಚಂದ್ರಶೇಖರ್, ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ- ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೬. ಟಿ.ಆರ್.ಚಂದ್ರಶೇಖರ್, ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ- ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೭. ಟಿ.ಆರ್.ಚಂದ್ರಶೇಖರ್, ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ- ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೮. ಅಬ್ದುಲ್ ಅಜೀಜ್, ಡೆಮಾಕ್ರೆಟಿಕ್ ಡಿಸೆಂಟ್ರಲೈಜೇಷನ್-ಎಕ್ಸ್‌ಪಿರಿಯನ್ಸ್ ಆಫ್ ಕರ್ನಾಟಕ, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಸೆಪ್ಟಂಬರ್ ೨೩, ೨೦೦೦, ಪು.೩೫೨೧-೩೫೨೬

೧೯. (ಕಾನ್ಸಟಿಟೂಯೆಂಟ್ ಅಸೆಂಬ್ಲಿ ಡಿಬೇಟ್ಸ್, ಉಲ್ಲೇಖ:ಎಸ್.ಪಿ.ಜೈನ್, ಇನ್ಸಿಟಿಟ್ಯೂಷನಲೈಜೇಷನ್ ಆಫ್ ಗ್ರಾಸ್ ರೂಟ್ಸ್ ಗವರ್ನೆನ್ಸ್ ಇನ್ ಇಂಡಿಯಾ, ಸುಂದರಾಮ್ (ಸಂ) (ಸುಂದರಾಮ್, (ಸಂ) ಪಾರ್ಟಿಸಿಪೇಷನ್, ಡಿಸೆಂಟ್ರಲೈಜೇಷನ್ ಪ್ಲಾನಿಂಗ್ ಆಂಡ್ ಪಂಚಾಯತಿ ರಾಜ್ ಇನ್ ಇಂಡಿಯಾ: ಎ ರಿವಿವ್ಯೂ, ಎಸ್.ಪಿ.ಜೈನ್, ಡೈನಮಿಕ್ಸ್ ಆಫ್ ಗ್ರಾಸ್ ರೂಟ್ಸ್, ಗವರ್ನೆನ್ಸ್ ಇನ್ ಇಂಡಿಯಾ: ಡ್ರೀಮ್ಸ್ ಆಂಡ್ ರಿಯಾಲಿಟೀಸ್, ನ್ಯೂಡೆಲ್ಲಿ, ಕಾನಿಷ್ಕ ಪಬ್ಲಿಷರ್ಸ್ ಆಂಡ್ ಡಿಸ್ಟ್ರೀಬ್ಯೂಟರ್ಸ್, ೨೦೦೭, ಪು.೭೫-೯೦ ಮತ್ತು ಎ.ಟಿ.ಕಿತ್ತೂರ್ ಆಂಡ್ ಹರೀಶ್ ರಾಮಸ್ವಾಮಿ, 'ಪಂಚಾಯತ್‌ರಾಜ್ ಇನ್ ಕರ್ನಾಟಕ ಆಂಡ್ ಎಂಪೀರಿಕಲ್ ಇವಾಲ್ಯೂವೇಷನ್, ಕರ್ನಾಟಕ ಗವರ್ನಮೆಂಟ್ ಆಂಡ್ ಪೊಲಿಟಿಕ್ಸ್, ಹರೀಶ್ ರಾಮಸ್ವಾಮಿ, ಎಸ್.ಎಸ್.ಪಟಗುಂಡಿ, ಆಂಡ್ ಎಸ್.ಎಚ್.ಪಾಟೀಲ್, (ಸಂ) ನ್ಯೂಡೆಲ್ಲಿ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, ೨೦೦೭, ಪು.ಸಂ.೭೫-೯೦

ಅಧ್ಯಾಯ –೧

ಭಾರತ ಮತ್ತು ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಉಗಮ ಮತ್ತು ಚಾರಿತ್ರಿಕ ಬೆಳವಣಿಗೆ

೧.೧. ಸ್ಥಳೀಯ ಸರ್ಕಾರಗಳ ಪರಿಕಲ್ಪನೆ
೧.೨. ಸ್ಥಳೀಯ ಸ್ವಯಂ ಸರ್ಕಾರಗಳ ಸ್ವರೂಪ
೧.೩. ಪಂಚಾಯತ್ ಸಂಸ್ಥೆಗಳ ಮಹತ್ವ
೧.೪. ಪ್ರಾಚೀನ ಭಾರತದಲ್ಲಿ ಪಂಚಾಯತ್‌ಗಳು
೧.೫. ಮಧ್ಯಯುಗೀನ ಕಾಲದ ಪಂಚಾಯತ್‌ಗಳು
೧.೬. ಬ್ರಿಟಿಷರ ಆಳ್ವಿಕೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು
೧.೭. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಚಾಯತ್ ವ್ಯವಸ್ಥೆ
೧.೮. ೧೯೯೩ರ ೭೩ನೇ ಸಂವಿಧಾನಾತ್ಮಕ ತಿದ್ದುಪಡಿ ಮತ್ತು ಅದರ ಲಕ್ಷಣಗಳು
೧.೯. ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಚಾರಿತ್ರಿಕ ನೋಟ
೧.೧೦. ಬಳ್ಳಾರಿ ಜಿಲ್ಲೆಯ ಕ್ಷೇತ್ರ ಪರಿಚಯ

ಅಧ್ಯಾಯ ೧

ಭಾರತ ಮತ್ತು ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಉಗಮ ಮತ್ತು ಚಾರಿತ್ರಿಕ ಬೆಳವಣಿಗೆ

ಪಂಚಾಯತ್ ರಾಜ್ ಸಂಸ್ಥೆಗಳು ನಮ್ಮ ನಾಗರೀಕತೆಯಷ್ಟೇ ಪುರಾತನ ಸಂಸ್ಥೆಗಳಾಗಿವೆ. ಗ್ರಾಮ ಪಂಚಾಯಿತಿಗಳು ವಿವಿಧ ಸ್ವರೂಪಗಳಲ್ಲಿ ಭಾರತದ ಸಾಮಾಜಿಕ ವ್ಯವಸ್ಥೆಯ ಮುಖ್ಯ ಭಾಗವಾಗಿ ಗುರುತಿಸಿಕೊಂಡಿವೆ. ಆರಂಭದಲ್ಲಿ ಈ ಸಂಸ್ಥೆಗಳನ್ನು ಗ್ರಾಮ ಪಂಚಾಯತ್, ಜಿಲ್ಲಾ ಮಂಡಲಿ ಅಥವಾ ಉಪ ಜಿಲ್ಲಾ ಬೋರ್ಡ್‌ಗಳು ಎಂಬ ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತಿತ್ತು. ಪಂಚಾಯತ್ ಸಂಸ್ಥೆಗಳ ಪ್ರಯೋಗ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬೇರು ಮಟ್ಟಕ್ಕೆ ಕೊಂಡೊಯ್ಯುವ ವಾಹಿನಿಗಳಾಗಿ ಗುರುತಿಸಲಾಗುತ್ತದೆ. ಇದರೊಂದಿಗೆ ಸಾಮಾನ್ಯ ನಾಗರಿಕರು ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ನಾಗರಿಕ ಹಾಗೂ ರಾಜಕೀಯ ವ್ಯವಹಾರಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವ ಪ್ರಾಥಮಿಕ ಅಭಿವೃದ್ಧಿ ಕೇಂದ್ರಗಳೆಂದು ಪರಿಗಣಿಸಲಾಗಿದೆ. ಪಂಚಾಯತ್ ಸಂಸ್ಥೆಗಳನ್ನು ನಮ್ಮ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಗಳ ಮುಖ್ಯ ಭಾಗವನ್ನಾಗಿ ಪರಿಗಣಿಸಲಾಗಿದೆ. ಗ್ರಾಮೀಣ ಭಾರತ ಸಮಾಜದ ವಿವಿಧ ಜನಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವ ಮತ್ತು ಅವರ ಆಶೋತ್ತರಗಳನ್ನು ಈಡೇರಿಸುವ ಸಂಸ್ಥೆಗಳೆಂದು ಪರಿಗಣಿಸಲಾಗಿದೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಎಂಬುದು ಕೇವಲ ಅಧಿಕಾರದ ಹಂಚಿಕೆಯಲ್ಲ. ಇದು ಜವಾಬ್ದಾರಿಗಳ ಹಂಚಿಕೆ ಎಂದು ಪರಿಭಾವಿಸಲಾಗಿದೆ.[೧]

ಗ್ರಾಮ ಸ್ವರಾಜ್ಯವು ಗಾಂಧೀಜಿಯವರ ಚಿಂತನೆಯ ಪ್ರಮುಖ ಭಾಗವಾಗಿದೆ. ಈ ಚಿಂತನೆಯು ಸಂಸದೀಯ ಮಾದರಿಯ ಪ್ರಜಾಪ್ರಭುತ್ವದ ವಿರೋಧಿಯಾಗಿ ಮತ್ತು ಸ್ಥಳೀಯ ಸಂಪನ್ಮೂಲಗಳ, ಸೀಮಿತ ಅನುಭೋಗ ಮತ್ತು ತಾಂತ್ರಿಕತೆಯನ್ನು ಆಧರಿಸಿದ ಕಡಿಮೆ ಬೇಡಿಕೆಗಳ ಸಿದ್ಧಾಂತವನ್ನು ಅವಲಂಬಿಸಿದೆ. ಗಾಂಧಿಯವರ ಚಿಂತನೆಯನ್ನು ವಿರೋಧ ಮಾಡಿದ್ದು, ಡಾ.ಬಿ.ಆರ್.ಅಂಬೇಡ್ಕರ್‌ರವರು. ಗಾಂಧೀಜಿಯವರ ಚಿಂತನೆಗೆ ಪ್ರತಿಯಾಗಿ ಅಂಬೇಡ್ಕರರು ಸಂವಿಧಾನಾತ್ಮಕ ಸಂಸದೀಯ ಮಾದರಿಯ ಪ್ರಜಾಪ್ರಭುತ್ವವನ್ನು ನಂಬಿದ್ದರು. ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಭಾರತದ ಗ್ರಾಮವು ಶೋಷಣೆಯ ಮೂಲವನ್ನು ತಡೆಯಲು ಹಿಂಜರಿಯುವ

ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಆಧುನಿಕ ರಾಷ್ಟ್ರವನ್ನು ಸಾಮಾಜಿಕ ಶೋಷಣೆಯನ್ನು ತಡೆಯುವ ರಕ್ಷಣಾತ್ಮಕ ಕ್ರಮಗಳ ಮೂಲಕ ಕಟ್ಟಬೇಕಾಗಿದೆ. ಇದು ಕೇವಲ ಸಂಸದೀಯ ಮಾದರಿಯ ರಾಜಕಾರಣದಿಂದ ಸಾಧ್ಯವಾಗುತ್ತದೆ.[೨] ಹೀಗೆ ಸೈದ್ಧಾಂತಿಕವಾಗಿ ವಿವಿಧ ಚಿಂತನೆಗಳ ತಾತ್ವಿಕ ನೆಲೆಯಲ್ಲಿ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಗಟ್ಟಿಯಾಗಿ ನೆಲೆಗೊಂಡಿದೆ. ಭಾರತದ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಪಂಚಾಯತ್ ವ್ಯವಸ್ಥೆ ಹೇಗೆ ರೂಪುಗೊಂಡಿತು ಎಂಬುದನ್ನು ಮುಂದಿನ ಭಾಗದಲ್ಲಿ ಸ್ಥೂಲವಾಗಿ ಗುರುತಿಸುವುದು ಅಗತ್ಯವಾಗುತ್ತದೆ.

೧.೧. ಸ್ಥಳೀಯ ಸರ್ಕಾರಗಳ ಪರಿಕಲ್ಪನೆ

ಸ್ಥಳೀಯ ಸರ್ಕಾರಗಳು ಸಂಯುಕ್ತ ಮಾದರಿಯ ಸರ್ಕಾರದಲ್ಲಿ ರಾಜ್ಯ ಸರ್ಕಾರಗಳ ಭಾಗವಾಗಿರುತ್ತವೆ. ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ನಿರ್ದಿಷ್ಟ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯ ಸರ್ಕಾರಗಳಿಗೆ ಅಧೀನವಾಗಿರುತ್ತವೆ. ಸ್ಥಳೀಯ ಸರ್ಕಾರಗಳಲ್ಲಿ ಪ್ರತಿನಿಧಿಗಳು ಸ್ಥಳೀಯ ನಾಗರಿಕರಿಂದ ಆಯ್ಕೆಗೊಳ್ಳುತ್ತಾರೆ. ಇದರೊಂದಿಗೆ ಸ್ಥಳೀಯವಾಗಿ ಕೆಲವರು ಆಯ್ಕೆಗೊಂಡ, ಕೆಲವು ನಾಮಕರಣಗೊಂಡ ಸದಸ್ಯರಿಂದ ಸ್ಥಳೀಯ ಸರ್ಕಾರಗಳು ರೂಪುಗೊಂಡಿರುತ್ತವೆ. ಸಾಮಾನ್ಯವಾಗಿ ರಾಜ್ಯ ಸರ್ಕಾರಗಳಿಗೆ ಸ್ಥಳೀಯ ಸರ್ಕಾರಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿರುವುದಿಲ್ಲ. ರಾಜ್ಯ ಸರ್ಕಾರವು ಯಾವ ಅರ್ಹ ನಾಗರಿಕರಿಂದ ಅಧಿಕಾರವನ್ನು ಪಡೆದುಕೊಂಡಿರುತ್ತದೆಯೋ ಅದೇ ಅರ್ಹ ನಾಗರಿಕರಿಂದ ಸ್ಥಳೀಯ ಸರ್ಕಾರಗಳು ಅಧಿಕಾರದಿಂದ ಪ್ರದತ್ತವಾಗಿರುತ್ತವೆ. ಆದರೂ ಸ್ಥಳೀಯ ಸರ್ಕಾರಗಳು ರಾಜ್ಯ ಶಾಸಕಾಂಗದ ಸೃಷ್ಟಿಯಾಗಿರುತ್ತವೆ. ರಾಜ್ಯ ಸರ್ಕಾರವು ಕೊಡಮಾಡಿದ ಅಧಿಕಾರವನ್ನು ಹೊರತುಪಡಿಸಿ ರಾಜ್ಯ ಅಧಿಕಾರಗಳಿಗೆ ವಿರುದ್ಧವಾಗಿ ಅಧಿಕಾರವನ್ನು ಚಲಾಯಿಸುವಂತಿಲ್ಲ.

೧.೨. ಸ್ಥಳೀಯ ಸ್ವಯಂ ಸರ್ಕಾರಗಳ ಸ್ವರೂಪ

ಸ್ಥಳೀಯ ಸರ್ಕಾರಿ ಸಂಸ್ಥೆಗಳನ್ನು ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತದೆ. ಭಾರತದಲ್ಲಿ ಇದರ ಜನಪ್ರಿಯವಾದ ಹೆಸರು ಸ್ಥಳೀಯ ಸ್ವಯಂ ಸರ್ಕಾರ. ಇಂಗ್ಲೆಂಡ್‌ನಲ್ಲಿ ಇದು ಸ್ಥಳೀಯ ಅಧಿಕಾರ. ಇತರೆ ಪ್ರದೇಶಗಳಲ್ಲಿ, ಸ್ಥಳೀಯ ಅಧಿಕಾರ, ಸ್ಥಳೀಯ ಸರ್ಕಾರ ಎಂದು ವ್ಯಾಖ್ಯಾನಿಸಲಾಗುತ್ತದೆ. ವೆಂಕಟರಂಗಯ್ಯ ಮತ್ತು ಪಟ್ಟಾಭಿರಾಮ ವ್ಯಾಖ್ಯಾನಿಸುವಂತೆ ಸ್ಥಳೀಯ ಸ್ವಯಂ ಸರ್ಕಾರ ಎನ್ನುವುದು ಸ್ಥಳೀಯ ಜನರಿಂದ ಆಯ್ಕೆಗೊಂಡ ಸ್ಥಳೀಯ ಆಡಳಿತ ಅಥವಾ ಗ್ರಾಮಾಡಳಿತ, ಅಥವಾ ಪಟ್ಟಣದ ಆಡಳಿತವಾಗಿದ್ದು, ಇದು ರಾಜ್ಯಕ್ಕಿಂತ ಸಣ್ಣ ವ್ಯಾಪ್ತಿಯನ್ನು

ಹೊಂದಿರುತ್ತದೆ. ಈ ಸಂಸ್ಥೆಯು ಸ್ವಲ್ಪ ಭಾಗ ಕಂದಾಯವನ್ನು ಸ್ಥಳೀಯ ಜನರಿಂದ ವಸೂಲಿ ಮಾಡಿ ಜನರ ಸೇವೆಗಾಗಿ ಆ ಹಣವನ್ನು ಸಂದಾಯ ಮಾಡುತ್ತದೆ.[೩] ಈ ವ್ಯಾಖ್ಯಾನವು ತನ್ನ ಮಟ್ಟಿಗೆ ವ್ಯಾಪಕವಾಗಿದೆ. ಅಂದರೆ ಈ ವ್ಯಾಖ್ಯಾನವು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿವೆ. ಗ್ರಾಮೀಣ ಸ್ಥಳೀಯ ಸರ್ಕಾರಗಳು ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳನ್ನು ಒಳಗೊಂಡಿರುತ್ತದೆ. ಇವುಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳೆಂದು ಕರೆಯಲಾಗುತ್ತಿದೆ. ನಗರ ಸ್ಥಳೀಯ ಸರ್ಕಾರಗಳು ಮುನ್ಸಿಪಲ್ ಕಾರ್ಪೋರೇಷನ್, ಮುನಿಸಿಪಾಲಿಟೀಸ್ ಮತ್ತು ಪಟ್ಟಣ ಪಂಚಾಯತ್‌ಗಳನ್ನು ಒಳಗೊಂಡಿದೆ. ಈ ಚರ್ಚೆಗಳನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೧.೩. ಪಂಚಾಯತ್ ಸಂಸ್ಥೆಗಳ ಮಹತ್ವ

ಪಂಚಾಯತ್ ರಾಜ್ ಸಂಸ್ಥೆಗಳು ಅತ್ಯಂತ ಪ್ರಾಚೀನ ಸಂಸ್ಥೆಗಳಾಗಿವೆ. ಇದು ಸ್ಥಳೀಯ ಸರ್ಕಾರಗಳ ಒಂದು ಭಾಗವಾಗಿದೆ. ಈ ಸಂಸ್ಥೆಯು ಮನುಷ್ಯನ ವ್ಯಕ್ತಿಗತ ಗುಂಪು ಚಟುವಟಿಕೆಯಾಗಿದ್ದು, ಸ್ವಾತಂತ್ರ್ಯದ ಮೂಲ ಸೆಲೆಯಾಗಿದೆ. ಈ ಸಂಸ್ಥೆಗಳು ದೇಶದ ರಾಜಕಾರಣದ ಮುಖ್ಯ ಭಾಗವಾಗಿದ್ದು, ಇವುಗಳನ್ನು ದೇಶದ ಕಾನೂನಿನ ಮೂಲಕ ಸೃಷ್ಟಿಸಲಾಗಿದೆ ಮತ್ತು ಪುನರ್‌ಸಂಘಟಿಸಲಾಗಿದೆ. ಸ್ಥಳೀಯ ವ್ಯವಹಾರಗಳನ್ನು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ನಿರ್ವಹಿಸುವ ಜವಾಬ್ದಾರಿಯನ್ನು ಈ ಸಂಸ್ಥೆಗಳಿಗೆ ವಹಿಸಲಾಗಿದೆ. ಸ್ಥಳೀಯವಾಗಿ ಆಯ್ಕೆಗೊಂಡ ಚುನಾಯಿತ ಪ್ರತಿನಿಧಿಗಳ ಮೂಲಕ ಈ ಸಂಸ್ಥೆಗಳಿಗೆ ಅಧಿಕಾರವನ್ನು ಹಸ್ತಾಂತರಿಸಿ ಶಾಸನಗಳನ್ನು ಮಾಡುವ, ಶಾಸನಗಳನ್ನು ಮಾಡದಿರುವ ಮತ್ತು ಶಾಸನಗಳನ್ನು ಪುನರ್‌ರೂಪಿಸುವ ಜವಾಬ್ದಾರಿಯನ್ನು ವಹಿಸಿ ಸ್ಥಳೀಯ ಜನರಿಗೆ ರಾಜಕೀಯವಾಗಿ ಉತ್ತರದಾಯಿಯಾಗುವಂತೆ ರೂಪಿಸಲಾಗಿದೆ. ಪಂಚಾಯತ್‌ರಾಜ್ ಎನ್ನುವ ಪರಿಕಲ್ಪನೆಯು ಸ್ಥಳೀಯ ಜನರಿಂದ ಆಯ್ಕೆಗೊಂಡ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಕೆಲವು ತೆರಿಗೆಗಳನ್ನು ವಸೂಲಿ ಮಾಡಿ ಅವುಗಳನ್ನು ಸೇವೆಗೆ ವಿನಿಯೋಗಿಸುವ ಸಂಸ್ಥೆಗಳಾಗಿವೆ. ಸಾಮಾನ್ಯವಾಗಿ ಸ್ಥಳೀಯ ಸರ್ಕಾರವೆಂದರೆ, ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿರುವ, ಸಾರ್ವಭೌಮತೆ ಹೊಂದಿಲ್ಲದ ಹಾಗೂ ಕಾನೂನುಬದ್ಧ ಹಕ್ಕನ್ನು ಹೊಂದಿದ ಒಂದು ಅವಶ್ಯಕ ಸಂಸ್ಥೆಯಾಗಿದ್ದು, ಅದು ತನ್ನ ವ್ಯವಹಾರಗಳನ್ನು ಸ್ವಯಂ ನಿಯಂತ್ರಿಸಿಕೊಳ್ಳುವ ಸಂಸ್ಥೆಯಾಗಿದೆ. ಇದರ ಜೊತೆಗೆ ಸ್ಥಳೀಯ ಸರ್ಕಾರದ ಸಂಸ್ಥೆಗಳು ಬಾಹ್ಯ ನಿಯಂತ್ರಣವಿಲ್ಲದ ಸ್ವತಂತ್ರವಾದ ಸ್ಥಳೀಯ ಸಂಸ್ಥೆಯಾಗಿದ್ದು, ಸ್ಥಳೀಯ ಆಡಳಿತ ವ್ಯವಹಾರಗಳಲ್ಲಿ ಜನತೆಯು ಪಾಲ್ಗೊಳ್ಳುವ

ಸಂಸ್ಥೆಯಾಗಿದೆ.[೪] ಈ ವ್ಯಾಖ್ಯಾನಗಳು ಸೂಚಿಸುವಂತೆ ಪಂಚಾಯತ್‌ರಾಜ್ ಸಂಸ್ಥೆಯು ಹುಲ್ಲು ಬೇರು ಮಟ್ಟದ ಪ್ರಜಾಪ್ರಭುತ್ವವಾಗಿದೆ. ಭಾರತದ ಅರ್ಥದಲ್ಲಿ ಪಂಚಾಯತ್ ರಾಜ್ ಎಂದರೆ, ಜನರಿಂದ ಆಯ್ಕೆಗೊಂಡ ಐದು ಪ್ರತಿನಿಧಿಗಳಾಗಿದ್ದು, ಅವರನ್ನು ಸ್ಥಳೀಯ ಜನರು ನಾಯಕರೆಂದು ಅಂಗೀಕರಿಸಿರುತ್ತಾರೆ. ಈ ನಾಯಕರು ಗ್ರಾಮದ ಸಮಾಜೋ-ಆರ್ಥಿಕ ಚಟುವಟಿಕೆಗಳನ್ನು ಸೂಕ್ತ ರೀತಿಯಲ್ಲಿ ನಿರ್ದೇಶಿಸಿ ಜನಸಮುದಾಯಗಳಲ್ಲಿ ಉದ್ಭವವಾಗುವ ವ್ಯಾಜ್ಯಗಳನ್ನು ಪರಿಹರಿಸುವ ನ್ಯಾಯಿಕ ಪೀಠವಾಗಿರುತ್ತದೆ. ಕಾಲಗಳು ಉರುಳಿದಂತೆ ಪಂಚಾಯತ್‌ನ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಪಂಚಾಯತ್ ಸಂಸ್ಥೆಗಳು ಗ್ರಾಮದ ಪ್ರಜಾಸತ್ತಾತ್ಮಕ ಮತ್ತು ಸ್ವಯಂ ಆಡಳಿತದ ಸಂಸ್ಥೆಗಳಾಗಿವೆ.

ಸರ್ಕಾರಗಳ ಆಡಳಿತವು ರಾಜಧಾನಿಯಿಂದ ನಿರ್ವಹಿಸಲ್ಪಡುತ್ತವೆ ಮತ್ತು ಎಲ್ಲಾ ನೀತಿ ಮತ್ತು ಕಾರ್ಯಕ್ರಮಗಳ ನಿರ್ಧಾರವನ್ನು ಅಲ್ಲಿ ಕೈಗೊಳ್ಳಲಾಗುತ್ತದೆ. ಈ ಸರ್ಕಾರಗಳು ವಿವಿಧ ಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದು, ಕೇವಲ ಒಂದೇ ಸರ್ಕಾರಕ್ಕೆ ವಿವಿಧ ವಿಷಯಗಳನ್ನು ಮತ್ತು ಸಮಸ್ಯೆಗಳನ್ನು ನಿರ್ವಹಿಸುವುದು ಮತ್ತು ಎಲ್ಲಾ ಪ್ರದೇಶದ ಜನರಿಗೆ ಸಮಾನವಾಗಿ ಮತ್ತು ಪರಿಣಾಮಕಾರಿಯಾಗಿ ಸೇವೆಯನ್ನು ಸಲ್ಲಿಸುವುದು ಕಷ್ಟಸಾಧ್ಯ. ಇದರ ಜೊತೆಗೆ ಸರ್ಕಾರಗಳಿಗೆ ಗ್ರಾಮೀಣ ಪ್ರದೇಶದ ವೈವಿಧ್ಯಮಯವಾದ ಸಮಸ್ಯೆಗಳನ್ನು ಪರಿಹರಿಸುವ ಅಗತ್ಯ ಜ್ಞಾನ ಇರುವುದಿಲ್ಲ. ಹೆರಾಲ್ಡ್ ಜೆ.ಲಾಸ್ಕಿ ಹೇಳುವಂತೆ, ಎಲ್ಲಿಯವರೆಗೆ ಸ್ಥಳೀಯ ಸಮಸ್ಯೆಗಳನ್ನು ಆಯಾ ಪ್ರದೇಶದ ಜನರೇ ಪರಿಹರಿಸಲು ನಿರ್ಧಾರ ಕೈಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಾವು ಪ್ರಜಾಸತ್ತಾತ್ಮಕ ಸರ್ಕಾರದ ಪೂರ್ಣ ಪ್ರಮಾಣದ ಪ್ರಯೋಜನಗಳನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ.[೫]

ಮಹಾತ್ಮಾ ಗಾಂಧಿಯವರ ಪ್ರಕಾರ ೨೦ ಜನ ಕೇಂದ್ರದಲ್ಲಿ ಕುಳಿತು ಆಡಳಿತ ನಿರ್ವಹಿಸಿದರೆ ನಿಜವಾದ ಪ್ರಜಾಪ್ರಭುತ್ವ ತರಲು ಸಾಧ್ಯವಿಲ್ಲ. ಆಡಳಿತವು ಗ್ರಾಮೀಣ ಭಾಗದ ಕೆಳಹಂತದ ಜನರು ನಿರ್ವಹಿಸಿದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಜಾರಿಗೊಳ್ಳಲು ಸಾಧ್ಯವಾಗುತ್ತದೆ.[೬] ಈ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ವಿಕೇಂದ್ರೀಕರಣವನ್ನು ಜಾರಿಗೊಳಿಸುವುದರ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ, ಸ್ಥಳೀಯ ಪ್ರದೇಶದಲ್ಲಿ, ಸ್ಥಳೀಯ ಲಕ್ಷಣಗಳು ಹಾಗೂ ಅಧಿಕಾರಗಳೊಂದಿಗೆ ಸೃಷ್ಟಿಸುವ ಅಗತ್ಯವಿದೆ. ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟ ಜನರಿಗೆ ಮಾತ್ರ ತಾವು ಸ್ಥಳೀಯವಾಗಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿ ತಮ್ಮ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸಿಕೊಳ್ಳಬಲ್ಲರು.

ಆದ್ದರಿಂದ ಸ್ಥಳೀಯ ಸರ್ಕಾರವೆಂದರೆ, ಸ್ಥಳೀಯ ವ್ಯವಹಾರವನ್ನು ನಿರ್ವಹಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹೊರತಾದ ಒಂದು ರಾಜಕೀಯ ಉಪವ್ಯವಸ್ಥೆಯಾಗಿದ್ದು, ಅದು ಸ್ಥಳೀಯ ಜನರಿಗೆ ಅನುಕೂಲಗಳನ್ನು ಮಾಡಿಕೊಡುವುದರ ಮೂಲಕ ರಾಜ್ಯದ ಮತ್ತು ದೇಶದ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸುತ್ತದೆ. ಜನರ ಪಾಲ್ಗೊಳ್ಳುವಿಕೆಯ ಮಾಧ್ಯಮವು ದೂರವಿರಿಸುವಂತಿಲ್ಲ ಮತ್ತು ಜನರ ಪಾಲ್ಗೊಳ್ಳುವಿಕೆಯನ್ನು ರಾಷ್ಟ್ರೀಯ ಮತ್ತು ರಾಜ್ಯ ಸರ್ಕಾರಗಳಿಗೆ ಎರಡು, ಮೂರು ಅಥವಾ ಐದು ವರ್ಷಗಳಿಗೂ ಆಯ್ಕೆಯಾಗುವ ಪ್ರತಿನಿಧಿಗಳಿಗೆ ಸೀಮಿತಗೊಳಿಸುವಂತಿಲ್ಲ. ಆದರೆ ಜನರ ಪಾಲ್ಗೊಳ್ಳುವಿಕೆಯನ್ನು ತಮ್ಮ ದಿನನಿತ್ಯದ ಸ್ಥಳೀಯ ವ್ಯವಹಾರಗಳಲ್ಲಿ ಪಾಲ್ಗೊಳ್ಳುವ ಗ್ರಾಮ, ಪಟ್ಟಣಗಳಲ್ಲಿಯೂ ನಡೆಯುವುದು ಅಗತ್ಯವಾಗುತ್ತದೆ.[೭] ಆದ್ದರಿಂದ ಪಂಚಾಯತ್ ವ್ಯವಸ್ಥೆಯು ಸಾಮಾನ್ಯ ನಾಗರೀಕರಿಗೆ ತನ್ನ ಸ್ವಂತ ನಾಗರಿಕ ಮತ್ತು ಸ್ಥಳೀಯ ವ್ಯವಹಾರಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮಾಡುವ ಪ್ರಜಾಸತ್ತಾತ್ಮಕ ಸಂಸ್ಥೆಯಾಗಿದೆ. ಪರಿಕಲ್ಪನೆಯ ದೃಷ್ಟಿಯಿಂದ ಪಂಚಾಯತ್ ರಾಜ್ ಸಂಸ್ಥೆ ಬಹುಶಿಸ್ತೀಯ ಸಂಸ್ಥೆಯಾಗಿದೆ. ಇದು ಸಾಮಾಜಿಕವಾಗಿ ಒಂದು ಎನ್ನುವ ಭಾವನೆಯ ಮೂಲಕ ರೂಪುಗೊಂಡಿದೆ. ರಾಜಕೀಯ ಪರಿಭಾಷೆಯಲ್ಲಿ ಇದು ಗ್ರಾಮೀಣ ಭಾಗದ ರಾಜಕೀಯ ಸಂಸ್ಥೆಯಾಗಿದ್ದು, ದೇಶ ಮತ್ತು ರಾಜ್ಯ ಸರ್ಕಾರಗಳ ಉಪರಾಜಕೀಯ ಸಂಸ್ಥೆಯಾಗಿದೆ. ಕಾರ್ಯನಿರ್ವಹಣೆಯಲ್ಲಿ ಇದು ರಾಜ್ಯದ ಅಂಗ ಸಂಸ್ಥೆಯಾಗಿ ಕಾರ್ಯನಿರ್ವಹಿಸಿದೆ. ಆಯ್ಕೆಗೊಂಡ ಪ್ರತಿನಿಧಿಗಳನ್ನು ಒಳಗೊಂಡಿರುವುದರಿಂದ ಇದು ಕಾನೂನು ಪರಿಕಲ್ಪನೆಯನ್ನು ಎಂದು ಪ್ರತಿನಿಧಿಸುತ್ತದೆ. ಪಂಚಾಯತ್ ಸಂಸ್ಥೆಗಳಿಗೆ ಒಂದು ಆರ್ಥಿಕ ಆಯಾಮ ಇದ್ದು ಇದು ತನ್ನ ಸ್ವಂತ ಅರ್ಥ ವ್ಯವಸ್ಥೆಯೊಂದಿಗೆ ಕೇವಲ ಸೇವೆಯನ್ನು ಸಲ್ಲಿಸುವುದಿಲ್ಲ. ಬದಲಾಗಿ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಸಕ್ರೀಯವಾಗಿ ಭಾಗವಹಿಸುತ್ತದೆ. ಸ್ಥಳೀಯ ಪಾಲ್ಗೊಳ್ಳುವಿಕೆ ಇರುವುದರಿಂದ ಯೋಜನೆಯು ಸ್ಥಳೀಯ ಅಗತ್ಯಕ್ಕೆ ಅನುಗುಣವಾಗಿ ರೂಪುಗೊಳ್ಳುತ್ತದೆ. ಪಂಚಾಯತ್ ಸಂಸ್ಥೆಯು ಒಂದು ಆಡಳಿತಾತ್ಮಕ ಪರಿಕಲ್ಪನೆಯಾಗಿದ್ದು ಇದರ ಸದಸ್ಯರು ಸಮಿತಿಯ ಸಭೆಗಳಲ್ಲಿ ಪಾಲ್ಗೊಂಡು ಶಾಸನಗಳನ್ನು ರೂಪಿಸುವ, ಮತ್ತು ಮರುರೂಪಿಸುವ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಇದರ ಸಮಿತಿಗಳು ಸ್ಥಳೀಯ ಜನರಿಗೆ ನಾಗರಿಕ ಸೇವೆಗಳನ್ನು ಒದಗಿಸುವ ಮೂಲಕ ದೇಶ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಳ್ಳುತ್ತವೆ. ಪಂಚಾಯತ್ ರಾಜ್ ಸಂಸ್ಥೆಗಳು ನಾಲ್ಕು ಪ್ರಮುಖವಾದ ಲಕ್ಷಣಗಳನ್ನು ಒಳಗೊಂಡಿವೆ. ನಿರ್ದಿಷ್ಟ ಸ್ಥಳೀಯ ಕಾರ್ಯವ್ಯಾಪ್ತಿ, ಸಮುದಾಯ ಪಾಲ್ಗೊಳ್ಳುವ ಮೂಲಕ ಸ್ಥಳೀಯ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ದೇಶ ಮತ್ತು ರಾಜ್ಯ ಸರ್ಕಾರದಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ

ಮತ್ತು ಅನುದಾನ ಮತ್ತು ತೆರಿಗೆಗಳ ಮೂಲಕ ಹಣವನ್ನು ಕ್ರೋಢಿಕರಿಸುವುದು. ಈ ಕ್ರಮಗಳ ಮೂಲಕ ಏಕ ಉದ್ದೇಶಕ್ಕೆ ವಿರುದ್ಧವಾಗಿ ಬಹು ಉದ್ದೇಶಗಳನ್ನು ಹೊಂದಿದೆ.ಈ ಎಲ್ಲಾ ಲಕ್ಷಣಗಳು ಇಂದಿನ ಆಧುನಿಕ ಪಂಚಾಯತ್ ವ್ಯವಸ್ಥೆಗಳ ಪ್ರಮುಖ ಲಕ್ಷಣಗಳಾಗಿವೆ. ಪಂಚಾಯತ್ ಸಂಸ್ಥೆಗಳು ಭಾರತದಲ್ಲಿ ಚಾರಿತ್ರಿಕವಾಗಿ ಬೆಳೆದು ಬಂದ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಬೆಳೆದು ಬಂದ ಕ್ರಮವನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೧.೪. ಪ್ರಾಚೀನ ಭಾರತದಲ್ಲಿ ಪಂಚಾಯತ್‌ಗಳು

ಪ್ರಾಚೀನ ಭಾರತದ ರಾಜಕೀಯಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಪ್ರಮಾಣಿಕರಿಸಿ ನೋಡಿದರೆ ಗ್ರಾಮೀಣ ಆಡಳಿತದ ವ್ಯವಸ್ಥೆಯ ಸಂಘಟನಾ ಸ್ವರೂಪದ ಬಗ್ಗೆ ಭಿನ್ನಾಭಿಪ್ರಾಯಗಳು ಕಂಡು ಬರುತ್ತವೆ. ವಿನೋಬಭಾವೆ ಹೇಳುವ ಪ್ರಕಾರ, ಪ್ರಾಚೀನ ಭಾರತದಲ್ಲಿ ಜಾತಿ ಮುಖಂಡರನ್ನು ಒಳಗೊಂಡ ಜಾತಿ ಪಂಚಾಯಿತಿಗಳು ಅಸ್ತಿತ್ವದಲ್ಲಿದ್ದವು. ಅವರು ಹೇಳುವ ಪ್ರಕಾರ ಪ್ರಾಚೀನ ಸಮಾಜದಲ್ಲಿ ಐದು ವರ್ಣಗಳಿದ್ದವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ವರ್ಣಗಳು. ಇದರೊಂದಿಗೆ ಹೊರಗಿನಿಂದ ಬಂದ ಸಮುದಾಯಗಳನ್ನು ಐದನೇ ವರ್ಣ ಎಂದು ಪರಿಗಣಿಸಲಾಗುತ್ತಿತ್ತು. ಈ ಐದು ವರ್ಣಗಳನ್ನು ಪ್ರತಿನಿಧಿಸುವ ಐದು ಜನರ ಸಮಿತಿ ಆರಂಭವಾಯಿತು. ಇದು ಗ್ರಾಮ ಪಂಚಾಯಿಯಾಗಿ ಪರಿವರ್ತಿತವಾಯಿತು. ಇಲ್ಲಿ ಎಲ್ಲರೂ ಒಮ್ಮತಾಭಿಪ್ರಾಯದಿಂದ ಕೈಗೊಳ್ಳುವ ನಿರ್ಣಯಕ್ಕೆ ಬದ್ಧರಾಗುವುದು ಅವಶ್ಯಕವಾಗಿತ್ತು.[೮] ಈ ಅಭಿಪ್ರಾಯಗಳು ಪಂಚಾಯತ್ ವ್ಯವಸ್ಥೆಯನ್ನು ಸೀಮಿತ ನೆಲೆಯಲ್ಲಿ ಪರಿಭಾವಿಸಿಕೊಳ್ಳುತ್ತವೆ. ಪ್ರಾಚೀನ ಭಾರತದಲ್ಲಿ ಗ್ರಾಮಗಳು ಸ್ವಯಂ ನಿರ್ವಹಿಸಿಕೊಳ್ಳುತ್ತಿದ್ದವು. ವೇದಿಕ್ ಸಾಹಿತ್ಯದ ಪ್ರಕಾರ ಕುಟುಂಬದ ನಂತರ ಅತಿಮುಖ್ಯವಾದ ಸಂಸ್ಥೆ ಎಂದರೆ ಗ್ರಾಮವಾಗಿತ್ತು. ಆಲ್ಟೇಕರ್ ಹೇಳುವಂತೆ, ಪ್ರಾಚೀನ ಕಾಲಮಾನದಲ್ಲಿ ಗ್ರಾಮವು ಭಾರತದ ಆಡಳಿತ ವ್ಯವಸ್ಥೆಯ ಅತಿಮುಖ್ಯ ಕೇಂದ್ರವಾಗಿತ್ತು. ಆ ಕಾಲಘಟ್ಟದಲ್ಲಿ ಕಡಿಮೆ ಸಂಪರ್ಕ ವ್ಯವಸ್ಥೆ ಮತ್ತು ಕೈಗಾರಿಕೀಕರಣ ಇಲ್ಲದ ಕಾರಣ ಗ್ರಾಮಕ್ಕೆ ಹೆಚ್ಚು ಆದ್ಯತೆ ನೀಡಲಾಗಿತ್ತು. ಪಟ್ಟಣಗಳು ಪ್ರಾಚೀನ ಭಾರತದಲ್ಲಿ ಸಾಪೇಕ್ಷವಾಗಿ ಅಮುಖ್ಯವಾದ ಪಾತ್ರವಹಿಸಿವೆ. ವೇದಗಳ ಶ್ಲೋಕಗಳು ಕೇವಲ ಗ್ರಾಮದ ಸುಭಿಕ್ಷೆಗಾಗಿ ಒತ್ತು ನೀಡುತ್ತವೆಯೇ ಹೊರತು ಪಟ್ಟಣದ ಸುಭಿಕ್ಷೆಗಾಗಿ ಒತ್ತು ನೀಡುವುದು ಕಡಿಮೆ.[೯]

ಗ್ರಾಮಗಳನ್ನು ಗಣ ಮತ್ತು ಗಣರಾಜ್ಯವೆಂದು ಕರೆಯಲಾಗುತ್ತಿತ್ತು. ಇದರ ಅರ್ಥ ಜನರ ಕೈಯಲ್ಲಿರುವ ಒಂದು ಸರ್ಕಾರ.[೧೦] ಇದು ಆಡಳಿತಾತ್ಮಕ ಉದ್ದೇಶಕ್ಕಾಗಿ ಜನರಿಂದ ಆಯ್ಕೆಗೊಂಡ ಸದಸ್ಯರ ಸಂಸ್ಥೆಯಾಗಿತ್ತು. ಅಥರ್ವಣವೇದ ವಿವರಿಸುವಂತೆ, ಸಭಾ ಮತ್ತು ಸಮಿತಿಗಳು

ಪ್ರಜಾಪತಿಯ ಅವಳಿ-ಜವಳಿ ಹೆಣ್ಣುಮಕ್ಕಳಾಗಿದ್ದು, ಅವರನ್ನು ಮಾನವನ ನಾಗರೀಕತೆಯನ್ನು ಪುನರುಜ್ಜೀವನಗೊಳಿಸಲು ಭೂಮಿಗೆ ಕಳುಹಿಸಲ್ಪಟ್ಟವರಾಗಿದ್ದಾರೆ. ಇವೆರಡು ಸಾಮಾಜಿಕ ಸಂಘ ಮತ್ತು ಗ್ರಾಮದ ಸಮಿತಿಗಳಾಗಿದ್ದವು. ಗ್ರಾಮದ ಎಲ್ಲಾ ಉತ್ತಮ ಕುಟುಂಬಗಳ ಪ್ರತಿಯೊಬ್ಬ ಸದಸ್ಯರು ಸಭಾದಲ್ಲಿ ಸದಸ್ಯರಾಗಿರುತ್ತಿದ್ದರು. ಬ್ಯಾನರ್ಜಿ ಅವರು ಅಭಿಪ್ರಾಯಪಟ್ಟಿರುವ ಪ್ರಕಾರ ಆರಂಭಿಕ ವೇದಗಳ ಕಾಲದಲ್ಲಿ ಗ್ರಾಮಗಳು ತಮ್ಮ ವ್ಯವಹಾರಗಳನ್ನು ಸ್ವಯಂ ನಿರ್ವಹಿಸಿಕೊಳ್ಳುತ್ತಿದ್ದವು. ಆ ಕಾಲಘಟ್ಟದಲ್ಲಿ ರಾಜ್ಯಗಳು ಚಿಕ್ಕದಾಗಿದ್ದು, ಕೇಂದ್ರ ಮತ್ತು ಸ್ಥಳೀಯ ಸರ್ಕಾರಗಳಲ್ಲಿ ಹೆಚ್ಚು ವ್ಯತ್ಯಾಸಗಳಿರಲಿಲ್ಲ. ಬದಲಾದ ಕಾಲಘಟ್ಟದಲ್ಲಿ ರಾಜ್ಯವು ದೊಡ್ಡದಾಗಿ ಬೆಳವಣಿಗೆಯಾದ್ದರಿಂದ ಮತ್ತು ಎರಡೂ ಸರ್ಕಾರಗಳ ಕಾರ್ಯಗಳು ಪ್ರತ್ಯೇಕವಾಗಿ ಗೋಚರಿಸಿದ್ದರಿಂದ ಸ್ಥಳೀಯ ಸರ್ಕಾರಗಳ ಸಂಘಟನೆ ಅನಿವಾರ್ಯವಾಯಿತು.[೧೧] ಮುಂದುವರೆದು ಅವರು ಹೇಳುವಂತೆ, ಆರಂಭದಲ್ಲಿ ಗ್ರಾಮಗಳು ಸ್ವಯಂ ಆಳ್ವಿಕೆಯ ಸಂಸ್ಥೆಗಳಾಗಿದ್ದವು. ಅವು ವಾಸ್ತವಿಕವಾಗಿ ಕೇಂದ್ರ ಸರ್ಕಾರದ ನಿಯಂತ್ರಣದಿಂದ ಮುಕ್ತವಾಗಿದ್ದವು. ಈ ಎಲ್ಲಾ ಸಂಗತಿಗಳಿಂದ ಸ್ಪಷ್ಟಗೊಳ್ಳುವ ಮುಖ್ಯ ಸಂಗತಿ ಎಂದರೆ, ಪ್ರಾಚೀನ ಭಾರತದಲ್ಲಿ ಗ್ರಾಮಗಳ ಆಡಳಿತವನ್ನು ಪ್ರಜಾಸತ್ತಾತ್ಮಕ ನಿಯಮಗಳ ಮೂಲಕ ನಿಯಂತ್ರಿಸಲಾಗುತ್ತಿತ್ತು. ಆರಂಭಿಕ ಮೌರ್ಯರ ಆಳ್ವಿಕೆಯಲ್ಲಿ ಗ್ರಾಮೀಣ ಸಮಿತಿಗಳಲ್ಲಿ ಯಾವುದೇ ಪ್ರಮುಖ ಸುಧಾರಣೆ ಕಂಡುಬರಲಿಲ್ಲ. ಈ ಕಾಲಘಟ್ಟದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಹೇಳುವ ಪ್ರಕಾರ ಈ ಸಮಿತಿಗಳು ಗ್ರಾಮಗಳು ಸಾರ್ವಜನಿಕ ಉಪಯುಕ್ತ ಕಾರ್ಯಗಳನ್ನು ಕೈಗೊಳ್ಳುವುದು, ಪುನಶ್ಚೇತನ ಕಾರ್ಯಗಳನ್ನು ಕೈಗೊಳ್ಳುವುದು, ವ್ಯಾಜ್ಯಗಳನ್ನು ಪರಿಹರಿಸುವುದು ಮತ್ತು ಅಪ್ರಾಪ್ತ ಬಾಲಕರ ಆಸ್ತಿಗಳಿಗೆ ಧರ್ಮದರ್ಶಿಗಳನ್ನು ನೇಮಕ ಮಾಡುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.[೧೨] ಕ್ರಿ.ಪೂ.೬೦೦ ರಿಂದ ಕರ್ನಾಟಕ ಮತ್ತು ತಮಿಳು ರಾಜ್ಯಗಳಲ್ಲಿ ಪ್ರಾಥಮಿಕ ಗ್ರಾಮೀಣ ಸಭೆಯು ಗ್ರಾಮದ ಎಲ್ಲಾ ಕುಟುಂಬದ ಸದಸ್ಯರನ್ನು ಒಳಗೊಂಡಿತ್ತು. ಕರ್ನಾಟಕದ ಅಸಂಖ್ಯಾತ ಶಾಸನಗಳು ಹೇಳುವಂತೆ, ಮಹಾಜನಗಳ ಸಂಖ್ಯೆ ದೊಡ್ಡದಾಗಿತ್ತು. ಕೆಲವೊಮ್ಮೆ ಅವುಗಳ ಸಂಖ್ಯೆ ೨೦೦, ೫೦೦ ಮತ್ತು ಕೆಲವೊಮ್ಮೆ ಅವುಗಳ ಸಂಖ್ಯೆ ೧೦೦೦ ಆಗಿತ್ತು. ಈ ಸಂಖ್ಯೆಗಳು ಸ್ಪಷ್ಟ ಪಡಿಸುವಂತೆ ಮಹಾಜನಗಳು ಗ್ರಾಮದ ಎಲ್ಲಾ ಕುಟುಂಬಗಳನ್ನು ಒಳಗೊಂಡಿದ್ದವು. ಆದರೆ ವಿದೇಶಿಯರ ಸಂಬಂಧಗಳು ಹೆಚ್ಚಾದಂತೆ ಕೇಂದ್ರ ಸರ್ಕಾರಗಳು ಹೆಚ್ಚು ಹೆಚ್ಚು ಅಧಿಕಾರಗಳನ್ನು ಪಡೆದುಕೊಳ್ಳತೊಡಗಿದವು. ಕೇಂದ್ರ ಸರ್ಕಾರದ ಅಧಿಕಾರಗಳು ಹೆಚ್ಚಳವಾಗಿ ಮೌರ್ಯ ಸಾಮ್ರಾಜ್ಯದ ಅಧಿಕಾರ ಕೇಂದ್ರೀಕರಣಗೊಂಡಿದ್ದರೂ ಮೂಲ ಗ್ರಾಮೀಣ ಸಭೆಗಳಿಗೆ ಯಾವುದೇ ದಕ್ಕೆ ಬರದಂತೆ ನೋಡಿಕೊಳ್ಳಲಾಯಿತು. ಆದರೆ ಸ್ಥಾಯಿ ಸಮಿತಿಯ ರಚನೆಯ ಮೂಲಕ

ಗ್ರಾಮೀಣ ಆಡಳಿತವನ್ನು ನಿರ್ವಹಿಸಿರುವ ಬಗ್ಗೆ ಯಾವುದೇ ಸ್ಪಷ್ಟ ಶಾಸನ ಕಂಡು ಬರುವುದಿಲ್ಲ. ಸಭೆಯು ಗ್ರಾಮದ ಅತಿದೊಡ್ಡ ಸಮಿತಿಯಾಗಿದ್ದು ಕಾರ್ಯಕಾರಿ ಸಮಿತಿಯ ಮೂಲಕ ಗ್ರಾಮದ ಆಡಳಿತವನ್ನು ನಿರ್ವಹಿಸುವ ಬಗ್ಗೆ ತಿಳಿದುಬರುತ್ತದೆ. ಈ ವ್ಯವಸ್ಥೆ ಮುಂದೆ ಗ್ರಾಮ ಪಂಚಾಯತ್ ಎಂದು ಪರಿಚಿತವಾಯಿತು.

ಭಾರತದ ಕೆಲವು ಭಾಗಗಳಲ್ಲಿ ಗ್ರಾಮ ಸಮಿತಿಯು ಪೂರ್ಣ ಪ್ರಮಾಣದ ಸಮಿತಿಗಳಾಗಿ ವಿಕಾಸವಾದದ್ದು ಗುಪ್ತರ ಕಾಲದಲ್ಲಿ. ಈ ಸಮಿತಿಗಳನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು. ಭಾರತದ ಕೆಲವು ಭಾಗಗಳಲ್ಲಿ ಇವುಗಳನ್ನು ಪಂಚ ಮಂಡಳಿಗಳೆಂದು ಮತ್ತು ಬಿಹಾರದ ಭಾಗಗಳಲ್ಲಿ ಗ್ರಾಮ ಜನಪದಗಳೆಂದು ಕರೆಯಲಾಗುತ್ತಿತ್ತು.[೧೩] ೧೯೦೪-೧೯೦೫ರ ಭಾರತದ ಪುರಾತತ್ವ ಸಮೀಕ್ಷೆ ಹೇಳುವಂತೆ, ಬಿಹಾರದ ಜನಪದಗಳು ಔಪಚಾರಿಕ ಸಂಸ್ಥೆಗಳಾಗಿ ವಿಕಾಸ ಹೊಂದಿದವು. ಇವುಗಳು ನಿಯಮಿತವಾಗಿ ಸಭೆಯನ್ನು ನಡೆಸಿ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಂಡು ಆ ನಿರ್ಧಾರಗಳನ್ನು ಹೊರಗಿನವರಿಗೆ ಔಪಚಾರಿಕವಾಗಿ ಮುಚ್ಚಿದ ಲಕೋಟೆಯಲ್ಲಿ ಮಾಹಿತಿಯನ್ನು ಕಳುಹಿಸಲಾಗುತ್ತಿತ್ತು. ಎಪಿಗ್ರಫಿಕ್ ಶಾಸನವು ಹೇಳುವಂತೆ ಕ್ರಿ.ಪೂ.೬೦೦ ರಲ್ಲಿ ಗುಜರಾತ್, ಡೆಕ್ಕನ್ ಮತ್ತು ರಜಪೂತರ ಪ್ರದೇಶಗಳಲ್ಲಿ ಗ್ರಾಮದ ಹಿರಿಯರು ತಮ್ಮದೇ ಆದ ಸ್ವಂತ ಸಮಿತಿಯನ್ನು ರಚಿಸಿಕೊಳ್ಳುತ್ತಿದ್ದರು. ಆದರೆ ಈ ಸಮಿತಿಯ ಸದಸ್ಯರಿಗೆ ಸಂಬಂಧಿಸಿದ ಚುನಾವಣೆಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗುವುದಿಲ್ಲ. ಈ ಸಮಿತಿಗಳ ಕಾರ್ಯಗಳು ಗ್ರಾಮದ ಕಲ್ಯಾಣ ಕಾರ್ಯಕ್ರಮಗಳಿಗೆ ಮತ್ತು ಭೂಮಿಯ ವ್ಯವಸ್ಥಾಪನೆಗೆ ಸೀಮಿತಗೊಳಿಸಲಾಗಿತ್ತು.

ನಂತರ ಕಾಲಘಟ್ಟಕ್ಕೆ ಸಂಬಂಧಿಸಿದ ಸ್ಪಷ್ಟ ಮತ್ತು ಸಂಕ್ಷಿಪ್ತ ಮಾಹಿತಿ ಶುಕ್ರನ ನೀತಿಸಾರದಲ್ಲಿ ಲಭ್ಯವಾಗುತ್ತದೆ. ಇದರಲ್ಲಿ ಕ್ರಿ.ಪೂ. ೮೦೦ರ ಗ್ರಾಮಗಳ ಬಗ್ಗೆ ವಿವರಿಸಲಾಗಿದೆ. ಇದರ ಉಲ್ಲೇಖಗಳ ಪ್ರಕಾರ ಗ್ರಾಮೀಣ ಪಂಚಾಯಿತಿ ಆಯ್ಕೆಗೊಂಡ ಸಮಿತಿಯನ್ನು ಒಳಗೊಂಡಿದ್ದು, ಇದು ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರವನ್ನು ಒಳಗೊಂಡಿತ್ತು. ರಾಜನ ಅಧಿಕಾರಿಗಳು ಈ ಸದಸ್ಯರನ್ನು ಗೌರವಿಸುತ್ತಿದ್ದರು. ಈ ಸಮಿತಿಯು ಭೂಮಿಯನ್ನು ಹಂಚಿಕೆ ಮಾಡುವುದು. ಕಂದಾಯವನ್ನು ವಸೂಲಿ ಮಾಡುವುದು ಮತ್ತು ವಸೂಲಾದ ಕಂದಾಯವನ್ನು ಗ್ರಾಮದ ಪರವಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಕಾರ್ಯನಿರ್ವಹಿಸುತ್ತಿದ್ದವು. ಗ್ರಾಮ ಮತ್ತು ಜನ ಸಮುದಾಯದ ನಡುವೆ ಉಂಟಾಗುವ ವ್ಯಾಜ್ಯಗಳನ್ನು ಪರಿಹರಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದವು. ೧೦ನೇ ಶತಮಾನದ ಚೋಳರ ಶಾಸನವು ಗ್ರಾಮ ಸಭೆಗಳ

ರಚನೆ ಮತ್ತು ಕಾರ್ಯಾಂಗದ ಅಧಿಕಾರದ ಬಗ್ಗೆ ಪ್ರಸ್ತಾಪಿಸುತ್ತದೆ. ಕ್ರಿ.ಪೂ.೯೦೦-೧೩೦೦ ರವರೆಗೆ ಅಸ್ತಿತ್ವದಲ್ಲಿದ್ದ ಚೋಳ ವಂಶದಲ್ಲಿ ಎರಡು ರೀತಿಯ ಗ್ರಾಮ ಸಭೆಗಳಿದ್ದವು. ಸಾಮಾನ್ಯ ಗ್ರಾಮಗಳಲ್ಲಿ ಅಸ್ತಿತ್ವದಲ್ಲಿದ್ದ ಪ್ರಾಥಮಿಕ ಗ್ರಾಮ ಸಮಿತಿಗಳನ್ನು'ಊರ್' ಎಂದು ಮತ್ತು ಅಗ್ರಹಾರದ ಗ್ರಾಮಗಳಲ್ಲಿನ ಸಮಿತಿಯನ್ನು 'ಸಭಾ' ಎಂಬ ಹೆಸರಿನಲ್ಲಿ ಕರೆಯಲಾಗುತ್ತಿತ್ತು. ಕ್ರಿ.ಪೂ.೮೧೯ರ ಮತ್ತು ೯೨೧ರ ಉತ್ತಮರೂ ಶಾಸನದ ಪ್ರಕಾರ ಚೋಳರ ಚಕ್ರಾಧಿಪತಿ ೧ನೇ ಪರಾಂತಕನು ಚುನಾಯಿತ ಪ್ರತಿನಿಧಿಗಳು ವಿವಿಧ ಸಮಿತಿಗಳು ನಿರ್ವಹಿಸುವ ಕಾರ್ಯಗಳ ಬಗ್ಗೆ ನಿಯಮಾವಳಿಗಳನ್ನು ರೂಪಿಸಿದನು. ಆಯ್ಕೆಗೊಳ್ಳುವ ಪ್ರತಿನಿಧಿಗಳು ವೇದಗಳು ಮತ್ತು ಪುರಾಣಗಳ ಬಗ್ಗೆ ಪ್ರಾವಿಣ್ಯತೆ ಹೊಂದಿರಬೇಕು ಮತ್ತು ಜನರಿಂದ ಆಯ್ಕೆಗೊಳ್ಳಬೇಕು. ಹೀಗೆ ಆಯ್ಕೆಗೊಂಡ ಪ್ರತಿನಿಧಿಗಳು ನಿರ್ದಿಷ್ಟಾವಧಿಗೆ ಅಧಿಕಾರದಲ್ಲಿದ್ದು ನಂತರ ಅವರು ಮರು ಆಯ್ಕೆಗೆ ಅರ್ಹರಾಗಿರುವುದಿಲ್ಲ. ಈ ತತ್ವದ ಪ್ರಕಾರ ಎಲ್ಲರಿಗೂ ಗ್ರಾಮೀಣ ಸೇವೆಯಲ್ಲಿ ಭಾಗವಹಿಸುವ ಅವಕಾಶ ಲಭ್ಯವಾಗುತ್ತಿತ್ತು.[೧೪] ಹೀಗಾಗಿ ಸ್ವಾಯತ್ತತೆ ಹೊಂದಿರುವ ಗಣರಾಜ್ಯಗಳು ಕಾಲಾನುಕ್ರಮದಲ್ಲಿ ಶತಮಾನಗಳಿಂದ ವಿಕಾಸಗೊಂಡಿರುವುದು ಕಂಡು ಬರುತ್ತದೆ. ಕಾಲಗತಿಸಿದಂತೆ ರಾಜ್ಯವು ದೊಡ್ಡ ಗಾತ್ರದಲ್ಲಿ ಬೆಳೆದು ರಾಜಾಧಿಕಾರ ಬೆಳವಣಿಗೆ ಆಯಿತು. ಗ್ರಾಮೀಣ ಸಭೆಯು ಪ್ರಾಚೀನ ಕಾಲದಲ್ಲಿ ಅತ್ಯಂತ ಪ್ರಬಲವಾದ ಆಡಳಿತಾತ್ಮಕ ಸಂಘಟನೆಯಾಗಿತ್ತು. ಮುಂದೆ ಇವುಗಳನ್ನು ರಾಜನ ಅಧಿಪತ್ಯಕ್ಕೆ ಒಳಪಡಿಸಲಾಯಿತು ಮತ್ತು ಗ್ರಾಮ ಅಧಿಕಾರಿಗಳು ಸರ್ಕಾರಿ ನೌಕರರಾಗಿ ಪರಿವರ್ತಿತರಾದರು.

೧.೫. ಮಧ್ಯಯುಗೀನ ಕಾಲದಲ್ಲಿ ಪಂಚಾಯಿತಿಗಳು

ಮುಸ್ಲಿಂ ಆಳ್ವಿಕೆ ಅಥವಾ ಮೊಘಲರ ಆರಂಭಿಕ ಕಾಲದಲ್ಲಿ ಗ್ರಾಮ ಪಂಚಾಯಿತಿಗಳು ಹಿಂದಿನಂತೆಯೇ ಸ್ವಯಂ ಆಳ್ವಿಕೆ ಸಂಸ್ಥೆಗಳಾಗಿ ಮುಂದುವರೆದವು. ಮುಸ್ಲಿಂ ಅರಸರು ಕೆಲವು ಸ್ತರಗಳಲ್ಲಿ ಮಾತ್ರ ರಾಜ್ಯದ ಆಳ್ವಿಕೆಯನ್ನು ಅಂಗೀಕರಿಸಿ ಉಳಿದ ಕೆಲವು ಸ್ತರಗಳಲ್ಲಿ ಇತರ ಸಂಘಟನೆಗಳ ಆಳ್ವಿಕೆಗಳಿಗೆ ಅವಕಾಶ ನೀಡಲಾಯಿತು. ಹೈಗ್‌ಟೆಂಕರ್ ಅಭಿಪ್ರಾಯ ಪಡುವ ಪ್ರಕಾರ ಮೊಘಲ್ ಅರಸರು ಪ್ರಾಚೀನ ಗ್ರಾಮೀಣ ಸರ್ಕಾರಗಳ ಸಂಪ್ರದಾಯಗಳಲ್ಲಿ ಸ್ವಲ್ಪಮಟ್ಟಿಗೆ ಹಸ್ತಕ್ಷೇಪ ಮಾಡಿದರು. ಅವರು ಕಂದಾಯ ಮತ್ತು ಪೊಲೀಸ್ ಉದ್ದೇಶಕ್ಕಾಗಿ ಮಾತ್ರ ಗ್ರಾಮಗಳನ್ನು ಆಡಳಿತಕ್ಕೆ ಒಳಪಡಿಸಿದರು. ರಾಜ್ಯವು ಮಖದಮ್ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಕಳುವು ಪ್ರಕರಣ ನಿಯಂತ್ರಿಸುತ್ತಿದ್ದವು. ಪಂಚಾಯಿತಿಗಳಿಗೆ ಸಂಬಂಧಿಸಿದ ನ್ಯಾಯಿಕ ಅಧಿಕಾರಗಳನ್ನು ಮೊಘಲರ ಆಳ್ವಿಕೆಯಲ್ಲಿ ಕಡಿತಗೊಳಿಸಲಾಯಿತು. ಆದರೆ ಗ್ರಾಮೀಣ

ವ್ಯವಹಾರಗಳನ್ನು ಮೇಲಿನಿಂದ ನಿಯಂತ್ರಿಸದೆ ಗ್ರಾಮದ ಅಧಿಕಾರಿಗಳು ಮತ್ತು ಸೇವಕರು ಗ್ರಾಮ ಪಂಚಾಯಿತಿಗಳಿಗೆ ಉತ್ತರದಾಯಿ ಆಗಿರುವಂತೆ ರೂಪಿಸಲಾಯಿತು.[೧೫] ಭಾರತೀಯ ಇತಿಹಾಸಕಾರರು ಅಭಿಪ್ರಾಯಪಡುವಂತೆ ಮೊಘಲರ ಕಾಲಾವಧಿಯಲ್ಲಿ ಪಂಚಾಯತ್‌ಗಳು ಯಥಾ ಪ್ರಕಾರ ಮುಂದುವರೆದವು. ಮುಂದುವರೆದು ಇತಿಹಾಸಕಾರರು ಹೇಳುವಂತೆ, ಮೊಘಲರು ಭಾರತದ ಆಡಳಿತ ವ್ಯವಸ್ಥೆ ಪ್ರಾಥಮಿಕ ಸಂಸ್ಥೆಗಳು ಮತ್ತು ಸಮಾಜ ಆರ್ಥಿಕ ವ್ಯವಸ್ಥೆಯಲ್ಲಿ ಮಧ್ಯಪ್ರವೇಶದಲ್ಲಿ ಮಾಡಲಿಲ್ಲ.

ಕ್ರಿ.ಶ.೧೫೨೬ ರಿಂದ ೧೭೦೭ರವರೆಗೆ ಪಂಚಾಯತ್‌ಗಳು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಅವುಗಳ ಸ್ಥಾನಗಳನ್ನು ಅಧ್ಯಯನ ಮಾಡಿರುವ ಎಸ್.ಆರ್.ಶರ್ಮ ರವರು ಅಭಿಪ್ರಾಯಪಟ್ಟಿರುವ ಪ್ರಕಾರ ಗ್ರಾಮಗಳಲ್ಲಿ ಮೊಘಲರಿಗೆ ತಮ್ಮದೇ ಆದ ಸ್ಥಳೀಯ ಆಡಳಿತ ವ್ಯವಸ್ಥೆ ಇರಲಿಲ್ಲ. ಮಖದಮ್ ಹೆಸರಿನ ಅಧಿಕಾರಿಯು ಪ್ರಾಯಶಃ ಪಂಚಾಯತ್ ಅಧ್ಯಕ್ಷನಾಗಿದ್ದು, ಕಂದಾಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಕೃಷಿಕರಿಂದ ಕಂದಾಯಗಳನ್ನು ವಸೂಲಿ ಮಾಡುತ್ತಿದ್ದ ಈ ಅಧಿಕಾರಿಯು ಶೇ.೨.೫ರಷ್ಟು ಕಂದಾಯವನ್ನು ತನ್ನ ಸಂಭಾವನೆಯನ್ನಾಗಿ ಪಡೆಯುತ್ತಿದ್ದನು. ಪಟುವಾರಿಯು ಗ್ರಾಮಗಳ ಲೆಕ್ಕಾಧಿಕಾರಿಯಾಗಿದ್ದು, ಕೃಷಿ ಭೂಮಿ, ಬೆಳಗಳ ವಿವರ ಕಂದಾಯ ಬಾಕಿ ಬೇಡಿಕೆಗಳು ಮತ್ತು ಕೃಷಿಕರು ಶ್ರಮಿಸಿದ ಕಂದಾಯಗಳ ಲೆಕ್ಕ ನಿರ್ವಹಿಸುತ್ತಿದ್ದನು.[೧೬] ಗ್ರಾಮೀಣ ಪಂಚಾಯತ್‌ಗಳು ಕೋಮು ವ್ಯಾಜ್ಯಗಳು, ವೈವಾಹಿಕ ವ್ಯಾಜ್ಯಗಳು, ಭೂ ವ್ಯಾಜ್ಯಗಳು, ನೀರಾವರಿ ಹಂಚಿಕೆ ಸಂಬಂಧಿಸಿದ ವ್ಯಾಜ್ಯಗಳು ಮತ್ತು ಗ್ರಾಮದ ಸಮಾಜೋ-ಆರ್ಥಿಕ ಜೀವನದಲ್ಲಿ ಉಂಟಾಗುವ ಎಲ್ಲಾ ವ್ಯಾಜ್ಯಗಳನ್ನು ಪರಿಹಾರ ಮಾಡುತ್ತಿತ್ತು. ಪಂಚಾಯತ್ ಸಂಸ್ಥೆಗಳ ಸಭೆಗಳು ಸಾಮಾನ್ಯವಾಗಿ ದೇವಸ್ಥಾನ ಅಥವಾ ಕೆರೆಯ ಸಮೀಪದಲ್ಲಿ ನಿರ್ವಹಿಸಲ್ಪಡುತ್ತಿದ್ದವು. ಪಂಚಾಯಿತಿಗಳು ತಮ್ಮ ತೀರ್ಮಾನವನ್ನು ಗ್ರಾಮದ ಸಂಪ್ರದಾಯಗಳು ಮತ್ತು ಸಮುದಾಯದ ಹಿತಾಸಕ್ತಿಯ ನೆಲೆಯಲ್ಲಿ ಕೈಗೊಳ್ಳಲಾಗುತ್ತಿತ್ತು.

ಪ್ರಾಚೀನ ರಾಜಕೀಯ ಸಾಹಿತ್ಯಗಳಲ್ಲಿ ಉಲ್ಲೇಖವಾಗಿರುವ ವಿವರಗಳನ್ನು ಆಧರಿಸಿ ಸಂಕ್ಷಿಪ್ತವಾಗಿ ಹೇಳುವುದಾದರೆ ಮಧ್ಯಯುಗೀನ ಕಾಲದಲ್ಲಿ ಪಂಚಾಯತ್‌ಗಳು ಗ್ರಾಮದ ಹಿತಾಸಕ್ತಿಯನ್ನು ಕಾಪಾಡುವ ಮತ್ತು ಗ್ರಾಮೀಣ ಕಲ್ಯಾಣವನ್ನು ಸಾಧಿಸುವ ಸಂಸ್ಥೆಗಳಾಗಿದ್ದವು. ಆದರೆ ಈ ಗ್ರಾಮೀಣ ಪಂಚಾಯಿತಿಗಳ ರಚನೆ ಮತ್ತು ಕಾರ್ಯಗಳ ಬಗ್ಗೆ ಖಚಿತವಾಗಿ ಹೇಳುವ ಸಾಕ್ಷ್ಯಾಧಾರಗಳ ಕೊರತೆ ಕಂಡು ಬರುತ್ತದೆ.

೧.೬ ಬ್ರಿಟಿಷರ ಆಳ್ವಿಕೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು

ಅರಾಜಕತೆಯಿಂದಾಗಿ ಮೊಘಲ್ ಸಾಮ್ರಾಜ್ಯ ಪತನವಾಯಿತು. ಸಾರಿಗೆ ಸಂಪರ್ಕದ ಹೆಚ್ಚಳ, ವಿದೇಶಗಳೊಂದಿಗೆ ವಾಣಿಜ್ಯ ವ್ಯವಹಾರ, ಮಾರುಕಟ್ಟೆಯ ಉತ್ಪಾದನೆ, ಸಂಪ್ರದಾಯಗಳು ಮತ್ತು ನಡವಳಿಗಳ ಕುಸಿತದಿಂದಾಗಿ ಪಂಚಾಯತ್ ವ್ಯವಸ್ಥೆ ಅಸಂಘಟಿತಗೊಂಡವು. ಬ್ರಿಟಿಷರು ಕೃಷಿಕರೊಂದಿಗೆ ನೇರಸಂಪರ್ಕ ಪಡೆದು ರಸ್ತೆ ನಿರ್ಮಾಣ, ನೀರಾವರಿ, ಶಿಕ್ಷಣ, ಅರಣ್ಯ ಮತ್ತು ಬರ ಪರಿಹಾರ ಕ್ರಮಗಳನ್ನು ನೇರವಾಗಿ ಕೈಗೆತ್ತಿಕೊಂಡಿದ್ದ ಪರಿಣಾಮವಾಗಿ ಅತ್ಯಂತ ಪುರಾತನ ಸಂಸ್ಥೆಗಳಾದ ಪಂಚಾಯತ್‌ಗಳು ಪ್ರಾಮುಖ್ಯತೆ ಕಳೆದುಕೊಂಡವು. ನ್ಯಾಯಾಂಗ ವ್ಯವಸ್ಥೆಯ ಜಾರಿಯಿಂದಾಗಿ ಪುರಾತನ ಪಂಚಾಯತ್‌ಗಳು ನಿರ್ವಹಿಸುತ್ತಿದ್ದ ಕಾರ್ಯಗಳು ಬಾಹ್ಯ ಸರ್ಕಾರಿ ಸಂಸ್ಥೆಗಳಿಗೆ ವರ್ಗಾವಣೆಯಾದವು. ಗ್ರಾಮ ಸಮುದಾಯದ ಪ್ರತಿನಿಧಿಗಳು ಮತ್ತು ವಕ್ತಾರರನ್ನು ವೇತನ ಪಡೆಯುವ ಕೇಂದ್ರ ಸರ್ಕಾರದ ನೌಕರರನ್ನಾಗಿ ಪರಿವರ್ತಿಸಲಾಯಿತು. ಬಲಿಷ್ಠ ಕೇಂದ್ರ ಸರ್ಕಾರವನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು ಕೇಂದ್ರೀಕೃತ ಆಡಳಿತ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದ ಪಂಚಾಯತ್ ವ್ಯವಸ್ಥೆಯನ್ನು ನಿರ್ಲಕ್ಷಿಸಲಾಯಿತು. ಇದರ ಪರಿಣಾಮವಾಗಿ ಗ್ರಾಮೀಣ ಸಮುದಾಯಗಳು ಮತ್ತು ವಿಶಿಷ್ಟ ಗ್ರಾಮೀಣ ಸಂಸ್ಥೆಗಳು ವಿಘಟನೆಗೊಂಡವು. ಬ್ರಿಟಿಷರು ಯುದ್ಧಗಳಲ್ಲಿ ಜಯಿಸಿದ ಪ್ರದೇಶಗಳಲ್ಲಿ ಪಾಶ್ಚಿಮಾತ್ಯ ಮಾದರಿಯ, ನಿಯಮಿತವಾಗಿ ಆಯ್ಕೆಗೊಳ್ಳುವ ಪ್ರತಿನಿಧಿಗಳನ್ನು ಒಳಗೊಂಡ ಸಂಸ್ಥೆಗಳನ್ನು ಸ್ಥಾಪಿಸಿ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಕ್ಕೆ ಅಗತ್ಯವಾಗಿದ್ದ ಹಣಕಾಸನ್ನು ಪಡೆಯುವುದರ ಮೂಲಕ ವಸಹಾತುಶಾಹಿ ವ್ಯವಸ್ಥೆಗೆ ಬೇಕಾದ ಅಗತ್ಯಗಳನ್ನು ಪೂರೈಸಿಕೊಂಡರು. ೧೯೨೫ರ ದ ಇಂಜಿನಿಯರಿಂಗ್ ಟ್ಯಾಕ್ಸೇಷನ್ ಎನ್‌ಕ್ವಯರಿ ಕಮಿಟಿ ಅಭಿಪ್ರಾಯಪಟ್ಟಿರುವ ಪ್ರಕಾರ ಪರಿಣಾಮಕಾರಿಯಾಗಿ ಕಂದಾಯಗಳನ್ನು ವಸೂಲಿ ಮಾಡಲು ಭಾರತೀಯರನ್ನು ಆಡಳಿತ ವ್ಯವಸ್ಥೆಗೆ ಒಳಪಡಿಸುವ ಅಗತ್ಯವಿದೆ. ಇಂತಹ ಯೋಜನೆ ೧೮೫೭ರ ಭಾರತದ ಮೊದಲ ಯುದ್ಧದ ಪರಿಹಾರಗಳನ್ನು ನಿರ್ಧರಿಸಲು ಅಗತ್ಯವಿದೆಯೆಂದು ಅಭಿಪ್ರಾಯಪಟ್ಟಿದೆ. ೧೮೬೩ರ ದ ರಾಯಲ್ ಆರ್ಮಿ ಸ್ಯಾನಿಟರಿ ಕಮಿಷನ್ ವರದಿಯು ಗ್ರಾಮೀಣ ಸಮಿತಿಗಳ ನಿರ್ಮಾಣಕ್ಕೆ ಉತ್ತೇಜನ ನೀಡಿತು. ೧೮೭೦ರಲ್ಲಿ ಲಾರ್ಡ್ ಮೆಯೋ ಯಾವುದೇ ಮುಜುಗರವಿಲ್ಲದೇ ಪ್ರಾಂತೀಯ ಸರ್ಕಾರಗಳಿಗೆ ಅಧಿಕಾರ ನೀಡಲು ನಿರ್ಧರಿಸಿದನು.[೧೭]

ಲಾರ್ಡ್ ರಿಪ್ಪನ್ ಸ್ಥಳೀಯ ಸ್ವಯಂ ಸರ್ಕಾರಗಳನ್ನು ಪ್ರಾಥಮಿಕ ರಾಜಕೀಯ ಕೇಂದ್ರವನ್ನಾಗಿ ಮತ್ತು ಸಾರ್ವತ್ರಿಕ ಶಿಕ್ಷಣ ನೀಡುವ ಸಂಸ್ಥೆಗಳಾಗಿ ಕ್ರಾಂತಿಕಾರಿ ಸಂಸ್ಥೆಗಳನ್ನಾಗಿ ಬದಲಾಯಿಸುವ ಕ್ರಮಕೈಗೊಂಡನು. ಈತನು ೧೮೮೨ರ ಸ್ಥಳೀಯ ಸ್ವಯಂ ಸರ್ಕಾರಗಳ ಮೇಲಿನ ಗೊತ್ತುವಳಿಯನ್ನು ಅಂಗೀಕರಿಸಿದನು. ಇದರೊಂದಿಗೆ ಪಟ್ಟಣ ಮತ್ತು ಗ್ರಾಮೀಣ ಭಾಗಗಳಲ್ಲಿ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳಿಗೆ ನಿರ್ದಿಷ್ಟವಾದ ಕಾರ್ಯಗಳನ್ನು ಮತ್ತು ಹಣಕಾಸು ನಿಧಿಗಳನ್ನು ಒದಗಿಸುವ ತೀರ್ಮಾನ ಕೈಗೊಂಡನು. ಆದರೆ ಈ ಗೊತ್ತುವಳಿಯು ಗ್ರಾಮ ಪಂಚಾಯತ್‌ಗಳ ಸ್ಥಾಪನೆಗೆ ಒತ್ತು ನೀಡಲಿಲ್ಲ. ರಿಪ್ಪನ್ ತಾಲ್ಲೂಕು ಮಟ್ಟದ ಸಂಸ್ಥೆಗಳಿಗೆ ಒತ್ತು ನೀಡಿ ಅವುಗಳು ಮೇಲ್ಮಟ್ಟದ ಸರ್ಕಾರದ ಭಾಗಗಳಾಗಿ ಕಾರ್ಯನಿರ್ವಹಿಸುವಂತೆ ಕ್ರಮಕೈಗೊಂಡನು. ಆದರೆ ಇವುಗಳಿಗೆ ಯಾವುದೇ ಪ್ರಜಾಸತ್ತಾತ್ಮಕ ಮೌಲ್ಯಗಳಿರಲಿಲ್ಲ. ೧೯೦೧ರಲ್ಲಿ ಭಾರತದ ಕಾರ್ಯದರ್ಶಿಯಾಗಿದ್ದ ಡಿಸ್‌ಕೌಂಟ್ ಮೋರ್ಲೆ ಸ್ಥಳೀಯ ಸ್ವಯಂ ಸರ್ಕಾರಗಳನ್ನು ಅಧ್ಯಯನ ಮಾಡಿ ಈ ಸಂಬಂಧ ಸಾರ್ವಜನಿಕ ಅಭಿಪ್ರಾಯಗಳನ್ನು ಪಡೆಯಲು ರಾಯಲ್ ಕಮಿಷನ್‌ನ್ನು ನೇಮಕ ಮಾಡಿದರು. ರಾಯಲ್ ಕಮಿಷನ್ ವರದಿಯು ಸ್ಥಳೀಯ ಸ್ವಯಂ ಸರ್ಕಾರದ ಸ್ಥಾಪನೆಗೆ ಒಲವನ್ನು ವ್ಯಕ್ತಪಡಿಸಿದ್ದು, ಹಿಂದಿನ ಪಂಚಾಯತ್ ಅಧಿಕಾರಿಗಳ ದೌರ್ಜನ್ಯಗಳ ಕೆಟ್ಟ ಅನುಭವದ ಹಿನ್ನೆಲೆಯಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳಿಗೆ ಹೆಚ್ಚು ಅಧಿಕಾರ ನೀಡುವ ಬಗ್ಗೆ ಒಲವು ತೋರಿಸಲಿಲ್ಲ. ಹಾಗಾಗಿ ಭಾರತದಲ್ಲಿ ಪಂಚಾಯತ್‌ಗಳು ಸ್ಥಳೀಯ ಸ್ವಯಂ ಸರ್ಕಾರಗಳ ಪ್ರಾಯೋಗಿಕ ಮಾದರಿಗಳಾಗಿ ಕಾರ್ಯಾರಂಭ ಮಾಡಿದವು. ೧೯೦೯ರ ರಾಷ್ಟ್ರೀಯ ಕಾಂಗ್ರೆಸ್‌ನ ಲಾಹೋರ್ ಅಧಿವೇಶನದಲ್ಲಿ ಗೋಪಾಲಕೃಷ್ಣ ಸಮಿತಿ ಮತ್ತು ಬಾಲಗಂಗಾಧರ ತಿಲಕರು, ಗ್ರಾಮ ಪಂಚಾಯತ್‌ಗಳ ಪುನರುಜ್ಜೀವನಕ್ಕಾಗಿ ಒತ್ತಾಯಿಸಿದರು. ೧೯೧೭ರಲ್ಲಿ ಮಾಂಟೆಗೋ ಅವರು ಭಾರತದಲ್ಲಿ ಸ್ವಯಂ ಸರ್ಕಾರಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸುವ ಆಶ್ವಾಸನೆ ನೀಡಿದರು. ೧೯೧೮ರಲ್ಲಿ ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಗ್ರಾಮ ಪಂಚಾಯತ್‌ಗಳನ್ನು ಮತ್ತು ಅದರ ಕಾರ್ಯಗಳನ್ನು ಪ್ರಜಾಸತ್ತಾತ್ಮಕಗೊಳಿಸುವ ತೀರ್ಮಾನ ಕೈಗೊಳ್ಳಲಾಯಿತು. ಇದು ಅಂತಿಮವಾಗಿ ದೇಶದಲ್ಲಿ ಗ್ರಾಮ ಪಂಚಾಯತ್‌ಗಳ ಸ್ಥಾಪನೆಗೆ ಮೈಲಿಗಲ್ಲಾಯಿತು. ಈ ಗೊತ್ತುವಳಿಯ ಹಿನ್ನೆಲೆಯಲ್ಲಿ ೧೯೧೮ರ ಭಾರತ ಸಂವಿಧಾನಾತ್ಮಕ ಸುಧಾರಣೆ ವರದಿಯಲ್ಲಿ ಭಾರತ ಸರ್ಕಾರವು ಗ್ರಾಮಗಳ ಅಭಿವೃದ್ಧಿ ಮತ್ತು ಗ್ರಾಮಗಳಲ್ಲಿ ಪಂಚಾಯತ್ ವ್ಯವಸ್ಥೆಗೆ ನೇರ ಕ್ರಮಕೈಗೊಳ್ಳುತ್ತದೆ ಎಂದು ಉಲ್ಲೇಖಿಸಿದೆ.[೧೮] ಭಾರತ ಸರ್ಕಾರದ ೧೯೧೯ ಕಾಯಿದೆಯು ಸ್ಥಳೀಯ ಸರ್ಕಾರಗಳನ್ನು ಶಕ್ತಿಯುತಗೊಳಿಸಲು ಕ್ರಮಕೈಗೊಂಡಿತು. ಈ ಕಾಯ್ದೆಯ ಪ್ರಕಾರ ಸ್ಥಳೀಯ ಸ್ವಯಂ ಸರ್ಕಾರವು ಪ್ರಾಂತೀಯ

ಸರ್ಕಾರದಲ್ಲಿ ವರ್ಗಾಯಿಸಲ್ಪಡುವ ನಿಧಿಯವನ್ನಾಗಿ ಸೇರ್ಪಡೆಗೊಳಿಸಲಾಯಿತು. ಈ ಕಾಲಘಟ್ಟದಲ್ಲಿ ಜಾರಿಗೊಳಿಸದ ವಿವಿಧ ಕಾಯ್ದೆಗಳ ಮೂಲಕ ಪಂಚಾಯತ್‌ಗಳಿಗೆ ಹೆಚ್ಚು ಅಧಿಕಾರ ನೀಡಿ, ಬಾಹ್ಯ ನಿಯಂತ್ರಣದಿಂದ ಮುಕ್ತಗೊಳಿಸಿ ಜನತೆಗೆ ಉತ್ತರದಾಯಿಯಾಗಿರುವಂತೆ ವ್ಯವಸ್ಥೆಗೊಳಿಸಲಾಯಿತು. ಆದರೆ ೧೯೫೫ರ ವೈ.ವಿ.ಚೌಹಾಣ್ ಸಮಿತಿಯು ೧೯೨೦ರ ಕಾಯ್ದೆಯ ಮೂಲಕ ಸ್ಥಾಪನೆಯಾದ ಪಂಚಾಯತ್ ಸಂಸ್ಥೆಗಳು ಪೂರ್ಣ ಪ್ರಮಾಣದ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಗಳಾಗಿಲ್ಲ ಹಾಗೂ ಅವುಗಳಿಗೆ ಸೀಮಿತ ಅಧಿಕಾರ ನೀಡಲಾಗಿದೆ ಮತ್ತು ಕನಿಷ್ಠ ಹಣಕಾಸಿನ ಅನುದಾನ ನೀಡಲಾಗಿದೆ ಎಂದು ಅಭಿಪ್ರಾಯಪಟ್ಟಿತು.

೨೦ನೇ ಶತಮಾನದ ಪೂರ್ವ ಭಾಗದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಂಚಾಯತ್‌ಗಳನ್ನು ಜನಪ್ರಿಯಗೊಳಿಸುವ ಕಾರ್ಯಗಳನ್ನು ಕೈಗೆತ್ತಿಕೊಂಡಿತು. ಕಾಂಗ್ರೆಸ್ ಕಾರ್ಯಕರ್ತರ ಮೂಲಕ ಚಾರಿತ್ರಿಕ ಅಸಹಕಾರ ಚಳುವಳಿಯನ್ನು ಪ್ರಚಾರಗೊಳಿಸಿ ಗ್ರಾಮೀಣ ಜನರಿಗೆ ನ್ಯಾಯಾಂಗದ ಕಾನೂನುಗಳನ್ನು ಉಲ್ಲಂಘಿಸಲು ಹಾಗೂ ಪಂಚಾಯತ್ ಮೂಲಕ ಕಾನೂನುಗಳನ್ನು ಉಲ್ಲಂಘಿಸುವಂತೆ ಪ್ರೇರೇಪಿಸಿದರು. ಇದು ಭಾರತದಲ್ಲಿ ಪಂಚಾಯತ್ ವ್ಯವಸ್ಥೆ ಬೆಳವಣಿಗೆ ಮುಖ್ಯ ಕಾರಣವಾಯಿತು. ದ್ವಿಸರ್ಕಾರದಲ್ಲಿ ಪಂಚಾಯತ್‌ಗಳ ಬೆಳವಣಿಗೆ ಆಶಾದಾಯಕವಾಗಿತ್ತು. ಇದು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಎರಡು ಹಂತಗಳ ಪಂಚಾಯತ್‌ಗಳ ಬೆಳವಣಿಗೆಗೆ ಅವಕಾಶ ನೀಡಿತು. ೧೯೩೫ರ ಭಾರತ ಸರ್ಕಾರದ ಕಾಯ್ದೆ ಪ್ರಕಾರ ಪಂಚಾಯತ್ ಸಂಸ್ಥೆಗಳನ್ನು ಪ್ರಜಾಸತ್ತಾತ್ಮಕಗೊಳಿಸಲು ಕ್ರಮಕೈಗೊಳ್ಳಲಾಯಿತು. ಆದರೆ ಈ ಕಾಯ್ದೆ ಕಾಲಾವಧಿ ಅತ್ಯಂತ ಕಡಿಮೆಯಾಗಿದ್ದ ಕಾರಣ ಪಂಚಾಯತ್ ವ್ಯವಸ್ಥೆ ಮೇಲೆ ಹೆಚ್ಚು ಪರಿಣಾಮ ಬೀರುವುದು ಸಾಧ್ಯವಾಗಲಿಲ್ಲ. ಈ ಕಾಲಾವಧಿಯ ಬೆಳವಣಿಗೆಯನ್ನು ಸಂಕ್ಷಿಪ್ತಗೊಳಿಸಿ ಹೇಳುವುದಾದರೆ, ಈ ಕಾಲಘಟ್ಟದಲ್ಲಿ ಪಂಚಾಯತ್ ವ್ಯವಸ್ಥೆ ಬೆಳವಣಿಗೆ ಕಂಡರೂ ಕೂಡ ಅವುಗಳಿಗೆ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಸಂಕೋಲೆಯನ್ನು ತೊಡಿಸಲಾಯಿತು.

೧.೭ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಚಾಯತ್ ವ್ಯವಸ್ಥೆ

೧೯೪೭ರ ಭಾರತದ ಸ್ವಾತಂತ್ರ್ಯ ಪಡೆದ ನಂತರ ಕೇಂದ್ರ ಪ್ರಾಂತೀಯ ಮತ್ತು ಸ್ಥಳೀಯ ಸರ್ಕಾರಗಳು, ಸ್ವಾತಂತ್ರ್ಯ ಪರಿಸರದಲ್ಲಿ ಕಾರ್ಯನಿರ್ವಹಿಸುವ ಪರಿಸರ ನಿರ್ಮಾಣವಾಯಿತು. ೧೯೪೮ರಲ್ಲಿ ಕೇಂದ್ರ ಸರ್ಕಾರದ ಆರೋಗ್ಯ ಸಚಿವರ ನಾಯಕತ್ವದಲ್ಲಿ ಪ್ರಾಂತೀಯ ಸರ್ಕಾರಗಳ ಸ್ವಯಂ ಆಡಳಿತ ಸರ್ಕಾರಗಳ ಸಭೆ ಜರುಗಿತು. ಈ ಸಭೆಯನ್ನು ಉದ್ಘಾಟಿಸಿದ ಜವಹಾರ್‌ಲಾಲ್ ನೆಹರುರವರು ಸ್ಥಳೀಯ ಸ್ವಯಂ ಸರ್ಕಾರಗಳ ವ್ಯವಸ್ಥೆ ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆ

ಮೂಲವಾಗಿರತಕ್ಕದ್ದು. ನಾವು ಪ್ರಜಾಪ್ರಭುತ್ವವನ್ನು ಉನ್ನತ ಮಟ್ಟದಲ್ಲಿ ಯೋಚಿಸುವ ರೂಢಿ ಮಾಡಿಕೊಂಡಿದ್ದೇವೆ. ಅತ್ಯಂತ ಕೆಳಮಟ್ಟದಲ್ಲಿ ಅಲ್ಲ ಆದರೆ, ಮೇಲ್ಮಟ್ಟದ ಪ್ರಜಾಪ್ರಭುತ್ವದ ಯಶಸ್ಸು ತಳಮಟ್ಟದ ಬುನಾದಿಯಿಂದ ಮಾತ್ರ ಸಾಧ್ಯವಾಗುತ್ತದೆ.[೧೯]

ಆದ್ದರಿಂದ ನೆಹರು ಹೇಳುವಂತೆ ಪಂಚಾಯತ್‌ಗಳು ಬೇರುಮಟ್ಟದ ಪ್ರಜಾಪ್ರಭುತ್ವವಾಗಿದ್ದು ಅವು ರಾಷ್ಟ್ರೀಯ ಐಕ್ಯತೆಯ ಸಂಗತಿಯಾಗಿವೆ. ಮಹಾತ್ಮಾಗಾಂಧಿಯವರು ಗ್ರಾಮಗಳು ಮತ್ತು ಗ್ರಾಮೀಣ ಸಮುದಾಯಗಳು ಭಾರತದ ಆತ್ಮ ಎಂದು ವರ್ಣಿಸಿದ್ದಾರೆ. ಅವರ ಪರಿಕಲ್ಪನೆಯ ಪ್ರಕಾರ ಗ್ರಾಮ ಸ್ವರಾಜ್ಯವು ಪರಿಪೂರ್ಣ ಗಣರಾಜ್ಯವಾಗಿದ್ದವು. ಗ್ರಾಮದ ಎಲ್ಲಾ ಅರ್ಹ ವ್ಯಕ್ತಿಗಳಿಂದ ಆಯ್ಕೆಯಾದ ಐದು ವ್ಯಕ್ತಿಗಳಿಂದ ಆಳಲ್ಪಡುತ್ತದೆ. ಪಂಚಾಯತ್ ಗ್ರಾಮದ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗವಾಗಿ ಕಾರ್ಯನಿರ್ವಹಿಸತಕ್ಕದ್ದು, ಆದರೆ ಗಾಂಧೀಜಿಯವರ ಅನುಯಾಯಿಗಳು ಪಂಚಾಯತ್‌ಗಳನ್ನು ಸಂವಿಧಾನದಲ್ಲಿ ಸೇರ್ಪಡೆಗೊಳಿಸುವ ಸಂಗತಿಯಲ್ಲಿ ಮಾತ್ರ ಯಶಸ್ಸಿಯಾದರು. ರಾಜ್ಯ ನಿರ್ದೇಶಕ ತತ್ವಗಳ ೪೦ನೇ ವಿಧಿ ಹೇಳುವಂತೆ ರಾಜ್ಯಗಳು ಪಂಚಾಯತ್‌ಗಳನ್ನು ಸಂಘಟಿಸಲು ಕ್ರಮಕೈಗೊಂಡು ಅವುಗಳಿಗೆ ಅಗತ್ಯವಾದ ಅಧಿಕಾರ ನೀಡಿ ಅವುಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಬೇಕು.

ಸ್ವಾತಂತ್ರ್ಯ ನಂತರ ಸಮಾಜೋ-ಆರ್ಥಿಕ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಲಾಯಿತು. ೧೯೫೧-೫೬ರ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ೧೯೫೨ರಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಅಭಿವೃದ್ಧಿ ಆಡಳಿತಕ್ಕಾಗಿ ಕ್ಷೇತ್ರಗಳನ್ನು ಸ್ಥಾಪಿಸಲಾಯಿತು. ಈ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಸಮುದಾಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದವು. ಸ್ಥಳೀಯ ಅಗತ್ಯಗಳನ್ನು ನಿರ್ಧರಿಸಿ, ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಸಂಘಟನೆಗೆ ಒತ್ತು ನೀಡಿತು. ಇದಾದ ನಂತರ ರಾಷ್ಟ್ರೀಯ ವಿಸ್ತರಣಾ ಸೇವೆ ಜಾರಿಗೊಳಿಸಿ ಸ್ಥಳೀಯ ಮಟ್ಟದ ಬೆಳವಣಿಗೆ ಮತ್ತು ಅಭಿವೃದ್ಧಿಯ ಸಮಸ್ಯೆಗೆ ಒತ್ತು ನೀಡಲಾಯಿತು. ಕ್ಷೇತ್ರ ಮಟ್ಟದಲ್ಲಿ ನಾಮಕರಣಗೊಂಡ ಸದಸ್ಯರ ಪಾಲ್ಗೊಳ್ಳುವಿಕೆಯನ್ನು ಖಾತ್ರಿಗೊಳಿಸಲಾಯಿತು.

ವಾಸ್ತವಿಕವಾಗಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಧಿಕಾರಿಗಳು ಮತ್ತು ನಾಮಕರಣಗೊಂಡ ಸದಸ್ಯರು ಮತ್ತು ನಾಮ ಮಾತ್ರ ಸಮಿತಿಗಳು ಮೂಲಕ ಜಾರಿಗೊಳಿಸಲಾಯಿತು. ಹಾಗಾಗಿ ಸ್ಥಳೀಯ ಜನರ ಉತ್ಸಾಹ ಹೆಚ್ಚಿಸಲು ಸಾಧ್ಯವಾಗಲಿಲ್ಲ.

೧೯೫೬ರಲ್ಲಿ ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯನ್ನು ಸ್ಥಾಪಿಸಲಾಯಿತು. ೧೯೫೭ರಲ್ಲಿ ಕೇಂದ್ರ ಸರ್ಕಾರ ಬಲವಂರಾಯ್ ಸಮಿತಿಯನ್ನು ಸ್ಥಾಪಿಸಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ಕ್ಷೇತ್ರ ವಿಸ್ತರಣಾ ಯೋಜನೆಗಳ ವೈಫಲ್ಯಗಳಿಗೆ ಕಾರಣವನ್ನು ಕಂಡುಹಿಡಿದು ಅವುಗಳ ಯಶಸ್ಸಿಗೆ ಶಿಫಾರಸ್ಸುಗಳನ್ನು ನೀಡಬೇಕೆಂದು ಕೋರಿತು. ೧೯೫೭ ರಲ್ಲಿ ಪ್ರಕಟಗೊಂಡ ಈ ಸಮಿತಿ ವರದಿ ಹೇಳುವಂತೆ, "ಎಲ್ಲಿಯವರೆಗೆ ನಾವು ಸ್ಥಳೀಯ ಜನರ ಹಿತಾಸಕ್ತಿಯನ್ನು ಕಷ್ಟಪಟ್ಟು ಮೇಲ್ವಿಚಾರಣೆ ಮಾಡಲು ಮತ್ತು ಹಣಕಾಸಿನ ವೆಚ್ಚದ ಬಗ್ಗೆ ಎಚ್ಚರಿಕೆವಹಿಸುವ ಅಧಿಕಾರವುಳ್ಳ ಪ್ರಾತಿನಿಧಿಕ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಸ್ಥಾಪನೆ ಮಾಡಲು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಸ್ಥಳೀಯ ಹಿತಾಸಕ್ತಿ ಮತ್ತು ಸ್ಥಳೀಯರ ಪಾಲ್ಗೊಳ್ಳುವಿಕೆಯನ್ನು ಅಭಿವೃದ್ಧಿಯಲ್ಲಿ ತರುವುದು ಸಾಧ್ಯವಾಗುವುದಿಲ್ಲ.[೨೦] ಬಲವಂತರಾಯ್ ಮೆಹತಾ ಸಮಿತಿಯು ಮೂರು ಹಂತಗಳ ಪ್ರಜಾಸತ್ತಾತ್ಮಕ ಸಂಸ್ಥೆಗಳ ಶಿಫಾರಸ್ಸು ಮಾಡಿತು. ಇವುಗಳೆಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಬೇಕು. ಅವುಗಳು ಆಯ್ಕೆಗೊಂಡ ಪ್ರತಿನಿಧಿಗಳನ್ನು ಒಳಗೊಂಡಿರಬೇಕು. ಗ್ರಾಮೀಣ ಭಾರತದ ಈ ಸಂಸ್ಥೆಗಳಿಗೆ ಪಂಚಾಯತ್‌ರಾಜ್ ಎಂದು ಹೆಸರಿಸತಕ್ಕದ್ದು, ಆದ್ದರಿಂದ ಪಂಚಾಯತ್ ರಾಜ್ ಸಂಸ್ಥೆಗಳಲ್ಲೂ ಆರ್ಥಿಕ ಅಭಿವೃದ್ಧಿ ಮತ್ತು ಸ್ವಯಂ ಸರ್ಕಾರಗಳ ಎರಡು ಉದ್ದೇಶಗಳನ್ನು ಸಾಧಿಸಿ ದೇಶದ ಆರ್ಥಿಕತೆ ಮತ್ತು ಆಡಳಿತಾತ್ಮಕ ಸಹಾಯಕ ನೀಡುವ ಉಪಕರಣಗಳೆಂದು ಭಾವಿಸಲಾಗಿದೆ. ಬಲವಂತರಾಯ್ ಮೆಹತಾ ಸಮಿತಿಯ ವರದಿಯಿಂದ ಪಂಚಾಯತ್‌ರಾಜ್ ಸಂಸ್ಥೆಗಳಿಗೂ ಹೊಸ ಉಲ್ಲೇಖ ನೀಡಲಾಯಿತು. ಈ ಸಮಿತಿಯು ರಾಜ್ಯಗಳ ಸ್ಥಳೀಯ ಪರಿಸ್ಥಿತಿ, ಪರಿಸರ ಮತ್ತು ಅಗತ್ಯಗಳಿಗೆ ಅನುಗುಣವಾಗಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ರೂಢಿಸಿಕೊಳ್ಳಲು ಅವಕಾಶ ನೀಡಿತು. ಇದರೊಂದಿಗೆ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವನ್ನು ಜಾರಿಗೊಳಿಸಲು ಕಡ್ಡಾಯವಾಗಿ ಐದು ಸೂತ್ರಗಳನ್ನು ಅನುಸರಿಸಲು ಸೂಚನೆ ನೀಡಿತು. ಅವುಗಳೆಂದರೆ

೧) ಗ್ರಾಮದಿಂದ ಜಿಲ್ಲಾ ಮಟ್ಟದವರೆಗೆ ಮೂರು ಹಂತಗಳ ಸ್ಥಳೀಯ ಸ್ವಯಂ ಸರ್ಕಾರ ಇರತಕ್ಕದ್ದು ಮತ್ತು ಕೆಳಹಂತದಿಂದ ಮೇಲ್‌ಹಂತದವರೆಗಿನ ಸಂಸ್ಥೆಗಳಲ್ಲಿ ಜೈವಿಕ ಸಂಬಂಧ ಇರತಕ್ಕದ್ದು.

೨) ಈ ಸಂಸ್ಥೆಗಳಿಗೆ ನೈಜ ಅಧಿಕಾರ ಮತ್ತು ಜವಾಬ್ದಾರಿಗಳನ್ನು ವರ್ಗಾಯಿಸತಕ್ಕದ್ದು.

೩) ಈ ಸಂಸ್ಥೆಗಳು ತಮ್ಮ ಅಧಿಕಾರವನ್ನು ಚಲಾಯಿಸಲು ಸಹಕಾರಿವಾಗುವಂತೆ ಸೂಕ್ತ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸತಕ್ಕದ್ದು.

೪) ಎಲ್ಲಾ ಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಯೋಜನೆಗಳು ಈ ಮೂರು ಹಂತಗಳ ಸಂಸ್ಥೆಗಳ ಮೂಲಕ ಜಾರಿಗೊಳ್ಳುವಂತೆ ವ್ಯವಸ್ಥೆ ಕೈಗೊಳ್ಳತಕ್ಕದ್ದು. ಈ ಮೂರು ಸಂಸ್ಥೆಗಳು ತಮ್ಮ ಅಧಿಕಾರ ಮತ್ತು ಜವಾಬ್ದಾರಿ ಬೆಳೆಯುವಂತೆ ಕ್ರಮ ಕೈಗೊಳ್ಳತಕ್ಕದ್ದು.

ಸಮಿತಿಯು ನೀಡಿ ವಿಸ್ತೃತವಾದ ಸಲಹೆಗಳ ಮೂಲಕ ದೇಶದಾದ್ಯಂತ ಪಂಚಾಯತ್ ರಾಜ್ ಸಂಸ್ಥೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಯಿತು. ಪಂಚಾಯತ್ ಸಂಸ್ಥೆಗಳ ರಚನೆಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿವೆ. ಕೇಂದ್ರ ಸರ್ಕಾರವು ಇವುಗಳ ರಚನೆಗೆ ಸಂಬಂಧಿಸಿದಂತೆ ಸಾಮಾನ್ಯ ನಿರ್ದೇಶನ ನೀಡುತ್ತವೆ. ರಾಜ್ಯದಿಂದ ರಾಜ್ಯಕ್ಕೆ ಇವುಗಳ ಸ್ವರೂಪಗಳು ಭಿನ್ನವಾಗಿದ್ದವರೂ, ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಯೋಜನೆಗಳು ಜಾರಿಗೊಳಿಸಿ, ಜನರನ್ನು ಪಾಲ್ಗೊಳ್ಳುವಂತೆ ಪ್ರೇರೇಪಿಸಿ ದೇಶದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.

ಅರಂಭದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವಂತೆ ಕಂಡು ಬಂದವು. ಆದರೆ ೧೯೬೯ರ ನಂತರ ಇವುಗಳ ಕಾರ್ಯಗಳಲ್ಲಿ ಇಳಿತ ಕಂಡು ಬಂದಿತು. ಅಭಿವೃದ್ಧಿ ಕಾರ್ಯಗಳು ಪಂಚಾಯತ್ ಸಂಸ್ಥೆಗಳಿಂದ ಜಾರಿಗೊಳ್ಳಲಿಲ್ಲ. ಆಡಳಿತಾತ್ಮಕ ಇಚ್ಛೆಯ ಕೊರತೆಯಿಂದಾಗಿ ಅಧಿಕಾರಿಶಾಹಿಯಿಗಳಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡವು. ಇದಕ್ಕೆ ರಾಜಕೀಯ ಇಚ್ಚಾಶಕ್ತಿಯ ಕೊರತೆಯು ಮತ್ತೊಂದು ಕಾರಣವಾಯಿತು. ರಾಜ್ಯ ಸರ್ಕಾರಗಳು ಪಂಚಾಯತ್‌ರಾಜ್ ಚುನಾವಣೆಗಳನ್ನು ದೀರ್ಘ ಕಾಲದವರೆಗೆ ಮುಂದೂಡಿದವು. ಕೆಲವು ರಾಜ್ಯಗಳು ಈ ಸಂಸ್ಥೆಗಳನ್ನು ಅಮಾನತುಗೊಳಿಸಿದವು. ಮತ್ತೆ ಕೆಲವು ರಾಜ್ಯಗಳು ಈ ಸ್ಥಾನಗಳಿಗೆ ನಾಮನಿರ್ದೇಶನ ಸಂಸ್ಥೆಗಳನ್ನು ಜಾರಿಗೊಳಿಸಿದವು. ತಮ್ಮ ಕ್ಷೇತ್ರಗಳಲ್ಲಿ ಪಂಚಾಯತ್‌ನಿಂದ ಹೊರಹೊಮ್ಮುವ ನಾಯಕತ್ವವು ತಮ್ಮ ಸ್ಥಾನಗಳಿಗೆ ಕುತ್ತು ತರಬಹುದು ಎಂಬ ಆತಂಕದಿಂದ ಶಾಸಕರು ಮತ್ತು ಸಂಸದರು ಪಂಚಾಯತ್ ಸಂಸ್ಥೆಗಳನ್ನು ಪ್ರೋತ್ಸಾಹಿಸಲಿಲ್ಲ. ಪಂಚಾಯತ್ ಸಂಸ್ಥೆಗಳು ಪರಿಣಾಮಕಾರಿ ಸ್ಥಳೀಯ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಲಿಲ್ಲ. ಹಾಗಾಗಿ ಪಂಚಾಯತ್ ರಾಜ್ ಸಂಸ್ಥೆಗಳ ವೈಫಲ್ಯಕ್ಕೆ ಇವುಗಳು ನೇರ ಹೊಣೆಯಲ್ಲ. ಇವುಗಳಲ್ಲಿ ಶ್ರೀಮಂತ, ಮೇಲ್ಜಾತಿಯ, ಸ್ಥಳೀಯ ನಾಯಕರ ದಬ್ಬಾಳಿಕೆಯು ಕಂಡು ಬರುತ್ತವೆ. ಪಂಚಾಯತ್‌ಗಳ ಕಾರ್ಯಗಳಲ್ಲೂ ರಾಜಕೀಯ ಗುಂಪುಗಾರಿಕೆ ಮತ್ತು ರಾಜಕೀಯ ಹಸ್ತಕ್ಷೇಪದಿಂದ ಇವುಗಳ ಆಡಳಿತವನ್ನು ಕುಸಿಯುವಂತೆ ಮಾಡಲಾಗಿದೆ. ಸೇವೆಯ

ಮನೋಭಾವಕ್ಕೆ ಬದಲಾಗಿ ಅಧಿಕಾರದ ಆಸೆ ಮತ್ತು ಲಾಭಬಡುಕತನ ಮನೋಭಾವನೆಗಳು ಹೆಚ್ಚಾಗಿ ಪಂಚಾಯತ್‌ರಾಜ್ ಸಂಸ್ಥೆಗಳು ಅವನತಿಯ ಹಾದಿ ಹಿಡಿದವು. ಈ ಹಿನ್ನೆಲೆಯಲ್ಲಿ ೧೯೭೭ರಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಮತ್ತು ಈ ಸಂಸ್ಥೆಗಳ ಸಬಲೀಕರಣಕ್ಕೆ ಸಲಹೆ ನೀಡಲು ಮೆಹತಾರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಅವುಗಳನ್ನು ಸಬಲೀಕರಣಗೊಳಿಸಲು ಪ್ರಮುಖ ಶಿಫಾರಸ್ಸುಗಳನ್ನು ನೀಡಿತು. ಸಮಿತಿಯು ಅಭಿಪ್ರಾಯಪಟ್ಟಿರುವ ಪ್ರಕಾರ ಪಂಚಾಯತ್ ಸಂಸ್ಥೆಗಳ ಕತೆಯು, ಏರಿಳಿತವನ್ನು ಹೊಂದಿದೆ. ಈ ಸಂಸ್ಥೆಗಳು ಮೂರು ವಿವಿಧ ಕಾಲಘಟ್ಟಗಳನ್ನು ಪ್ರವೇಶಿಸಿ ನಿಂತಿವೆ.

೧೯೫೯-೬೪ ಏರಿಕೆಯ ಕಾಲಘಟ್ಟವಾದರೆ, ೧೯೬೫ ರಿಂದ ೬೯ ಸ್ಥಗಿತಗೊಂಡ ಕಾಲಘಟ್ಟವಾಗಿದ್ದು ಮತ್ತು ೧೯೬೯-೭೭ರ ಕಾಲಘಟ್ಟದಲ್ಲಿ ಅವನತಿ ಕಂಡು ಬಂದಿದೆ.

ಆಶೋಕ ಮೆಹತಾ ಸಮಿತಿಯು ನೀಡಿರುವ ೧೩೨ ಶಿಫಾರಸ್ಸುಗಳಲ್ಲಿ ಹೇಳುವ ಪ್ರಕಾರ ಪಂಚಾಯತ್ ಸಂಸ್ಥೆಗಳಿಗೆ ಸೂಕ್ತ ಸ್ಥಾನ ಕಲ್ಪಿಸಲು ಮತ್ತು ಅವುಗಳು ನಿರಂತರವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಭಾರತದ ಸಂವಿಧಾನ ಕೆಲವು ಅಂಶಗಳಿಗೆ ಗಂಭೀರ ಒತ್ತು ನೀಡುವ ಅಗತ್ಯವಿದೆ. ಸಮಿತಿಯು ಶಿಫಾರಸ್ಸು ಮಾಡಿರುವ ಪ್ರಕಾರ ಎರಡು ಹಂತಗಳ ಪಂಚಾಯತ್ ವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು. ಜಿಲ್ಲಾಮಟ್ಟದಲ್ಲಿ ಜಿಲ್ಲಾ ಪರಿಷತ್ ಮತ್ತು ಗ್ರಾಮ ಮಟ್ಟದಲ್ಲಿ, ಮಂಡಲ ಪಂಚಾಯತ್ ಹಾಗೂ ತಾಲ್ಲೂಕು ಮಟ್ಟದಲ್ಲಿ ಪಂಚಾಯತ್ ಸಮಿತಿಯು ಗ್ರಾಮ ಸಭೆಯ ಪಾತ್ರಕ್ಕೆ ಹೆಚ್ಚು ಒತ್ತು ನೀಡಿದೆ. ಸಮಿತಿಯು ಶಿಫಾರಸ್ಸು ನೀಡಿರುವ ಪ್ರಕಾರ ನ್ಯಾಯ ಪಂಚಾಯತ್‌ಗಳನ್ನು ಗ್ರಾಮ ಪಂಚಾಯತ್‌ಗಳಿಂದ ಪ್ರತ್ಯೇಕಗೊಳಿಸತಕ್ಕದ್ದು, ಪಂಚಾಯತ್ ಚುನಾವಣೆಗಳನ್ನು ಪಕ್ಷಾಧಾರಿತವಾಗಿ ನಡೆಸತಕ್ಕದ್ದು, ಈ ಚುನಾವಣೆಗಳು ರಾಜ್ಯ ಸರ್ಕಾರದ ಚುನಾವಣೆ ಆಯುಕ್ತರ ಮಾರ್ಗದರ್ಶನದಲ್ಲಿ ನಿರ್ವಹಿಸತಕ್ಕದ್ದು. ಈ ಸಲಹೆಗಳನ್ನು ಕೆಲವು ರಾಜ್ಯಗಳು ಅಂದರೆ ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ಈ ಶಿಫಾರಸ್ಸುಗಳನ್ನು ಅಂಗೀಕರಿಸಿ ಇತ್ತೀಚೆಗೆ ಜಾರಿಗೊಳಿಸಿದವು. ಹಾಗಾಗಿ ೧೯೭೭ರಿಂದ ೧೯೮೭ರವರೆಗೆ ಪಂಚಾಯತ್ ರಾಜ್ ಸಂಸ್ಥೆಗಳು ನಿರ್ಲಕ್ಷಕ್ಕೆ ಒಳಗಾಗಿರುವುದು ಕಂಡು ಬರುತ್ತದೆ.

ರಾಜೀವ್ ಗಾಂಧೀಯವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಗ್ರಾಮೀಣ ಮತ್ತು ನಗರ ಸ್ಥಳೀಯ ಸರ್ಕಾರಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಿ ನೈಜ ಪ್ರಜಾಸತ್ತಾತ್ಮಕ

ವಿಕೇಂದ್ರೀಕರಣವನ್ನು ಜಾರಿಗೊಳಿಸಲು ಪ್ರಯತ್ನಿಸಿತು. ಈ ನಿಟ್ಟಿನಲ್ಲಿ ಸಂವಿಧಾನದ ೬೪ ಮತ್ತು ೬೫ನೇ ಸಂವಿಧಾನ ಮಸೂದೆಗಳು ಲೋಕಸಭೆಯ ಅನುಮೋದನೆ ಪಡೆದು ಬಹುಮತ ಇಲ್ಲದ ಕಾರಣ ರಾಜ್ಯಸಭೆಯಲ್ಲಿ ಅನುಮೋದನೆ ಪಡೆಯುವುದು ಸಾಧ್ಯವಾಗಲಿಲ್ಲ. ಹಾಗಾಗಿ ಈ ಮಸೂದೆ ಜಾರಿಗೊಳ್ಳುವುದು ಸಾಧ್ಯವಾಗಲಿಲ್ಲ. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡುವ ರಾಜೀವ್‌ಗಾಂಧಿಯವರ ಕನಸು ನನಸಾಗಿದ್ದು ಪಿ.ವಿ.ನರಸಿಂಹರಾವ್ ನೇತೃತ್ವದ ಕೇಂದ್ರ ಸರ್ಕಾರವು ೭೩ನೇ ಸಂವಿಧಾನ ತಿದ್ದುಪಡಿ ಮತ್ತು ೭೪ನೇ ಸಂವಿಧಾನ ತಿದ್ದುಪಡಿಯನ್ನು ಜಾರಿಗೊಳಿಸಿದಾಗ ೭೩ನೇ ಸಂವಿಧಾನ ತಿದ್ದುಪಡಿಯು ಗ್ರಾಮೀಣ ಸ್ಥಳೀಯ ಸರ್ಕಾರಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಿದ್ದು ೭೪ನೇ ಸಂವಿಧಾನ ತಿದ್ದುಪಡಿಯು ನಗರ ಸ್ಥಳೀಯ ಸರ್ಕಾರಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಿದೆ.

೧.೮ ೧೯೯೩ರ ೭೩ನೇ ಸಂವಿಧಾನಾತ್ಮಕ ತಿದ್ದುಪಡಿ ಮತ್ತು ಅದರ ಲಕ್ಷಣಗಳು

೧೯೯೧ರ ಸೆಪ್ಟಂಬರ್ ತಿಂಗಳಲ್ಲಿ ೭೩ನೇ ಸಂವಿಧಾನಾತ್ಮಕ ತಿದ್ದುಪಡಿಯ ಮಸೂದಯೆನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಈ ಮಸೂದೆಯು ೭೩ನೇ ಸಂವಿಧಾನಾತ್ಮಕ ತಿದ್ದುಪಡಿ ಕಾಯಿದೆಯಾಗಿ ಅಂಗೀಕಾರವಾಯಿತು. ೧೯೯೩ ಏಪ್ರಿಲ್ ೨೦ರಂದು ರಾಜ್ಯ ಶಾಸಕಾಂಗಗಳು ಮತ್ತು ರಾಷ್ಟ್ರಪತಿಯವರ ಅಂಗೀಕಾರ ಪಡೆದು ಸಂವಿಧಾನಾತ್ಮಕ ಕಾಯ್ದೆ ಜಾರಿಗೊಂಡಿತು. ಈ ತಿದ್ದುಪಡಿಯಿಂದಾಗಿ ಪಂಚಾಯತ್ ರಾಜ್ ಸಂಸ್ಥೆಗಳು ಸಂವಿಧಾನಾತ್ಮಕ ಮಾನ್ಯತೆ ಪಡೆದುಕೊಂಡವು. ೭೩ನೇ ಸಂವಿಧಾನಾತ್ಮಕ ತಿದ್ದುಪಡಿ ಕಾಯಿದೆಯು ೧೧ನೇ ಪರಿಚ್ಛೇದದಲ್ಲಿ ಸೇರ್ಪಡೆಗೊಳಿಸಿ ೨೪೩ ರಿಂದ ೨೪೩೦ ವರೆಗೆ ಒಟ್ಟು ೧೬ ವಿಧಿಗಳನ್ನು ಹೊಸದಾಗಿ ಸೇರ್ಪಡೆಗೊಳಿಸಲಾಯಿತು.

೧.೯ ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಚಾರಿತ್ರಿಕ ನೋಟ

ಭಾರತದಲ್ಲಿ ಚಾರಿತ್ರಿಕವಾಗಿ ಪಂಚಾಯತ್ ರಾಜ್ ಸಂಸ್ಥೆಗಳು ವಿಕಾಸಗೊಂಡಂತೆ ರಾಷ್ಟ್ರ ಮಟ್ಟದಲ್ಲಿ ಕಾಲಕಾಲಕ್ಕೆ ಘಟಿಸಿದ ಘಟನೆಗೆ ಅನುಗುಣವಾಗಿ ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಚಾರಿತ್ರಿಕವಾಗಿ ವಿಕಾಸಗೊಂಡಿರುವುದನ್ನು ಗುರುತಿಸಬಹುದಾಗಿದೆ. ಈ ಚರ್ಚೆಯನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

ಮೈಸೂರು ಕರ್ನಾಟಕ : ಕರ್ನಾಟಕದಲ್ಲಿ ಸ್ಥಳೀಯ ಸರ್ಕಾರಗಳ ಚರಿತ್ರೆಯನ್ನು ೧೯೫೬ರಲ್ಲಿ ಸ್ಥಾಪನೆಗೊಂಡ ಹಳೆಯ ಮೈಸೂರು ರಾಜ್ಯದಿಂದ ಗುರುತಿಸಬಹುದಾಗಿದ್ದು, ಭಾರತದ

ಪಂಚಾಯತ್‌ರಾಜ್ ಸಂಸ್ಥೆಗಳ ಚರಿತ್ರೆಯಿಂದ ಇದು ಭಿನ್ನವಾಗಿಲ್ಲ. ಮೈಸೂರು ರಾಜ್ಯವು ಬಾಂಬೆ-ಕರ್ನಾಟಕ, ಹೈದರಾಬಾದ್-ಕರ್ನಾಟಕ, ಮಂಗಳೂರು ಮತ್ತು ಮದರಾಸು ಪ್ರಾಂತದಿಂದ ಬಳ್ಳಾರಿಯನ್ನು ಒಳಗೊಂಡಿತ್ತು. ಕ್ರಿ.ಪೂ.೧೦೦೫೮ರ ಶಾಸನ ಹೇಳುವಂತೆ ಕರ್ನಾಟಕದಲ್ಲಿ ಪಂಚಾಯತ್ ಸಂಸ್ಥೆಗಳು ಬಲಿಷ್ಠವಾಗಿದ್ದವು. ಗ್ರಾಮ, ಅಗ್ರಹಾರ, ನಾಡು, ಮತ್ತು ವಿಷಯಗಳು ಸ್ವಾಯತ್ತತೆ ಪಡೆದುಕೊಂಡಿದ್ದವು. ಅಗ್ರಹಾರ ಗ್ರಾಮಗಳಲ್ಲಿ ಮಹಾಜನರ ಸ್ಥಳೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ಈ ಮಹಾಜನ ವಿದ್ಯಾವಂತ ಬ್ರಾಹ್ಮಣ ಕುಟುಂಬಗಳ ಮುಖ್ಯಸ್ಥರನ್ನು ಒಳಗೊಂಡಿದ್ದವು. ಇತರೆ ಪ್ರದೇಶಗಳಲ್ಲಿ ಗ್ರಾಮಸಭೆಗಳನ್ನು ಸಂಖ್ಯಾಸೂಚಿಯ ಮೂಲಕ ಸೂಚಿಸಲಾಗುತ್ತಿತ್ತು. ೫೦ ಕುಟುಂಬಗಳನ್ನು ಒಳಗೊಂಡಿದ್ದರೆ ೫೦ ಒಕ್ಕಲು ಎಂದು ಅಥವಾ ೩೦ ಕುಟುಂಬಗಳನ್ನು ಒಳಗೊಂಡಿದ್ದಾರೆ. ೩೦ ಒಕ್ಕಲು ಎಂದು ಕರೆಯಲಾಗುತ್ತಿತ್ತು. ಈ ಗ್ರಾಮಸಭೆಗಳು ದೇವಸ್ಥಾನ ನಿರ್ವಹಣೆ, ಹಬ್ಬಗಳನ್ನು ಆಯೋಜಿಸುವುದು. ಛತ್ರಗಳನ್ನು ನಿರ್ವಹಿಸುವುದು ಮತ್ತು ಕುಡಿಯುವ ನೀರಿನ ಅರವಟಿಗೆಗಳನ್ನು ನಿರ್ವಹಿಸುವುದು ತೆರಿಗೆಗಳನ್ನು ವಸೂಲಿ ಮಾಡುವುದು, ಉತ್ತಮ ಕೆಲಸ ಕಾರ್ಯಗಳಿಗೆ ಬಹುಮಾನಗಳನ್ನು ನೀಡುವುದು ಗ್ರಾಮ ರಕ್ಷಣೆಯಲ್ಲಿ ಹುತಾತ್ಮರಾದ ನಾಯಕರ ಪುತ್ಥಳಿಗಳನ್ನು ಸ್ಥಾಪಿಸುವುದು. ಗ್ರಾಮ ರಕ್ಷಣೆಯಲ್ಲಿ ಗಾಯಗೊಂಡ ಕುಟುಂಬದವರಿಗೆ ಭೂಮಿಯನ್ನು ನೀಡುವುದು ಮತ್ತು ವ್ಯಾಜ್ಯಗಳನ್ನು ಪರಿಹರಿಸುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.

ಮೈಸೂರು ರಾಜ್ಯವನ್ನು ೬ನೇ ಶತಮಾನದಿಂದ ಹಲವಾರು ಮನೆತನಗಳು, ಆಳ್ವಿಕೆ ಮಾಡಿವೆ. ಅವುಗಳಲ್ಲಿ ದೇವಗಿರಿಯ ಯಾದವರು ಮತ್ತು ಹೊಯ್ಸಳ ದೊರೆಗಳು ಮುಖ್ಯವಾದವುಗಳು. ಈ ಮನೆತನಗಳು ಸ್ಥಳೀಯ ಸರ್ಕಾರಗಳಲ್ಲಿ ಹೆಚ್ಚು ಹಸ್ತಕ್ಷೇಪ ಮಾಡದೇ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಟ್ಟವು. ಇದು ೧೬ನೇ ಶತಮಾನದ ವಿಜಯನಗರ ಸಾಮ್ರಾಜ್ಯದವರೆಗೂ ಮುಂದುವರೆದು ಸ್ಥಳೀಯ ಸಂಸ್ಥೆಗಳು ಗಣರಾಜ್ಯಗಳಾಗಿ ತಮ್ಮದೇ ಆದ ಸ್ವಂತ ಹಣಕಾಸಿನ ಸ್ವಾಯತ್ತತೆ ಪಡೆದುಕೊಂಡಿದ್ದವು. ಅದೇ ಪ್ರಕಾರವಾಗಿ ಒಡೆಯರ ಆಳ್ವಿಕೆ, ಹೈದರಾಲಿ ಮತ್ತು ಟಿಪ್ಪುಸುಲ್ತಾನ್, ಕಾಲಾವಧಿಯಲ್ಲಿ ಪಂಚಾಯತ್ ಸಂಸ್ಥೆಗಳನ್ನು ಅಖಂಡವಾಗಿ ಇರಿಸಲಾಗಿತ್ತು.

ಬಾಂಬೆ ಮತ್ತು ಹೈದರಾಬಾದ್ ಕರ್ನಾಟಕ:

ಉತ್ತರ ಕನ್ನಡ, ಬೆಳಗಾವಿ, ಧಾರವಾಡ ಮತ್ತು ಬಿಜಾಪುರವನ್ನು ಒಳಗೊಂಡ ಬಾಂಬೆ ಪ್ರಾಂತೀಯ ಸರ್ಕಾರದಲ್ಲಿ ನೇರವಾಗಿ ಬ್ರಿಟೀಷರೇ ಆಳುತ್ತಿದ್ದರು. ಬೀದರ್, ಗುಲಬರ್ಗಾ,

ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ಒಳಗೊಂಡ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ನಿಜಾಮರು ಆಳುತ್ತಿದ್ದರು. ಸರ್ಕಾರದ ಕೇಂದ್ರ ಸ್ಥಳವನ್ನು ನಗರ ಪ್ರದೇಶಗಳಲ್ಲಿ ಸ್ಥಾಪಿಸಲಾಗಿತ್ತು. ಈ ಪ್ರದೇಶಗಳನ್ನು ತಾಂತ್ರಿಕ ದೃಷ್ಟಿಯಿಂದ ಅನುಕೂಲವಾಗುವಂತೆ ಸ್ಥಾಪಿಸಲಾಗುತ್ತಿತ್ತು. ರಾಜಕೀಯ, ನ್ಯಾಯಾಂಗ, ಆರ್ಥಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಈ ಪಟ್ಟಣಗಳ ಗಾತ್ರ ದೊಡ್ಡದಾಗಿರುತ್ತಿದ್ದವು. ಆಗ್ರಾ, ದೆಹಲಿ, ಹೈದರಾಬಾದ್, ಲಾಹೋರ್, ಲಕ್ನೋ, ಮುಲ್ತಾನ್ ಮತ್ತು ಪೂನಾಗಳು ಈ ಕೇಂದ್ರ ಸ್ಥಾನಗಳಲ್ಲಿ ಮುಖ್ಯವಾಗಿದ್ದವು. ದೇವಾಲಯಗಳ ಪಟ್ಟಣಗಳಾದ ಕಾಶಿ, ಮಥುರಾ, ಪ್ರಯಾಗ್, ಮುಂತಾದ ಪ್ರದೇಶಗಳು. ಧಾರ್ಮಿಕ ಸ್ಥಳಗಳಿಂದಾಗಿ ಬೆಳವಣಿಗೆಗೆ ಕಾರಣವಾಗಿದ್ದವು. ಈ ಎಲ್ಲಾ ಪಟ್ಟಣಗಳಲ್ಲಿ ಸಣ್ಣ ಮಾರುಕಟ್ಟೆ ಪ್ರದೇಶಗಳಾಗಿದ್ದವು. ವಿಶೇಷವಾಗಿ ಮೊಘಲರು ನಗರ ಆಡಳಿತ ವ್ಯವಸ್ಥೆಯನ್ನು ಭಾರತದಲ್ಲಿ ಅಭಿವೃದ್ಧಿಪಡಿಸಲು ಮೊಘಲರು ಪ್ರಾಚೀನ ಗ್ರಾಮೀಣ ಸರ್ಕಾರಗಳ ಪದ್ಧತಿಗಳಲ್ಲಿ ಕಡಿಮೆ ಹಸ್ತಕ್ಷೇಪ ಮಾಡಿದರು. ಅವರ ದೃಷ್ಟಿಯಲ್ಲಿ ಗ್ರಾಮಗಳೆಂದರೆ ಕಂದಾಯ ವಸೂಲಿಯ ಕೇಂದ್ರಗಳಾಗಿದ್ದವು. ಈ ಕಾಲಘಟ್ಟದಲ್ಲಿ ಪ್ರತಿಯೊಂದು ಗ್ರಾಮೀಣ ಸಮಾಜಗಳು ಮತ್ತೊಂದು ಗ್ರಾಮದಿಂದ ದೂರವಿದ್ದ ಕಾರಣ ತಮ್ಮದೇ ಆದ ಕಾನೂನುಗಳನ್ನು ರೂಪಿಸಿಕೊಳ್ಳುತ್ತಿದ್ದವು. ಈ ಗ್ರಾಮಗಳಿಗೆ ಜಮೀನ್ದಾರರ, ದರೋಡೆಕೋರರ ಮತ್ತು ಆಕ್ರಮಣಕಾರರ ಭಯವಿತ್ತು. ಇದು ಭಾರತದಲ್ಲಿ ಪಂಚಾಯತ್ ಸಂಸ್ಥೆಗಳ ಸಂಘಟನೆಗೆ ಪ್ರಮುಖ ಕಾರಣವಾಯಿತು. ಈ ಸಂಸ್ಥೆಗಳು ವ್ಯಾಜ್ಯಗಳನ್ನು ಪರಿಹಾರ ಮಾಡುವ, ತೆರಿಗೆಯನ್ನು ಸಂಗ್ರಹಿಸುವ ಕಾರ್ಯನಿರ್ವಹಿಸುತ್ತಿದ್ದವು ಮತ್ತು ಗ್ರಾಮೀಣ ಜೀವನಕ್ಕೆ ಘನತೆಯನ್ನು ತಂದುಕೊಟ್ಟಿದ್ದವು. ಕಾರಣ ಈ ಗ್ರಾಮೀಣ ಸರ್ಕಾರಗಳು ಪ್ರಜಾಸತ್ತಾತ್ಮಕವಾಗಿರಲಿಲ್ಲ. ಆದರೆ ಹಳೆಯ ಪಂಚಾಯತ್‌ಗಳು ಜಾತಿ ನ್ಯಾಯಮಂಡಳಿಯಾಗಿ ಅಥವಾ ನ್ಯಾಯಿಕ ಮಂಡಳಿಯಿಂದಾಗಿ ಅಥವಾ ಆಡಳಿತಾತ್ಮಕ ಮಂಡಳಿಯಾಗಿ ಕಾರ್ಯನಿರ್ವಹಿಸುತ್ತಿದ್ದವು. ವ್ಯಾಜ್ಯಗಳ ಪರಿಹಾರವನ್ನು ಎಲ್ಲರ ಸಮ್ಮುಖದಲ್ಲಿ ಚರ್ಚಿಸಲಾಗುತ್ತಿತ್ತು ಹಾಗೂ ನೆರೆದವರ ಅಭಿಪ್ರಾಯಗಳನ್ನು ದಾಖಲಿಸಲಾಗುತ್ತಿತ್ತು. ಹಾಗಾಗಿ ಜನರ ಪರೋಕ್ಷ ಪ್ರಭಾವ ಇಲ್ಲಿ ಗೋಚರವಾಗುತ್ತಿತ್ತು. ನ್ಯಾಯ ತೀರ್ಮಾನದಲ್ಲಿ ಯಾವುದೇ ಹಿರಿಯ ವ್ಯಕ್ತಿ ಪಕ್ಷಪಾತ ಮಾಡಿದರೆ, ಅವರಿಗೆ ಇತರರು ಎಚ್ಚರಿಕೆ ನಿಡುತ್ತಿದ್ದರು. ಪಂಚಾಯತ್‌ಗಳಿಗೆ ಇದ್ದ ಈ ನ್ಯಾಯಿಕ ಅಧಿಕಾರವನ್ನು ಮೊಘಲರು ಕಡಿತಗೊಳಿಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಾಚೀನ ಭಾರತದಲ್ಲಿ ವಿವಿಧ ಪ್ರದೇಶಗಳಲ್ಲಿ ಪಂಚಾಯತ್‌ಗಳು ವಿವಿಧ ಸ್ವರೂಪಗಳನ್ನು ಪಡೆದುಕೊಂಡಿದ್ದವು.[೨೧]

ಬ್ರಿಟಿಷ್ ಕರ್ನಾಟಕ: ೧೮೭೪ರಲ್ಲಿ ಬ್ರಿಟಿಷ್ ಸರ್ಕಾರವು ಆಧುನಿಕ ಸ್ಥಳೀಯ ಸರ್ಕಾರಗಳಿಗೆ ಚಾಲನೆ ನೀಡಿತು. ಎಲ್ಲಾ ಜಿಲ್ಲೆಗಳಲ್ಲಿ ಸ್ಥಳೀಯ ನಿಧಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗಳು ಅಧಿಕಾರಶಾಹಿಗೆ ಅಧೀನವಾಗಿರುವಂತೆ ಮಾಡಿ ಸದಸ್ಯತ್ವವನ್ನು ಕೇವಲ ಅಧಿಕಾರಿ ವರ್ಗಕ್ಕೆ ಸೀಮಿತಗೊಳಿಸಲಾಯಿತು. ೧೮೮೨ರಲ್ಲಿ ಲಾರ್ಡ್ ರಿಪ್ಪನ್ ಅಂಗೀಕರಿಸಿದ ಗೊತ್ತುವಳಿಯು ಹೆಚ್ಚು ಕ್ರಾಂತಿಕಾರಕವಲ್ಲದೇ ಹೋದರೂ, ಸ್ಥಳೀಯ ಸರ್ಕಾರಗಳಲ್ಲಿ ತಕ್ಕಮಟ್ಟಿನ ಪ್ರಜಾಸತ್ತಾತ್ಮಕ ಅಂಶಗಳನ್ನು ಜಾರಿಗೆ ತರಲು ಪ್ರಯತ್ನಿಸಲಾಯಿತು. ಈ ಗೊತ್ತುವಳಿಯು ಮೈಸೂರು ಸ್ಥಳೀಯ ಸಂಸ್ಥೆಗಳ ಕಾಯಿದೆಗೆ ಅನುವುಮಾಡಿಕೊಟ್ಟಿತು. ೧೯೦೨ರಲ್ಲಿ ಜಾರಿಗೊಂಡ ಈ ಕಾಯಿದೆಯು ಮೂರು ಹಂತಗಳ ಸ್ಥಳೀಯ ಸರ್ಕಾರಗಳ ವ್ಯವಸ್ಥೆಯನ್ನು ಜಾರಿಗೊಳಿಸಲು ಪ್ರಯತ್ನಿಸಿದ ಕರ್ನಾಟಕ ಚರಿತ್ರೆಯಲ್ಲಿನ ಮೊಟ್ಟಮೊದಲ ಕಾಯಿದೆಯಾಗಿದೆ. ಇದು ನಾಮಕರಣಗೊಂಡ ಅಧ್ಯಕ್ಷನಿರುವ ಪಂಚಾಯತ್, ಅಧಿಕಾರಿ ಅಧ್ಯಕ್ಷನಾಗಿರುವ ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾಧಿಕಾರಿ ಅಧ್ಯಕ್ಷನಾಗಿರುವ ಜಿಲ್ಲಾ ಬೋರ್ಡ್‌ಗಳನ್ನು ಸೃಷ್ಟಿಸಲಾಯಿತು. ಆದರೆ ಈ ಕಾಯಿದೆಯಲ್ಲಿ ಕೆಲವು ದೋಷಗಳಿದ್ದ ಕಾರಣ ೧೯೧೪ರಲ್ಲಿ ಮೈಸೂರು ಸರ್ಕಾರವು ಎರಡು ಸಮಿತಿಗಳನ್ನು ರಚಿಸಿತು. ಎಂ.ಕಾಂತರಾಜ್ ಅರಸ್ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸ್ವಯಂ ಸರ್ಕಾರ ಸಮಿತಿ ಮತ್ತು ದಿವಾನ್ ಶ್ರೀ ಬಹದ್ದೂರ್ ಸಿ.ಶ್ರೀನಿವಾಸ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಹಣಕಾಸು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗಳು ಸಂವಿಧಾನವನ್ನು ಉದಾರಗೊಳಿಸುವ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಿ ಹೆಚ್ಚು ಪರಿಣಾಮಕಾರಿಗೊಳಿಸುವ ವಿಷಯವನ್ನು ಅಧ್ಯಯನ ಮಾಡಿದವು. ಈ ಸಮಿತಿಗಳು ನೀಡಿರುವ ಶಿಫಾರಸ್ಸುಗಳ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕು ಮಂಡಳಿಗಳಲ್ಲಿ ಬಹುತೇಕ ಆಯ್ಕೆಗೊಂಡ ಪ್ರತಿನಿಧಿಗಳು ಇರತಕ್ಕದ್ದು ಮತ್ತು ಇವುಗಳಿಗೆ ಸ್ವತಂತ್ರ ಅಧಿಕಾರ ನೀಡತಕ್ಕದ್ದು. ೧೯೧೫ರಲ್ಲಿ ಮಾಜಿ ದಿವಾನರಾದ ಶ್ರೀ ಕೆ.ಪಿ.ಪುಟ್ಟಣ್ಣ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳ ಸಮ್ಮೇಳನ ನಡೆಯಿತು. ಈ ಸಮ್ಮೇಳನವು ೧೯೧೮ರ ಮೈಸೂರು ಲೋಕಲ್ ಬೋರ್ಡ್ ಆಂಡ್ ವಿಲೇಜ್ ಪಂಚಾಯತಿ ರೆಗ್ಯೂಲೇಷನ್ ಆ್ಯಕ್ಟನ್ನು ಪರಿಣಾಮ ಕಾರಿಯಾಗಿ ಜಾರಿಗೊಳಿಸುವ ಮೂಲಕ ಸ್ಥಳೀಯ ಸರ್ಕಾರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಕ್ರಮಕೈಗೊಳ್ಳಲು ಗೊತ್ತುವಳಿ ಅಂಗೀಕರಿ ಸಲಾಯಿತು. ಈ ಕಾಯ್ದೆಯ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಿ ಆಯ್ಕೆಗೊಂಡ ಸದಸ್ಯರ ಸಕ್ರೀಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲಾಯಿತು. ಈ ಕಾಯ್ದೆಯು ರಾಜ್ಯದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಯಿತು.

ಮೈಸೂರು ಜಿಲ್ಲೆ ಮತ್ತು ೧೯೨೬ರ ಮೈಸೂರು ಗ್ರಾಮ ಪಂಚಾಯತಿ ಕಾಯ್ದೆ:

೧೯೨೬ರ ಮೈಸೂರು ಜಿಲ್ಲೆ ಮತ್ತು ಗ್ರಾಮ ಪಂಚಾಯಿತಿ ಕಾಯ್ದೆ ಜಾರಿಗೊಂಡ ನಂತರ ಮೈಸೂರು ಮತ್ತು ಇತರೆ ೨೦ ರಾಜ್ಯಗಳು ಪಂಚಾಯತಿ ಕಾಯ್ದೆಯನ್ನು ಜಾರಿಗೊಳಿಸಿ ಪ್ರಜಾಸತ್ತಾತ್ಮಕ ನೆಲೆಯಲ್ಲಿ ಜಿಲ್ಲಾ ಬೋರ್ಡ್‌ಗಳನ್ನು ಸ್ಥಾಪಿಸಿ, ಅವುಗಳಿಗೆ ಹೆಚ್ಚು ಅಧಿಕಾರ ಮತ್ತು ಸಂಪನ್ಮೂಲಗಳನ್ನು ಒದಗಿಸಲಾಯಿತು. ಈ ಕಾಯ್ದೆಯ ಪ್ರಕಾರ ಮೊಟ್ಟ ಮೊದಲ ಬಾರಿಗೆ ಕಾರ್ಯದರ್ಶಿ ನೇಮಕವನ್ನು ಕಡ್ಡಾಯಗೊಳಿಸಿ ಇಪ್ಪತ್ತು ವರ್ಷ ಮೇಲ್ಪಟ್ಟ ವಯೋಮಾನದವರಿಗೆ ಮತದಾನ ಹಕ್ಕು ನೀಡಲಾಯಿತು. ಆದರೆ ಮಹಿಳೆಯರಿಗೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವನ್ನು ನೀಡದೇ ಅವರನ್ನು ನಿರ್ಣಯ ಪ್ರಕ್ರಿಯೆಯಿಂದ ಸಂಪೂರ್ಣ ದೂರ ಇಡಲಾಯಿತು.[೨೨]

೧೯೪೭ರ ನಂತರದ ಪಂಚಾಯತ್ ಸಂಸ್ಥೆಗಳ ಬೆಳವಣಿಗೆಗಳು:

ಭಾರತದ ಸ್ವಾತಂತ್ರ್ಯ ನಂತರ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆ ಕರ್ನಾಟಕದ ಮೇಲೆ ಗಾಢವಾದ ಪ್ರಭಾವ ಬೀರಿತು. ಸ್ವಾತಂತ್ರ್ಯದ ನಂತರ ಮೈಸೂರು ರಾಜ ಸಂಸ್ಥಾನವು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಮತ್ತು ಹೊಸ ರಾಜಕೀಯ ವ್ಯವಸ್ಥೆಯ ಅಗತ್ಯಕ್ಕೆ ಅನುಗುಣವಾಗಿ ಹೊಂದಿಕೊಳ್ಳಬೇಕಾಯಿತು. ಈ ಕುರಿತು ಸಲಹೆ ನೀಡಲು ೧೯೪೯ರಲ್ಲಿ ವೆಂಕಟಪ್ಪ ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿಯು ಎರಡು ಹಂತದ ಪಂಚಾಯಿತಿ ವ್ಯವಸ್ಥೆಗಳಾದ ಗ್ರಾಮಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಿತಿ ಸ್ಥಾಪಿಸಲು ಶಿಫಾರಸ್ಸು ನೀಡಿತು. ಈ ಸಮಿತಿಯು ೧೯೫೦ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ತಲುಪಿಸಿತು. ಈ ವರದಿಯನ್ನು ಆಧರಿಸಿ ಮೈಸೂರ್ ವಿಲೇಜ್ ಪಂಚಾಯತ್ ಆಂಡ್ ಡಿಸ್ಟ್ರಿಕ್ಟ್ ಬೊರ್ಡ್ಸ್ ಆ್ಯಕ್ಟ್ ಆಫ್ ೧೯೫೨ರ ಶಾಸನವನ್ನು ಜಾರಿಗೊಳಿಸಲಾಯಿತು. ಆದರೆ ಈ ಶಾಸನದ ಮೂಲಕ ನಿರೀಕ್ಷಿತ ಫಲಿತಾಂಶವನ್ನು ಸಾಧಿಸುವುದು ಸಾಧ್ಯವಾಗಲಿಲ್ಲ. ೧೯೫೩ರಲ್ಲಿ ಸ್ಥಳೀಯ ಸರ್ಕಾರವನ್ನು ಬಲಪಡಿಸುವ ಉದ್ದೇಶದಿಂದ ಡಿ.ಹೆಚ್.ಚಂದ್ರಶೇಖರಯ್ಯ ಅಧ್ಯಕ್ಷತೆಯಲ್ಲಿ ಲೋಕಲ್ ಬೋರ್ಡ್ ಎನ್‌ಕ್ವಯರಿ ಕಮಿಟಿಯನ್ನು ರಚಿಸಲಾಯಿತು. ಈ ಸಮಿತಿಯು ೧೯೫೪ರಲ್ಲಿ ವರದಿ ಸಲ್ಲಿಸಿ ಮೂರು ಹಂತಗಳ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿ ಗ್ರಾಮ ಮತ್ತು ಜಿಲ್ಲಾ ಮಟ್ಟದ ನಡುವೆ

ತಾಲ್ಲೂಕು ಅಭಿವೃದ್ಧಿಮಂಡಳಿಗಳು ಇರಬೇಕು ಎನ್ನುವ ಶಿಫಾರಸ್ಸು ನೀಡಿತು. ಆದರೆ ಈ ಶಿಫಾರಸ್ಸುಗಳನ್ನು ಸರ್ಕಾರ ಜಾರಿಗೊಳಿಸಲಿಲ್ಲ.[೨೩]

ಮೈಸೂರು ವಿಲೇಜ್ ಪಂಚಾಯತಿ ಆಂಡ್ ಲೋಕಲ್ ಬೋರ್ಡ್ಸ್ ಆ್ಯಕ್ಟ್ –೧೯೫೯

೧೯೫೭ರಲ್ಲಿ ಬಲವಂತರಾಯ್ ಮೆಹತಾ ಸಮಿತಿಯು "ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಯೋಜನೆ, ನಿರ್ಧಾರ ಕೈಗೊಳ್ಳುವಿಕೆ ಮತ್ತು ಕಾರ್ಯಾಚರಣೆ ಪ್ರಕ್ರಿಯೆಯಲ್ಲಿ ಜನರು ಪಾಲ್ಗೊಂಡಾಗ ಮಾತ್ರ ಯಶಸ್ವಿಯಾಗಲು ಸಾಧ್ಯ" ಎಂದು ಅಭಿಪ್ರಾಯಪಟ್ಟಿತು. ಈ ಅಭಿಪ್ರಾಯಗಳು ಗಂಭೀರವಾಗಿ ಪರಿಗಣಿಸಿದ ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಬಿ.ಡಿ. ಜತ್ತಿಯವರು ೧೯೫೯ರಲ್ಲಿ ಮೈಸೂರು ವಿಲೇಜ್ ಪಂಚಾಯತಿ ಆಂಡ್ ಲೋಕಲ್ ಬೋರ್ಡ್ ಆ್ಯಕ್ಟ್ ಜಾರಿಗೊಳಿಸಿದರು. ಈ ಕಾಯ್ದೆಯು ಗ್ರಾಮ ಮತ್ತು ತಾಲ್ಲೂಕು ಮಟ್ಟದಲ್ಲಿ ಜನರಿಂದ ನೇರವಾಗಿ ಆಯ್ಕೆಗೊಂಡ ಪ್ರತಿನಿಧಿಗಳನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಪರೋಕ್ಷವಾಗಿ ರಚನೆಗೊಂಡ ಸಂಸ್ಥೆಯನ್ನು ಪರಿಚಯಿಸಲಾಯಿತು. ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಾತಿ ನಿಗದಿಪಡಿಸಲಾಯಿತು. ಹಾಗೆಯೇ ಎರಡು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನಿಗದಿಪಡಿಸಲಾಯಿತು. ಅಭಿವೃದ್ಧಿ ಕಾರ್ಯಗಳಿಗೆ ಸಲಹೆ, ಸಹಕಾರ ಮತ್ತು ಮೇಲ್ವಿಚಾರಣೆ ಮಾಡಲು ಜಿಲ್ಲಾ ಅಭಿವೃದ್ಧಿ ಸಮಿತಿಯನ್ನು ರಚಿಸಿ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರು, ಮಹಿಳಾ ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಕ ಮಾಡಲಾಯಿತು. ಈ ಕಾಯ್ದೆಯ ಪ್ರಕಾರ ೮೪೧೧ ಗ್ರಾಮ ಪಂಚಾಯಿತಿಗಳು, ೯೬ ಪಟ್ಟಣ ಪಂಚಾಯಿತಿಗಳು, ೧೭೫ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಮತ್ತು ೧೯ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ಸ್ಥಾಪಿಸಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾಧರೆ ಈ ಕಾಯ್ದೆಯಲ್ಲಿ ಹಣಕಾಸಿನ ವೀಕೇಂದ್ರೀಕರಣ ಮತ್ತು ಸ್ವಾಯತ್ತತೆ ಅಥವಾ ಅಭಿವೃದ್ಧಿ ಯೋಜನೆಗಳಿಗೆ ಅವಕಾಶ ಮಾಡಿಕೊಡಲಿಲ್ಲ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಯು ಕೇವಲ ಸಲಹೆ ನೀಡುವ ಮತ್ತು ಮೇಲ್ವಿಚಾರಣೆ ಮಾಡುವ ಸಂಸ್ಥೆಯನ್ನಾಗಿ ರೂಪಿಸಲಾಯಿತು. ತಾಲ್ಲೂಕುಗಳು ಆಡಳಿತದ ಮೂಲ ಘಟಕವಾಯಿತು.

ಕೊಂಡಜ್ಜಿ ಬಸಪ್ಪ ಸಮಿತಿ:

೧೯೫೯ರ ಕಾಯಿದೆಯಲ್ಲಿರುವ ದೋಷಗಳನ್ನು ಸರಿಪಡಿಸಲು ಶ್ರೀ ಕೊಂಡಜ್ಜಿ ಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಶಿಫಾರಸ್ಸು ಮಾಡಿರುವ ಪ್ರಕಾರ ಜಿಲ್ಲಾ ಪರಿಷತ್ ಕಾರ್ಯಕಾರಿ ಮಂಡಳಿಯಾಗಿರಬೇಕು. ಇದಕ್ಕೆ ಸರ್ಕಾರೇತರ ವ್ಯಕ್ತಿ ಅಧ್ಯಕ್ಷನಾಗಿರಬೇಕು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚು ಅಧಿಕಾರವನ್ನು ನೀಡಬೇಕು ಹಾಗೂ ಗ್ರಾಮ ಪಂಚಾಯಿತಿಗಳು ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ನಡುವೆ ನೇರವಾದ ಸಂಬಂಧವಿರಬೇಕು. ಈ ಸಮಿತಿಯು ಸಂಸದರು ಮತ್ತು ಶಾಸಕರಿಗೆ ಸದಸ್ಯತ್ವ ನೀಡದೇ ನ್ಯಾಯ ಪಂಚಾಯತ್ ವ್ಯವಸ್ಥೆಯನ್ನು ಪರಿಚಯಿಸಿತು. ಈ ಎಲ್ಲಾ ಅಂಶಗಳನ್ನು ಒಳಗೊಂಡ ಮೈಸೂರು ಪಂಚಾಯತ್ ರಾಜ್ ಮಸೂದೆ ೧೯೬೪ ಮಂಡಿಸಲಾಯಿತು. ಆದರೆ ರಾಜಕೀಯ ಕಾರಣಗಳಿಗಾಗಿ ಈ ಮಸೂದೆ ಅಂಗೀಕಾರವಾಗಲಿಲ್ಲ.[೨೪]

ಪಂಚಾಯತ್ ಸಂಸ್ಥೆಗಳ ಹೊಸ ಯುಗದ ಆರಂಭ

೧೯೮೩ರ ವರ್ಷವು ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹೊಸ ಯುಗವನ್ನು ಆರಂಭಿಸಿತು. ಈ ಕಾಯ್ದೆಯನ್ನು ಜಾರಿಗೊಳಿಸುವ ಮೂಲಕ ಇಡೀ ಭಾರತದಾದ್ಯಂತ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿ ನಿಲ್ಲುವಂತಾಯಿತು. ಈ ಕಾಯ್ದೆಯು ೧೯೮೩ರ ಕಾಯಿದೆ ಎಂದೂ ಚಿರಪರಿಚಿತವಾಯಿತು. ಅಶೋಕ ಮೆಹತಾ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ಶ್ರೀ ಅಬ್ದುಲ್ ನಜೀರ್ ಸಾಬ್ ರವರು ಈ ಕಾಯ್ದೆಯ ರೂಪಿಸುವಲ್ಲಿ ಪ್ರಮುಖ ರೂವಾರಿಯಾದರು. ಜನತೆಗೆ ಅಧಿಕಾರ ಎನ್ನುವ ತತ್ವಕ್ಕೆ ಬದ್ದರಾಗಿದ್ದ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ೧೯೮೩ರಲ್ಲಿ ಈ ಮಸೂದೆಯನ್ನು ಶಾಸನಸಭೆಯಲ್ಲಿ ಮಂಡಿಸಿದರು. ಈ ಕಾಯಿದೆಗೆ ಜುಲೈ ೧೦, ೧೯೮೫ರಲ್ಲಿ ರಾಷ್ಟ್ರಪತಿಯವರ ಅಂಗೀಕಾರ ದೊರೆಯಿತು. ಈ ಕಾಯಿದೆಯು ಭಾರತದ ಸ್ಥಳೀಯ ಸರ್ಕಾರಗಳ ಚರಿತ್ರೆಯಲ್ಲಿ ಮೈಲುಗಲ್ಲಾಯಿತು. ಭಾರತದ ಸಂವಿಧಾನದಲ್ಲಿ ಪಂಚಾಯತ್‌ಗಳಿಗೆ ಪ್ರಾಧಾನ್ಯತೆ ನೀಡಿದ್ದರೂ ಕೂಡ ಕೇವಲ ಕೆಲವು ರಾಜ್ಯಗಳು ಮಾತ್ರ ಪಂಚಾಯತ್ ಸಂಘಟನೆಗಳನ್ನು ಗಂಭೀರವಾಗಿ ಪರಿಗಣಿಸಿದವು. ಈ ಕಾಯ್ದೆಯ ಪ್ರಕಾರ ಕರ್ನಾಟಕ ಸರ್ಕಾರವು ಮೊಟ್ಟ ಮೊದಲ ಬಾರಿಗೆ ಸ್ಥಳೀಯ ಸರ್ಕಾರಗಳನ್ನು ನೈಜ ಅಧಿಕಾರ ಕೇಂದ್ರಗಳನ್ನಾಗಿ ರೂಪಿಸುವ ಸಂಕಲ್ಪ ಕೈಗೊಂಡಿತು.

ಅಬ್ದುಲ್ ನಜೀರ್ ಸಾಬ್ ರವರ ನಂಬಿಕೆಯ ಪ್ರಕಾರ ಅಧಿಕಾರ ವಿಕೇಂದ್ರೀಕರಣವು ಉತ್ತಮ ಆಡಳಿತವನ್ನು ಖಾತ್ರಿಪಡಿಸುತ್ತದೆ. ಸ್ಥಳೀಯ ಮಟ್ಟಗಳಲ್ಲಿ ತಾವು ಅಧಿಕಾರವನ್ನು ಹಂಚಿಕೊಳ್ಳುತ್ತೇವೆ ಎಂದು ಭಾವಿಸಿದಾಗ ಜನರಿಗೆ ನಿಜವಾದ ನಾಯಕತ್ವದ ಅರಿವು ಉಂಟಾಗುತ್ತದೆ.

ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಮತ್ತು ಕಾರ್ಯಗಳನ್ನು ವಿಕೇಂದ್ರೀಕರಣ ಮಾಡುವುದು ಆ ಮೂಲಕ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಬೆಳೆಸುವುದು ಮತ್ತು ಯೋಜನೆಯ ತಯಾರಿಕೆ, ಕಾರ್ಯಾಚರಣೆ ಆಡಳಿತ ಯೋಜನೆ ಮತ್ತು ಹಣಕಾಸಿನ ಕಾರ್ಯಗಳಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಈ ಕಾಯ್ದೆಯ ಉದ್ದೇಶವಾಗಿತ್ತು. ಈ ಕಾಯ್ದೆಯು ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು. ಈ ಕಾಯ್ದೆಯ ಪ್ರಕಾರ ಜಿಲ್ಲಾ ಅಭಿವೃದ್ಧಿ ಸಮಿತಿಗಳ ಬದಲಾಗಿ ಎಲ್ಲಾ ಜಿಲ್ಲೆಗಳಲ್ಲಿ ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳನ್ನು ಒಳಗೊಂಡ ಜಿಲ್ಲಾ ಪರಿಷತ್ ಜಾರಿಗೊಳಿಸಲಾಯಿತು. ಇವುಗಳಿಗೆ ಯೋಜನೆಯನ್ನು ತಯಾರಿಸಿ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುವುದು ಮತ್ತು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಕ್ರಮವಾಗಿ ರಾಜ್ಯ ಮಂತ್ರಿಯ ಮತ್ತು ಉಪ-ಮಂತ್ರಿಯ ಸ್ಥಾನವನ್ನು ನೀಡಲಾಯಿತು. ಮಧ್ಯಮ ಹಂತದಲ್ಲಿ ಕಾರ್ಯಾಂಗದ ಅಧಿಕಾರಗಳಲ್ಲದೆ ತಾಲ್ಲೂಕು ಪಂಚಾಯತ್ ಸಮಿತಿಯನ್ನು ರಚಿಸಿ, ಎಲ್ಲಾ ಗ್ರಾಮಗಳಲ್ಲಿ ಮಂಡಲ ಪಂಚಾಯಿತಿಗಳನ್ನು ಸ್ಥಾಪಿಸಲಾಯಿತು. ಈ ಕಾಯ್ದೆಯ ಪ್ರಕಾರ ಪ್ರತಿ ಮಂಡಲ ಪಂಚಾಯಿತಿಯಲ್ಲಿ ನ್ಯಾಯ ಪಂಚಾಯತ್‌ಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಯಿತು. ಆದರೆ ದುರದೃಷ್ಟಕರ ಸಂಗತಿ ಎಂದರೆ ನ್ಯಾಯ ಪಂಚಾಯತ್‌ಗಳನ್ನು ಕಾರ್ಯಗತಗೊಳಿಸಲಿಲ್ಲ.

ಕರ್ನಾಟಕ ಪಂಚಾಯತ್‌ರಾಜ್ ಆ್ಯಕ್ಟ್ ೧೯೮೩ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಗಳಿಗೆ ಅಧಿಕಾರ ವಿಕೇಂದ್ರೀಕರಣ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ, ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಶೇ.೨೫ರಷ್ಟು ಮೀಸಲಾತಿ ನೀಡಲಾಯಿತು. ಮತ್ತೊಂದು ಪ್ರಮುಖ ಸಂಗತಿ ಎಂದರೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮಸಭೆಯನ್ನು ರಚಿಸಿ, ಅವುಗಳು ವರ್ಷಕ್ಕೆ ಕನಿಷ್ಟ ಎರಡು ಬಾರಿ ಸಭೆ ನಡೆಸಿ ಕಾರ್ಯಕ್ರಮಗಳು ಮತ್ತು ಯೋಜನೆಗಳು ಅನುಮೋದನೆ ನೀಡುವ, ಅವುಗಳನ್ನು ಜಾರಿಗೊಳಿಸಲು, ಚರ್ಚಿಸುವ ಮತ್ತು ವಿವಿಧ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ನೀಡಿತು. ಈ ಎಲ್ಲಾ ಅಂಶಗಳಿಂದಾಗಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಇಡೀ ದೇಶದ ಗಮನ ಸೆಳೆಯಿತು. ಈ ಕಾಯ್ದೆಯು ರಾಜಕೀಯ, ಬೌದ್ಧಿಕ ಮತ್ತು

ಶೈಕ್ಷಣಿಕ ವಲಯಗಳಲ್ಲಿ ಮೆಚ್ಚುಗೆಗೆ ಪಾತ್ರವಾಯಿತು. ಆದರೆ ಇದು ಪಂಚಾಯತ್ ನಾಯಕತ್ವದಲ್ಲಿ ಸಮಗ್ರ ಬದಲಾವಣೆ ತರಲು ಸಾಧ್ಯವಾಗಲಿಲ್ಲ. ಇದರ ಜೊತೆಗೆ ಕನಿಷ್ಟ ಹಣಕಾಸಿನ ಮತ್ತು ಆಡಳಿತಾತ್ಮಕ ಕಾರ್ಯಗಳು, ಅಧಿಕಾರಶಾಹಿಗಳು ಮತ್ತು ರಾಜಕಾರಣಿಗಳಿಗೆ ಬದ್ಧತೆ ಇಲ್ಲದ ಕಾರಣ ನಿರೀಕ್ಷಿತ ಫಲ ದೊರೆಯುವುದು ಸಾಧ್ಯವಾಗಲಿಲ್ಲ. ಅಬ್ದುಲ್ ನಜೀರ್ ಸಾಬ್ ಅವರು ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿ ಗ್ರಾಮ, ಜಿಲ್ಲೆ, ರಾಜ್ಯ ಮತ್ತು ಕೇಂದ್ರವನ್ನು ಒಳಗೊಂಡ ನಾಲ್ಕು ಹಂಗಳ ರಾಜ್ಯ ವ್ಯವಸ್ಥೆ ಗಾಂಧೀಜಿಯವರ ಕನಸಾಗಿತ್ತು. ಆದರೆ ಈ ಪರಿಕಲ್ಪನೆಯನ್ನು ಕರ್ನಾಟಕ ರಾಜ್ಯವು ಜಾರಿಗೊಳಿಸಲು ಪ್ರಯತ್ನಿಸಿದಾಗ ಕಂಡು ಬಂದ ವಾಸ್ತವಿಕ ಅಂಶವೆಂದರೆ ಸಂವಿಧಾನ ವಿಧಿಸಿರುವ ಮಿತಿಯಲ್ಲಿ ಈ ಪರಿಕಲ್ಪನೆಯನ್ನು ರಾಜ್ಯ ಸರ್ಕಾರ ಸಂವಿಧಾನದ ತಿದ್ದುಪಡಿ ಇಲ್ಲದೆ ಜಾರಿಗೊಳಿಸುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ಈ ಪ್ರಯತ್ನಗಳು ನಿರೀಕ್ಷಿತ ಫಲ ನೀಡುವುದು ಸಾಧ್ಯವಾಗಲಿಲಲ್ಲ ಎಂದು ಹೇಳಿದ್ದಾರೆ.[೨೫]

೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಆ್ಯಕ್ಟ್ :

ಪಿ.ವಿ.ನರಸಿಂಹರಾವ್‌ರವರ ಸರ್ಕಾರ ಜಾರಿಗೊಳಿಸಿದ ೭೩ನೇ ಸಂವಿಧಾನಾತ್ಮಕ ತಿದ್ದುಪಡಿಯನ್ನು ಕರ್ನಾಟಕದಲ್ಲಿ ಜಾರಿಗೊಳಿಸಲು ಕರ್ನಾಟಕದ ಅಂದಿನ ಮುಖ್ಯಮಂತ್ರಿಯಾದ ವೀರಪ್ಪ ಮೊಯ್ಲಿಯವರು ಮತ್ತು ಪಂಚಾಯತ್‌ರಾಜ್ ಸಚಿವರಾದ ಎಂ.ವೈ.ಘೋರ್ಪಡೆಯವರು ಶ್ರಮವಹಿಸಿದ್ದಾರೆ. ಈ ಮಸೂದೆಯು ಒಂದನೇ ಏಪ್ರಿಲ್ ೧೯೯೩ರಲ್ಲಿ ಮಂಡನೆಯಾಗಿ ಎರಡು ಸದನಗಳ ಅಂಗೀಕಾರ ಪಡೆದು ಏಪ್ರಿಲ್ ೧೩ ರಂದು ರಾಜ್ಯಪಾಲರ ಅಂಗೀಕಾರ ಪಡೆದು ೧೦ನೇ ಮೇ ೧೯೯೩ರಂದು ಕಾಯ್ದೆ ಜಾರಿಗೊಂಡಿತು.

ಈ ಸರ್ಕಾರವು ೧೯೯೩ರ ಕಾಯ್ದೆಯಲ್ಲಿ $\frac{1}{3}$ರಷ್ಟು ಮೀಸಲಾತಿ ಮತ್ತು ಸದಸ್ಯರು ಮತ್ತು ಪದಾಧಿಕಾರಿಗಳ ಸ್ಥಾನಗಳಿಗೆ ಆದಾಯವನ್ನು ಆಧರಿಸಿ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ನಿರ್ಧಾರ ಮಾಡಿತು. ವಾರ್ಷಿಕ ೧೦,೦೦೦ ರೂಪಾಯಿ ಆದಾಯವಿರುವ ಯಾವುದೇ ಸಮುದಾಯಗಳಿಗೆ ಸಂಬಂಧಿಸಿದ ಸದಸ್ಯರು ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳಿಗೆ ಸ್ಪರ್ಧಿಸಬಹುದಾಗಿದೆ. ೧೯೯೪ರಲ್ಲಿ ಆಸ್ತಿತ್ವಕ್ಕೆ ಬಂದ ದೇವೇಗೌಡರ ಸರ್ಕಾರವು ಸಿದ್ದರಾಮಯ್ಯನವರ ನೇತೃತ್ವದಲ್ಲಿ ಪಂಚಾಯತ್ ವ್ಯವಸ್ಥೆಯಲ್ಲಿ ಮೀಸಲಾತಿಯನ್ನು ಬಲಪಡಿಸುವ ಉದ್ದೇಶಕ್ಕೆ ರಚಿಸಲಾಯಿತು. ಈ ಸಮಿತಿಯ ಸಲಹೆಯಂತೆ ಎರಡು ಪ್ರವರ್ಗಗಳಿಗೆ ಅಂದರೆ ಬಿ.ಸಿಎಂ–ಎ ಗೆ ಶೇ.೨೬.೬ ರಷ್ಟು ಮೀಸಲಾತಿ ಮತ್ತು ಬಿಸಿಎಂ–ಬಿ ಪ್ರವರ್ಗಕ್ಕೆ ಶೇ.೬.೪ರಷ್ಟು ಮುಸ್ಲಿಮರನ್ನು ಒಳಗೊಂಡಂತೆ ಒಟ್ಟು ಶೇ.೩೩ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿತು.

ಈ ಶಿಫಾರಸ್ಸು ೧೯೫೫-೫೬ರಲ್ಲಿ ಜಾರಿಯಾಯಿತು. ಹಿಂದಿನ ಪಂಚಾಯತ್ ಕಾಯ್ದೆಗಳು ಮತ್ತು ಅದರ ಅನುಭವಗಳನ್ನು ಪರಿಗಣಿಸುವುದಾದರೆ ಈ ಕಾಯ್ದೆಯು ೧೯೮೩ರ ಕಾಯ್ದೆಗಿಂತ ಹೆಚ್ಚು ಪರಿಣಾಮಕಾರಿಯಾಗಿದ್ದು, ಇದು ಅತ್ಯಂತ ಮಹತ್ವ ಪಡೆದುಕೊಂಡಿದೆ. ಈ ಕಾಯ್ದೆಯ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಸ್ಥಾಪಿಸಿತು. ಮೂರು ಹಂತಗಳಲ್ಲಿ ಜನರಿಂದ ನೇರವಾಗಿ ಆಯ್ಕೆಗೊಂಡ ಪ್ರತಿನಿಧಿಗಳಿದ್ದು ಅವರಲ್ಲೇ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಆಯ್ಕೆಗೊಳ್ಳುತ್ತಾರೆ. ಈ ಕಾಯ್ದೆಯ ಪ್ರಕಾರ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಾಜಕೀಯ ಪಕ್ಷಗಳಿಗೆ ಪಾಲ್ಗೊಳ್ಳುವ ಅವಕಾಶ ನೀಡಲಾಗಿದ್ದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಾಜಕೀಯ ಪಕ್ಷಗಳಿಗೆ ಅವಕಾಶ ನೀಡಲಾಗಿಲ್ಲ. ಆದರೆ ನಿಧಾನವಾಗಿ ಎಲ್ಲಾ ಹಂಗಳಲ್ಲಿ ರಾಜಕೀಯ ಪಕ್ಷಗಳು ಪ್ರವೇಶ ಪಡೆಯುತ್ತಿವೆ. ಇಷ್ಟೆಲ್ಲಾ ಬೆಳವಣಿಗೆಯ ನಂತರವೂ ಕರ್ನಾಟಕದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅವಲೋಕನ ಮಾಡಿದರೆ ಇಂದಿಗೂ ಅವುಗಳು ಪೂರ್ಣ ಪ್ರಮಾಣದ ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಹೊರಹೊಮ್ಮುವುದು ಸಾಧ್ಯವಾಗಿಲ್ಲ ಮತ್ತು ಹೊಸ ವರ್ಗಗಳ ಅಧಿಕಾರ ಕೇಂದ್ರಗಳು ಹೊರಹೊಮ್ಮಿವೆ. ಗ್ರಾಮಸಭೆಗಳು ಸಂಸ್ಥೆಗಳಾಗಿ ಸಬಲೀಕರಣಗೊಂಡಿಲ್ಲ ಮತ್ತು ಅವುಗಳು ದೆಹಲಿ ಮತ್ತು ಬೆಂಗಳೂರಿನಲ್ಲಿ ರೂಪುಗೊಳ್ಳುವ ೪೨೮ ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವ ಕೆಲಸ ಮಾಡುತ್ತಿದ್ದು, ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಯಾವುದೇ ಆದ್ಯತೆ ನೀಡಲಾಗಿಲ್ಲ. ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಡತನ ನಿರ್ಮೂಲನೆ, ಜೀವನ ಮಟ್ಟವನ್ನು ಎತ್ತರಿಸುವ ಮೂಲಭೂತ ಸೌಕರ್ಯಗಳು, ಆರೋಗ್ಯ, ಶಿಕ್ಷಣ ಮತ್ತು ಚರಂಡಿ ವ್ಯವಸ್ಥೆಗಳನ್ನು ವಿತರಿಸುವ ಸಂಸ್ಥೆಗಳನ್ನಾಗಿ ಮಾರ್ಪಾಡು ಮಾಡಲಾಗಿದೆ. ಇದರ ಜೊತೆಗೆ ಶಾಸನದಲ್ಲಿ ಬದಲಾವಣೆ ಮಾಡಿ ಸರ್ಕಾರದ ಆದೇಶದ ಮೂಲಕ ಹಂತ ಹಂತಗಳಲ್ಲಿ ಇವುಗಳಿಗೆ ನೀಡಿದ್ದ ಅಧಿಕಾರವನ್ನು ಹಿಂಪಡೆಯಲಾಗಿದೆ. ಆದರೂ ಈ ವ್ಯವಸ್ಥೆ ಬೇರುಮಟ್ಟದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಹೆಚ್ಚು ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಟ್ಟಿದೆ. ಇದರ ಜೊತೆಗೆ ಕೇವಲ ಮೇಲ್ವರ್ಗ ಮತ್ತು ಶ್ರೀಮಂತರ ಪಾಲಾಗಿದ್ದ ಸಮಾಜಗಳಲ್ಲಿ ದೊಡ್ಡ ಸಂಖ್ಯೆಯಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಮಹಿಳಾ ಪ್ರತಿನಿಧಿಗಳು, ಸಕ್ರೀಯವಾಗಿ ಭಾಗವಹಿಸುವಂತೆ ಮಾಡಿವೆ. ಪಂಚಾಯತ್ ವ್ಯವಸ್ಥೆಯ ಮೂರು ಹಂತಗಳಲ್ಲಿ ಸದಸ್ಯರು, ಅಧ್ಯಕ್ಷರು ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಶೇ.೫೦ರಷ್ಟು ಮಹಿಳಾ ಮೀಸಲಾತಿ ನೀಡುವ ಮೂಲಕ ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮಹಿಳೆಯರು ಭಾಗವಹಿಸುವಂತೆ ಮಾಡಿದ್ದು, ಇದು ಇಡೀ ಭಾರತದಲ್ಲಿ ಕರ್ನಾಟಕ ರಾಜ್ಯ

ಮಾತ್ರ ಮಹಿಳೆಯರನ್ನು ಗುರುತಿಸಿ, ಅವರಿಗೆ ಮನ್ನಣೆ ನೀಡಿ, ಮಹಿಳೆಯರು ಸ್ಥಳೀಯ ಸರ್ಕಾರದಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಹೆಗ್ಗಳಿಕೆ ಪಾತ್ರವಾಗಿದೆ. ಇದರೊಂದಿಗೆ ೭೩ನೇ ಸಂವಿಧಾನ ತಿದ್ದುಪಡಿಯು ಪಂಚಾಯತ್ ಸಂಸ್ಥೆಗಳನ್ನು ಸಂವಿಧಾನಬದ್ಧಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

೭೩ನೇ ಸಂವಿಧಾನದ ತಿದ್ದುಪಡಿ– ಪಂಚಾಯತ್‌ರಾಜ್ ವ್ಯವಸ್ಥೆಯ ಧ್ಯೇಯೋದ್ದೇಶಗಳು

೭೩ನೇ ಸಂವಿಧಾನ ತಿದ್ದುಪಡಿಯ ಪ್ರಕಾರ ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರಮುಖ ಧ್ಯೇಯೋದ್ದೇಶಗಳೆಂದರೆ

೧) ಜನತೆಗೆ ಅಧಿಕಾರ ನೀಡುವುದು

೨) ತಳಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಅಭಿವೃದ್ಧಿಪಡಿಸುವುದು

೩) ಗ್ರಾಮದ ಅಭಿವೃದ್ಧಿಯಲ್ಲಿ ಜನರು ಸಕ್ರೀಯವಾಗಿ ಪಾಲ್ಗೊಳ್ಳಲು ಅನ್ವೇಷಣಾಕಾರಿ ಯೋಜನೆಗಳನ್ನು ರೂಪಿಸುವುದು.

೪) ಗ್ರಾಮಗಳಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರಲ್ಲಿ ಜವಾಬ್ದಾರಿಯನ್ನು ಬಿತ್ತುವುದು.

೫) ಗ್ರಾಮೀಣ ಜನರಿಗೆ ಯೋಜನೆ ಮತ್ತು ಕಾರ್ಯಕ್ರಮಗಳ ನಿಜವಾದ ಫಲ ದೊರೆಯುವಂತೆ ಖಾತ್ರಿ ಪಡಿಸುವುದು.

ಗ್ರಾಮಸಭೆ : ೨೪೩ನೇ ವಿಧಿಯಲ್ಲಿ ಗ್ರಾಮಸಭೆಯನ್ನು ವಿವರಿಸಲಾಗಿದೆ. ೨೪೩ ವಿಧಿಯ ಪ್ರಕಾರ ಗ್ರಾಮಸಭೆಯು ಎರಡು ಕಾರ್ಯಗಳನ್ನು ನಿರ್ವಹಿಸುತ್ತದೆ. ಮೊದಲನೆಯದು ಗ್ರಾಮ ಪಂಚಾಯತ್‌ಗಳ ಕಾರ್ಯನಿರ್ವಹಣೆಯ ಬಗ್ಗೆ ನಿಗಾವಹಿಸುತ್ತದೆ. ಎರಡನೆಯದಾಗಿ ಸಾರ್ವಜನಿಕ ಪಾಲ್ಗೊಳ್ಳುವಿಕೆ ಅಗತ್ಯವಿರುವ ವಿಷಯಗಳಲ್ಲಿ ಒಂದು ಗುಂಪಾಗಿ ಪಂಚಾಯತ್ ಕಾರ್ಯಗಳಿಗೆ ಸಹಾಯ ನೀಡುತ್ತದೆ. ಗ್ರಾಮ ಪಂಚಾಯತ್‌ಗಳು ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ಕಾಯಿದೆಯಲ್ಲಿ ವಿವರಿಸಲಾಗಿದೆ. ಅವುಗಳೆಂದರೆ (೧) ಹಣಕಾಸು, ವಸ್ತುಗಳು ಮತ್ತು ಸ್ವಯಂ ಸೇವಕರಾಗಿ, ಜನರು ಸಂಘಟಿತಗೊಳ್ಳುವಂತೆ ಮತ್ತು ಪಾಲ್ಗೊಳ್ಳುವಂತೆ ಮಾಡಿ ಆರ್ಥಿಕ ಅಭಿವೃದ್ಧಿಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸುವುದು.

(೨) ಜನರ ವಿವಿಧ ಗುಂಪುಗಳಲ್ಲಿ ಸಾಮರಸ್ಯವನ್ನುಂಟು ಮಾಡುವುದು.

(೩) ಬಡತನ ನಿರ್ಮೂಲನೆ ಮತ್ತು ಭೂ ಸುಧಾರಣೆ ಕಾರ್ಯಗಳಲ್ಲಿ ಫಲಾನುಭವಿಗಳನ್ನು ಗುರುತಿಸಲು ಪಂಚಾಯತ್‌ಗೆ ಸಹಾಯ ನೀಡುವುದು.

(೪) ಕಾಲಕಾಲಕ್ಕೆ ಪಂಚಾಯತ್‌ಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಮತ್ತು ಕಾನೂನಿಗೆ ಅನುಗುಣವಾಗಿ ಸೂಕ್ತ ನಿರ್ದೇಶನ ನೀಡುವುದು.

(೫) ಕಾಲಕಾಲಕ್ಕೆ ಕಾರ್ಯಕ್ರಮಗಳ ಸ್ವರೂಪ ಮತ್ತು ಪಂಚಾಯತ್‌ಗಳು ಕೈಗೊಳ್ಳಬೇಕಾದ ಚಟುವಟಿಕೆಗಳ ಬಗ್ಗೆ ಸಲಹೆಯನ್ನು ನೀಡುವುದು.

ಪಂಚಾಯತ್‌ಗಳಲ್ಲಿ ಸ್ಥಾನಗಳ ಮೀಸಲಾತಿ:

೨೪೩(ಡಿ) ವಿಧಿಯು ಪಂಚಾಯತ್‌ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡಿದೆ. ಈ ಮೀಸಲಾತಿಯು ಆಯಾ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸತಕ್ಕದ್ದು. ಈ ನಿಯಮಾವಳಿಯ ಪ್ರಕಾರ

(೧) ಪಂಚಾಯತ್‌ನ ಒಟ್ಟು ಸ್ಥಾನಗಳಲ್ಲಿ ೧/೩ ಗೆ ಕಡಿಮೆ ಇಲ್ಲದಂತೆ ಮಹಿಳೆಯರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಥಾನವನ್ನು ನಿಗದಿ ಮಾಡತಕ್ಕದ್ದು.

(೨) ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಒಳಗೊಂಡಂತೆ ೧/೩ ಕಡಿಮೆ ಇಲ್ಲದಂತೆ ಮಹಿಳೆಯರಿಗೆ ನೇರವಾಗಿ ಆಯ್ಕೆಗೊಳ್ಳಲು ಸ್ಥಾನಗಳನ್ನು ನಿಗದಿಪಡಿಸಿ ಈ ಸ್ಥಾನಗಳನ್ನು ವಿವಿಧ ಕ್ಷೇತ್ರಗಳಿಗೆ ಹಂಚಿಕೆ ಮಾಡತಕ್ಕದ್ದು.

(೩) ಎಲ್ಲಾ ಹಂತಗಳ ಪಂಚಾಯತ್ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ೧/೩ ಗಿಂತ ಕಡಿಮೆ ಇಲ್ಲದಂತೆ ಅಧ್ಯಕ್ಷ ಸ್ಥಾನವನ್ನು ಮೀಸಲಿಡತಕ್ಕದ್ದು. ರಾಜ್ಯ ಶಾಸಕಾಂಗವು ಹಿಂದುಳಿದ ವರ್ಗಗಳ ಅನುಕೂಲಕ್ಕಾಗಿ ಮೀಸಲಾತಿಗೆ ಸಂಬಂಧಿಸಿದ ವಿಶೇಷ ನಿಯಮಾವಳಿಗಳನ್ನು ರೂಪಿಸುವ ಅಧಿಕಾರವಿದೆ.

೧.೧೦ ಬಳ್ಳಾರಿ ಜಿಲ್ಲೆಯ ಕ್ಷೇತ್ರ ಪರಿಚಯ

(೧)ಬಳ್ಳಾರಿ ಜಿಲ್ಲೆಯ ತಾಲ್ಲೂಕುಗಳು

ಬಳ್ಳಾರಿ ಜಿಲ್ಲೆಯು ಬಳ್ಳಾರಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ಕೂಡ್ಲಿಗಿ, ಸಂಡೂರು ಮತ್ತು ಸಿರುಗುಪ್ಪ ಎಂಬ ಒಟ್ಟು ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಡಾ.ಡಿ.ಎಂ.ನಂಜುಂಡಪ್ಪನವರ ಅಧ್ಯಕ್ಷತೆಯ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಪ್ರಕಾರ, ಬಳ್ಳಾರಿ ಜಿಲ್ಲೆಯ ಒಟ್ಟು ಏಳು ತಾಲ್ಲೂಕುಗಳಲ್ಲಿ ಎರಡು ತಾಲ್ಲೂಕುಗಳು ಬಳ್ಳಾರಿ ಮತ್ತು ಹೊಸಪೇಟೆ ಸಾಪೇಕ್ಷಿತವಾಗಿ ಮುಂದುವರಿದ ತಾಲ್ಲೂಕುಗಳಾಗಿದ್ದು, ಹಿಂದುಳಿದ ತಾಲ್ಲೂಕುಗಳು ಕಂಡು ಬಂದಿಲ್ಲ. ಆದರೆ ಸಿರುಗುಪ್ಪ ಸಂಡೂರು, ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು ಅತೀ ಹಿಂದುಳಿದ ತಾಲ್ಲೂಕಾಗಿದ್ದು ಕೂಡ್ಲಿಗಿ ಅತ್ಯಂತ ಹಿಂದುಳಿದ ತಾಲ್ಲೂಕಾಗಿದೆ. ಜಿಲ್ಲೆಯಲ್ಲಿ ಒಟ್ಟು ೫೫೨ ಗ್ರಾಮಗಳಿದ್ದು ಅವುಗಳಲ್ಲಿ ೫೨೨ ಗ್ರಾಮಗಳು ಜನವಸತಿ ಗ್ರಾಮಗಳಾಗಿವೆ. ಉಳಿದ ೩೦ ಗ್ರಾಮಗಳು ಜನವಸತಿ ಇಲ್ಲದ ಗ್ರಾಮಗಳಿವೆ.[೨೬]

ಬಳ್ಳಾರಿ ಜಿಲ್ಲೆಯ ಜನಸಂಖ್ಯೆ : ೨೦೧೧ರ ಜನಗಣತಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ಜನಸಂಖ್ಯೆ ೨೪,೫೨,೫೯೫ ಅದರಲ್ಲಿ ಒಟ್ಟು ಪುರುಷರ ಸಂಖ್ಯೆ ೧೨,೩೬೯೫೪ ಮತ್ತು ಮಹಿಳೆಯರ ಒಟ್ಟು ಸಂಖ್ಯೆ ೧೨,೧೫,೬೪೧ ಒಟ್ಟು ೨೪,೫೨೫೯೫ ಲಕ್ಷ ಜನಸಂಖ್ಯೆಯಲ್ಲಿ ೧೫,೩೨,೩೫೬ ಲಕ್ಷ ಜನ ಗ್ರಾಮೀಣ ಭಾಗದಲ್ಲಿ ವಾಸವಾಗಿದ್ದು, ೯೨,೦೨೩೯, ಲಕ್ಷದಷ್ಟು ಜನ ನಗರ ಪ್ರದೇಶದಲ್ಲಿ ವಾಸವಾಗಿದ್ದಾರೆ. ೨೦೦೧ ರಿಂದ ೨೦೧೧ರ ವರೆಗಿನ ಒಂದು ದಶಕದಲ್ಲಿ ನಗರ ವಆಸಿಗಳ ಸಂಖ್ಯೆ ಶೇ.೧೬.೦೬ ರಷ್ಟು ಕಂಡು ಬಂದರೆ, ಗ್ರಾಮೀಣ ವಾಸಿಗಳ ಬದಲಾವಣೆ ಶೇ.೩೦.೧೯ ರಷ್ಟು ಕಂಡು ಬರುತ್ತದೆ.[೨೭]

ಬಳ್ಳಾರಿ ಜಿಲ್ಲೆಯ ಲಿಂಗಾನುಪಾತ: ೨೦೦೧ರ ಜನಗಣತಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಲಿಂಗಾನುಪಾತ ೯೬೯, ಈ ಲಿಂಗಾನುಪಾತವು ಗ್ರಾಮೀಣ ಭಾಗದಲ್ಲಿ ೯೭೫ ದಾಖಲಾಗಿದ್ದು, ನಗರ ಭಾಗದಲ್ಲಿ ೯೫೭ರಷ್ಟು ದಾಖಲಾಗಿದೆ. ಅತ್ಯಂತ ಪ್ರೋತ್ಸಾಹದಾಯಕ ಸಂಗತಿ ಎಂದರೆ ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಲಿಂಗಾನುಪಾತ ೯೮೩ ರಷ್ಟು ದಾಖಲಾಗಿದ್ದು, ನಗರ ಭಾಗದಲ್ಲಿ ೯೮೦ ದಾಖಲಾಗಿದ್ದು, ಗ್ರಾಮೀಣ ಭಾಗದಲ್ಲಿ ೯೮೮ ರಷ್ಟು ದಾಖಲಾಗಿದೆ. ಕಳೆದ ಒಂದು ದಶಕದಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳನ್ನು ಒಳಗೊಂಡಂತೆ ಲಿಂಗಾನುಪಾತ ಪ್ರಮಾಣದಲ್ಲಿ ಹೆಚ್ಚಳ ಕಂಡು ಬಂದಿರುವುದು ಅತ್ಯಂತ ಪ್ರೋತ್ಸಾಹದಾಯಕ ಸಂಗತಿಯಾಗಿದೆ.[೨೮]

೦ ಯಿಂದ ೬ ವರ್ಷದ ಒಳಗಿನ ಮಕ್ಕಳ ಲಿಂಗಾನುಪಾತ ಗಮನಿಸುವುದಾದರೆ ೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯ ಮಕ್ಕಳ ಒಟ್ಟು ಲಿಂಗಾನುಪಾತ ೯೪೭, ಗ್ರಾಮೀಣ ಭಾಗದಲ್ಲಿ ೯೫೩ ಮತ್ತು ನಗರ ಭಾಗದಲ್ಲಿ ೯೩೪ ರಷ್ಟು ದಾಖಲಾಗಿದೆ. ಆದರೆ ೨೦೧೧ರ ಜನಗಣತಿಯ ಪ್ರಕಾರ ಮಕ್ಕಳ ಒಟ್ಟು ಲಿಂಗಾನುಪಾತ ೯೬೦ ದಾಖಲಾಗಿದ್ದು, ಗ್ರಾಮೀಣ ಭಾಗದಲ್ಲಿ ೯೪೬ ದಾಖಲಾದರೆ, ನಗರ ಭಾಗದಲ್ಲಿ ೯೫೭ ದಾಖಲಾಗಿದೆ. ಆಸಕ್ತಿಕರ ಸಂಗತಿಯೆಂದರೆ ೨೦೦೧ ರಇಂದ ೨೦೧೧ರವರೆಗೆ ೬ ವರ್ಷದ ಒಳಗಿನ ಮಕ್ಕಳ ಲಿಂಗಾನುಪಾತದಲ್ಲಿ ಉತ್ತಮ ಏರಿಕೆ ಕಂಡು ಬಂದಿದೆ.[೨೯] ಪರಿಶಿಷ್ಟ ಜಾತಿ ಜನಸಂಖ್ಯೆ: ೨೦೧೧ರ ಜನಗಣತಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಜಾತಿಯ ಒಟಟು ಜನಸಂಖ್ಯೆ ೫೧,೭೪,೦೯ ರಷ್ಟು ಇದ್ದು, ಗ್ರಾಮೀಣ ಭಾಗದಲ್ಲಿ ೩೬,೬೦೧೬ ರಷ್ಟು ಜನಸಂಖ್ಯೆ ಮತ್ತು ಗ್ರಾಮೀಣ ಭಾಗದಲ್ಲಿ ೧೫,೧೩,೯೩ ರಷ್ಟು ಪರಿಶಿಷ್ಟ ಜಾತಿ ಜನಸಂಖ್ಯೆ ಇದೆ. ೨೦೦೧ ರಿಂದ ೨೦೧೧ರ ವರೆಗೆ ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಾದ ಬೆಳವಣಿಗೆಯನ್ನು ಅವಲೋಕಿಸಿದರೆ ೨೦೧೧ರ ಹೊತ್ತಿಗೆ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಜಾತಿ ಜನಸಂಖ್ಯೆಯಲ್ಲಿ ಶೇ. ೩೮.೩೬ರಷ್ಟು ಹೆಚ್ಚಳ ಕಂಡುಬಂದಿದ್ದು, ನಗರ ಭಾಗದಲ್ಲಿ ಶೇ.೩೫.೨೪ ಮತ್ತು ಗ್ರಾಮೀಣ ಭಾಗದಲ್ಲಿ ಶೇ.೪೬.೧೭ ರಷ್ಟು ಜನಸಂಖ್ಯೆ ಬೆಳವಣಿಗೆ ದಾಖಲಾಗಿದೆ. ಅತಿಹೆಚ್ಚು ಜನಸಂಖ್ಯೆ ಬೆಳವಣಿಗೆ ದರ ಗ್ರಾಮೀಣ ಭಾಗದಲ್ಲಿ ದಾಖಲಾಗಿರುವುದು. ದಲಿತರು ಹೆಚ್ಚಾಗಿ ಗ್ರಾಮೀಣ ಭಾಗದಲ್ಲಿ ನೆಲೆಸಿರುವುದನ್ನು ಸ್ಪಷ್ಟಪಡಿಸುತ್ತದೆ. ಒಟ್ಟು ಜಿಲ್ಲೆಯ ಎಲ್ಲಾ ಸಮುದಾಯಗಳ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ೨೦೦೧ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಯವರು ಶೇ.೧೮.೫ ರಷ್ಟಿದ್ದು, ಗ್ರಾಮೀಣ ಭಾಗದಲ್ಲಿ ಶೇ.೨೦.೫ರಷ್ಟು ಮತ್ತು ನಗರ ಭಾಗದಲ್ಲಿ ಶೇ.೧೪.೭ರಷ್ಟು ವಾಸಿಸುತ್ತಿದ್ದರು. ಆದರೆ ೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜಿಲ್ಲೆಯಲ್ಲಿ ೨೧.೧ ರಷ್ಟು ಜನಸಂಖ್ಯೆ ಇದ್ದು ನಗರ ಭಾಗದಲ್ಲಿ ಶೇ.೨೩.೯ರಷ್ಟು ಮತ್ತು ೧೬.೫ ರಷ್ಟು ಪರಿಶಿಷ್ಟ ಜಾತಿ ಸಮುದಾಯ ವಾಸವಾಗಿದ್ದಾರೆ.

೧) **ಬಳ್ಳಾರಿ ಜಿಲ್ಲೆಯ ಭೂಮಿಯ ಬಳಕೆ:** ಬಳ್ಳಾರಿ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೮೧,೩೧೯೬ ಹೆಕ್ಟೇರ್ಇದೆ. ಅದರಲ್ಲಿ ೯೬,೦೭೭ ಹೆಕ್ಟೇರ್ ಪ್ರದೇಶ ಅರಣ್ಯ ಪ್ರದೇಶವಾಗಿದೆ. ೧೧೦೯೧ ಹೆಕ್ಟೇರ್‌ಗಳು ವ್ಯವಸಾಯೇತರ ಭೂಮಿ ಇದ್ದು, ೫೩,೪೯೭ ಹೆಕ್ಟೇರ್ ಬಂಜರು ಭೂಮಿಯಾಗಿದೆ. ಅದೇ ಪ್ರಕಾರ ೨೪,೮೩೯ ಸಾಗುವಳಿ ಯೋಗ್ಯವಾದ ಭೂಮಿ ಇದೆ. ೫೪.೭೨ ಹೆಕ್ಟೇರ್‌ಗಳನ್ನು ಖಾಯಂ ಗೋಮಾಳ ಇದ್ದು ೩೬೦೬ ಹೆಕ್ಟೇರ್‌ಗಳಷ್ಟು ಭೂಮಿ ರುಕ್ಸಾ ಮತ್ತು ತೋಪುಗಳನ್ನು ಒಳಗೊಂಡಿದೆ. ಅದೇ ಪ್ರಕಾರ ೧೨೭೮೨೩ ಹೆಕ್ಟೇರ್‌ಗಳಷ್ಟು ಬೀಳು ಭೂಮಿ ಇದ್ದು ಅದರಲ್ಲಿ ೧೯೭೮೩೭

ಹೆಕ್ಟೇರ್‌ಗಳಷ್ಟು ಚಾಲ್ತಿ ಭೂಮಿಯಿದ್ದು, ೧೯೮೬ ಹೆಕ್ಟೇರ್‌ಗಳಷ್ಟು ಇತರ ಭೂಮಿ ಒಳಗೊಂಡಿದೆ. ಜಿಲ್ಲೆಯಲ್ಲಿ ೪೯೬೭೩ ಹೆಕ್ಟೇರ್‌ಗಳಷ್ಟು ಬಿತ್ತನೆಯಾದ ಪ್ರದೇಶವಿದ್ದು, ಅದರಲ್ಲಿ ೩೯,೦೬೭೧ ಹೆಕ್ಟೇರ್‌ಗಳಷ್ಟು ನಿವ್ವಳ ಭೂಮಿಯಾಗಿದೆ. ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗುವ ಭೂಮಿ ೧೯೬೦೫೨ ಹೆಕ್ಟೇರ್‌ಗಳಷ್ಟು ಇದೆ.[೩೦]

೨) **ಜಿಲ್ಲೆಯ ನೀರಾವರಿ ಪ್ರದೇಶ:** ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ೪೫೬ ಕಿ.ಮೀ. ಕಾಲುವೆಗಳಿದ್ದು, ಅವುಗಳ ಮೂಲಕ ಒಟ್ಟು ನೀರಾವರಿ ಪ್ರದೇಶ ೧೧೩೦೭೪ ಹೆಕ್ಟೇರ್‌ಗಳಿದ್ದು, ಅದರಲ್ಲಿ ನಿವ್ವಳ ನೀರಾವರಿ ಪ್ರದೇಶ ೭೭೧೦೭ ಹೆಕ್ಟೇರ್‌ಗಳಿವೆ. ಜಿಲ್ಲೆಯಲ್ಲಿ ಒಟ್ಟು ೧.೪೯ ಕೆರೆಗಿಳಿದ್ದು ಅವುಗಳ ಮೂಲಕ ೨೭೨೮ ಹೆಕ್ಟೇರ್‌ಗಳಷ್ಟು ನೀರಾವರಿ ಸೌಲಭ್ಯ ಪಡೆದುಕೊಂಡಿದ್ದು ಅದರಲ್ಲಿ ೨೨೨೧ ಹೆಕ್ಟೇರ್‌ಗಳಷ್ಟು ನಿವ್ವಳ ನೀರಾವರಿಯಾದ ವಿಸ್ತೀರ್ಣವಿದೆ. ಜಿಲ್ಲೆಯಲ್ಲಿ ಒಟ್ಟು ೭೬೫೫ ಬಾವಿಗಳಿದ್ದು ಅವುಗಳಿಂದ ೪೦೪೮ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ವಿಸ್ತರಿಸಲಾಗಿದೆ. ಅದರಲ್ಲಿ ೩೦೩೭ ವಿಸ್ತೀರ್ಣ ನಿವ್ವಳ ನೀರಾವರಿಯಾಗಿದೆ. ಜಿಲ್ಲೆಯಲ್ಲಿ ೨೨೧೩೭ ಕೊಳವೆ ಬಾವಿಗಳಿದ್ದು, ಅವುಗಳ ಮೂಲಕ ೯೩೦೫೪ ಹೆಕ್ಟೇರ್ ಭೂಮಿಗೆ ನೀರಾವರಿಯನ್ನು ವಿಸ್ತರಿಸಲಾಗಿದೆ. ಅದರಲ್ಲಿ ನಿವ್ವಳ ನೀರಾವರಿಯಾದ ವಿಸ್ತೀರ್ಣ ೬೨೧೯೮ ಹೆಕ್ಟೇರ್‌ಗಳಷ್ಟು ಜಮೀನಿದೆ. ಜಿಲ್ಲೆಯಲ್ಲಿ ೩೫೯೭ ಏತ ನೀರಾವರಿಗಳಿದ್ದು ಅವುಗಳ ಮೂಲಕ ೩೮೩೧೩ ಹೆಕ್ಟೇರ್ ಭೂಮಿಗೆ ನೀರಾವರಿ ಒದಗಿಸಲಾಗಿದ್ದು, ಅದರಲ್ಲಿ ಒಟ್ಟು ನಿವ್ವಳ ನೀರಾವರಿಯಾದ ವಿಸ್ತೀರ್ಣ ೩೦೮೮೨. ಅದೇ ಪ್ರಕಾರ ಇತರೆ ಮೂಲಗಳಿಂದ ೯೬೫೫ ಹೆಕ್ಟೇರ್‌ಗಳಿಗೆ ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಲಾಗಿದ್ದು ಅದರಲ್ಲಿ ೮೫೮೯ ಹೆಕ್ಟೇರ್ ನಿವ್ವಳ ನೀರಾವರಿಯಾದ ವಿಸ್ತೀರ್ಣವಾಗಿದೆ.[೩೧]

೩) **ಬಳ್ಳಾರಿ ಜಿಲ್ಲೆಯ ಕೈಗಾರಿಕೆಗಳು:** ಬಳ್ಳಾರಿ ಜಿಲ್ಲೆಯಲ್ಲಿ ಎರಡು ಸಿದ್ದ ಉಡುಪುಗಳ ಕಾರ್ಖಾನೆಯಿದ್ದು ಅದರಲ್ಲಿ ೬೦ ಪುರುಷರು ಮತ್ತು ೨೩೦ ಮಹಿಳೆಯರು ಕೆಲಸ ನಿರ್ವಹಿಸುತ್ತಿದ್ದಾರೆ. ೧೧ ರಾಸಾಯನಿಕ ಕಾರ್ಖಾನೆಗಳಿದ್ದು, ಕಾರ್ಖಾನೆಯಲ್ಲಿ ೨೩೦ ಪುರುಷರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ಮಹಿಳೆ ಮಹಿಳೆಯರು ಕಾರ್ಯನಿರ್ವಹಿಸುತ್ತಿಲ್ಲ. ಜಿಲ್ಲೆಯಲ್ಲಿ ಒಂದು ಇಂಜಿನಿಯರಿಂಗ್ ಕಾರ್ಖಾನೆ ಇದ್ದು, ಇದರಲ್ಲಿ ೪೨ ಪುರುಷರು ಮತ್ತು ೮ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ೪೪೩

ಇತರೆ ಕಾರ್ಖಾನೆಗಳಿದ್ದು ಅದರಲ್ಲಿ ೫೧೧೮೮ ಪುರುಷರು ಮತ್ತು ೨೩೭೯ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ.[೨೨]

೪) **ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆ ಘಟಕಗಳು:** ೨೦೧೪-೧೫ರ ಚಾಲಿ ವರ್ಷದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ೮೯೦ ಸಣ್ಣ ಕೈಗಾರಿಕೆ ಘಟಕಗಳನ್ನು ಸ್ಥಾಪಿಸುವ ಮೂಲಕ ಒಟ್ಟು ೧೧೮೯೫ ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಜಿಲ್ಲೆಯಲ್ಲಿ ೨೨ ಆಹಾರ ಮತ್ತು ಮಾದ ವಸ್ತುಗಳ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದ್ದು, ಅದರಲ್ಲಿ ೨೩೭ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಹತ್ತು ಕಾಗದ ಮತ್ತು ಮುದ್ರಣ ಘಟಕಗಳಿದ್ದು ಅವುಗಳಲ್ಲಿ ೭೫ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಈಲ್ಲೆಯಲ್ಲಿ ೪ ರಬ್ಬರ್ ಮತ್ತು ಪ್ಲಾಸ್ಟಿಕ್ ಘಟಕಗಳಿದ್ದು ಅವುಗಳಲ್ಲಿ ೩೧ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ೨೯ ಟೆಕ್ಸ್‌ಟೈಲ್ಸ್ ಘಟಕಗಳಿದ್ದು ಅವುಗಳಲ್ಲಿ ೨೨೩ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಎರಡು ಮರದ ಘಟಕಗಳಿದ್ದು ೧೦ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ೫೫ ಇತರೆ ಸಣ್ಣ ಕೈಗಾರಿಕಾ ಘಟಕಗಳಿದ್ದು ಅವುಗಳಲ್ಲಿ ೧೩೫೯ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಇತರರೆ ಸೇವಾ ಘಟಕಗಳಿದ್ದು, ಅವುಗಳಲ್ಲಿ ೧೧೦೧ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದಾರೆ.[೩೩]

ಬಳ್ಳಾರಿ ಜಿಲ್ಲೆಯ ಶಿಕ್ಷಣ :

ಅ)ಅಕ್ಷರಸ್ಥರು: ೨೦೧೧ರ ಜನಗಣತಿ ವರದಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಅಕ್ಷರಸ್ಥರ ಸಂಖ್ಯೆ ೧೪,೨೧,೬೨೧ ಅವರಲ್ಲಿ ೮೧೩೪೪೦, ಪುರುಷರು ಮತ್ತು ೬೦,೮೧,೮೧ ಮಹಿಳೆಯರು ಅಕ್ಷರಸ್ಥರಾಗಿದ್ದಾರೆ. ನಗರ ಭಾಗದಲ್ಲಿ ಒಟ್ಟು ೬೧೨೩೯ ಅಕ್ಷರಸ್ಥರಿದ್ದು, ಅವರಲ್ಲಿ ೩೩೫೩೪೦ ಪುರುಷರು ೨೭೬೯೬೯, ಮಹಿಳೆಯರು ಅಕ್ಷರಸ್ಥರಿದ್ದಾರೆ. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಒಟ್ಟು ೮೯೩೧೨ ರಷ್ಟು ಅಕ್ಷರಸ್ಥರಿದ್ದು ಅವರಲ್ಲಿ ೪೭೮೧೦೦ ಪುರುಷರು ಮತ್ತು ೩೩೧೨೧೨ ಮಹಿಳೆಯರು ಅಕ್ಷರಸ್ಥರಿದ್ದಾರೆ.

ಆ). ಸಾಕ್ಷರತೆ ಪ್ರಮಾಣ:

೨೦೧೧ರ ಜನಗಣತಿ ವರದಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ.೬೮.೬೧ ರಷ್ಟು ದಾಖಲಾಗಿದೆ. ಪುರುಷರ ಸಾಕ್ಷರತೆ ೭೭.೩೮ ರಷ್ಟು ಇದ್ದು, ಮಹಿಳೆಯರ ಸಾಕ್ಷರತೆ ೫೯.೭೮ ರಷ್ಟಿದೆ. ನಗರ ಪ್ರದೇಶದಲ್ಲಿ ಶೇ.೭೬.೬೩ ರಷ್ಟು ಸಾಕ್ಷರತೆ ದಾಖಲಾಗಿದ್ದು, ಪುರುಷರ

ಸಾಕ್ಷರತೆ ೮೩.೫೮ ರಷ್ಟು ಮತ್ತು ಮಹಿಳೆಯರ ಸಾಕ್ಷರತೆ ೬೯.೬೨ ರಷ್ಟು ದಾಖಲಾಗಿದೆ. ಗ್ರಾಮೀಣ ಭಾಗದಲ್ಲಿ ಶೇ.೬೧.೮೧ ರಷ್ಟು ಸಾಕ್ಷರತೆ ದಾಖಲಾಗಿದ್ದು, ಪುರುಷರ ಸಾಕ್ಷರತೆ ೭೨.೪೨ ರಷ್ಟು ಮತ್ತು ಮಹಿಳೆಯರ ಸಾಕ್ಷರತೆ ಶೇ.೫೧.೦೨ ರಷ್ಟು ದಾಖಲಾಗಿದೆ.[೩೪]

ಬಳ್ಳಾರಿ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು: ೨೦೧೫-೧೬ರ ಚಾಲ್ತಿ ವರ್ಷದಲ್ಲಿ ಜಿಲ್ಲೆಯಲ್ಲಿ ಒಟ್ಟು ೨೧೦ ಆಸ್ಪತ್ರೆಗಳಿದ್ದು, ಅವುಗಳಲ್ಲಿ ೧೦೪ ಸರ್ಕಾರಿ ಆಸ್ಪತ್ರೆಗಳು ಮತ್ತು ೧೦೬ ಖಾಸಗಿ ಆಸ್ಪತ್ರೆಗಳಿವೆ. ಜಿಲ್ಲೆಯಲ್ಲಿ ೧೩೨, ಸರ್ಕಾರಿ ವೈದ್ಯರಿದ್ದು, ೩೨೨೨ ಹಾಸಿಗೆಗಳ ಸೌಲಭ್ಯವಿದೆ. ಜಿಲ್ಲೆಯಲ್ಲಿ ಒಟ್ಟು ೧೦೮೮ ಔಷಧಿ ಅಂಗಡಿಗಳಿದ್ದು ನಾಲ್ಕು ರಕ್ತ ನಿಧಿಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೯೩ ಆಲೋಪತಿ ಆಸ್ಪತ್ರೆಗಳಿದ್ದು, ಅವುಗಳಲ್ಲಿ ೨೯೯೩ ಹಾಸಿಗೆಗಳ ಸೌಲಭ್ಯವಿದೆ. ೧೧ ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆಗಳಿದ್ದು ಅವುಗಳಲ್ಲಿ ೨೨೯ ಹಾಸಿಗೆ ಸೌಲಭ್ಯಗಳಿವೆ. ಜಿಲ್ಲೆಯ ಒಟ್ಟು ೬೮ ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಅವುಗಳಲ್ಲಿ ೪೩೮ ಹಾಸಿಗೆಗಳ ಸೌಲಭ್ಯವಿದೆ. ೧೧ ಸಮುದಾಯ ಆರೋಗ್ಯ ಕೇಂದ್ರಗಳಿದ್ದು ಅವುಗಳಲ್ಲಿ ೩೫೦ ಹಾಸಿಗೆಗಳ ಸೌಲಭ್ಯ ಲಭ್ಯವಿದೆ.[೩೫]

ಬಳ್ಳಾರಿ ಜಿಲ್ಲೆ ಸಮಾಜ ಕಲ್ಯಾಣ ಸೇವೆಗಳು:

ಬಳ್ಳಾರಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಮೆಟ್ರಿಕ್ ಪೂರ್ವ ೫೪ ಹಾಸ್ಟೆಲ್‌ಗಳಿದ್ದು, ಅವುಗಳಲ್ಲಿ ೫೯೨೯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅವುಗಳಲ್ಲಿ ೪೦ ಬಾಲಕರ ಹಾಸ್ಟೆಲ್‌ಗಳಿದ್ದು ೪೫೩೩ ಬಾಲಕರಿದ್ದಾರೆ. ೧೪ ಬಾಲಕಿಯರ ಹಾಸ್ಟೆಲ್‌ಗಳಿದ್ದು, ೧೩೯೪ ಬಾಲಕಿಯರಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ೨೯ ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿದ್ದು, ಅವುಗಳಲ್ಲಿ ೪೨೦೭ ವಿದ್ಯಾರ್ಥಿಗಳಿದ್ದಾರೆ. ಅವುಗಳಲ್ಲಿ ೧೯ ಬಾಲಕರ ಹಾಸ್ಟೆಲ್‌ಗಳಿದ್ದು, ೩೧೬೭ ಬಾಲಕರಿದ್ದು, ೧೦ ಬಾಲಕಿಯರ ಸರ್ಕಾರಿ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿದ್ದು, ಅವುಗಳಲ್ಲಿ ೧೦೪೦ ಬಾಲಕಿಯರಿದ್ದಾರೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಅನುದಾನಿತ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಿದ್ದು, ಒಟ್ಟು ೯೫ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಈ ಎರಡು ಹಾಸ್ಟೆಲ್‌ಗಳು ಬಾಲಕರದ್ದಾಗಿದ್ದು, ಬಾಲಕಿಯರಿಗೆ ಯಾವುದೇ ಹಾಸ್ಟೆಲ್ ಇರುವುದಿಲ್ಲ.[೩೬]

೫) ಜಿಲ್ಲೆಯ ಉದ್ಯೋಗ ಮತ್ತು ವಸತಿಯೋಜನೆ :

೨೦೧೫-೧೬ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಒಟ್ಟು ೧೫೨೬೦೨೫ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಅದರಲ್ಲಿ ಪುರುಷರಿಗೆ ೮೦೭೩೨೭ ಮಾನವ ದಿನಗಳನ್ನು ಮತ್ತು ಮಹಿಳೆಯರಿಗೆ ೭೧೮೯೦೧ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ.

೨೦೧೫-೧೬ರ ಸಾಲಿನಲ್ಲಿ ಆಶ್ರಯ ವಸತಿ ಯೋಜನೆಯಡಿಯಲ್ಲಿ ೪೫೬೧ ಮನೆಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ೧೧೯೩ ಮನೆಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ೧೧೯೩ ಮನೆಗಳನ್ನು ಪರಿಶಿಷ್ಟ ಜಾತಿಗಳಿಗೆ, ೯೪೪ ಮನೆಗಳನ್ನು ಪರಿಶಿಷ್ಟ ಪಂಗಡಗಳಿಗೆ ಮತ್ತು ೨೪೨೪ ಮನೆಗಳನ್ನು ಇತರೆ ಸಮುದಾಯದವರಿಗೆ ನಿರ್ಮಿಸಿಕೊಡಲಾಗಿದೆ. ಪ್ರಸ್ತುತ ವರ್ಷದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಗ್ರಾಮೀಣ ವಸತಿ ಯೋಜನೆ ಅಡಿಯಲ್ಲಿ ಒಟಟು ೧೦೭ ಮನೆಗಳನ್ನು ನಿರ್ಮಾಣ ಮಾಡಲಾಗಿದ್ದು ಅವುಗಳಲ್ಲಿ ೫೪ ಮನೆಗಳನ್ನು ಪರಿಶಿಷ್ಟ ಜಾತಿಗೆ ಮತ್ತು ೫೩ ಮನೆಗಳನ್ನು ಪರಿಶಿಷ್ಟ ಪಂಗಡಗಳಿಗೆ ನಿರ್ಮಾಣ ಮಾಡಿಕೊಡಲಾಗಿದೆ. ಪ್ರಸ್ತುತ ವರ್ಷದಲ್ಲಿ ಇಂದಿರಾ ಅವಾಸ್ ಯೋಜನೆ ಅಡಿಯಲ್ಲಿ ೫೬೬೫ ಮನೆಗಳನ್ನು ನಿರ್ಮಾಣ ಮಾಡಲಾಗಿದ್ದು, ಅವುಗಳಲ್ಲಿ ೨೦೨೧ ಮನೆಗಳನ್ನು ಪರಿಶಿಷ್ಟಡ ಜಾತಿಗೆ ೨೬೧೨ ಮನೆಗಳನ್ನು ಪರಿಶಿಷ್ಟ ಪಂಗಡಕ್ಕೆ ಮತ್ತು ೧೦೩೪ ಮನೆಗಳನ್ನು ಇತರೆ ಸಮುದಾಯದ ಜನರಿಗೆ ನಿರ್ಮಾಣ ಮಾಡಿ ಕೊಡಲಾಗಿದೆ.[೩೭]

೬) ಬಳ್ಳಾರಿ ಜಿಲ್ಲೆಯ ಸಾಮಾಜಿಕ ಭದ್ರತೆಯ ಯೋಜನೆಗಳು:

ಬಳ್ಳಾರಿ ಜಿಲ್ಲೆಯ ಒಟ್ಟು ೧೮೪೪೩೦, ಫಲಾನುಭವಿಗಳು ಸರ್ಕಾರ ಜಾರಿಗೊಳಿಸಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಫಲಾನುಭವಿಗಳಿದ್ದಾರೆ. ಜಿಲ್ಲೆಯ ಒಟ್ಟು ೨೪೫೫೭ ಜನ ವೃದ್ಧಾಪ್ಯ ವೇತನವನ್ನು ಪಡೆಯುತ್ತಿದ್ದಾರೆ. ೮೩೪೮ ಜನ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಪಡೆಯುತ್ತಿದ್ದಾರೆ. ೬೯೫೮, ಮಹಿಳೆಯರು ವಿಧವಾ ವೇತನ ಪಡೆಯುತ್ತಿದ್ದಾರೆ. ೧೭೬೪೮ ಜನ ಅಂಗವಿಕಲರ ವೇತನ ಪಡೆಯುತ್ತಿದ್ದಾರೆ. ೧೩೩೭೩ ಜನ ಅಂಗವಿಕಲ ವೇತನ

(ಶೇ.೭೫%) ರಷ್ಟು ಅಂಗವೈಕಲ್ಯ ಮತ್ತು ೫೭.೫೪೬ ಜನ ಸಂಧ್ಯಾ ಸುರಕ್ಷಾ ವೇತನ ಪಡೆಯುತ್ತಿದ್ದಾರೆ.

ಬಳ್ಳಾರಿ ತಾಲ್ಲೂಕು:

ಬಳ್ಳಾರಿ ತಾಲ್ಲೂಕು ಹೊಸಪೇಟೆ, ಚಿತ್ರದುರ್ಗ, ಸಿರುಗುಪ್ಪ ತಾಲ್ಲೂಕುಗಳನ್ನು ಹಾಗೂ ಆಂಧ್ರದ ಗಡಿಯನ್ನು ಹೊಂದಿದೆ. ಆಂದ್ರದ ಗಡಿಗೆ ಹೊಂದಿಕೊಂಡೇ ಇರುವ ಈ ತಾಲ್ಲೂಕಿನಲ್ಲಿ ತುಂಗಭದ್ರಾ ನದಿಯ ಕೆಳಹಂತದ ಕಾಲುವೆ ಹಾಗೂ ಮೇಲು ಹಂತದ ಕಾಲುವೆಯಿಂದಾಗಿ ಸ್ವಲ್ಪಮಟ್ಟಿಗೆ ನೀರಾವರಿ ಕಂಡು ಬರುತ್ತದೆ. ಭತ್ತ, ಮೆಕ್ಕೆ ಜೋಳ, ಜೋಳ, ಹತ್ತಿ ಮುಂತಾಗಿ ಬೆಳೆಯಲಾಗುತ್ತದೆ. ಈ ತಾಲ್ಲೂಕಿನಲ್ಲಿ ಪ್ರಮುಖ ಬೆಳೆಗಳೆಂದರೆ, ಜೋಳ ಹತ್ತಿ, ಮೆಣಸಿನಕಾಯಿ, ಮೆಕ್ಕೆಜೋಳ ಮುಂತಾದವುಗಳಾಗಿವೆ. ಭೌಗೋಳಿಕವಾಗಿ ೧೬೮೮.೪೯ ಚ.ಕಿ.ಮೀಟರುಗಳಷ್ಟು ವಿಸ್ತಾರವಾಗಿದೆ. ಜಿಲ್ಲೆಯಲ್ಲಿಯೇ ವಿಸ್ತಾರವಾದ ತಾಲ್ಲೂಕಾಗಿರುವ ಇದು ಶೇ.೨.೨೭ರಷ್ಟು ವಿಸ್ತೀರ್ಣತೆಯನ್ನು ಪಡೆದಿದೆ. ಪ್ರಾಗೈತಿಹಾಸಿಕ ಕುರುಹುಗಳನ್ನು ಅಡಗಿಸಿಟ್ಟುಕೊಂಡಿರುವ ಗುಡ್ಡಗಳು ಈ ತಾಲ್ಲೂಕಿನಲ್ಲಿ ಕಂಡು ಬರುತ್ತವೆ. ಕೃಷಿಯನ್ನು ಆಧರಿಸಿದ ಪ್ರಮುಖ ತಾಲ್ಲೂಕು ಇದಾಗಿದೆ. ಈ ತಾಲ್ಲೂಕಿನಲ್ಲಿ ದಲಿತ ಕುಟುಂಬಗಳು ನೆಲೆ ನಿಂತಿವೆ. ಆಂಧ್ರದ ಗಡಿಯಾಗಿರುವುದರಿಂದ ಆಂದ್ರದಿಂದ ವಲಸೆ ಬಂದ ಕೃಷಿಕರು ಅಲ್ಲಲ್ಲಿ ಚಿಕ್ಕ ಚಿಕ್ಕ ಕ್ಯಾಂಪ್‌ಗಳನ್ನು ನಿರ್ಮಿಸಿಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡು ಬರುತ್ತದೆ. ಈ ತಾಲ್ಲೂಕಿನಲ್ಲಿ ೪೦ ಗ್ರಾಮ ಪಂಚಾಯಿತಿಗಳಿದ್ದು, ೯೯ ವಸತಿ ಗ್ರಾಮಗಳು ಇವೆ. ವಸತಿ ರಹಿತ ಗ್ರಾಮಗಳು ನಾಲ್ಕು ಮಾತ್ರ ಇವೆ. ಇದರಲ್ಲಿ ಒಂದು ಪಟ್ಟಣವು ಸೇರ್ಪಡೆಗೊಂಡಿದೆ. ೨೦೦೧ರ ಜನಗಣತಿ ಪ್ರಕಾರ ಈ ತಾಲ್ಲೂಕಿನ ಜನಸಂಖ್ಯೆ ಒಟ್ಟು ೬,೨೫,೪೯೪ ರಷ್ಟಿದೆ. ಇದರಲ್ಲಿ ಪುರುಷರು ೩,೧೯,೦೦೮ ಹಾಗೂ ಮಹಿಳೆಯರು ೩,೦೬, ೪೮೬ ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ೪೫,೫೧೧ ರಷ್ಟಿದೆ. ಪರಿಶಿಷ್ಟ ಜಾತಿಯವರಲ್ಲಿ ಪುರುಷರು ೫೧,೧೪೧ ಹಾಗೂ ಮಹಿಳೆಯರು ೪೯,೯೧೦ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯವರ ಪ್ರಮಾಣವು ಶೇ.೧೬,೧೫ ರಷ್ಟಿದೆ. ಬಳ್ಳಾರಿ ತಾಲ್ಲೂಕಿನಲ್ಲಿ ಅಧ್ಯಯನಕ್ಕಾಗಿ ೪ ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ಅವುಗಳು ಕ್ರಮವಾಗಿ ಶ್ರೀಧರಗಡ್ಡೆ, ಬೆಳಗಲ್ಲು ತಾಂಡ, ಸಂಗನಕಲ್ಲು, ಹಲಕುಂದಿ ಗ್ರಾಮಗಳಾಗಿವೆ.

ಸಿರುಗುಪ್ಪ ತಾಲ್ಲೂಕು

ಸಿರುಗುಪ್ಪ ತಾಲ್ಲೂಕು ಹೊಸಪೇಟೆ, ಬಳ್ಳಾರಿ, ಸಿಂಧನೂರು ತಾಲ್ಲೂಕುಗಳನ್ನು ಹಾಗೂ ಆಂಧ್ರದ ಗಡಿಯನ್ನು ಹೊಂದಿದೆ. ಆಂಧ್ರದ ಗಡಿಗೆ ಹೊಂದಿಕೊಂಡೇ ಇರುವ ಈ ತಾಲ್ಲೂಕಿನಲ್ಲಿ ತುಂಗಭದ್ರಾ ನದಿಯಿಂದಾಗಿ ನೀರಾವರಿ ಕಂಡು ಬರುತ್ತದೆ. ಭತ್ತ, ಕಬ್ಬು, ಮೆಕ್ಕೆಜೋಳ, ಜೋಲ, ಹತ್ತಿ, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ತಾಲ್ಲೂಕಿನ ಪ್ರಮುಖ ಬೆಳೆಗಳೆಂದರೆ ಕಬ್ಬ ಮತ್ತು ಭತ್ತವಾಗಿವೆ. ಭೌಗೋಳಿಕವಾಗಿ ಬಳ್ಳಾರಿ ಜಿಲ್ಲೆಯಲ್ಲಿಯೇ ವಿಸ್ತಾರದಲ್ಲಿ ಈ ತಾಲ್ಲೂಕು ನಾಲ್ಕನೇ ಸ್ಥಾನವನ್ನು ಹೊಂದಿದೆ. ಇಲ್ಲಿನ ಭೌಗೋಳಿಕ ಪ್ರದೇಶವು ೧೦೩೬.೧೭ ರಷ್ಟು ಇದೆ. ೨೬ ಗ್ರಾಮ ಪಂಚಾಯಿತಿಗಳು ಇವೆ. ೮೩ ವಸತಿ ಗ್ರಾಮಗಳಿದ್ದು, ವಸತಿ ರಹಿತ ಗ್ರಾಮ ಒಂದು ಮಾತ್ರ ಇದೆ. ಎರಡು ಪಟ್ಟಣಗಳಿವೆ. ಕೃಷಿಯನ್ನು ಆದರಿಸಿದ ಪ್ರಮುಖ ತಾಲ್ಲೂಕು ಇದಾಗಿದೆ. ಈ ತಾಲ್ಲೂಕು ಆರ್ಥಿಕವಾಗಿ ಮುಂದಿದ್ದರೂ ಜಿಲ್ಲೆಯಲ್ಲಿಯೇ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕೆಂದು ಗುರುತಿಸಲಾಗಿದೆ. ಒಟ್ಟು ೮೪ ಗ್ರಾಮಗಳು ಈ ತಾಲ್ಲೂಕಿನಲ್ಲಿವೆ. ಒಟ್ಟಾರೆಯಾಫಿ ೨೨೭ ರಷ್ಟು ಜನಸಾಂದ್ರತೆಯನ್ನು ಈ ತಾಲ್ಲೂಕು ಹೊಂದಿದೆ. ೨೦೦೧ರ ಜನಗಣತಿ ಪ್ರಕಾರ ಈ ತಾಲ್ಲೂಕಿನ ಜನಸಂಖ್ಯೆ ಒಟ್ಟು ೨.೩೫,೩೪೪ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ೪೫.೫೧೧ ರಷ್ಟಿದೆ. ಈ ತಾಲ್ಲೂಕಿನ ಸಾಕ್ಷರತೆಯ ಪ್ರಮಾಣ ಕೇವಲ ಶೇ.೪೩.೬ ರಷ್ಟಿದೆ. ಇದರಲ್ಲಿ ಪುರುಷರು ಶೇ.೫೬.೯ ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಶೇ. ೩೦.೩ ರಷ್ಟಿದೆ. ಈ ಜಿಲ್ಲೆಯ ಇತರೆ ತಾಲ್ಲೂಕುಗಳಿಗೆ ಹೋಲಿಸಿದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಈ ತಾಲ್ಲೂಕು ತುಂಬಾ ಹಿಂದುಳಿದಿರುವುದು ಕಂಡು ಬರುತ್ತದೆ. ಸಿರುಗುಪ್ಪ ತಾಲ್ಲೂಕಿನ ಕೆಂಚನಗುಡ್ಡ, ಹಚ್ಚೊಳ್ಳಿ ಮತ್ತು ಸಿರಿಗೇರಿ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕೂಡ್ಲಿಗಿ ತಾಲ್ಲೂಕು

ಬಳ್ಳಾರಿ ಜಿಲ್ಲೆಯಲ್ಲಿಯೇ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲ್ಲೂಕೆಂದು ಗುರುತಿಸಲ್ಪಟ್ಟ ತಾಲ್ಲೂಕು ಕೂಡ್ಲಿಗಿಯಾಗಿದೆ. ಜಿಲ್ಲಾ ಕೇಂದ್ರದಿಂದ ಸುಮಾರು ೧೦೦ ಕಿ.ಮೀ. ಗಳಷ್ಟು ಅಂತರದಲ್ಲಿ ತಾಲ್ಲೂಕು ಕೇಂದ್ರವಿದೆ. ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯಿಂದ ಸುತ್ತುವರೆದಿರುವ ಈ ತಾಲ್ಲೂಕು ಸಾಂಸ್ಕೃತಿಕವಾಗಿ ಸಮೃದ್ಧವಾಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದೆ. ಬಳ್ಳಾರಿ ತಾಲ್ಲೂಕಿನ ನಂತರ ಅತೀ ವಿಸ್ತಾರವಾದ ಭೂ ವಿಸ್ತೀರ್ಣವನ್ನು ಹೊಂದಿರುವ ತಾಲ್ಲೂಕು

ಇದಾಗಿದೆ. ಇದರ ಒಟ್ಟು ವಿಸ್ತೀರ್ಣ ೧.೬೧೮.೮೭ ಚ.ಕಿ.ಮೀಟರ್‌ಗಳಷ್ಟಿದೆ. ಹಾಗೇ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಗ್ರಾಮಗಳನ್ನು ಹೊಂದಿರುವ ಈ ತಾಲ್ಲೂಕಿನಲ್ಲಿ ಒಟ್ಟು ೯೧ ಗ್ರಾಮಗಳಿವೆ. ತಾಲ್ಲೂಕಿನಲ್ಲಿ ಕೂಡ್ಲಿಗಿಯ ನಂತರ ಕೊಟ್ಟೂರು ಪಟ್ಟಣ ಪ್ರದೇಶವಾಗಿದೆ. ಅವೆರಡರ ಹೊರತಾಗಿ ಇನ್ನುಳಿದವುಗಳೆಲ್ಲಾ ಹಳ್ಳಿಗಳೇ ಆಗಿವೆ. ಇಲ್ಲಿಯ ಬಹುತೇಕ ಗ್ರಾಮಗಳಿವೆ ಇಂದಿಗೂ ಸಮರ್ಪಕವಾದ ಬಸ್ಸಿನ ಸೌಲಭ್ಯ ಅಥವಾ ಸಾರಿಗೆ ಸಂಪರ್ಕವಿಲ್ಲವಾಗಿದೆ. ಮಳೆಯಾಶ್ರಿತ ಚಿಕ್ಕಮಟ್ಟ ಕೆರೆಗಳ ಹೊರತಾಗಿ ಇಲ್ಲಿಯ ಜನರಿಗೆ ಸಮರ್ಪಕವಾದ ನೀರಾವರಿ ಸೌಲಭ್ಯವಿಲ್ಲ. ಇಂದಿಗೂ ಮಳೆಯಾಶ್ರಿತ ಒಣಬೇಸಾಯ ಕ್ರಮವನ್ನೇ ರೈತರು ಅನುಸರಿಸುತ್ತಿರುವುದನ್ನು ತಾಲ್ಲೂಕಿನಾದ್ಯಂತ ಕಾಣುತ್ತೇವೆ. ಈ ತಾಲೂಕಿನ ಜನಸಾಂದ್ರತೆಯು ೧೬.೮ ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ ೨,೭೨, ೧೮೩ ಇದ್ದು, ಇದರಲ್ಲಿ ಪುರುಷರು ೧,೩೯,೨೦೨ ಹಾಗೂ ಮಹಿಳೆಯರು ೧,೩೨,೯೮೧ ರಷ್ಟಿದ್ದಾರೆ. ಈ ತಾಲ್ಲೂಕಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೫೨,೨೧೨ ಇದೆ. ತಾಲ್ಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇ. ೧೯.೨ ರಷ್ಟಿದೆ. ಪ್ರಸ್ತುತ ಕೂಡ್ಲಿಗಿಯು ವಿಧಾನಸಭಾ ಸದಸ್ಯರ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದೆ. ಜಿಲ್ಲೆಯ ಸಾಕ್ಷರರಿಗೆ ಹೋಲಿಸಿದರೆ ಈ ತಾಲ್ಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ.೬೦ ರಷ್ಟಿದೆ. ಇದರಲ್ಲಿ ಪುರುಷರು ಶೇ. ೬೦ ರಷ್ಟು ಸಾಕ್ಷರರಿದ್ದರೆ ಮಹಿಳೆಯರು ಶೇ. ೪೦ ರಷ್ಟು ಸಾಕ್ಷರರಾಗಿದ್ದಾರೆ. ಈ ಜಿಲ್ಲೆಯ ಇತರ ತಾಲ್ಲೂಕುಗಳಿಗೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣವು ಹೊಸಪೇಟೆಯ ನಂತರದ ಸ್ಥಾನ ಕೂಡ್ಲಿಗಿಗೆ ಸಲ್ಲುತ್ತದೆ. ಈ ತಾಲ್ಲೂಕಿನಲ್ಲಿರುವ ಮಾಕನಡಕು, ಶಿವಪುರ, ಹಾಳ್ಯಾ, ಗುಡೇಕೋಟೆ ಗ್ರಾಮ ಪಂಚಾಯತಿಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ.

ಕೊನೆಟಿಪ್ಪಣಿ:

೧. ವಸಂತ ದೇಸಾಯಿ, ಪಂಚಾಯತ್ ರಾಜ್: ಪವರ್ ಟು ದ ಪೀಪಲ್, ಬಾಂಬೆ, ಹಿಮಾಲಯ ಪಬ್ಲಿಕೇಷನ್ಸ್, ೧೯೯೦, ಪು.೪

೨. ಪೀಟರ್ ರೊನಾಲ್ಡ್ ಡಿಸೋಜಾ, "ಡಿಸೆಂಟ್ರಲೈಜೇಷನ್ ಆಂಡ್ ಲೋಕಲ್ ಗವರ್ನಮೆಂಟ್: ದ ಸೆಕೆಂಡ್ ವಿಂಡ್ ಆಫ್ ಡೆಮಾಕ್ರಸಿ ಇನ್ ಇಂಡಿಯಾ", ಜೋಯಾಹಸನ್, ಈ.ಶ್ರೀಧರನ್ ಆಂಡ್ ಸುದರ್ಶನ್, (ಸಂ), ಇಂಡಿಯಾಸ್ ಲಿವಿಂಗ್ ಕಾನ್ಸಿಟಿಟ್ಯೂಷನ್, ಐಡಿಯಾಸ್, ಪ್ರಾಕ್ಟೀಸಸ್, ಕಾಂಟ್ರವರ್ಸಿಸ್,ಡೆಲ್ಲಿ, ಪರ್ಮನೆಂಟ್ ಬ್ಲಾಕ್, ೨೦೦೨, ಪು.೩೭೨

೩. ಎಂ.ವೆಂಕಟರಂಗಯ್ಯ ಮತ್ತು ಎಂ.ಪಟ್ಟಾಭಿರಾಮ್, ಲೋಕಲ್ ಗವರ್ನಮೆಂಟ್ ಇನ್ ಇಂಡಿಯಾ, ಅಲೈಡ್ ಪಬ್ಲಿಷರ್ಸ್, ಬಾಂಬೆ, ೧೯೬೯, ಪು.೫೬

೪. ರಾಬ್ಸನ್ ಡಬ್ಲ್ಯೂ.ಎ., ಎನ್ಸೈಕ್ಲೋಪಿಡಿಯಾ ಆಫ್ ಸೋಷಿಯಲ್ ಸೈನ್ಸಸ್, ಸಂಪುಟ.ಸಂ.೯–೧೦, ಪು.೫೭೪

೫. ಹೆರಾಲ್ಡ್ ಜೆ.ಲಾಸ್ಕಿ, ಗ್ರಾಮರ್ ಆಫ್ ಪೊಲಿಟಿಕ್ಸ್, ಡೆಲ್ಲಿ, ೧೯೭೯, ಎಸ್.ಚಾಂದ್ ಆಂಡ್ ಕಂಪನಿ, ಪು.೪೧೧

೬. ಮಹಾತ್ಮಾ ಗಾಂಧಿ, ಹರಿಜನ್, ಜನವರಿ ೧೮, ೧೯೪೮, ಪು.೫೧೯

೭. ಇಕ್ಬಾಲ್ ನರೇನ್, "ಡೆಮಾಕ್ರಟಿಕ್ ಡಿಸೆಂಟ್ರಲೈಜೇಷನ್, ದ ಐಡಿಯಾ, ದ ಇಮೇಜ್, ಆಂಡ್ ದ ರಿಯಾಲಿಟಿ," ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಅಡ್ಮಿಮಿನಿಸ್ಟ್ರೇಷನ್, ಸಂಪುಟ.೯, ಸಂ.೧, ಜನವರಿ–ಮಾರ್ಚ್, ೧೯೬೩ ಪು.೯–೩೪

೮. ಕೆ.ಬಿ.ಶ್ರೀವತ್ಸ,"ಪಂಚಾಯತ್ ರಾಜ್ ಇನ್ ಇಂಡಿಯಾ: ಟಿಲ್ ಬ್ರಿಟೀಷ್ ಪಿರಿಯೆಡ್", ಪಂಚಾಯತ್ ಸಂದೇಶ, ಸಂಪುಟ ಸಂ.೨೪, ಸಂ.೧೧, ಫೆಬ್ರವರಿ, ೧೯೮೫ ಪು.೫

೯. ಎ.ಎಸ್.ಆಲ್ಟೇಕರ್, ಸ್ಟೇಟ್ ಆಂಡ್ ಗವರ್ನಮೆಂಟ್ ಇನ್ ಏನ್ಸೆಂಟ್ ಇಂಡಿಯಾ, ಮೋತಿಲಾಲ್ ಬನಾರಸಿ ದಾಸ್ ಪಬ್ಲಿಷರ್ಸ್, ಡೆಲ್ಲಿ, ೧೯೭೭, ಪು.೨೨೫

೧೦. ಎ.ಎಸ್.ಆಲ್ವೇಕರ್, ಸ್ಟೇಟ್ ಆಂಡ್ ಗವರ್ನಮೆಂಟ್ ಇನ್ ಏನ್ಸಿಯಂಟ್ ಇಂಡಿಯಾ, ಮೋತಿಲಾಲ್ ಬನಾರಸಿ ದಾಸ್ ಪಬ್ಲಿಷರ್ಸ್, ಡೆಲ್ಲಿ, ೧೯೭೭, ಪು.೨೨೫

೧೧. ಎ.ಎಸ್.ಆಲ್ಟೇಕರ್, ಸ್ಟೇಟ್ ಆಂಡ್ ಗವರ್ನಮೆಂಟ್ ಇನ್ ಏನ್ಸೆಂಟ್ ಇಂಡಿಯಾ, ಮೋತಿಲಾಲ್ ಬನಾರಸಿ ದಾಸ್ ಪಬ್ಲಿಷರ್ಸ್, ಡೆಲ್ಲಿ, ೧೯೭೭, ಪು.೨೨೫

೧೨. ಕೌಟಿಲ್ಯನ ಅರ್ಥಶಾಸ್ತ್ರ, ಕನ್ನಡಕ್ಕೆ ಆರ್.ಶ್ಯಾಮಾಶಾಸ್ತ್ರಿ, ಪುಸ್ತಕ ಸಂ.೩, ೧೨ನೇ ಅಧ್ಯಾಯ, ಪು.೧೬೮

೧೩. ಅಲ್ಟೇಕೇರ್, ಪು.೨೩೦

೧೪. ಅಲ್ಟೇಕರ್ ಪೂರ್ವೋಕ್ತ ಪು.ಸಂ.೨೩೧

೧೫. ಕೆ.ಬಿ.ಶ್ರೀವಾಸ್ತವ, "ಪಂಚಾಯತ್‌ರಾಜ್ ಇನ್ ಇಂಡಿಯಾ: ಟಿಲ್ ಬ್ರಿಟಿಷ್ ಪಿರಿಯಡ್", ಪಂಚಾಯತ್ ಸಂದೇಶ್, ಸಂಪುಟ ಸಂಖ್ಯೆ ೧೫೧೪, ಸಂಖ್ಯೆ ೧೧, ಫೆಬ್ರವರಿ, ೧೯೮೫ ಪು. ಸಂ.೭

೧೬. ಶ್ರೀವಾಸ್ತವ್ ಕೆ.ಬಿ. ಪೂರ್ವೋಕ್ತ:

೧೭. ಮೇಯೋ ರೆಜ್ಯುಲೂಷನ್ ಸಂಖ್ಯೆ ೩೩೩೪,

೧೮. ಭಾಟ್ನಾಗಾರ್: ರೂರಲ್ ಲೋಕಲ್ ಗವರ್ನಮೆಂಟ್ ಇನ್ ಇಂಡಿಯಾ, ನ್ಯೂಡೆಲ್ಲಿ, ಲೈಟ್ ಆಂಡ್ ಲೈಫ್ ಪಬ್ಲಿಷರ್ಸ್, ೧೯೭೮, ಪು.೨೪

೧೯. ಶ್ರೀವಾಸ್ತವ್ ಕೆ.ಬಿ. ಪುಟ.೧೦

೨೦. ಬಲವಂತರಾಯ್ ಮೆಹತಾ ಕಮಿಟಿ ರಿಪೋರ್ಟ್ ಸೆಕ್ಷನ್ ೨, ಪ್ಯಾರ ೨, ನ್ಯೂಡೆಲ್ಲಿ, ಪ್ಲಾನಿಂಗ್ ಕಮಿಷನ್, ಗವರ್ನಮೆಂಟ್ ಆಫ್ ಇಂಡಿಯಾ, ೧೯೫೮

೨೧ ರಿಪೋರ್ಟ್ ಆನ್ ದ ಕರ್ನಾಟಕ ಪಂಚಾಯತ್ ರಾಜ್ ಆ್ಯಕ್ಟ್ ಅಮೆಂಡ್‌ಮೆಂಟ್ ಕಮಿಟಿ, ಪು.ಸಂ.೧೨–೧೩

೨೨. ರಿಪೋರ್ಟ್ ಆನ್ ದ ಕರ್ನಾಟಕ ಪಂಚಾಯತ್ ರಾಜ್ ಆ್ಯಕ್ಟ್ ಅಮೆಂಡ್‌ಮೆಂಟ್ ಕಮಿಟಿ, ಪು.ಸಂ.೧೪

೨೩. ರಿಪೋರ್ಟ್ ಆನ್ ದ ಕರ್ನಾಟಕ ಪಂಚಾಯತ್ ರಾಜ್ ಆ್ಯಕ್ಟ್ ಅಮೆಂಡ್‌ಮೆಂಟ್ ಕಮಿಟಿ, ಪು.ಸಂ.೧೪

೨೪. ದ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯಿತಿ ಆಂಡ್ ನ್ಯಾಯ ಪಂಚಾಯತ್ ಆ್ಯಕ್ಟ್, ೧೯೮೩

೨೫. ರಿಪೋರ್ಟ್ ಆನ್ ದ ಕರ್ನಾಟಕ ಪೂರ್ವೋಕ್ತ, ಪು.೧೬

೨೬. ಜಿಲ್ಲಾ ಸಾಂಖ್ಯಿಕ, ಅಧಿಕಾರಿಗಳು, ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳ ನೋಟ, ೨೦೧೫-೧೬, ಬಳ್ಳಾರಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಚೇರಿ ೨೦೧೬, ಪು. ಸಂ.೧-೨

೨೭. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು. ೧೧, ೧೨

೨೮. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು.೧೩

೨೯. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು. ೧೫

೩೦. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು. ೨೭

೩೧. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು.೨೮-೨೯

೩೨. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು.೫೯-೬೦

೩೩. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು.೬೩-೬೬

೩೪. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು. ೮೧-೮೨

೩೫. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು. ೯೯-೧೦೧

೩೬ ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು.೧೧೧

೩೭. ಬಳ್ಳಾರಿ ಅಂಕಿ ಸಂಖ್ಯೆಗಳ ನೋಟ, ಪು. ೧೪೬-೧೪೯

ಅಧ್ಯಾಯ –೨
ದಲಿತರ ರಾಜಕೀಯ ಸಹಭಾಗಿತ್ವ ಪರಿಕಲ್ಪನೆ

೨.೧. ದಲಿತರು: ಒಂದು ಪರಿಕಲ್ಪನೆ
೨.೨. ದಲಿತರ ವ್ಯಾಖ್ಯಾನಗಳು
೨.೩. ದಲಿತರ ರಾಜಕೀಯ ಸಹಭಾಗಿತ್ವ
೨.೪. ರಾಜಕೀಯ ಸಹಭಾಗಿತ್ವದ ಸೂಚಿಗಳು
೨.೫. ಭಾರತದಲ್ಲಿ ದಲಿತರ ರಾಜಕೀಯ ಸಹಭಾಗಿತ್ವ
೨.೬. ಪಂಚಾಯತ್ ಸದಸ್ಯರ ಅರಿವು

ಅಧ್ಯಾಯ –೨

ದಲಿತರ ರಾಜಕೀಯ ಸಹಭಾಗಿತ್ವ ಪರಿಕಲ್ಪನೆ

ಇಂದು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಆಯಾಮಗಳು ವರ್ಗ, ಜಾತಿ ಮತ್ತು ಲಿಂಗಸಂಬಂಧಿ ಆಧಾರಿತ ಅಸಮಾನತೆಗಳ ಸುತ್ತ ಸುತ್ತುತ್ತಿವೆ. ಭಾರತದ ಸಂದರ್ಭದಲ್ಲಿ ರಾಜಕಾರಣದಲ್ಲಿ ಜಾತಿಯು ಪ್ರಧಾನ ಭೂಮಿಕೆಯನ್ನು ನಿರ್ವಹಿಸುತ್ತಲೇ ಬಂದಿದೆ. ಕಳೆದ ಎರಡು ದಶಕಗಳ ರಾಜಕಾರಣದಲ್ಲಿ ತಳಸಮುದಾಯಗಳ ಮತ್ತು ದಲಿತರ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ. ಭಾರತದ ರಾಜಕಾರಣ ಮತ್ತು ಶೈಕ್ಷಣಿಕ ಸಂವಾದಗಳಲ್ಲಿ ದಲಿತರ ಪ್ರಶ್ನೆ ಒಂದು ಪ್ರಧಾನ ಪ್ರಶ್ನೆಯಾಗಿ ಚರ್ಚೆಯಾಗುತ್ತಿದೆ. ದಲಿತರ ಗ್ರಹಿಕೆಗಳು, ದಲಿತರ ನಾಯಕತ್ವ ಮತ್ತು ದಲಿತರ ಮತದಾನದ ವಿಧಾನಗಳ ಸಂಗತಿಗಳು ಚರ್ಚೆ ಮತ್ತು ಸಂವಾದಗಳ ಭಾಗವಾಗುತ್ತಿವೆ.

ದಲಿತರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನಿರ್ಲಕ್ಷಿತ ಸಮುದಾಯವಾಗಿದೆ. ಹಾಗಾಗಿ ಅವರು ಜಾತಿ ಪ್ರಾಬಲ್ಯದ ಸಮಾಜದಿಂದ ತಾರತಮ್ಯ, ಅಸಮಾನತೆ ಮತ್ತು ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಜಾತಿ ಪದ್ಧತಿಯ ಸಿದ್ಧಾಂತ ವರ್ಣ ವ್ಯವಸ್ಥೆಯೊಂದಿಗೆ ಅಂತರ್ಗತಗೊಂಡಿದ್ದು, ಇದು ಹಿಂದೂ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎನ್ನುವ ನಾಲ್ಕು ಹಂತಗಳಲ್ಲಿ ವರ್ಗೀಕರಿಸಿದೆ.[೧] ಮೊದಲ ಮೂರು ವರ್ಣಗಳನ್ನು ದ್ವಿಜರೆಂದು ಪರಿಗಣಿಸಲಾಗುತ್ತದೆ. ಈ ವರ್ಣದ ಜನರು ವೇದಗಳಲ್ಲಿ ಪ್ರಸ್ತಾಪಿಸಿರುವ ಪ್ರಕಾರ ಉಪನಯನದಲ್ಲಿ ಪವಿತ್ರ ದಾರವನ್ನು ಧರಿಸುತ್ತಾರೆ. ಆದರೆ ಇಂತಹ ಆಚರಣೆಯನ್ನು ನಿರ್ವಹಿಸಲು ದಲಿತರಿಗೆ ಅವಕಾಶವಿಲ್ಲ.[೨] ಭೂಮಿಯನ್ನು ಊಳುವುದು, ಚಪ್ಪಲಿ ತಯಾರಿಕೆ, ಬಟ್ಟೆ ತೊಳೆಯುವುದು ಮುಂತಾದ ದೈಹಿಕ ಶ್ರಮದ ಕೆಲಸಗಳನ್ನು ಶೂದ್ರ ಸಮುದಾಯದವರು ನಿರ್ವಹಿಸುತ್ತಿದ್ದರು. ಆದರೂ ಈ ಸಮುದಾಯ ಅಸ್ಪೃಶ್ಯತೆಯ ಆಚರಣೆಗೆ ಒಳಗಾಗಿತ್ತು. ಉನ್ನತ ಜಾತಿಯ ಜನರೊಂದಿಗೆ ಊಟ ಮಾಡುವ, ಧೂಮಪಾನ ಮಾಡುವ ಅಥವಾ ಅವರೊಂದಿಗೆ ಸಮಾನವಾಗಿ ಕುಳಿತುಕೊಳ್ಳುವ ಅವಕಾಶವನ್ನು ನಿರಾಕರಿಸಲಾಗಿದೆ. ಇತರರಿಗಾಗಿ ನಿರ್ಮಿಸಲಾದ ಪ್ರತ್ಯೇಕ ಬಾವಿಗಳನ್ನು ದಲಿತರು ಉಪಯೋಗಿಸಬೇಕಾಗಿತ್ತು.[೩] ದಲಿತರ ಅಲಕ್ಷಿತ ಸ್ಥಿತಿಗಳ ನಿವಾರಣೆಗಾಗಿ ರಾಜಕೀಯ ದಾರ್ಶನಿಕರಾದ ಜ್ಯೋತಿಭಾ ಫುಲೆ,

ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರು ಶ್ರಮಿಸಿದ್ದಾರೆ. ದಲಿತರ ಸ್ಥಿತಿಗಳ ಸುಧಾರಣೆಗಾಗಿ ವಿವಿಧ ಕ್ರಮಗಳನ್ನು ಕೈಗೊಂಡಿದ್ದಾರೆ. ಅಸ್ಪೃಶ್ಯತೆ ನಿವಾರಣೆ, ತಾರತಮ್ಯ ನಿವಾರಣೆಗಳನ್ನು ಒಳಗೊಂಡಂತೆ ದಲಿತರ ಸಾಮಾಜಿಕ ಸ್ಥಿತಿಗಳ ಸುಧಾರಣೆಗಾಗಿ ಸ್ವಾತಂತ್ರ್ಯದ ನಂತರ ವಿವಿಧ ಸಾಮಾಜಿಕ ಶಾಸನಗಳನ್ನು ರೂಪಿಸಲಾಗಿದೆ. ಇದರೊಂದಿಗೆ ಇತರ ಸಮುದಾಯಗಳೊಂದಿಗೆ ಸಮಾನವಾಗಿ ಜೀವಿಸುವ ಅವಕಾಶಗಳನ್ನು ಶಾಸನಗಳ ಮೂಲಕ ರೂಪಿಸಲಾಗಿದೆ. ಸಮಾನ ಮತದಾನದ ಹಕ್ಕು, ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡಲಾಗಿದೆ. ಈ ಅವಕಾಶಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದ್ದು, ಭಾರತದ ಸಂವಿಧಾನವನ್ನು ಅಂಗೀಕರಿಸಿದ ದಿನದಿಂದಲೂ ಜಾರಿಯಲ್ಲಿವೆ. ವಿವಿಧ ಅಸಮಾನತೆ ಆಚರಣೆಗಳನ್ನು ನಿವಾರಿಸುವ ಪ್ರಯತ್ನಗಳು ಇಂದಿಗೂ ಜಾರಿಯಲ್ಲಿವೆ. ರಾಜಕೀಯ ಚಟುವಟಿಕೆಗಳ ಬಗ್ಗೆ ಪ್ರಜ್ಞೆ ಮತ್ತು ಅರಿವು ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ದಲಿತರ ಸಮಾಜೋ– ಆರ್ಥಿಕ ಸ್ಥಿತಿಗಳ ಪ್ರಮುಖ ಆಯಾಮಗಳಲ್ಲಿ ಒಂದಾಗಿದೆ. ರಾಜಕೀಯ ಚಟುವಟಿಕೆಗಳ ಬಗ್ಗೆ ದಲಿತರಿಗೆ ಇರುವ ಪ್ರಜ್ಞೆ ಅವರನ್ನು ತಮ್ಮ ಹಕ್ಕುಗಳು ಮತ್ತು ವಿಶೇಷ ಅವಕಾಶಗಳು ಮತ್ತು ಸೌಕರ್ಯಗಳಿಗೆ ಸಂಬಂಧಿಸಿದ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತದೆ. ಆದ್ದರಿಂದ ದಲಿತರ ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಸಹಭಾಗಿತ್ವ ಕುರಿತಾದ ಅಧ್ಯಯನ ಮಹತ್ವ ಪಡೆದುಕೊಂಡಿದೆ ಮತ್ತು ಅದು ಇಂದಿನ ಅಗತ್ಯವಾಗಿದೆ.

೨.೧. ದಲಿತರು: ಒಂದು ಪರಿಕಲ್ಪನೆ

'ದಲಿತರು' ಎಂಬ ಶಬ್ದವು ಅತ್ಯಂತ ವಿಶಾಲವಾದ ಪರಿಕಲ್ಪನೆಯಾಗಿದೆ. ದಲಿತರು ಎಂಬ ಪದವನ್ನು ಪರಿಶಿಷ್ಟ ಜಾತಿಗೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಅನುಸೂಚಿತ ಜಾತಿ ಎಂಬ ಶಬ್ದವು ಸಂವಿಧಾನದಲ್ಲಿ ಸ್ಥಾನವನ್ನು ಪಡೆದುಕೊಂಡಿದೆ. ಭಾರತದ ಅಸ್ಪೃಶ್ಯರನ್ನು ಆಧುನಿಕ ಭಾರತದಲ್ಲಿ ದಲಿತರೆಂದು ಕರೆಯಲಾಗುತ್ತಿದೆ. ಜಾತಿ ವ್ಯವಸ್ಥೆ ಹಾಸುಹೊಕ್ಕಾಗಿರುವ ಭಾರತೀಯ ಸಮಾಜದಲ್ಲಿ ದಲಿತರನ್ನು ತಾರತಮ್ಯಕ್ಕೆ ಮತ್ತು ಶೋಷಣೆಗೆ ಒಳಪಡಿಸಲಾಗಿದೆ. ಭಾರತದ ಸಂವಿಧಾನ ಪ್ರತಿಯೊಬ್ಬ ನಾಗರೀಕನಿಗೂ ಸಮಾನ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ನೀಡಿದೆ. ಆದರೆ ಇಂದಿಗೂ ಬಹುತೇಕ ಸಂದರ್ಭಗಳಲ್ಲಿ ದಲಿತರನ್ನು ಸುಲಭವಾಗಿ ಶೋಷಣೆಗೆ ಈಡುಮಾಡಲಾಗುತ್ತಿದೆ. ದೇಶದಾದ್ಯಂತ ದಲಿತರನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಪರಾಧಿ ಗಳನ್ನಾಗಿಸಲಾಗುತ್ತಿದೆ. ಆರ್ಥಿಕವಾಗಿ ದಲಿತರನ್ನು ಅತೀ ಹೆಚ್ಚಾಗಿ

ಶೋಷಿಸಲಾಗಿದೆ. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ದಲಿತರು ದ್ವಂದ್ವಗಳ, ಅಸಮಾನತೆಯ ಮತ್ತು ಶೋಷಣೆಯ ಅಭಿವ್ಯಕ್ತಿಗಳಾಗಿದ್ದಾರೆ. ದಲಿತರನ್ನು ಚಾಂಡಾಲರು, ಅವರ್ಣರು, ಅಚ್ಯುತ್, ಆದಿದ್ರಾವಿಡ, ಆದಿಕರ್ನಾಟಕ, ನಿರ್ಲಕ್ಷಿತ ವರ್ಗಗಳು, ತುಳಿತಕ್ಕೊಳಗಾದ ಹಿಂದುಗಳು, ಹರಿಜನ, ಪರಿಶಿಷ್ಟ ಜಾತಿಗಳು ಮುಂತಾದ ಪಾರಿಭಾಷಿಕ ಶಬ್ದಗಳಿಂದ ಗುರುತಿಸಲಾಗುತ್ತಿದೆ.[೪] ಆದರೆ, ದಲಿತ್ ಪ್ಯಾಂಥರ್ ಚಳುವಳಿಯ ನಂತರ 'ದಲಿತರು' ಎನ್ನುವ ಶಬ್ದವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ದಲಿತರು ಎಂಬ ಶಬ್ದವನ್ನು ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮಾತ್ರ ಬಳಸುತ್ತಿಲ್ಲ. ಹಿಂದುಳಿದ ಜಾತಿಗಳಲ್ಲಿರುವ ಅತ್ಯಂತ ನಿರ್ಲಕ್ಷತೆಗೆ ಒಳಗಾಗಿರುವ ಜಾತಿಗಳಿಗೂ ದಲಿತರು ಎಂಬ ಶಬ್ದ ಬಳಸಲಾಗುತ್ತಿದೆ. ಆದರೆ ಸಾರ್ವತ್ರಿಕ ಅಭಿಪ್ರಾಯದ ಪ್ರಕಾರ ಹಿಂದುಳಿದ ವರ್ಗಗಳಿಗಿಂತ ಹೆಚ್ಚು ಶೋಷಿತರು, ಅವಕಾಶ ವಂಚಿತರು ಮತ್ತು ನಿರ್ಲಕ್ಷಿಸಲ್ಪಟ್ಟವರು ಪರಿಶಿಷ್ಟ ಜಾತಿಯವರಾಗಿದ್ದಾರೆ. ಅವರನ್ನು ದಲಿತರು ಎಂದು ಕರೆಯುವ ಕ್ರಮ ಇಂದು ಚಾಲ್ತಿಯಲ್ಲಿದೆ. ಪ್ರಸ್ತುತ ಅಧ್ಯಯನದಲ್ಲಿ ಪರಿಶಿಷ್ಟ ಜಾತಿಯನ್ನು ದಲಿತರೆಂದು ಪರಿಭಾವಿಸಿಕೊಳ್ಳಲಾಗಿದೆ.

೨.೨. ದಲಿತರು ವ್ಯಾಖ್ಯಾನಗಳು

ದಲಿತ ಎನ್ನುವ ಪದ ಸಂಸ್ಕೃತದ ದಲ್ ಎಂಬ ಮೂಲ ಶಬ್ದದಿಂದ ಪಡೆಯಲಾಗಿದೆ. ಇದರ ಅರ್ಥ ಸ್ಫೋಟ, ವಿಭಜನತೆ, ಮುರಿದ ಮತ್ತು ತಳಕ್ಕೆ ಎಸೆಯಲ್ಪಟ್ಟ ಎಂಬುದಾಗಿದೆ. ಗಂಗಾಧರ ಪಂಥವಾನೆ ವ್ಯಾಖ್ಯಾನಿಸುವ ಪ್ರಕಾರ "ದಲಿತ ಎನ್ನುವುದು ಜಾತಿಯಲ್ಲ. ದಲಿತನೆಂದರೆ ದೇಶದ ಸಾಮಾಜಿಕ ಮತ್ತು ಆರ್ಥಿಕ ಸಂಪ್ರದಾಯಗಳಿಂದ ಶೋಷಿಸಲ್ಪಟ್ಟ ಮನುಷ್ಯ. ಅವನು ದೇವರು, ಮರುಜನ್ಮ, ಆತ್ಮ, ಪವಿತ್ರ ಗ್ರಂಥಗಳ ಪ್ರತಿಪಾದನೆಗಳಾದ ಪ್ರತ್ಯೇಕತೆ, ವಿಧಿಬರಹ ಮತ್ತು ಸ್ವರ್ಗಗಳೆಂಬ ಕಲ್ಪನೆಗಳಲ್ಲಿ ನಂಬಿಕೆ ಉಳ್ಳವನಲ್ಲ. ಏಕೆಂದರೆ ದಲಿತನನ್ನು ಗುಲಾಮನನ್ನಾಗಿ ಪರಿಭಾವಿಸಲಾಗಿದೆ. ಆದರೆ ದಲಿತ ಮಾನವೀಯತೆಯಲ್ಲಿ ನಂಬಿಕೆ ಉಳ್ಳವನಾಗಿದ್ದಾನೆ. ದಲಿತ ಪರಿವರ್ತನೆ ಮತ್ತು ಕ್ರಾಂತಿಯ ಪ್ರತಿರೂಪ."[೫] ಎಪತ್ತರ ದಶಕದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುಯಾಯಿಗಳಾದ ನವ ಬೌದ್ಧ ಚಳುವಳಿಗಾರ ಮರಾಠಿ ಸಾಹಿತ್ಯದಲ್ಲಿ 'ದಲಿತ' ಎಂಬ ಹೊಸ ಪರಿಕಲ್ಪನೆಯನ್ನು ಪರಿಚಯಿಸಿದರು.[೬] ದಲಿತರೆಂದರೆ ಮುರಿಯಲ್ಪಟ್ಟವರು. ಮೇಲಿನವರಿಂದ ಪ್ರಜ್ಞಾಪೂರಕವಾಗಿ ತಳಕ್ಕೆ ತುಳಿಯಲ್ಪಟ್ಟವರು. ಶಬ್ದವೇ ಸ್ಪಷ್ಟಪಡಿಸುವಂತೆ ಆಂತರಿಕವಾಗಿ ನಿರಾಕರಿಸಲ್ಪಟ್ಟ ಸಮುದಾಯವಾಗಿದೆ.[೭]

ಜಾತಿಯ ಅನ್ಯಾಯದ ನೆಲೆಯಲ್ಲಿ 'ದಲಿತ' ಶಬ್ದವನ್ನು ಮೊಟ್ಟಮೊದಲು ಪರಿಚಯಿಸಿದವರು ಹತ್ತೊಂಬತ್ತನೆ ಶತಮಾನದ ಸಮಾಜ ಸುಧಾರಕ ಜ್ಯೋತಿ ಬಾ ಫುಲೆಯವರು.[೮] ಆಸಕ್ತಿಕರ ಸಂಗತಿ ಎಂದರೆ ಡಾ.ಬಿ.ಆರ್.ಅಂಬೇಡ್ಕರವರು ತಮ್ಮ ಬಹಿಷ್ಕೃತ ಭಾರತ ಪತ್ರಿಕೆಯಲ್ಲಿ 'ದಲಿತ' ಎನ್ನುವ ಶಬ್ದವನ್ನು ಉಲ್ಲೇಖಿಸಿದ್ದಾರೆ. ಅದರಲ್ಲಿ 'ದಲಿತ' ಶಬ್ದವನ್ನು ಅತ್ಯಂತ ವಿಶಾಲಾರ್ಥದಲ್ಲಿ ವಿಶ್ಲೇಷಿಸಿದ್ದಾರೆ. ಅವರ ಪ್ರಕಾರ "ದಲಿತತ್ವ ಎಂದರೆ ಒಂದು ಜೀವನ ಸ್ಥಿತಿ. ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಬಲಿಷ್ಠರಾದ ಮತ್ತು ಉನ್ನತ ಬ್ರಾಹ್ಮಣ ವರ್ಗಗಳು ದಲಿತರನ್ನು ಶೋಷಣೆಗೆ ಒಳಪಡಿಸಿದ್ದಾರೆ. ಆದ್ದರಿಂದ ದಲಿತರು ಶೋಷಿತ, ತುಳಿತಕ್ಕೊಳಗಾದ ಮತ್ತು ಅಂಚಿಗೆ ತಳ್ಳಲ್ಪಟ್ಟ ಲಕ್ಷಣಗಳನ್ನು ಹೊಂದಿದ್ದಾರೆ.[೯] ಆದರೆ ಅಂಬೇಡ್ಕರ್ ಅವರು ಎಲ್ಲಾ ಸಂದರ್ಭಗಳಲ್ಲೂ ಈ ಶಬ್ದವನ್ನು ಉಪಯೋಗಿಸಲಿಲ್ಲ. ಬದಲಾಗುವ ಕಾಲಮಾನ ಮತ್ತು ಸಂದರ್ಭಗಳಿಗೆ ಆದ್ಯತೆ ನೀಡಿ ಶಬ್ದಗಳನ್ನು ಪ್ರಯೋಗಿಸಿದ್ದಾರೆ. ವಸಾಹತುಶಾಹಿ ರಾಜ್ಯದೊಂದಿಗೆ ವ್ಯವಹರಿಸುವಾಗ 'ತುಳಿತಕ್ಕೊಳಗಾದ ವರ್ಗ' ವೆಂದು, ಹಿಂದೂ ಸಮುದಾಯದ ಉನ್ನತ ಜಾತಿಗಳೊಂದಿಗೆ ವ್ಯವಹರಿಸುವಾಗ 'ಬಹಿಷ್ಕೃತ' ಎನ್ನುವ ಶಬ್ದವನ್ನು ಉಪಯೋಗಿಸಿದ್ದಾರೆ. ಬಹಿಷ್ಕೃತ ಎಂದರೆ ಪರಿಪೂರ್ಣವಾಗಿ ಹೊರಗಿರುವ ಅಥವಾ ಸಂಪೂರ್ಣವಾಗಿ ಹೊರಹಾಕಲ್ಪಟ್ಟ ಜಾತಿ ಎಂದು ಅರ್ಥ.[೧೦]

ಈ ವ್ಯಾಖ್ಯಾನಗಳನ್ನು ಪರಿಗಣಿಸುವುದಾದರೆ, ಎಲ್ಲಾ ಶೋಷಿತ, ತಳಮಟ್ಟಕ್ಕೆ ತಳ್ಳಲ್ಪಟ್ಟ, ಗೌರವಯುತ ಸಾಮಾಜಿಕ ಜೀವನಕ್ಕೆ ಅಗತ್ಯವಾದ ಹಕ್ಕುಗಳಿಂದ ತಿರಸ್ಕರಿಸಲ್ಪಟ್ಟ, ಪಕ್ಷಪಾತಿ ಸಮಾಜೋ-ಆರ್ಥಿಕ ಮತ್ತು ರಾಜಕೀಯ ನಿರ್ಣಯಗಳ ಉತ್ಪಾದಕರಲ್ಲದ ಮತ್ತು ಎಲ್ಲಾ ನಿರ್ಣಯಗಳನ್ನು ಅನುಕೂಲಸ್ಥ ಸಮುದಾಯಗಳ ಪರಿವಾಗಿ ತೆಗೆದುಕೊಂಡು, ಉಳಿದವರನ್ನು ಉದ್ದೇಶಪೂರ್ವಕವಾಗಿ ಪ್ರಗತಿಯ ಅನುಕೂಲಗಳನ್ನು ಪಡೆಯದಂತೆ ದೂರ ಇಟ್ಟಿರುವ ಸಮುದಾಯವನ್ನು ದಲಿತರೆಂದು ಪರಿಗಣಿಸಬಹುದಾಗಿದೆ.[೧೧] ಆರ್ಥಿಕವಾಗಿ ಬಡವನಾಗಿರುವ ವ್ಯಕ್ತಿ ದಲಿತನಿಗಿಂತ ಭಿನ್ನವಾಗಿರುತ್ತಾನೆ ಎಂಬುದನ್ನು ಗಂಭೀರವಾಗಿ ಪರಿಗಣಿಸುವುದು ಮುಖ್ಯ. ಬಡವ ಆರ್ಥಿಕ ಅವಕಾಶಗಳಿಂದ ವಂಚಿತನಾಗಿರುತ್ತಾನೆ ವಿಶೇಷವಾಗಿ ಆರ್ಥಿಕತೆಯಲ್ಲಿ ಭಾಗವಹಿಸುವ ಮತ್ತು ಆದಾಯಗಳಿಂದ ವಂಚಿತನಾಗಿರುತ್ತಾನೆ. ಆದರೆ ಅವನು ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಕಾಶಗಳಿಂದ ವಂಚಿತನಾಗುವ ಸಾಧ್ಯತೆಗಳು ಇಲ್ಲದಿರಬಹುದು. ಆದರೆ ದಲಿತ ಆರ್ಥಿಕವಾಗಿ ಬಡವನಾಗಿರುವುದರ ಜೊತೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಕಾಶಗಳಿಂದ ನಿಶ್ಚಿತವಾಗಿ ವಂಚಿತನಾಗಿರುತ್ತಾನೆ.[೧೨]

ಪ್ರಣಾಳಿಕೆ ಹೇಳುವ ಪ್ರಕಾರ ಧಾರ್ಮಿಕ ನೆಲೆಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಶೋಷಿಸಲ್ಪಟ್ಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ನವ ಬೌದ್ಧರು, ಶ್ರಮಿಕರು, ಭೂರಹಿತ ಮತ್ತು ಬಡ ಕೃಷಿ ಕಾರ್ಮಿಕರು ಮತ್ತು ಮಹಿಳೆಯರೆಲ್ಲರೂ ದಲಿತರಾಗಿದ್ದಾರೆ.[೧೩] ಆದ್ದರಿಂದ ಭಾರತದಲ್ಲಿ ದಲಿತರೆಂದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಂಚಿಗೆ ತಳ್ಳಲ್ಪಟ್ಟ ವಿಶಿಷ್ಟ ಸಮುದಾಯವಾಗಿದ್ದಾರೆ. ಸಾಮಾಜಿಕವಾಗಿ ಅತ್ಯಂತ ಕೆಳಸ್ತರದಲ್ಲಿರುವ ದಲಿತರನ್ನು ಸ್ವಾತಂತ್ರ್ಯಪೂರ್ವ ಮತ್ತು ನಂತರದ ಕಾಲಘಟ್ಟದಲ್ಲಿ ವಿವಿಧ ಹೆಸರುಗಳಿಂದ ಗುರುತಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಅಸ್ಪೃಶ್ಯರು ಪದಗಳಿಗೆ ಪರ್ಯಾಯವಾಗಿ ಚಾಂಡಾಲರು, ಅವರ್ಣೀಯರು, ತುಳಿತಕ್ಕೊಳಗಾದವರು ಮತ್ತು ಹರಿಜನರು ಮುಂತಾದ ಪಾರಿಭಾಷಿಕ ಶಬ್ದಗಳಿಂದ ಗುರುತಿಸಲಾಗುತ್ತಿದೆ. ಜೇಮ್ಸ್ ಮ್ಯಾಸ್ಸೆ ಅಭಿಪ್ರಾಯಪಡುವಂತೆ, ಈ ಪಾರಿಭಾಷೆಗಳನ್ನು ಸಾಂದರ್ಭಿಕವಾಗಿ ಬಳಸಲಾಗಿದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ದಲಿತರನ್ನು ಉಪೇಕ್ಷಿಸಲು ಅಥವಾ ನಿರ್ಲಕ್ಷಿಸಲು ಇವುಗಳನ್ನು ಬಳಸಲಾಗಿದೆ. ದಲಿತರನ್ನು ಚಾತುರ್ವರ್ಣ ವ್ಯವಸ್ಥೆಯಿಂದ ಹೊರಗಿನವರೆಂದು ಪರಿಗಣಿಸಿರುವುದರಿಂದ ಅವರನ್ನು ಹೊರಜಾತಿಗಳು, ಅಸ್ಪೃಶ್ಯರು ಮತ್ತು ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಟ್ಟವರೆಂದು ಗುರುತಿಸಲಾಗಿದೆ.[೧೪] ಅಂಬೇಡ್ಕರ್‌ರವರು ಹಿಂದೂ ಸಮುದಾಯದ ಅತ್ಯಂತ ಕಡೆಯ ಮತ್ತು ತಳಸಮುದಾಯಗಳನ್ನು ಅಸ್ಪೃಶ್ಯರು ಎಂದಿದ್ದಾರೆ. ೧೯೦೯ರಲ್ಲಿ ಈ ಶಬ್ದ ಮೊದಲು ಕಾಣಿಸಿಕೊಂಡಿತ್ತು. ಆದರೆ ಸಂವಿಧಾನ ಸೃಷ್ಟಿಸಿರುವ ಅವಕಾಶಗಳು ಮತ್ತು ಶಿಕ್ಷಣದ ವ್ಯಾಪಕ ಪ್ರಸಾರದಿಂದಾಗಿ ಈ ಶಬ್ದ ಇಂದು ತನ್ನ ಮಹತ್ವವನ್ನು ಕಳೆದುಕೊಂಡಿದೆ. ಸ್ವಾತಂತ್ರ್ಯಪೂರ್ವದಲ್ಲಿ ಸರ್ಕಾರ ತಳಸಮುದಾಯಗಳು (ಡಿಪ್ರೆಸ್ಸಡ್ ಕ್ಲಾಸೆಸ್) ಎಂಬ ಶಬ್ದವನ್ನು ಬಳಸಿದೆ. ಆದರೆ ೧೯೩೬ರ ಭಾರತ ಸರ್ಕಾರದ ಕಾಯ್ದೆಯಲ್ಲಿ ಅನುಸೂಚಿತ ಜಾತಿಗಳು ಎಂಬ ಶಬ್ದವನ್ನು ಉಪಯೋಗಿಸಿತು. ಈ ಎಲ್ಲ ಜಾತಿಗಳು ವಿಶೇಷ ಹಕ್ಕುಗಳನ್ನು ಪಡೆಯಲು ಅರ್ಹರೆಂದು ಪರಿಗಣಿಸಲಾಯಿತು. ಸ್ಪರ್ಧಾತ್ಮಕ ರಾಜಕಾರಣದ ಸಂದರ್ಭದ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರು ಕೂಡ ಅನುಸೂಚಿತ ಜಾತಿಗಳು ಎನ್ನುವ ಪರಿಭಾಷೆಗೆ ಆದ್ಯತೆ ನೀಡಿದೆ. ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ ರಾಜಕೀಯ ಪಕ್ಷದ ಸ್ಥಾಪನೆಯ ಸಂದರ್ಭದಲ್ಲಿ ಅಂಬೇಡ್ಕರ್‌ರವರು ಈ ಶಬ್ದವನ್ನು ಉಪಯೋಗಿಸಿದರು.[೧೫] ಇದೇ ಪರಿಭಾಷೆಯನ್ನು ಭಾರತದ ಸಂವಿಧಾನದಲ್ಲಿ ಪ್ರಸ್ತಾವಿಸಲಾಗಿದೆ. ಆದರೆ ಸಂವಿಧಾನದಲ್ಲೂ ಇದರ ಬಗ್ಗೆ ಸ್ಪಷ್ಟತೆ ಇಲ್ಲವಾಗಿದೆ.

ಮಹಾತ್ಮಾಗಾಂಧೀಜಿಯವರು ಹಿಂದೂ ಧರ್ಮಕ್ಕೆ ಅಂಟಿದ ಅಸ್ಪೃಶ್ಯತೆಯನ್ನು ನಿವಾರಿಸಲು 'ಹರಿಜನರು' ಅಂದರೆ ದೇವರ ಮಕ್ಕಳು ಎಂದು ಕರೆದಿದ್ದಾರೆ.[೧೬] ಹರಿಜನ ಶಬ್ದವನ್ನು

ಮೊಟ್ಟಮೊದಲು ಪ್ರಸ್ತಾಪಿಸಿದವರು ನರಸಿಂಹಮೆಹತಾರವರು. ಅವರೇ ನಂತರ ಶಬ್ದವನ್ನು ಪ್ರಚುರಪಡಿಸಿದರು. ಗಾಂಧೀಜಿಯವರು ಈ ಮಾತನ್ನು ತಮ್ಮ ಹರಿಜನ ಪತ್ರಿಕೆಯ ಸಂಚಿಕೆಯೊಂದರಲ್ಲಿ ಉಲ್ಲೇಖಿಸಿದ್ದಾರೆ.[೧೭] ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಮನಃಪೂರ್ವಕವಾಗಿ ತೊಡೆದು ಹಾಕುತ್ತಾರೆ ಎನ್ನುವ ನಂಬಿಕೆಯನ್ನು ಅಸ್ಪೃಶ್ಯರು ಹೊಂದಿಲ್ಲ ಎನ್ನುವುದು ಅಂಬೇಡ್ಕರ್‌ರವರ ವಾದವಾಗಿತ್ತು. ಹರಿಜನ ಎನ್ನುವ ಪದ ಗೌರವದ ಬದಲಿಗೆ ಅವಮಾನವೇ ಹೆಚ್ಚು ಎನ್ನುವ ಕಾರಣಕ್ಕೆ ಪರಿಶಿಷ್ಟ ಜಾತಿಯ ಒಂದು ವರ್ಗದ ನಾಯಕರು ಹರಿಜನ ಪದದ ಬಳಕೆಯನ್ನು ತಿರಸ್ಕರಿಸಿದರು.[೧೮] ಗೇಲ್ ಓಂವೆಟ್ ಅಭಿಪ್ರಾಯಪಡುವಂತೆ, 'ದಲಿತ' ಎಂಬ ಪದ ಗಾಂಧೀಜಿಯವರ ಹರಿಜನ ಪದಕ್ಕೆ ಶಸ್ತ್ರಸಜ್ಜಿತ ಪರ್ಯಾಯ ಪದವಾಗಿದೆ.[೧೯] ಬೌದ್ಧ ಧರ್ಮಕ್ಕೆ ಮತಾಂತರಗೊಂಡವರೆಲ್ಲರೂ ದಲಿತರ ವಿವಿಧ ಪರಿಭಾಷೆಗಳನ್ನು ಮತ್ತು ತಮ್ಮ ಮೂಲಜಾತಿಗಳ ಪರಿಭಾಷೆಗಳನ್ನು ತಿರಸ್ಕರಿಸಿ ತಮ್ಮನ್ನು ತಾವು ಬೌದ್ಧರೆಂದು ಗುರುತಿಸಿಕೊಳ್ಳಲು ಆರಂಭಿಸಿದರು.

ಎಪ್ಪತ್ತರ ದಶಕ ಮಧ್ಯಭಾಗದಲ್ಲಿ ಬ್ಯಾಕ್‌ವರ್ಡ್ ಆಂಡ್ ಮೈನಾರಿಟಿಸ್ ಎಂಪ್ಲಾಯಿಸ್ ಫೆಡರೇಷನ್ ಸ್ಥಾಪನೆಯ ಮೂಲಕ ದಲಿತ ಸಮುದಾಯದ ಮುಖಂಡರು 'ಬಹುಜನ' ಎಂಬ ಹೆಸರನ್ನು ಹುಟ್ಟುಹಾಕಿ ಅದರಲ್ಲಿ ತಮ್ಮ ಅನನ್ಯತೆಯನ್ನು ಗುರುತಿಸಿಕೊಂಡರು. ಕಾನ್ಷಿರಾಮ್ ಅವರು ದಲಿತರು, ಆದಿವಾಸಿಗಳು, ಇತರೆ ಹಿಂದುಳಿದ ಸಮುದಾಯದವರು ಮತ್ತು ಅಲ್ಪಸಂಖ್ಯಾತರನ್ನು ಒಳಗೊಂಡ ಬೃಹತ್ ಒಕ್ಕೂಟದ ರಚನೆಗೆ 'ಬಹುಜನ' ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದರು.[೨೦] ಬಹುಜನ ಪರಿಕಲ್ಪನೆಯೊಂದಿಗೆ ಗುರುತಿಸಿಕೊಳ್ಳುವ ಬೌದ್ಧರು ಮತ್ತು ದಲಿತ ವರ್ಗದ ಒಂದು ಗುಂಪಿನವರು 'ದಲಿತ' ಎನ್ನುವುದು ಸಾಮಾಜಿಕ ಪ್ರತಿಕ್ರಿಯೆಯ ವರ್ಗವಾಗಿ ಗುರುತಿಸುವುದನ್ನು ತಿರಸ್ಕರಿಸುತ್ತಾರೆ.[೨೧] ಪ್ರಮುಖವಾಗಿ ಗುರುತಿಸಬೇಕಾಗಿರುವ ಅಂಶವೆಂದರೆ ದಲಿತ ಎನ್ನುವ ಹೆಸರನ್ನು ತಳಸಮುದಾಯಗಳು ತಮಗೆ ತಾವೇ ಕೊಟ್ಟಕೊಂಡ ಹೆಸರಾಗಿದೆ. ಹಾಗಾಗಿ ಭಾರತದ ವಿವಿಧ ಚಳುವಳಿಗಳಲ್ಲೂ ಈ ಪರಿಭಾಷೆ ಹೆಚ್ಚು ಜನಪ್ರಿಯವಾಯಿತು. ದಲಿತ ಎನ್ನುವುದು ಕೇವಲ ವಿವರಣಾತ್ಮಕ ಹೆಸರಲ್ಲ ಅಥವಾ ಬಿರುದಲ್ಲ ಬದಲಾಗಿ ಅದು ತಮ್ಮ ಪುರಾತನ ಅನನ್ಯತೆಯನ್ನು ಹಿಂಪಡೆಯುವ ಭರವಸೆಯ ಅಭಿವ್ಯಕ್ತಿಯಾಗಿದೆ. ತುಳಿತಕ್ಕೊಳಗಾದ ಸಮುದಾಯದವರು ತಮ್ಮನ್ನು ತಾವು ದಲಿತರೆಂದೇ ಪರಿಭಾವಿಸಿಕೊಂಡಿದ್ದಾರೆ. ದಲಿತತ್ವದ ಅಂಗೀಕಾರವೇ ಅವರನ್ನು ಪರಿಪೂರ್ಣ ಹಾಗೂ ಸ್ವತಂತ್ರ ಮಾನವರಾಗಿ ಪರಿವರ್ತನೆಗೊಳ್ಳುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿದೆ.[೨೨] ದಲಿತ ಶಬ್ದವು ಹೆಚ್ಚು ಸ್ವೀಕಾರಾರ್ಹವಾಗುತ್ತಿದ್ದು ಅನೇಕ ದಲಿತ ಸಂಘಟನೆಗಳು ದಲಿತ ಪರಿಭಾಷೆಯನ್ನು ಇಂದು ಹೆಚ್ಚು

ಜನಪ್ರಿಯಗೊಳಿಸುತ್ತಿದ್ದಾರೆ. ಈ ಚರ್ಚೆಗಳ ಹಿನ್ನೆಲೆಯಲ್ಲಿ ದಲಿತರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವ ರಾಜಕೀಯ ಸಹಭಾಗಿತ್ವದ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿಕೊಳ್ಳುವ ಅಗತ್ಯವಿದೆ. ರಾಜಕೀಯ ಸಹಭಾಗಿತ್ವ ಪರಿಕಲ್ಪನೆಯ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೨.೩. ದಲಿತರ ರಾಜಕೀಯ ಸಹಭಾಗಿತ್ವ

ಅರಿಸ್ಟಾಟಲ್ ಪ್ರತಿಪಾದಿಸುವ ಪ್ರಕಾರ ಸ್ವಾಭಾವಿಕವಾಗಿ ಮಾನವನು ರಾಜಕೀಯ ಜೀವಿಯಾಗಿದ್ದಾನೆ, ಮಾನವನು ತನ್ನ ರಾಜಕೀಯ ಚಟುವಟಿಕೆಯ ಮೂಲಕ ಸ್ಪಷ್ಟವಾಗಿ ಮತ್ತು ವಿಶ್ವಾಸಾರ್ಹತೆಯಿಂದ ತನ್ನ ಗುಂಪಿನೊಂದಿಗೆ ಗುರುತಿಸಿಕೊಳ್ಳುತ್ತಾನೆ. ಆದರೆ ಇಂದು ರಾಜ್ಯದ ವ್ಯವಸ್ಥೆಯು ನಗರ ರಾಜ್ಯದ ಪರಿಕಲ್ಪನೆಯಿಂದ ಆಧುನಿಕ ಪ್ರಜಾಸತ್ತಾತ್ಮಕ ರಾಜ್ಯದ ವ್ಯವಸ್ಥೆಗೆ ರೂಪಾಂತರಗೊಂಡಿದೆ. ಈ ಹಿನ್ನೆಲೆಯಲ್ಲಿ ಅರಿಸ್ಟಾಟಲ್‌ನ ಕಾಲಘಟ್ಟಕ್ಕೆ ಹೋಲಿಸಿದರೆ ಮಾನವನ ರಾಜಕೀಯ ಸಹಭಾಗಿತ್ವವು ಇಂದು ಗುಣಾತ್ಮಕ ಬದಲಾವಣೆಯನ್ನು ಕಂಡುಕೊಂಡಿದೆ. ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳ ಸ್ಥಾಪನೆಗೆ ಪ್ರಜ್ಞಾಪೂರ್ವಕವಾದ ಮತ್ತು ದೃಢವಾದ ರಾಜಕೀಯ ಸಹಭಾಗಿತ್ವದ ಅಗತ್ಯವಾಗಿವೆ. ಇಂತಹ ಪ್ರಜಾಸತ್ತಾತ್ಮಕ ಸಂಸ್ಥೆಗಳು ಪ್ರತಿಯೊಬ್ಬ ನಾಗರಿಕನಿಗೂ ಉಪಯುಕ್ತವಾಗುತ್ತವೆ.

ರಾಜ್ಯದ ವಿವಿಧ ಚಟುವಟಿಕೆಗಳಲ್ಲಿ ಜನರ ಪಾಲ್ಗೊಳ್ಳುವಿಕೆಯ ಅಗತ್ಯ ಮತ್ತು ಮಹತ್ವ ಇಂದು ಜನರಿಗೆ ಮನವರಿಕೆಯಾಗುತ್ತಿದೆ. ಗುರಿಗಳ ನಿಗದೀಕರಣ ಮತ್ತು ನೀತಿಗಳ ಕಾರ್ಯಾಚರಣೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಅಗತ್ಯವೆಂದು ಪರಿಗಣಿಸಲಾಗುತ್ತದೆ. ಇಂತಹ ಸಂಗತಿಗಳಲ್ಲಿ ಜನರ ಪಾಲ್ಗೊಳ್ಳುವಿಕೆಯ ಅಗತ್ಯ ಹೆಚ್ಚು ಮಹತ್ವಪಡೆದುಕೊಳ್ಳುತ್ತಿದೆ. ರಾಜಕೀಯ ಪಾಲ್ಗೊಳ್ಳುವಿಕೆಯು ಜನತೆಗೆ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಅವಕಾಶ ನೀಡುವ್ಯದರಿಂದ ಇದು ರಾಜಕೀಯ ಮಹತ್ವದ ಪ್ರಶ್ನೆಯಾಗಿದೆ.

ಜಾರಿಯಲ್ಲಿರುವ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಉಳಿವಿಗೆ ರಾಜಕೀಯ ಪಾಲ್ಗೊಳ್ಳುವಿಕೆಗೆ ಪ್ರಮುಖ ಪಾತ್ರವಹಿಸುತ್ತದೆ. ರಾಜಕೀಯ ಅರಿವಿನ ಕೊರತೆ ಮತ್ತು ಜನರ ನಿಷ್ಕ್ರೀಯತೆಯು ರಾಜಕೀಯ ವ್ಯವಸ್ಥೆಯನ್ನು ಬೇಜವಾಬ್ದಾರಿಯುತಗೊಳಿಸಿ ಅಂತಿಮವಾಗಿ ರಾಜಕೀಯ ವ್ಯವಸ್ಥೆಯ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುತ್ತದೆ. ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಅರಿವು ಸಾಮಾನ್ಯ ಜನರಿಗೆ ತಮ್ಮ ಹಿತಾಸಕ್ತಿಗಳನ್ನು ಸ್ಪಷ್ಟಪಡಿಸಿಕೊಳ್ಳುವ ಪ್ರಜ್ಞೆಯನ್ನು

ಮೂಡಿಸುತ್ತದೆ. ರಾಜಕೀಯ ಪ್ರಜ್ಞೆಯಿಂದ ಸ್ಪಷ್ಟಗೊಂಡ ಹಿತಾಸಕ್ತಿಗಳು ಅವುಗಳ ಕ್ರೋಢೀಕರಣಕ್ಕೆ ಅವಕಾಶ ನೀಡುತ್ತದೆ. ಹಿತಾಸಕ್ತಿಗಳ ಕ್ರೋಢೀಕರಣ ಜನಗಳ ಸಂಘಟನೆಗೆ ಸಹಕಾರಿಯಾಗುತ್ತದೆ. ಜನಶಕ್ತಿಯ ಸಂಘಟನೆಯು ರಾಜಕೀಯ ವ್ಯವಸ್ಥೆಯಲ್ಲಿ ಸಕ್ರೀಯ ಮತ್ತು ಪರಿಣಾಮಕಾರಿ ರಾಜಕೀಯ ಪಾಲ್ಗೊಳ್ಳುವಿಕೆಗೆ ದಾರಿಮಾಡಿಕೊಡುತ್ತದೆ. ಈ ಎಲ್ಲಾ ಚರ್ಚೆಗಳ ಹಿನ್ನೆಲೆಯಲ್ಲಿ ರಾಜಕೀಯ ಸಹಭಾಗಿತ್ವದ ಮಹತ್ವವು ಇಂದು ಪ್ರಾಧಾನ್ಯತೆಯನ್ನು ಪಡೆದುಕೊಂಡಿದೆ.

ರಾಜಕೀಯ ಸಹಭಾಗಿತ್ವದ ಅರ್ಥ

ರಾಜಕೀಯ ಸಹಭಾಗಿತ್ವವೆಂದರೆ ಆಳುವ ವರ್ಗವನ್ನು ಆಯ್ಕೆಮಾಡುವಲ್ಲಿ ಜನತೆಯು ತೋರಿಸುವ ಸಕ್ರೀಯ ಪಾಲ್ಗೊಳ್ಳುವಿಕೆಯ ಸ್ವಯಂ ಚಟುವಟಿಕೆಗಳಾಗಿವೆ. ರಾಜಕೀಯ ಸಹಭಾಗಿತ್ವವು ಮತದಾನ, ಮಾಹಿತಿ ಪಡೆಯುವುದು, ಚರ್ಚೆ, ಸಭೆಗಳಲ್ಲಿ ಭಾಗವಹಿಸುವುದು, ವಂತಿಗೆ ನೀಡುವುದು ಮತ್ತು ಪ್ರತಿನಿಧಿಗಳೊಂದಿಗೆ ಸಂಪರ್ಕ ಹೊಂದುವುದು, ಪಕ್ಷದ ಸದಸ್ಯತ್ವ ಪಡೆಯುವುದು, ಪ್ರಚಾರ ಮಾಡುವುದು ಮತ್ತು ಮತದಾರರನ್ನು ನೋಂದಾಯಿಸುವುದು, ಪ್ರಚಾರ ಕಾರ್ಯಗಳಲ್ಲಿ ತೊಡಗಿಸುವುದು ಮುಂತಾದ ಸಂಗತಿಗಳನ್ನು ಒಳಗೊಂಡಿದೆ. ರಾಜಕೀಯ ಪಾಲ್ಗೊಳ್ಳುವಿಕೆ ಎಂದರೆ ಅವುಗಳ ಸ್ಪಷ್ಟವಾಗಿ ರಾಜಕೀಯ ಚಟುವಟಿಕೆಗಳಾಗಿದ್ದು, ವೃತ್ತಿಪರವಾಗಿ ರಾಜ್ಯದ ವ್ಯವಹಾರಗಳಲ್ಲಿ ಭಾಗವಹಿಸುವ ಖಾಸಗಿ ನಾಗರಿಕರ ವರ್ತನೆ ಮತ್ತು ನಡವಳಿಕೆಗಳಿಗಿಂತ ಭಿನ್ನವಾಗಿದೆ.[೨೩] ಸಮಾಜ ವಿಜ್ಞಾನಿಗಳು ರಾಜಕೀಯ ಸಹಭಾಗಿತ್ವವನ್ನು ವಿಶಾಲವಾದ ಚೌಕಟ್ಟಿನಲ್ಲಿ ವಿಶ್ಲೇಷಿಸಿದ್ದಾರೆ. ರಾಜಕೀಯ ಸಹಭಾಗಿತ್ವವು ಒಂದು ನಿರ್ದಿಷ್ಟವಾದ ಪ್ರಕ್ರಿಯೆಯಾಗಿದ್ದು ವ್ಯಕ್ತಿಯು ತನ್ನ ರಾಜಕೀಯ ಸಮಾಜದಲ್ಲಿ ನಿರ್ದಿಷ್ಟ ಪಾತ್ರವಹಿಸುತ್ತಾನೆ. ರಾಜಕೀಯ ಸಹಭಾಗಿತ್ವವು ವ್ಯಕ್ತಿಗೆ ಸಮಾಜದ ಸಾಮಾನ್ಯ ಗುರಿಗಳನ್ನು ನಿರ್ಧರಿಸುವ ಮತ್ತು ಗುರಿಸಾಧನೆಯ ಮಾರ್ಗಗಳನ್ನು ನಿಗದಿಪಡಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶವನ್ನು ನೀಡುತ್ತದೆ. ರಾಜಕೀಯ ಸಹಭಾಗಿತ್ವವು ವ್ಯಕ್ತಿಗೆ ತನ್ನ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸುವ ಅವಕಾಶ ಕಲ್ಪಿಸಿಕೊಡುತ್ತದೆ.

ರಾಜಕೀಯ ಸಹಭಾಗಿತ್ವವು ಒಳಗೊಂಡಿರುವ ಸಂಗತಿಯನ್ನು ಅರ್ಥಮಾಡಿಕೊಳ್ಳುವ ಮೊದಲು ರಾಜಕೀಯ ಸಹಭಾಗಿತ್ವದ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ. ಇದರೊಂದಿಗೆ ರಾಜಕಾರಣದಲ್ಲಿ ಭಾಗವಹಿಸಲು ವ್ಯಕ್ತಿಯನ್ನು ಪ್ರೇರೇಪಿಸುವ ಅಂಶಗಳು ಯಾವುವು? ಅಥವಾ ವ್ಯಕ್ತಿ ಮತ್ತು ಸಮೂಹಗಳ ರಾಜಕೀಯ ವರ್ತನೆಯನ್ನು ಪ್ರಭಾವಿಸುವ ವಿವಿಧ ಪರಿಸರವನ್ನು ಅರ್ಥೈಸಿಕೊಳ್ಳುವುದು ಮುಖ್ಯ. ರಾಜಕೀಯ ಸಹಭಾಗಿತ್ವವೆಂದರೆ ತಮ್ಮ

ಜೀವನದ ಮೇಲೆ ನೇರವಾಗಿ ಪರಿಣಾಮ ಬೀರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಜನರ ನೇರ ಪಾಲ್ಗೊಳ್ಳುವಿಕೆಯಾಗಿದೆ. ಇಂತಹ ಪ್ರಕ್ರಿಯೆಗಳಲ್ಲಿ ಕೆಲವೊಮ್ಮೆ ವ್ಯಕ್ತಿಯು ನೇರವಾದ ಮತ್ತು ಪ್ರತ್ಯಕ್ಷವಾದ ನಿಯಂತ್ರಣ ಹೊಂದಿದ್ದರೆ, ಇನ್ನೂ ಕೆಲವು ಪ್ರಕ್ರಿಯೆಗಳಲ್ಲಿ ಪರೋಕ್ಷ ಅಥವಾ ಭಾಗಶಃ ನಿಯಂತ್ರಣ ಹೊಂದಿರುತ್ತಾನೆ. ಸಹಭಾಗಿತ್ವದ ಪ್ರಮುಖ ಸಂಗತಿ ಎಂದರೆ ಜನರು ಸತತವಾಗಿ ರಾಜಕೀಯ ನಿರ್ಣಯಗಳಲ್ಲಿ ಮತ್ತು ಅಧಿಕಾರದಲ್ಲಿ ಭಾಗವಹಿಸುವುದು ಮಾನವನ ಅಭಿವೃದ್ಧಿಯ ದೃಷ್ಟಿಯಿಂದ ಅಗತ್ಯ ಅಂಶವಾಗಿದೆ.[೨೪] ರಾಜಕೀಯ ಸಹಭಾಗಿತ್ವವನ್ನು ವ್ಯಾಖ್ಯಾನಿಸುವುದು ಅತ್ಯಂತ ಕ್ಲಿಷ್ಟಕರವಾದ ಸಂಗತಿಯಾಗಿದೆ. ಸಮಸ್ಯೆಯಾಗಿದೆ. ಸಹಭಾಗಿತ್ವವು ಯಾವ ಯಾವ ಸಂಗತಿಗಳನ್ನು ಒಳಗೊಂಡಿದೆ ಎಂಬುದನ್ನು ನಿರ್ಧರಿಸುವುದು ಕೂಡ ಸರಳವಾದ ಸಂಗತಿಯಲ್ಲ. ಏಕೆಂದರೆ ರಾಜಕೀಯ ಸಹಭಾಗಿತ್ವವು ವಿವಿಧ ಅಂಶಗಳ ಉತ್ಪಾದನೆಯಾಗಿದೆ.[೨೫]

ಕೆಲವು ಜನರು ಮಾತ್ರ ತಮ್ಮ ಪೂರ್ಣ ಸಮಯ ಮತ್ತು ಶಕ್ತಿಯನ್ನು ರಾಜಕಾರಣಕ್ಕೆ ಮೀಸಲಿಡುತ್ತಾರೆ ಮತ್ತೆ ಕೆಲವರು ತಟಸ್ಥ ವೀಕ್ಷಕರಾಗಿ ರಾಜಕಾರಣದ ಬಗ್ಗೆ ಆಸಕ್ತಿ ವಹಿಸುತ್ತಾರೆ. ಕೆಲವರಿಗೆ ರಾಜಕಾರಣ ನಿರಂತರವಾದ ಮತ್ತು ಜವಾಬ್ದಾರಿಯುತವಾದ ಸಂಗತಿಯಾಗಿದ್ದರೆ ಮತ್ತೆ ಕೆಲವರಿಗೆ ಸಮಸ್ಯೆಗಳು ಎದುರಾದಾಗ ಮಾತ್ರ ಬಳಕೆಯಾಗುವ ಸಂಗತಿಯಾಗುತ್ತದೆ. ಆದ್ದರಿಂದ ರಾಜಕೀಯ ಸಹಭಾಗಿತ್ವವು ಹೆಚ್ಚು ಸಂದರ್ಭೋಚಿತ ಮತ್ತು ತಟಸ್ಥತೆಯಿಂದ ಹೆಚ್ಚು ಕ್ರಿಯಾಶೀಲತೆ ಮತ್ತು ನಿರಂತರತೆಯತ್ತ ವಿಸ್ತಾರಗೊಳ್ಳುತ್ತದೆ.[೨೬] ರಾಜಕೀಯ ಸಹಭಾಗಿತ್ವ ಒಂದು ನಾಗರೀಕ ಕರ್ತವ್ಯ ಮತ್ತು ದೇಶದ ಉತ್ತಮ ರಾಜಕೀಯ ಆರೋಗ್ಯದ ಸೂಚಿಯಾಗಿದೆ. ರಾಜಕೀಯ ಸಹಭಾಗಿತ್ವವು ವಿಶಾಲವಾದ ಅರ್ಥವನ್ನು ಒಳಗೊಂಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಪ್ಪಿಗೆ ನೀಡುವ ಮತ್ತು ಹಿಂಪಡೆಯುವ ಪ್ರಮುಖ ಮಾಧ್ಯಮವಾಗಿ ರಾಜಕೀಯ ಸಹಭಾಗಿತ್ವವು ಕಾರ್ಯನಿರ್ವಹಿಸುತ್ತದೆ. ಮತ್ತು ಆಳುವವರು ಆಳಿಸಿಕೊಳ್ಳುವವರಿಗೆ ಉತ್ತರದಾಯಿಯಾಗುವಂತೆ ಮಾಡುತ್ತದೆ.[೨೭] ರಾಜಕೀಯ ಸಹಭಾಗಿತ್ವವೆಂದರೆ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲಾ ವಿವಿಧ ಸಮುದಾಯಗಳ ಪಾಲ್ಗೊಳ್ಳುವಿಕೆಯಾಗಿದೆ.[೨೮]

ರಾಜಕೀಯ ಪಾಲ್ಗೊಳ್ಳುವಿಕೆಯು ಎಲ್ಲ ರಾಜಕೀಯ ವ್ಯವಸ್ಥೆಗಳ ಅಗತ್ಯವಾದ ಅಂತರ್ಗತ ದ್ರವ್ಯವಾಗಿದೆ.[೨೯] ರಾಜಕೀಯ ಸಹಭಾಗಿತ್ವವನ್ನು ಮೇರನ್ ವೀನರ್ ವ್ಯಾಖ್ಯಾನಿಸುವ ಪ್ರಕಾರ, “ಸಾರ್ವಜನಿಕ ನೀತಿಗಳ ಆಯ್ಕೆಯಲ್ಲಿ ಸಾರ್ವಜನಿಕ ವ್ಯವಹಾರಗಳ ನಿರ್ವಹಣೆ ಮತ್ತು ರಾಜಕೀಯ ನಾಯಕರ ಆಯ್ಕೆಯ ಉದ್ದೇಶಕ್ಕಾಗಿ ಕೈಗೊಳ್ಳುವ ಯಶಸ್ವಿ ಅಥವಾ ವಿಫಲ, ಸಂಘಟಿತ ಅಥವಾ ಅಸಂಘಟಿತ, ಆಕಸ್ಮಿಕ ಅಥವಾ ನಿರಂತರವಾದ, ನ್ಯಾಯಾನುಸಾರವಾದ

ಅಥವಾ ನ್ಯಾಯಾನುಸಾರವಲ್ಲದ ವಿಧಾನಗಳನ್ನು ಒಳಗೊಂಡ ಸ್ವಯಂ ಕ್ರಿಯೆಗಳನ್ನು ರಾಜಕೀಯ ಸಹಭಾಗಿತ್ವ ಒಂಗೊಂಡಿದೆ.[೩೦] ರಾಜಕೀಯ ಸಹಭಾಗಿತ್ವವು ಖಾಸಗಿ ನಾಗರೀಕರ ಕಾನೂನು ಬದ್ಧ ಚಟುವಟಿಕೆಯಾಗಿದ್ದು ಅವುಗಳು ಹೆಚ್ಚು ಕಡಿಮೆ ನೇರವಾಗಿ ಸರ್ಕಾರಿ ಸಿಬ್ಬಂದಿಯ ಆಯ್ಕೆ ಮತ್ತು ಅವರ ಕ್ರಿಯೆಗಳನ್ನು ಪ್ರಭಾವಿಸುವ ಉದ್ದೇಶವನ್ನು ಹೊಂದಿರುತ್ತವೆ ಎನ್ನುವುದು ಸಿಡ್ನಿವೆರ್ಬ, ಸೀ.ಆಂಡ್ ಕಿಮ್ ಅವರ ಪ್ರತಿಪಾದನೆ.[೩೧] ಮಿಲ್‌ಬ್ರಾತ್ ಮತ್ತು ಗೋಯೆಲ್ ಪರಿಭಾವಿಸುವಂತೆ "ರಾಜಕೀಯ ಸಹಭಾಗಿತ್ವವು ಖಾಸಗಿ ವ್ಯಕ್ತಿಗಳ ಕಾರ್ಯಾಚರಣೆಯಾಗಿದ್ದು, ಇವುಗಳ ಮೂಲಕ ಸರ್ಕಾರ ಮತ್ತು ರಾಜಕಾರಣವನ್ನು ಪ್ರಭಾವಿಸುತ್ತಾರೆ ಅಥವಾ ಬೆಂಬಲಿಸುತ್ತಾರೆ. ಇತರೆ ವ್ಯಾಖ್ಯಾನಗಳಿಗೆ ಹೋಲಿಸಿದರೆ ಈ ವ್ಯಾಖ್ಯಾನ ವ್ಯಾಪಕವಾಗಿದೆ. ಇದು ಕೇವಲ ರಾಜಕೀಯ ಹುಟ್ಟಾವಳಿಗಳನ್ನು ಪ್ರಭಾವಿಸುವ ಕ್ರಿಯಾಶೀಲತೆಯನ್ನು ಒಳಗೊಂಡಿಲ್ಲ. ಬದಲಾಗಿ ಇದರೊಂದಿಗೆ ಬೆಂಬಲಿತ ಚಟುವಟಿಕೆಗಳನ್ನು ಸಹಭಾಗಿತ್ವ ಒಳಗೊಂಡಿದೆ.[೩೨] ಮ್ಯಾಕ್‌ಕ್ಲೋಸ್ಕಿ ವ್ಯಾಖ್ಯಾನಿಸುವಂತೆ, ರಾಜಕೀಯ ಸಹಭಾಗಿತ್ವವು ವ್ಯಕ್ತಿಗಳ ಸ್ವಯಂ ಚಟುವಟಿಕೆಗಳಾಗಿದ್ದು ಇವುಗಳ ಮೂಲಕ ಆಳುವವರನ್ನು ಆಯ್ಕೆ ಮಾಡಲು ಸಮಾಜದ ವ್ಯಕ್ತಿಗಳೊಂದಿಗೆ ಭಾಗವಹಿಸುತ್ತಾರೆ ಮತ್ತು ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೀತಿಗಳನ್ನು ರೂಪಿಸುವುದರಲ್ಲಿ ಜನರು ಭಾಗವಹಿಸುತ್ತಾರೆ.[೩೩] ರುಷ್ ಮತ್ತು ಅತೋಫ್ ವಿವರಿಸುವ ಪ್ರಕಾರ ರಾಜಕೀಯ ಸಹಭಾಗಿತ್ವವು ಮತದಾನ ಮತ್ತು ಸದಸ್ಯತ್ವವನ್ನು ಒಳಗೊಂಡಿದೆ ಅಥವಾ ಸಹಭಾಗಿತ್ವವು ರಾಜಕೀಯ ಗುಂಪುಗಳ ಚಟುವಟಿಕೆಗಳಾದ ಚಳುವಳಿ, ಪಕ್ಷಗಳು, ಒತ್ತಡ ಗುಂಪುಗಳಲ್ಲಿ ಭಾಗವಹಿಸುವ ಕ್ರಿಯಗೆ ಸಂಬಂಧಿಸಿದೆ. ರಾಜಕೀಯ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನವನ್ನು ಹೊಂದುವುದು ಅನೌಪಚಾರಿಕ ಚಟುವಟಿಕೆಗಳಾದ ರಾಜಕೀಯ ಚರ್ಚೆ, ರಾಜಕೀಯ ಸಭೆಗಳಲ್ಲಿ ಭಾಗವಹಿಸುವುದು, ಅಧಿಕಾರಿ ವರ್ಗವನ್ನು ರಾಜಕೀಯವಾಗಿ ಓಲೈಸಿಕೊಳ್ಳುವುದು ಮುಂತಾದ ಸಂಗತಿಗಳನ್ನು ಒಳಗೊಂಡಿದೆ.[೩೪] ರಾಜಕೀಯ ಸಹಭಾಗಿತ್ವವನ್ನು ವಿವಿಧ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ರಾಜಕೀಯ ಸಹಭಾಗಿತ್ವಕ್ಕೆ ವಿವಿಧ ವ್ಯಾಖ್ಯಾನಗಳನ್ನು ಸಂಕ್ಷಿಪ್ತಗೊಳಿಸುವುದಾರೆ ರಾಜಕೀಯ ಸಹಭಾಗಿತ್ವವು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಾಗಿದೆ ಮತ್ತು ಇದು ಸಮಾಜದ ಗುರಿಗಳನ್ನು ನಿಗದಿಪಡಿಸುವ ಮತ್ತು ಅವುಗಳ ಈಡೇರಿಕೆಗೆ ಮಾರ್ಗಗಳನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ನಾಗರಿಕರು ಭಾಗವಹಿಸುವುದನ್ನು ಖಾತ್ರಿಪಡಿಸುತ್ತದೆ. ಸಾಮಾನ್ಯವಾಗಿ ರಾಜಕೀಯ ಸಹಭಾಗಿತ್ವವು ಮತದಾನ, ಚರ್ಚೆ ಮತ್ತು ಆಯ್ಕೆಗಳ ಬದಲಾವಣೆ, ಸಭೆಗಳಲ್ಲಿ ಭಾಗವಹಿಸುವಿಕೆ, ವಂತಿಗೆ ನೀಡುವುದು ಮತ್ತು ಪ್ರತಿನಿಧಿಗಳೊಂದಿಗೆ ಸಂಪರ್ಕ ಸಾಧಿಸುವ ಚಟುವಟಿಕೆಗಳನ್ನು ಕೂಡ ಒಳಗೊಂಡಿದೆ.

೨.೪. ರಾಜಕೀಯ ಸಹಭಾಗಿತ್ವದ ಸೂಚಿಗಳು (Variables)

ರಾಜಕೀಯ ಸಹಭಾಗಿತ್ವ ಸಂಕೀರ್ಣವಾಗಿ ಗೋಚರಿಸುವ ಸಂಗತಿ. ಇದು ವಿವಿಧ ಸೂಚಿಗಳನ್ನು ಅವಲಂಬಿಸಿದೆ. ಮಿಲ್‌ಬ್ರಾತ್ ಪ್ರಕಾರ ರಾಜಕೀಯ ಸಹಭಾಗಿತ್ವವನ್ನು ಪ್ರಭಾವಿಸುವ ಸೂಚಿಗಳನ್ನು ಪ್ರಧಾನವಾದ ಮೂರು ಗುಂಪುಗಾಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ, ಮನಶಾಸ್ತ್ರೀಯ ಸೂಚಿಗಳು, ಸಾಮಾಜಿಕ ಸೂಚಿಗಳು, ಮತ್ತು ರಾಜಕೀಯ ಸೂಚಿಗಳು ಮುಖ್ಯವಾದವುಗಳು.

೧. ಮನಶಾಸ್ತ್ರೀಯ ಸೂಚಿ:

ಮನಶಾಸ್ತ್ರೀಯ ತೊಡಗಿಸಿಕೊಳ್ಳುವಿಕೆಯು ನಾಗರೀಕರು ರಾಜಕಾರಣ ಮತ್ತು ಸಾರ್ವಜನಿಕ ವ್ಯವರಹಾರಗಳ ಬಗ್ಗೆ ಎಷ್ಟು ಆಸಕ್ತಿ ಮತ್ತು ಕಾಳಜಿ ವಹಿಸುತ್ತಾರೆ ಎಂಬುದನ್ನು ಒಳಗೊಂಡಿದೆ.[೩೫] ಮನುಷ್ಯ ಒಂಟಿತನದಿಂದ ದೂರವಾಗಲು ಮತ್ತು ಇತರರ ಸಹಯೋಗ ಪಡೆಯಲು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾನೆ. ಮಾನವನ ಮನಶಾಸ್ತ್ರೀಯ ಮೂಲಭೂತ ಲಕ್ಷಣವೆಂದರೆ ಅವನು ಕುತೂಹಲ ಜೀವಿಯಾಗಿರುವುದು. ಮಾನವನ ಈ ಮನಶಾಸ್ತ್ರೀಯ ಲಕ್ಷಣವು ಅವನ ರಾಜಕೀಯ ಪಾಲ್ಗೊಳ್ಳುವಿಕೆಗೆ ಪ್ರಮುಖ ಕಾರಣವನ್ನು ಒದಗಿಸುತ್ತದೆ. ತಾನು ಜೀವಿಸುವ ರಾಜಕೀಯ ಪರಿಸರದ ಅರ್ಥವನ್ನು ಮತ್ತು ಮಾಹಿತಿಯನ್ನು ಪಡೆಯುವ ಕಾರಣಕ್ಕಾಗಿ ರಾಜಕಾರಣದಲ್ಲಿ ಪಾಲ್ಗೊಳ್ಳುತ್ತಾನೆ. ಈ ಎಲ್ಲಾ ಸಂಗತಿಗಳು ರಾಜಕೀಯ ಸಹಭಾಗಿತ್ವಕ್ಕಿರುವ ಮನಶಾಸ್ತ್ರೀಯ ಕಾರಣಗಳಿಗೆ ಮೂಲವಾಗಿವೆ. ಆದ್ದರಿಂದ ಮನಶಾಸ್ತ್ರೀಯ ಸೂಚಿಯು ಪ್ರಮುಖವಾದ ಸೂಚಿಯಾಗಿದ್ದು ವ್ಯಕ್ತಿಯ ರಾಜಕೀಯ ಉತ್ತೇಜನವನ್ನು ನಿರ್ಧರಿಸುತ್ತದೆ. ಆದ್ದರಿಂದ ಇದು ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದ ನಿಯಂತ್ರಿತ ವರ್ತನಾ ಸೂಚಿಯಾಗಿದೆ.

೨. ಸಾಮಾಜಿಕ ಸೂಚಿಗಳು:–

ರಾಜಕೀಯ ಸಹಭಾಗಿತ್ವವು ಸತತವಾಗಿ ಸಾಮಾಜಿಕ ಪರಿಸರದ ಪ್ರಭಾವಕ್ಕೆ ಒಳಗಾಗುತ್ತದೆ. ಮನುಷ್ಯನ ಸಾಮಾಜಿಕ ಲಕ್ಷಣಗಳಾದ ಸಮಾಜೋ – ಆರ್ಥಿಕ ಸ್ಥಿತಿ, ಅವನ ಸಾಮಾಜಿಕ ಗುಂಪು, ಅವನ ಶಿಕ್ಷಣ, ವಯಸ್ಸು, ಲಿಂಗ ಮತ್ತು ಧರ್ಮ ಮತ್ತು ಅವನು ವಾಸಿಸುವ ಗ್ರಾಮೀಣ ಮತ್ತು ನಗರ ಸ್ಥಳಿಗಳು ಮುಂತಾದ ಸಂಗತಿಗಳು ಅವನ ರಾಜಕೀಯ

ಸಹಭಾಗಿತ್ವವನ್ನು ಪ್ರಭಾವಿಸುತ್ತವೆ. ವ್ಯಕ್ತಿಯ ರಾಜಕೀಯ ಸಹಭಾಗಿತ್ವವನ್ನು ಪ್ರಭಾವಿಸುವ ಸಾಮಾಜಿಕ ಸಂಗತಿಗಳನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ವೃತ್ತಿ:–

ವ್ಯಕ್ತಿಯ ಸಮಾಜೋ – ಆರ್ಥಿಕ ಸ್ಥಿತಿಯು ಅವನ ರಾಜಕೀಯ ಸಹಭಾಗಿತ್ವವನ್ನು ಪ್ರಭಾವಿಸುತ್ತದೆ. ಉನ್ನತ ಉದ್ಯೋಗ, ಉತ್ತಮ ಆದಾಯ, ಹೆಚ್ಚು ಸಮೂಹ ಮಾಧ್ಯಮಗಳ ಸಂಪರ್ಕದಲ್ಲಿರುವವರು ರಾಜಾಕಾರಣದಲ್ಲಿ ಹೆಚ್ಚಾಗಿ ಭಾಗವಹಿಸುತ್ತಾರೆ ಎಂದು ಗ್ರಹಿಸಲಾಗುತ್ತದೆ. ಈ ಸಂಗತಿಗಳ ಕೊರತೆಗಳನ್ನು ಅನುಭವಿಸುವವರು ಕನಿಷ್ಟ ಪ್ರಮಾಣದಲ್ಲಿ ಭಾಗವಹಿಸುತ್ತಾರೆ. ಆರ್ಥಿಕವಾಗಿ ಸ್ಥಿತಿವಂತರು ರಾಜಕಾರಣದಲ್ಲಿ ಸಕ್ರೀಯವಾಗಿ ಭಾಗವಹಿಸಿದರೆ, ಬಡವನ ದೃಷ್ಟಿಯಲ್ಲಿ ರಾಜಕಾರಣಕ್ಕೆ ಅರ್ಥವಿರುವುದಿಲ್ಲ ಎಂದು ಭಾವಿಸಲಾಗುತ್ತಿದೆ.

ವಯಸ್ಸು:–

ರಾಜಕೀಯ ಸಹಭಾಗಿತ್ವವನ್ನು ವಯಸ್ಸು ಪ್ರಭಾವಿಸುತ್ತದೆ. ವಿವಿಧ ದೇಶಗಳ ಅಧ್ಯಯನಗಳು ಕಂಡುಕೊಂಡಿರುವಂತೆ ರಾಜಕೀಯ ಸಹಭಾಗಿತ್ವವು ಯವ್ವನದಲ್ಲಿ ಆರಂಭವಾಗಿ ಅದು ಮಧ್ಯ ವಯಸ್ಸಿನಲ್ಲಿ ಅಂತಿಮ ಘಟ್ಟಯನ್ನು ತಲುಪಿ ವೃದ್ದಾಪ್ಯದಲ್ಲಿ ನಿಧಾನವಾಗಿ ಕೊನೆಗೂಳ್ಳುತ್ತದೆ. ಮತದಾನವನ್ನು ಹೊರೆತುಪಡಿಸಿ ಉಳಿದ ಸಾಂಪ್ರದಾಯಿಕ ರಾಜಕೀಯ ಚಟುವಟಿಕೆಗಳಲ್ಲಿ ಹೆಚ್ಚು ಜನ ಭಾಗವಹಿಸುವುದಿಲ್ಲ. ಆಸ್ಟ್ರೇಲಿಯ, ಭಾರತ, ಜಪಾನ್, ನೈಜೇರಿಯ ಮತ್ತು ಅಮೇರಿಕದಲ್ಲಿ ಸಾಬೀತುಗೊಂಡಿದೆ.[೩೬] ಅಧ್ಯಯನ ಕಂಡುಕೊಂಡಿರುವ ಪ್ರಕಾರ ಪ್ರತಿಯೊಂದು ರಾಷ್ಟ್ರದಲ್ಲಿ ರಾಜಕೀಯ ಸಹಭಾಗಿತ್ವವು ಆರಂಭಿಕ ವಯೋಮಾನದಲ್ಲಿ ಆರಂಭಗೊಂಡು, ಮುಧ್ಯ ವಯಸ್ಸಿನಲ್ಲಿ ಉಚ್ರಾಯ ಸ್ಥಿತಿಯನ್ನು ತಲುಪಿ, ವೃದ್ಧಾಪ್ಯದಲ್ಲಿ ಕ್ಷೀಣಿಸುತ್ತದೆ. ಯವ್ವನದಲ್ಲಿ ಸಂಘರ್ಷಣಾತ್ಮಕ ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವ ಸ್ಥಿತಿ ಇರುವುದಿಲ್ಲ. ಅದೇ ಪ್ರಕಾರ ವೃದ್ದಾಪ್ಯದಲ್ಲಿ ರಾಜಕೀಯ ನಿರಾಸಕ್ತಿ ಆವರಿಸುತ್ತದೆ. ಹಾಗಾಗಿ ವೃದ್ಯಾಪ್ಯದಲ್ಲಿ ವ್ಯಕ್ತಿ ರಾಜಕೀಯ ನಿರಾಸಕ್ತಿ ಹೊಂದುತ್ತಾನೆ.

ಧರ್ಮ:–

ರಾಜಕೀಯ ಸಹಭಾಗಿತ್ವದ ಮೇಲೆ ಧರ್ಮದ ಪ್ರಭಾವವೂ ಇದೆ. ಧಾರ್ಮಿಕ ಮೌಲ್ಯಗಳು ರಾಜಕೀಯ ಕ್ರಿಯೆಗಳನ್ನು ಮತ್ತು ರಾಜಕೀಯ ಆಯೋಜನೆಗಳನ್ನು ನಿಯಮಾನುಸಾರ ಮತ್ತು ನ್ಯಾಯಾನುಸಾರಗೊಳಿಸುತ್ತವೆ. ಧರ್ಮದ ಸಂಪರ್ಕಗಳು ಮತದಾನ ವರ್ತನೆಯನ್ನು, ಇತರೆ ರಾಜಕೀಯ ವರ್ತನೆಯ ಪ್ರಕಟಣೆಗಳನ್ನು ಮತ್ತು ರಾಜಕೀಯ ಹೋರಾಟಗಳನ್ನು ಪ್ರಭಾವಿಸುತ್ತದೆ. ಧರ್ಮನಿರಪೇಕ್ಷ ಸಮಾಜದಲ್ಲಿ ಧರ್ಮ ಮತ್ತು ರಾಜಕಾರಣ ಪ್ರತ್ಯೇಕ ಹಾಗೂ

ಸ್ವತಂತ್ರವಾಗಿರಬೇಕೆಂದು ಅಪೇಕ್ಷಿಸಲಾಗುತ್ತದೆ. ಆದರೆ ಧರ್ಮ ವಿವಿಧ ಮಾರ್ಗಗಳ ಮೂಲಕ ರಾಜಕಾರಣವನ್ನು ಪ್ರಭಾವಿಸುತ್ತಲೇ ಬಂದಿದೆ. ಭಾರತದಲ್ಲಿ ಧರ್ಮದ ಜೊತೆಗೆ ಜಾತಿಯು ಪ್ರಭಲವಾದ ಅಂಶವಾಗಿದೆ.[೩೭] ಸ್ಥಳೀಯ ಮಟ್ಟ, ರಾಜ್ಯ ಮತ್ತು ಸಂಸದೀಯ ಪ್ರತಿನಿಧಿಗಳ ಆಯ್ಕೆಯಲ್ಲಿ ವ್ಯಕ್ತಿಯ ಜಾತಿಯು ಪ್ರಮುಖ ಪಾತ್ರವಹಿಸಿರುವುದನ್ನು ರಾಜಕೀಯ ಸಹಭಾಗಿತ್ವದ ವಿವಿಧ ಅಧ್ಯಯಗಳು ರುಜುವಾತುಪಡಿಸಿವೆ.[೩೮]

ಶಿಕ್ಷಣ :-

ಶಿಕ್ಷಣವು ಜನರಲ್ಲಿ ರಾಜಕೀಯ ಅರಿವನ್ನು ಮಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣದ ಮಟ್ಟ ಹೆಚ್ಚಾದಂತೆ ವ್ಯಕ್ತಿಯ ನಾಗರೀಕ ಪ್ರಜ್ಞೆ, ರಾಜಕೀಯ ಸಾಮರ್ಥ್ಯ, ಆಸಕ್ತಿ, ಜವಾಬ್ದಾರಿಗಳು, ಆತ್ಮ ವಿಶ್ವಾಸ ಮತ್ತು ರಾಜಕೀಯ ಅಭಿವ್ಯಕ್ತತೆ ಅಧಿಕಗೊಳ್ಳುತ್ತದೆ. ಉತ್ತಮ ಶಿಕ್ಷಣ ಹೊಂದಿರುವ ವ್ಯಕ್ತಿ ತಮ್ಮ ರಾಜಕೀಯ ಜ್ಞಾನ ಮತ್ತು ಆಸಕ್ತಿಯನ್ನು ಉತ್ತಮ ರೀತಿಯಲ್ಲಿ ತಮ್ಮ ಮಕ್ಕಳಿಗೆ ಕಲಿಸಿಕೊಡುವಲ್ಲಿ, ಯಶಸ್ವಿಯಾಗುತ್ತಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಮತ್ತು ರಾಜಕೀಯ ಸಹಭಾಗಿತ್ವಕ್ಕೆ ಶಾಶ್ವತವಾದ ಸಂಬಂಧವಿದೆ.[೩೯] ಅದ್ದರಿಂದ ಅನಕ್ಷರಸ್ಥ ವ್ಯಕ್ತಿಗಿಂತ ಅಕ್ಷರಸ್ಥ ವ್ಯಕ್ತಿಯು ರಾಜಕೀಯ ಪ್ರಕ್ರಿಯಯಲ್ಲಿ ಸಕ್ರೀಯವಾದ ಭಾಗವಹಿಸುತ್ತಾನೆ.

೩. ರಾಜಕೀಯ ಸೂಚಿಗಳು:-

ರಾಜಕೀಯ ಸಹಭಾಗಿತ್ವದ ಲಕ್ಷಣಗಳನ್ನು ಅರ್ಥ ಮಾಡಿಕೊಳ್ಳಲು ಸಾಮಾಜಿಕ ಪರಿಸರವನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯವಾಗುತ್ತದೆ. ಇದರ ಜೊತೆಗೆ ರಾಜಕೀಯ ಪರಿಸರವು ಸಹಭಾಗಿತ್ವವನ್ನು ಪ್ರಭಾವಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಮಾಜದಲ್ಲಿ ಅಧಿಕಾರ ಪಡೆಯಲು ರಾಜಕೀಯ ಸಹಭಾಗಿತ್ವವು ಮುಕ್ತ ಸ್ಪರ್ಧೆಯನ್ನು ಒದಗಿಸುತ್ತದೆ. ಈ ಸ್ಪರ್ಧೆಯು ಪ್ರಮುಖವಾಗಿ ಸ್ಥಾಪಿತ ಮತ್ತು ಸ್ವೀಕೃತವಾದ ವಿಧಾನಗಳನ್ನು ಅವಲಂಬಿಸಿರುತ್ತದೆ ಇವುಗಳನ್ನು ಅದರಲ್ಲಿ ಪ್ರಮುಖವಾದದ್ದು ಸಹಭಾಗಿತ್ವ ಸರ್ಕಾರಗಳ ಎಲ್ಲಾ ಕಾರ್ಯಕ್ರಮಗಳು ಮುಖ್ಯವಾಗುತ್ತವೆ. ವಿವಿಧ ಕಾರ್ಯಕ್ರಮಗಳ ಮೂಲಕ ನಿರ್ವಹಿಸಲ್ಪಡುತ್ತವೆ. ಆದರೆ, ಸರ್ಕಾರಗಳಿಂದ ಜನರು ಅಸಂತೃಪ್ತರಾಗಿರುತ್ತಾರೆ. ಬಹುಸಂಖ್ಯಾತ ಜನರಿಗೆ ರಾಜಕಾರಣದ ಬಗ್ಗೆ ಭಿನ್ನಾಭಿಪ್ರಾಯವಿದೆ. ಜನರಿಂದ ತಿರಸ್ಕರಿಸಲ್ಪಟ್ಟ ಸರ್ಕಾರ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತದೆ ಎಂದರ್ಥವಲ್ಲ. ಜನರ ಆಕಾಂಕ್ಷೆ ಮತ್ತು ಅಪೇಕ್ಷೆಗಳಿಗೆ ಸಾರ್ವಜನಿಕ ಕ್ರಿಯೆಗಳನ್ನು ಉತ್ತರದಾಯಿಯಾಗಿ ಇರುವಂತೆ ರೂಪಿಸಬೇಕಾದರೆ, ನಾಗರೀಕರು ಕನಿಷ್ಟ ಪಕ್ಷ ತಮ್ಮ ಪ್ರತಿನಿಧಿಗಳನ್ನು ಅಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಅಗತ್ಯ.[೪೦] ರಾಜಕೀಯ

ಸಹಬಾಗಿತ್ವದ ಮೇಲೆ ಇರುವ ಪ್ರಭಾವಗಳಲ್ಲಿ ರಾಜಕೀಯ ಪಕ್ಷಗಳ ಪ್ರಭಾವ ಪ್ರಮುಖವಾದದ್ದು, ರಾಜಕೀಯ ಮಾಹಿತಿ ಮತ್ತು ಘಟನೆಗಳನ್ನು ಅರ್ಥೈಸಲು, ಜನರ ರಾಜಕೀಯ ಸಹಭಾಗಿತ್ವವನ್ನು ಸಂಘಟಿಸಲು ಮತ್ತು ಸಾಧನವನ್ನಾಗಿಸಲು ರಾಜಕೀಯ ಪಕ್ಷಗಳನ್ನು ಹುಟ್ಟು ಹಾಕಲಾಗಿದೆ.[೪೧] ರಾಜಕೀಯ ಸಹಭಾಗಿತ್ವದಲ್ಲಿ ರಾಜಕೀಯ ಸೂಚಿಗಳು ನಿಸ್ಸಂದೇಹವಾದ ಪ್ರಮುಖ ಪಾತ್ರವಹಿಸುತ್ತವೆ.

೨.೫. ಭಾರತದಲ್ಲಿ ದಲಿತರ ರಾಜಕೀಯ ಸಹಭಾಗಿತ್ವ:

ಸಾಹಿತ್ಯ ವಿಮರ್ಶೆ:-

ದೇಶದ ವಿವಿಧ ಭಾಗಗಳಲ್ಲಿ ದಲಿತರ ಜೀವನದ ವಿವಿಧ ಆಯಾಮಗಳನ್ನು ಕುರಿತು ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ಬಹುತೇಕ ಅಧ್ಯಯನಗಳು ಸಮಾಜ ಶಾಸ್ತ್ರೀಯ, ಮಾನವ ಶಾಸ್ತ್ರೀಯ ನೆಲೆಯಲ್ಲಿ ಕೈಗೊಳ್ಳಲಾಗಿದ್ದು ಅವುಗಳಲ್ಲಿ ಕೆಲವು ರಾಜಕೀಯ ಸ್ವರೂಪವನ್ನು ಹೊಂದಿವೆ. ಆದರೆ ರಾಜಕೀಯ ವ್ಯವಸ್ಥೆಯಲ್ಲಿ ದಲಿತರ ಪಾಲ್ಗೊಳ್ಳುವದನ್ನು ಪ್ರಕ್ರಿಯೆಯನ್ನು ಅಧ್ಯಯನಕ್ಕೆ ಒಳಪಡಿಸುವುದು ಇಂದಿನ ಅಗತ್ಯವಾಗಿದೆ. ಇದುವರೆಗಿನ ಅಧ್ಯಯನಗಳನ್ನು ಅವಲೋಕಿಸಿದರೆ ದಲಿತರ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದ ಅಧ್ಯಯನಗಳ ಕೊರತೆ ಕಂಡು ಬರುತ್ತದೆ. ಅತ್ಯಂತ ಕಡಿಮೆಯಾಗಿವೆ. ರಜನಿ ಕೊಠಾರಿಯವರ ಅಧ್ಯಯನ ಹೇಳುವಂತೆ ಭಾರತೀಯ ಸಮಾಜದ ವಿವಿಧ ವರ್ಗಗಳ ಕ್ರೂಢೀಕರಣವು ಭಾರತದ ರಾಜಕಾರಣಕ್ಕೆ ಜಾತಿಯ ಲಕ್ಷಣವನ್ನು ಒದಗಿಸಿಕೊಟ್ಟಿದೆ. ವಿವಿಧ ರಾಜಕೀಯ ಪಕ್ಷಗಳು ತಮ್ಮ ಬೆಂಬಲದ ನೆಲೆಗಳನ್ನು ವಿಸ್ತರಿಸಿಕೊಳ್ಳಲು ವಿವಿಧ ಜಾತಿ ಗುಂಪುಗಳ ಕ್ರೂಢೀಕರಣವನ್ನು ಒಂದು ತಂತ್ರವಾಗಿ ಬಳಸುತ್ತಿವೆ.[೪೨] ಎಂ.ಎನ್.ಶ್ರೀನಿವಾಸ್ ಅವರು ಸಂಸ್ಕೃತೀಕರಣದ ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತಾರೆ. ಅವರ ಪ್ರಕಾರ ಸಂಸ್ಕೃತೀಕರಣವೆಂದರೆ, ಹಿಂದೂ ಸಮುದಾಯದ ತಳಜಾತಿಯ, ಬುಡಕಟ್ಟು ಜನಾಂಗ ಮತ್ತು ಇತರೆ ಗುಂಪುಗಳು ಉನ್ನತ ಜಾತಿ ಮತ್ತು ದ್ವಿಜರ ಮಾದರಿಯಲ್ಲಿ ತನ್ನ ಸಂಪ್ರದಾಯ, ಆಚರಣೆಗಳು, ವಿಚಾರಗಳನ್ನು ಮತ್ತು ಜೀವನ ವಿಧಾನವನ್ನು ಬದಲಾಯಿಸಿಕೊಳ್ಳುವ ಮೂಲಕ ಸಂಪ್ರದಾಯಗಳನ್ನು, ಆಚರಣೆಗಳನ್ನು ನಿರ್ವಹಿಸುತ್ತಾನೆ. ಸಂಸ್ಕೃತೀಕರಣದ ಮೂಲಕ ತಳಜಾತಿಗಳು ಮತ್ತು ಬುಡಕಟ್ಟು ಸಮುದಾಯಗಳು ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯುವ ಸಾಹಸ ಮಾಡುತ್ತವೆ. ಸಾಂಸ್ಕೃತೀಕರಣ ಪ್ರಕ್ರಿಯೆಯ ಮೂಲಕ ಸಾಮಾಜಿಕ ರಚನೆಯಲ್ಲಿ ಉನ್ನತ ಸ್ಥಾನಕ್ಕೆ ಹಕ್ಕೊತ್ತಾಯ ಮಂಡಿಸಲಾಗುತ್ತದೆ. (ಕ್ಲೈಮ್) ಹಾಗಾಗಿ ಇದು ಲಂಬಾಕಾರದ (ವರ್ಟಿಕಲ್) ಚಳುವಳಿಯಾಗಿದೆ. ಆದರೆ ಸಂಸ್ಕೃತೀಕರಣದಲ್ಲಿ

ಕೇವಲ ಸ್ಥಾನದ ಸುಧಾರಣೆಯಾಗುತ್ತದೆಯೇ ಹೊರತು ಮೂಲ ರಚನೆಯಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ.[೪೩] ಚಂಡಿದಾಸ್ ಅಧ್ಯಯನ ಹೇಳುವಂತೆ ಪರಿಶಿಷ್ಟ ಜಾತಿ ಸಮುದಾಯಗಳು ಸಮಾನತೆಯೊಂದಿಗೆ ಇರುವ ಅಂತರವನ್ನು ಕಂಡುಕೊಂಡಿದ್ದಾರೆ. ಕಳೆದ ಎರಡು ದಶಕಗಳಲ್ಲಿ ಸಾಮಾನ್ಯ ಸಮುದಾಯದೊಂದಿಗೆ ಪರಿಶಿಷ್ಟರನ್ನು ಸಮಾನವಾದ ಸ್ಥಾನಕ್ಕೆ ತರಲು ವಿಶೇಷ ರಿಯಾಯಿತಿಗಳನ್ನು ನೀಡಲಾಗಿದೆ. ಆದರೂ ಅವರ ಜೀವನದಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ ಇಂದಿಗೂ ಪರಿಶಿಷ್ಟ ಸಮುದಾಯಗಳು ಅಭಿವೃದ್ಧಿಯ ಅಂಚಿನಲ್ಲಿ ಉಳಿದುಕೊಂಡಿವೆ. ಕೃಷಿ ವಲಯದಲ್ಲಿ ಇಂದಿಗೂ ಸಾಮಾನ್ಯ ಸಮುದಾಯದೊಂದಿಗೆ ಹೋಲಿಸಿದರೆ, ಭೂಮಿ ಮತ್ತು ಹಿಡುವಳಿಗಳ ಗಾತ್ರದಲ್ಲಿ ಹಿಂದುಳಿದಿದ್ದಾರೆ. ನಗರೀಕರಣ, ಶಿಕ್ಷಣ ಮತ್ತು ತಲಾವರಮಾನದಲ್ಲೂ ಪರಿಶಿಷ್ಟರು ಅತ್ಯಂತ ಹಿಂದುಳಿದಿದ್ದಾರೆ.[೪೪] ಸತೀಶ್ ಸಬರ್ವಾಲ್ ಅವರು ಪಂಜಾಬ್ ರಾಜ್ಯದ ಮೂರು ಮೀಸಲು ವಿಧಾನಸಭೆಯ ಅಧ್ಯಯನ ಕೈಗೊಂಡಿದ್ದಾರೆ. ಅವರ ಅಧ್ಯಯನದ ಫಲಿತಗಳು ಕಂಡುಕೊಂಡಿರುವಂತೆ ಪರಿಶಿಷ್ಟ ಜಾತಿಯ ನಾಯಕರು ಸಾಪೇಕ್ಷವಾಗಿ ಸೀಮಿತ ರಾಜಕೀಯ ಸಂಪನ್ಮೂಲಗಳನ್ನು ಮತ್ತು ರಾಜಕೀಯ ಸಾಮಾಜಿಕರಣಗಳನ್ನು ಹೊಂದಿದ್ದಾರೆ. ಇಂತಹ ವಿಷಮ ಪರಿಸ್ಥಿತಿಯಿಂದಾಗಿ ಆಗಿರುವ ಪರಿಣಾಮವೇನೆಂದರೆ, ಪರಿಶಿಷ್ಟ ಜಾತಿಯ ನಾಯಕರು ದೃಢವಾದ ರಾಜಕೀಯ ನಿಲುವುಗಳನ್ನು ತೆಗೆದುಕೊಳ್ಳುವಲ್ಲಿ ವಿಫಲರಾಗಿದ್ದು, ಅವರು ಮೇಲ್ಜಾತಿ ಸಮುದಾಯಗಳ ಮತ್ತು ಸಂವಿಧಾನದ ಆಶ್ರಯವನ್ನು ಅವಲಂಭಿಸಿದ್ದಾರೆ. ಅಧ್ಯಯನ ಅಂತಿಮವಾಗಿ ಹೇಳುವಂತೆ, ರಾಜಕೀಯ ಮೀಸಲಾತಿ ಇಲ್ಲವಾದಲ್ಲಿ ರಾಜಕೀಯ ಕ್ಷೇತ್ರದ ವಿವಿಧ ಗಣ್ಯರ ಸಂರಚನೆಯಲ್ಲಿ ಪರಿಶಿಷ್ಟರ ಪ್ರವೇಶ ಸಾಧ್ಯವಾಗುವುದಿಲ್ಲ. ಇಂತಹ ಸ್ಥಿತಿ ಅಂತಿಮವಾಗಿ ಸಾಮಾಜಿಕ ಅಸಮಾನತೆಗೆ ಕಾರಣವಾಗುತ್ತದೆ. ಆದ್ದರಿಂದ ಅಧ್ಯಯನದಿಂದ ಸ್ಪಷ್ಟಗೊಳ್ಳುವ ಸಂಗತಿಯೆಂದರೆ, ಸಾಮಾಜಿಕ ಅಸಮಾನತೆಯನ್ನು ನಿವಾರಿಸುವ ಸಾಂಸ್ಥಿಕ ಯಂತ್ರೀಕರಣವನ್ನು ಗುಂಪುಗೂಡಿಸಲು ಪರಿಶಿಷ್ಟ ನಾಯಕರು ರಾಜಕೀಯ ಮೀಸಲಾತಿಯಿಂದ ಸ್ಫೂರ್ತಿಯನ್ನು ಪಡೆದುಕೊಂಡಿಲ್ಲ. ಆದರೆ, ಪರಿಶಿಷ್ಟರ ಸಕ್ರೀಯ ರಾಜಕೀಯ ಪಾಲ್ಗೊಳ್ಳುವಿಕೆಗೆ ಮೀಸಲು ಕ್ಷೇತ್ರಗಳು ಅನಿವಾರ್ಯವಾಗಿವೆ.[೪೫]

ಘನಶ್ಯಾಂ ಷಾ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಅರಿವು ಮತ್ತು ರಾಜಕೀಯ ವರ್ತನೆ ಕುರಿತು ಅಧ್ಯಯನವನ್ನು ಕೈಗೊಂಡಿದ್ದಾರೆ. ಇವರ ಅಧ್ಯಯನ ಕಂಡುಕೊಂಡಿರುವಂತೆ ಕಳೆದ ಎರಡು ದಶಕಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಪಾಲ್ಗೊಳ್ಳುವಿಕೆ ಗ್ಣಣನೀಯವಾಗಿ ಹೆಚ್ಚಳವಾಗಿದೆ. ಆದರೆ ಪರಿಶಿಷ್ಟ ಸಮುದಾಯದ ಮತ್ತು ಉನ್ನತ ಜಾತಿಗಳ ರಾಜಕೀಯ ಸಹಭಾಗಿತ್ವದ ನಡುವಿನ ಅಂತರವನ್ನು

ಕಡಿಮೆ ಮಾಡುವಲ್ಲಿ ರಾಜಕೀಯ ಪಕ್ಷಗಳು ವಿಫಲವಾಗಿವೆ. ಈ ಅಧ್ಯಯನವನ್ನು ಗುಜರಾತ್ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಸಹಭಾಗಿತ್ವದ ಸ್ವರೂಪ ಮತ್ತು ಮಟ್ಟವನ್ನು ಕಂಡುಕೊಳ್ಳಲು ಕೈಗೊಳ್ಳಲಾಗಿದೆ.[೪೬]

ಎನ್.ಡಿ. ಪಾಮರ್ ಅವರು ದಕ್ಷಿಣ ಏಷ್ಯಾ ದೇಶಗಳಾದ ಭಾರತ, ಪಾಕಿಸ್ತಾನ, ಶ್ರೀಲಂಕ ಮತ್ತು ನೇಪಾಳವನ್ನು ಕುರಿತು ಅಧ್ಯಯನ ಕೈಗೊಂಡಿದ್ದಾರೆ. ಈ ಅಧ್ಯಯನದ ಬಹುಭಾಗವನ್ನು ಭಾರತದ ಚುನಾವಣೆಗಳು ಮತ್ತು ರಾಜಕೀಯ ವರ್ತನೆಗೆ ಮೀಸಲಿರಿಸಲಾಗಿದೆ. ಚುನಾವಣಾ ರಾಜಕೀಯ ಮತ್ತು ರಾಜಕೀಯ ವರ್ತನೆಯನ್ನು ಭಾರತದ ರಾಜಕೀಯ ಅಭಿವೃದ್ಧಿಯ ಪ್ರಕ್ರಿಯೆಯೊಂದಿಗೆ ಸಮೀಕರಿಸುವ ಪ್ರಯತ್ನವನ್ನು ಅಧ್ಯಯನದಲ್ಲಿ ಮಾಡಲಾಗಿದೆ. ರಾಜಕೀಯ ವ್ಯವಸ್ಥೆಯಲ್ಲಿ ಚುನಾವಣಾ ಕಾರ್ಯಗಳಾದ ರಾಜಕೀಯ ಆಯ್ಕೆ, ರಾಜಕೀಯ ಸಹಭಾಗಿತ್ವ ಮತ್ತು ರಾಜಕೀಯ ಸಾಮಾಜೀಕರಣವನ್ನು ಅರ್ಥ ಮಾಡಿಕೊಳ್ಳುವ ಸಂಗತಿಗೆ ಹೆಚ್ಚು ಒತ್ತು ನೀಡಿದ್ದಾರೆ. ೧೯೫೧ ರಿಂದ ೧೯೭೨ ರ ಚುನಾವಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಸಾಮಾನ್ಯರ ಮತದಾನದ ವರ್ತನೆಯನ್ನು ಪ್ರಭಾವಿಸುವ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಆದರೆ ದಲಿತರ ಮತದಾನದ ವರ್ತನೆಯನ್ನು ಪ್ರಭಾವಿಸುವ ಅಂಶಗಳನ್ನು ಅಧ್ಯಯನ ಕಂಡುಕೊಂಡಿಲ್ಲ.[೪೭] ಎಸ್.ಎಲ್. ಮಹಾರಿಯ ಅವರ ಅಧ್ಯಯನ ದುರ್ಬಲ ವರ್ಗಗಳ ಮೇಲೆ ಸರ್ಕಾರದ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಪರಿಣಾಮವನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ನಿಗಧಿಗೊಳಿಸಿದ ಗುಣಮಟ್ಟದಿಂದ ಅತ್ಯಂತ ಕೆಳಗಿರುವ ಮತ್ತು ಸಮಾಜದ ಅತ್ಯಂತ ಕೆಳಮಟ್ಟದಲ್ಲಿ ನಿಗದಿಗೊಳಿಸಲ್ಪಟ್ಟವರನ್ನು ದುರ್ಬಲ ಸಮುದಾಯದವರು ಎಂದು ವ್ಯಾಖ್ಯಾಪಿಸಲಾಗಿದೆ. ಅಸ್ಪೃಷ್ಯತೆ, ಕೆಳಮಟ್ಟದ ಸಾಮಾಜಿಕ ಸ್ಥಾನಮಾನ, ಅಶುದ್ಧ ವೃತ್ತಿಗಳು, ಬಡತನ ಮತ್ತು ನಿರುದ್ಯೋಗ, ಶಿಕ್ಷಣದ ಕೊರತೆ ಮತ್ತು ತಳಮಟ್ಟದ ಜೀವನ ಮಟ್ಟ ಮುಂತಾದವುಗಳು ದುರ್ಬಲ ಸಮುದಾಯಗಳ ಲಕ್ಷಣಗಳಾಗಿವೆ. ಸರ್ಕಾರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರೂ ಅವುಗಳು ದುರ್ಬಲ ಸಮುದಾಯವನ್ನು ಪ್ರಭಾವಿಸಿಲ್ಲ. ಏಕೆಂದರೆ ಸಂಪನ್ಮೂಲಗಳು ಲಭ್ಯವಿದ್ದರೂ ಅವುಗಳ ಉಪಯೋಗಿಸಿಕೊಳ್ಳುವಿಕೆಯನ್ನು ನಿರ್ಬಂಧಿಸಲಾಗಿದೆ ಮತ್ತು ಸಂಪನ್ಮೂಲಗಳು ಉಪಯೋಗಿಸಿಕೊಳ್ಳುವ ಸಾಮರ್ಥ್ಯವನ್ನು ದುರ್ಬಲ ಸಮುದಾಯಗಳು ಹೊಂದಿಲ್ಲ.[೪೮] ಲೀಲಾ ವಸಾರಿಯ ಅವರು ತಮಿಳುನಾಡಿನ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು ೧೦೦೦ ಗ್ರಾಮೀಣ ಕುಟುಂಬಗಳಲ್ಲಿ ೮೦೦ ಹರಿಜನರನ್ನು ಮತ್ತು ೨೦೦ ಹರಿಜನೇತರ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕ ಸೂಚಿಯನ್ನು ಆಧರಿಸಿ ಹರಿಜನರು ಅನುಭವಿಸುತ್ತಿರುವ ತಾರತಮ್ಯ ಮತ್ತು ೧೯೫೦ ರಿಂದ ೧೯೭೦ರ ಎರಡು ದಶಕಗಳಲ್ಲಿ

ಬಡತನದಲ್ಲಾಗಿರುವ ಪರಿವರ್ತನೆಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಿತ್ತು. ಅಧ್ಯಯನ ಕಂಡುಕೊಂಡಿರುವ ಪ್ರಕಾರ ೧೯೭೦ ರ ದಶಕದಲ್ಲಿ ಹರಿಜನರ ತಲಾ ವರಮಾನ ೨೭೦ ರೂ. ಇದ್ದು, ಹರಿಜನೇತರ ತಲಾವರಮಾನ ೪೦೬ ರೂಪಾಯಿಗಳಾಗಿದ್ದವು. ಹರಿಜನರು ಮತ್ತು ಹರಿಜನೇತರರು ಕೂಲಿ ಕೆಲಸಗಳಲ್ಲಿ ತೊಡಗಿದ್ದು ಅವರಿಬ್ಬರ ಕೂಲಿಗಳಲ್ಲಿ ವ್ಯತ್ಯಾಸಗಳಿವೆ. ಸಣ್ಣ ಹಿಡುವಳಿ ಮತ್ತು ಕಡಿಮೆ ಕೂಲಿಯ ವೃತ್ತಿಗಳಿಂದಾಗಿ ಹರಿಜನರ ಆದಾಯಗಳು ಕಡಿಮೆಯಾಗಿವೆ.[೪೯] ಪ್ರಕಾಶ್ .ಎನ್. ಪಿಂಪ್ಲೆ ಅವರು ಪಂಜಾಬ್ ವಿದ್ಯಾರ್ಥಿಗಳ ಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅಸಮಾನತೆಯ ತೊಂದರೆಗಳು ಹಾಗೂ ತಾರತಮ್ಯದ ಅನುಭವಗಳನ್ನು ಅರ್ಥ ಮಾಡಿಕೊಳ್ಳುವ ಉದ್ದೇಶದಿಂದ ಅಧ್ಯಯನವನ್ನು ಕೈಗೊಂಡಿದ್ದಾರೆ. ೪೮೭ ವಿದ್ಯಾರ್ಥಿಗಳ ನಮೂನೆಯನ್ನು ಆಧರಿಸಿದ ಅಧ್ಯಯನ ಕಂಡುಕೊಂಡಿರುವಂತೆ ರಾಜ್ಯ ಸರ್ಕಾರ ನೀಡಿರುವ ಶೈಕ್ಷಣಿಕ ಸವಲತ್ತುಗಳನ್ನು ಪರಿಶಿಷ್ಟ ಜಾತಿ ಸಮುದಾಯದ ವಿದ್ಯಾರ್ಥಿಗಳು ಸೂಕ್ತ ರೀತಿಯಲ್ಲಿ ವಿನಿಯೋಗಿಸಿಕೊಂಡಿಲ್ಲ. ಸೂಕ್ತ ರೀತಿಯಲ್ಲಿ ವಿನಿಯೋಗಿಸಿಕೊಳ್ಳಲು ಇರುವ ಕಾರಣಗಳೆಂದರೆ ಒಂದು, ಬಡತನ ಮತ್ತೊಂದು ಶಿಕ್ಷಣದ ಸಂಸ್ಕೃತಿಯ ಕೊರತೆಯಾಗಿದೆ. ಅಧ್ಯಯನ ಹೇಳುವ ಪ್ರಕಾರ ಪರಿಶಿಷ್ಟ ಜಾತಿ ಸಮುದಾಯದ ಸ್ಥಿತಿಗಳ ಸುಧಾರಣೆಗೆ ಸಾಮಾಜಿಕ ರಚನೆಯಲ್ಲಿ ಕ್ರಾಂತಿಕಾರಕ ಬದಲಾವಣೆಯ ಅಗತ್ಯವಿದೆ.

೨.೬ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ದಲಿತರ ಸಹಭಾಗಿತ್ವ

ಪ್ರಜಾಪ್ರಭುತ್ವದಲ್ಲಿ ಎಲ್ಲಾ ಸಮುದಾಯದವರ ಜೊತೆಗೆ ದಲಿತ ಸಹಭಾಗಿತ್ವವು ಅತಿಮುಖ್ಯವಾದುದು. ವಿವಿಧ ಅಧ್ಯಯನಗಳು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ದಲಿತ ಸಮುದಾಯದ ಪಾಲ್ಗೊಳ್ಳುವಿಕೆಯ ವಿವಿಧ ಆಯಾಮಗಳನ್ನು ಸ್ಪಷ್ಟಪಡಿಸುತ್ತವೆ. ಗುರುಮೂರ್ತಿಯವರ ಅಧ್ಯಯನ ಹೇಳುವಂತೆ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ದುರ್ಬಲ ವರ್ಗಗಳ ಪಾಲ್ಗೊಳ್ಳುವಿಕೆ ತೃಪ್ತಿಕರವಾಗಿಲ್ಲ. ದಲಿತರ ಕನಿಷ್ಠ ಶಿಕ್ಷಣ ಮತ್ತು ದುರ್ಬಲ ಆರ್ಥಿಕತೆಯಿಂದಾಗಿ ಗ್ರಾಮ ಸಭೆಯ ಮತ್ತು ಪಂಚಾಯತ್‌ಗಳ ಸಭೆ ಹಾಗೂ ಪ್ರಕ್ರಿಯೆಯಲ್ಲಿ ಅವರ ಪಾಲ್ಗೊಳ್ಳುವಿಕೆ ಸಕ್ರೀಯವಾಗಿಲ್ಲ. ಇದು ೧೯೯೩ರ ಸಂವಿಧಾನ ತಿದ್ದುಪಡಿ ಪೂರ್ವದ ನೋಟವಾಗಿದೆ.[೫೦] ಶ್ಯಾಮಲ ಅವರ ಅಧ್ಯಯನದ ಫಲಿತಗಳು ಹೇಳುವಂತೆ, ಪರಿಶಿಷ್ಟ ಜಾತಿಯಲ್ಲಿ ಹೊಸ ನಾಯಕತ್ವ ಉಗಮವಾಗುತ್ತಿದ್ದು, ಅದು ಅಭಿವೃದ್ಧಿಪರವಾದ ಮತ್ತು ಚಲನೆಯ ಪರವಾದ ಸಂಕೇತವಾಗಿದೆ. ಈ ಹೊಸ ನಾಯಕತ್ವವು ಭೂರಹಿತ ವರ್ಗವಾಗಿದ್ದಾರೆ. ಎರಡನೆಯದಾಗಿ ಬೇರುಮಟ್ಟದ ಜನತೆಗೆ ಅಧಿಕಾರ ವರ್ಗಾಯಿಸುವ ಪ್ರಕ್ರಿಯೆ ಆರಂಭವಾಗಿದೆ. ಗ್ರಾಮೀಣ ಭಾಗದ ಮೀಸಲಾತಿ ನೀತಿಯು ಅಧಿಕಾರ

ಸಂರಚನೆಯನ್ನು ಬದಲಾಯಿಸಿ ನಿರ್ಲಕ್ಷಿತ ಸಮುದಾಯಗಳಿಗೆ ಅಧಿಕಾರ ಪ್ರಾಪ್ತಿಯಾಗುತ್ತಿದೆ. ಹೊಸ ತಲೆಮಾರು ಪಂಚಾಯತ್ ರಾಜ್ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಆರಂಭಿಸಿದ್ದಾರೆ. ಆದರೆ ಈ ಪಾಲ್ಗೊಳ್ಳುವಿಕೆ ತೃಪ್ತಿಕರವಾಗಿದೆ ಎಂದು ಅರ್ಥವಲ್ಲ. ಪಂಚಾಯತ್ ಸಂಸ್ಥೆಗಳನ್ನು ಪ್ರವೇಶಿಸಿದ ಹೊಸ ತಲೆಮಾರು ಪಾಲ್ಗೊಳ್ಳುವಿಕೆಗೆ ಬೇಕಾದ ಜ್ಞಾನ ಮತ್ತು ಕೌಶಲ್ಯಗಳನ್ನು ರೂಢಿಸಿಕೊಂಡಾಗ ಅರ್ಥಪೂರ್ಣ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ. ಕೆಲವು ದಲಿತರು ಮಾತ್ರ ಬಲಿಷ್ಠ ವರ್ಗಗಳ, ಬಲಿಷ್ಠ ಸಮುದಾಯಗಳ ವಕ್ತಾರರಾಗಿದ್ದಾರೆ. ಮಹಿಳೆಯರಲ್ಲಿ ಇವರ ಸಂಖ್ಯೆ ಹೆಚ್ಚಾಗಿ ಕಂಡು ಬರುತ್ತದೆ. ಗ್ರಾಮ ಸಭೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಇನ್ನಷ್ಟು ಕಾಲ ದೂರ ಕ್ರಮಿಸಬೇಕಾದ ಅಗತ್ಯವಿದೆ. ಈ ಅಧ್ಯಯನದ ಅಂತಿಮ ಫಲಿತ ಹೇಳುವಂತೆ ೭೩ರ ಸಂವಿಧಾನ ತಿದ್ದುಪಡಿಯ ನಂತರ ಪಂಚಾಯತ್‌ಗಳಲ್ಲಿ ವಿಭಿನ್ನ ಚಿತ್ರಣ ಕಂಡು ಬರುತ್ತಿದೆ.[೫೧]

ವಿಜಯಕುಮಾರ್ ಅವರು, ಬದಲಾದ ರಾಜಕೀಯ ಸಂದರ್ಭದಲ್ಲಿ ಉತ್ತರ ಪ್ರದೇಶದ ಒಟ್ಟು ಆರು ಪಂಚಾಯತ್‌ಗಳ ಅಧ್ಯಕ್ಷರ ಕಾರ್ಯನಿರ್ವಹಣೆಯನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಫಲಿತಗಳು ಹೇಳುವಂತೆ, ಪರಿಶಿಷ್ಟ ಜಾತಿಯ ಅಧ್ಯಕ್ಷರುಗಳು ಸರ್ಕಾರಗಳು ದಲಿತರ ಅಭಿವೃದ್ಧಿಗೆ ರೂಪಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆ ಸಮುದಾಯಕ್ಕೆ ಮುಟ್ಟಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿದ್ದಾರೆ. ಆದರೆ ಇದು ಇತರೆ ಸಮುದಾಯದ ಅಧ್ಯಕ್ಷರಿಗೆ ಇದು ಸಾಧ್ಯವಾಗಿಲ್ಲ. ಆದರೆ ಮೇಲ್ಜಾತಿಯ ಸಮುದಾಯಗಳು ದಲಿತ ಅಧ್ಯಕ್ಷರಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಂತೆ ಸಾಮಾಜಿಕ ರಚನೆಯಲ್ಲಿ ಕ್ಷಿಷ್ಟತೆಯನ್ನು ಸೃಷ್ಟಿಸುತ್ತಿದ್ದಾರೆ.[೫೨]

ಸುಮತಿ ಎಸ್. ಮತ್ತು ವಿ.ಸುದರ್ಶನ್ ಅವರು ತಮಿಳುನಾಡಿನ ಮಧುರೈ ಜಿಲ್ಲೆಯ ಪಪ್ಪಪಟ್ಟಿ ಪಂಚಾಯತ್‌ಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಅಭಿಪ್ರಾಯವೆಂದರೆ, ಆಯ್ಕೆಗೊಂಡ ದಲಿತ ಪಂಚಾಯತ್ ಅಧ್ಯಕ್ಷರಿಗೆ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಲಾಗುತ್ತಿಲ್ಲ. ಅಧ್ಯಕ್ಷನ ಸ್ಥಾನ ದಲಿತ ಸಮುದಾಯಕ್ಕೆ ಮೀಸಲಾಗಿರುವ ಸ್ಥಳಗಳಲ್ಲಿ ಮೇಲ್ಜಾತಿಯಲ್ಲಿ ದಲಿತ ಸಮುದಾಯದ ಸಮುದಾಯಗಳ ನಡುವೆ ಸಂಘರ್ಷ ನಿರ್ಮಾಣವಾಗುತ್ತಿದೆ. ದಲಿತರನ್ನು ಬೆಂಬಲಿಸುವ ಕೆಲವು ಮೇಲ್ಜಾತಿ ಜನರನ್ನು ಇತರೆ ಮೇಲ್ಜಾತಿ ಜನರು ದಲಿತ ಎಂದು ಮೂದಲಿಸುತ್ತಾರೆ. ಕೆಲವು ಮೇಲ್ಜಾತಿ ಜನರಲ್ಲಿ ತಮ್ಮ ಗುಲಾಮರು ತಮ್ಮನ್ನು ಆಳುವಂತಿಲ್ಲ ಎಂಬ ಭಾವನೆ ಹೊಂದಿದ್ದಾರೆ. ಸಂವಿಧಾನ ಮತ್ತು ಸಂಸತ್ತಿನ ಹೆಸರಿನಲ್ಲಿ ದೇವರು ಸೃಷ್ಟಿಸಿದ ಸಂಪ್ರದಾಯ ಮತ್ತು ದೈವವನ್ನು ಪ್ರಶ್ನಿಸುವಂತಿಲ್ಲ. ಮೇಲ್ಜಾತಿಯ ಯುವಕರು

ಕೂಡ ದಲಿತರು ಅಧ್ಯಕ್ಷನಾಗುವುದನ್ನು ವಿರೋಧಿಸುತ್ತಾರೆ. ಹಾಗಾಗಿ ಈ ಪ್ರದೇಶಗಳಲ್ಲಿ ಸಂವಿಧಾನದ ೭೩ನೇ ತಿದ್ದುಪಡಿಯ ಆಶಯಗಳನ್ನು ಮೂಲೆಗುಂಪು ಮಾಡಲಾಗಿದೆ.[೫೩]

ವೆಂಕಟರವಿಯವರು ಆಂಧ್ರಪ್ರದೇಶದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ದಲಿತರ ಪಾಲ್ಗೊಳ್ಳುವಿಕೆಯನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಫಲಿತಗಳು ಹೇಳುವಂತೆ, ಪರಿಶಿಷ್ಟ ಜಾತಿಯ ವ್ಯಕ್ತಿ ಅಧ್ಯಕ್ಷನಾಗಿರುವ ಪಂಚಾಯತ್‌ಗಳಲ್ಲಿ ಮೇಲ್ವರ್ಗದವರು ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಈ ಪ್ರದೇಶದ ದಲಿತರಿಗೆ ಸಂವಹನ ಸಂಪರ್ಕ ಮತ್ತು ಅರಿವಿನ ಕೊರತೆ ಇದೆ. ಆದರೆ ೪೦ ವರ್ಷ ಮೇಲ್ಪಟ್ಟ ದಲಿತ ಅಧ್ಯಕ್ಷರು ಕಡಿಮೆ ಸಮಸ್ಯೆಗಳನ್ನು ಎದುರಿಸಿದ್ದು, ೪೦ ವರ್ಷದ ಒಳಗಿನ ದಲಿತ ಅಧ್ಯಕ್ಷರು ಹೆಚ್ಚು ಸಮಸ್ಯೆಗಳನ್ನು ಎದುರಿಸಿದ್ದಾರೆ. ಕಡಿಮೆ ವಯೋಮಾನದ ದಲಿತ ಅಧ್ಯಕ್ಷರು ಅಧಿಕಾರಿಗಳೊಂದಿಗೆ ವ್ಯವಹರಿಸುವಲ್ಲಿ ಸಂವಹನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಮೇಲ್ಜಾತಿಯ ಹಿರಿಯ ನಾಯಕರು ಹೆಚ್ಚು ಪ್ರಾಬಲ್ಯ ಹೊಂದಿದ್ದಾರೆ. ದಲಿತ ಸಮುದಾಯದಲ್ಲಿ ಪುರುಷರ ಪಾಲ್ಗೊಳ್ಳುವಿಕೆ ಸಕ್ರೀಯವಾಗಿದ್ದು ಮಹಿಳೆಯರ ಪಾಲ್ಗೊಳ್ಳುವಿಕೆ ಸಕ್ರೀಯವಾಗಿಲ್ಲ. ಪಂಚಾಯತ್‌ಗೆ ಆಯ್ಕೆಗೊಂಡ ದಲಿತ ಪುರುಷರು ನಿಯತಕಾಲಿಕವಾಗಿ ರಾಜಕೀಯ ಪಕ್ಷಗಳ ಸಭೆಗೆ ಪಾಲ್ಗೊಳ್ಳುತ್ತಿದ್ದಾರೆ.[೫೪]

ಜಿ.ಕೆ.ಲಿಟೆನ್ ಅಧ್ಯಯನ ಹೇಳುವ ಪ್ರಕಾರ, ಪಶ್ಚಿಮ ಬಂಗಾಳ ಸರ್ಕಾರ ಪಂಚಾಯತ್ ಸಂಸ್ಥೆಗಳನ್ನು ಸಬಲೀಕರಿಸುವ ಮೂಲಕ ಕೃಷಿ ಅಭಿವೃದ್ಧಿ ಮತ್ತು ಬಡವರ ಪರವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಪಂಚಾಯತ್ ಸಂಸ್ಥೆಗಳಲ್ಲಿ ಬಡವರು ಪರಿಣಾಮಕಾರಿಯಾಗಿ ಪಾಲ್ಗೊಳ್ಳುವ ಕ್ರಮಗಳನ್ನು ಕೈಗೊಂಡಿದೆ.[೫೫]

ಪರಿಶಿಷ್ಟ ಜಾತಿಗಳು ಪಂಚಾಯತ್ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವ ಕ್ರಮ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿವೆ. ನೀರಸ ಪಾಲ್ಗೊಳ್ಳುವಿಕೆಯಿಂದ ಸಕ್ರೀಯ ಪಾಲ್ಗೊಳ್ಳುವಿಕೆಗೆ ಪರಿವರ್ತನೆಯಾಗುತ್ತಿದೆ. ಹೊಸ ಮತ್ತು ಅಭಿವೃದ್ಧಿಪರವಾದ ದಲಿತ ನಾಯಕತ್ವ ಗ್ರಾಮೀಣ ಭಾಗದಲ್ಲಿ ಹೊಮ್ಮುತ್ತಿದೆ. ಮೀಸಲಾತಿ ನೀತಿಯು ಅಧಿಕಾರ ಸಂರಚನೆಯನ್ನು ದಲಿತರ ಮತ್ತು ನಿರ್ಲಕ್ಷಿತ ಸಮುದಾಯಗಳ ಪರವಾಗಿ ಪರಿವರ್ತನೆಯಾಗುತ್ತಿದೆ. ದಲಿತ ಪ್ರತಿನಿಧಿಗಳು ತಮ್ಮ ಸಮುದಾಯಗಳಿಗೆ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವಲ್ಲಿ ಶ್ರಮವಹಿಸುತ್ತಿದ್ದಾರೆ. ಪ್ರತ್ಯೂಷ್ಣ ಪ್ರಟ್ನಾಯಕ್ ಅವರು ಒರಿಸ್ಸಾ ರಾಜ್ಯದ ಡೆಂಕನಲ್ ಜಿಲ್ಲೆಯಲ್ಲಿ ಪಂಚಾಯತ್ ಪ್ರತಿನಿಧಿಗಳು ತಮಗೆ ಸಿಕ್ಕ ಅಧಿಕಾರವನ್ನು ಪರಿಣಾಮಕಾರಿಯಾಗಿ ಚಲಾಯಿಸುವಲ್ಲಿ ಯಶಸ್ವಿಯಾಗಿದ್ದಾರೆಯೇ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಪ್ರಕಾರ ಬಹುಸಂಖ್ಯಾತ ಪ್ರತಿನಿಧಿಗಳು ಪರಿಣಾಮಕಾರಿಯಾಗಿ ಅಧಿಕಾರ ಚಲಾವಣೆ ಮಾಡದೆ ತಮ್ಮ ಸಮುದಾಯದ ಹಿತಾಸಕ್ತಿಗಳನ್ನು

ಕಾಪಾಡುವಲ್ಲಿ ವಿಫಲರಾಗಿದ್ದು, ನಿರ್ಣಯ ಮತ್ತು ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಸೋತಿದ್ದಾರೆ. ಹಾಗಾಗಿ ನಿರ್ಲಕ್ಷಿತ ಸಮುದಾಯಗಳ ಪರಿಣಾಮಕಾರಿ ಅಧಿಕಾರ ಚಲಾವಣೆಯ ಪ್ರಶ್ನೆ ಎದುರಾಗಿದೆ. ಆದರೂ ನಿಧಾನಗತಿಯಲ್ಲಿ ನಿರ್ಲಕ್ಷಿತ ಸಮುದಾಯದ ಪ್ರತಿನಿಧಿಗಳು ಅರಿವನ್ನು ಪಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ತಮ್ಮ ಸಮುದಾಯವನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವ ಸೂಚನೆ ಕಂಡುಬರುತ್ತಿದೆ.

ಕೊನೆಟಿಪ್ಪಣಿ:

೧. ಜಾನ್ ಕ್ಯಾಂಪ್‌ಬೆಲ್, ರಿಲೀಜಿಯಸ್ ಫೆಸ್ಟಿವಲ್ಸ್ ಅಂಡ್ ಕಾಸ್ಟ್ ಸಿಸ್ಟಮ್ ಇನ್ ಇಂಡಿಯಾ, ನ್ಯೂಡೆಲ್ಲಿ, ಖಾನಾ ಪಬ್ಲಿಷರ್ಸ್, ೨೦೦೩, ಪು.೪೨,

೨ ರಂಜಿತ್ ರಾಜ್ಯಾಧ್ಯಕ್ಷ, ಎನ್‌ಸೈಕ್ಲೋಪಿಡಿಯ ಆಫ್ ಸೋಶಿಯಲ್ ಪ್ರಾಬ್ಲಮ್ಸ್, ಆಂಡ್ ಸೋಶಿಯಲ್ ಚೇಂಜ್, ನ್ಯೂಡೆಲ್ಲಿ, ಡಾಮಿನೆಂಟ್ ಪಬ್ಲಿಷರ್ಸ್, ೨೦೦೪, ಪು.೨೩೫

೩. ಮಾರ್ಕ್ ಜುಗೆನ್ಸ್‌ಮೇಯರ್, ರಿಲೀಜಿಯಲ್ ರೆಬೆಲ್ಸ್ ಇನ್ ಪಂಜಾಬ್: ದಿ ಸೋಶಿಯಲ್ ವಿಜನ್ಸ್ ಆಫ್ ಅನ್‌ಟಚೆಬಿಲಿಟಿ, ನ್ಯೂಡೆಲ್ಲಿ, ಅಜಂತಾ ಪಬ್ಲಿಕೇಷನ್ಸ್, ೧೯೮೮, ಪು.೧೪

೪. ವಿವೇಕ್ ಕುಮಾರ್, "ಸಿಚುಯೇಟಿಂಗ್ ದಲಿತ್ಸ್ ಇನ್ ಇಂಡಿಯನ್ ಸೊಸೈಟಿ", ಸೋಶಿಯೋಲಾಜಿಕಲ್ ಬುಲೆಟಿನ್, ವಾ.ಸಂ.೫೪, ಸಂ.೩, ಸೆಪ್ಟಂಬರ್-ಡಿಸೆಂಬರ್, ೨೦೧೫, ಪು.೫೧೪

೫. ಎಲಿಯನಾರ್ ಜೆಲಿಯಟ್, ಫ್ರಂ ಅನ್‌ಟಚೆಬಲ್ ಟು ದಲಿತ್ – ಎಸ್ಸೆ ಆನ್ ದಿ ಅಂಬೇಡ್ಕರ್ ಮೂವ್‌ಮೆಂಟ್, ನ್ಯೂಡೆಲ್ಲಿ, ಮನೋಹರ್ ಪಬ್ಲಿಕೇಷನ್, ೧೯೯೨, ಪು.೨೬೮

೬. ಘನಶ್ಯಾಮ್ ಷಾ, "ದಲಿತ್ ಮೂವ್‌ಮೆಂಟ್ ಅಂಡ್ ಸರ್ಚ್ ಆಫ್ ಐಡೆಂಟಿಟಿ" ಘನಶ್ಯಾಮ್ ಷಾ (ಸಂ), ದಲಿತ್ ಐಡೆಂಟಿಟಿ ಆಂಡ್ ಪೊಲಿಟಿಕ್ಸ್, ನ್ಯೂಡೆಲ್ಲಿ, ಸೇಜ್ ಪಬ್ಲಿಕೇಷನ್ಸ್, ೨೦೦೧, ಪು.೯೬

೭. ಎಲಿಯನಾರ್ ಜೆಲಿಯಟ್, ಪೋರ್ವೋಕ್ತ, ಪು.೭೭

೮. ಆಲಿವರ್ ಮೆಂಡಲ್‌ಸನ್ ಅಂಡ್ ಮಾರಿಕ ವಿಜಯಾನೆ, ದಿ ಅನ್‌ಟಚೆಬಲ್ಸ್: ಸಬಾರ್ಡಿನೇಷನ್, ಪವರ್ಟಿ ಆಂಡ್ ದಿ ಸ್ಟೇನ್ ಇನ್ ಮಾಡರ್ನ್ ಇಂಡಿಯ, ಯಂ.ಕೆ. ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೧೯೯೮, ಪು.೦೪.

೯. ಗೋಪಾಲ್ ಗುರು, "ಬಿ.ಪೊಲಿಟಿಕ್ಸ್, ಆಫ್ ನೇಮಿಂಗ್", ಸೆಮಿನಾರ್, ಸಂ.೪೭೧, ನವೆಂಬರ್, ೧೯೯೮, ಪು.೧೬

೧೦. ೧.ಪೂರ್ವೋಕ್ತ, ಗೋಪಾಲ ಗುರು, ಪು.೧೬

೧೧. ಎಂ.ಎನ್.ದಿವಾಕರ್, "ದಲಿತ್ ಕ್ವಷ್ಚನ್ ಆಫ್ ಇನ್‌ಇಕ್ವಾಲಿಟಿ, ಎಕ್ಸ್‌ಪ್ಲಾಯ್‌ಟೇಷನ್, ಆಂಡ್ ಮಾರಲೈಜೇಷನ್, : ಎ ಮೈಕ್ರೋ ವ್ಹೀವ್, ಆಫ್ ಗ್ರೌಂಡ್ ರಿಯಾಲಿಟೀಸ್", ದಿ ಮ್ಯಾನ್ ಆಂಡ್ ಡೆವಲಪ್‌ಮೆಂಟ್, ವಾ.ಸಂ.೨೧, ಸಂ.೩, ಸೆಪ್ಟಂಬರ್, ೧೯೯೯,

ಪು.೬೩

೧೨. ವಿವೇಕ್ ಕುಮಾರ್, ಪೋರ್ವೋಕ್ತ, ಪು.೫೧೬) ೧೯೭೩ರ ದಲಿತ ಪ್ಯಾಂಥರ್ ಚಳುವಳಿಯು ಪ್ರಕಟಿಸಿದ "ದಲಿತ ಯಾರು?" ಎಂಬ ಪ್ರಣಾಳಿಕೆಯನ್ನು ಪ್ರಕಟಿಸಿದೆ.

೧೩. ಗೋಪಾಲ ಗುರು, ಪೂರ್ವೋಕ್ತ ಪು–೧೬

೧೪ ಜೇಮ್ಸ್ ಮ್ಯಾಸ್ಸೆ, ಡೌನ್‌ಟ್ರೋನ್ ದ ಸ್ಟ್ರಗಲ್ ಆಫ್ ಇಂಡಿಯಾಸ್ ದಲಿತ್ಸ್ ಫಾರ್ ಐಡೆಂಟಿಟಿ, ಸಾಲಿಸ್ಯಾರಿಟಿ ಆಂಡ್ ಡೆಲಿಬರೇಷನ್, ಜಿನೆವಾ, ಡಬ್ಲ್ಯೂಸಿಸಿ ಪಬ್ಲಿಕೇಷನ್, ೧೯೯೭, ಪು.೦೩

೧೫. ಗೋಪಾಲಗುರು, ಪೂರ್ವೋಕ್ತ, ಪು.೧೭

೧೬. ಘನಶ್ಯಾಮ್‌ಶಾ, ಪೂರ್ವೋಕ್ತ, ಪು.೨೦

೧೭. ವಿವೇಕ್ ಕುಮಾರ್, ಪೂರ್ವೋಕ್ತ, ಪು.೫೨೨

೧೮. ಘನಶ್ಯಾಮ್‌ಶಾ, ಪೂರ್ವೋಕ್ತ, ಪು.೨೫೪

೧೯. ಗೇಲ್‌ಓಂವೆಟ್, 'ದಲಿತ ವಿಜನ್ಸ್: ದ ಆ್ಯಂಟಿ ಕಾಸ್ಟ್ ಮೂವ್‌ಮೆಂಟ್ ಆಂಡ್ ದ ಕನಸ್ಟ್ರಕ್ಷನ್ ಆಫ್ ಎನ್ ಇಂಡಿಯನ್ ಐಡೆಂಟಿಟಿ, ನ್ಯೂಡೆಲ್ಲಿ, ಓರಿಯೆಂಟ್, ಲಾಂಗ್‌ಮನ್, ೧೯೯೫, ಪು.೭೭

೨೦. ವಿವೇಕ್ ಕುಮಾರ್, ಪೂರ್ವೋಕ್ತ, ಪು.೫೫೨

೨೧. ಕೆ.ಸಿ.ದಾಸ್, ಇಂಡಿಯನ್ ದಲಿತ್ಸ್–ವಾಯ್ಸ್, ವಿಜನ್ ಅಂಡ್ ಪಾಲಿಟಿಕ್ಸ್, ನ್ಯೂಡೆಲ್ಲಿ, ಗ್ಲೋಬಲ್ ವಿಜನ್ ಪಬ್ಲಿಷಿಂಗ್ ಹೌಸ್, ೨೦೦೪, ಪು.೦೫

೨೨. ಜೇಮ್ಸ್ ಮ್ಯಾಸ್ಸೆ, ಪೂರ್ವೋಕ್ತ, ಪು.೦೩

೨೩. ಎಸ್.ಅಕಿನ್‌ಚನ್, ಕಾಸ್ಟ್, ಕ್ಲಾಸ್ ಆಂಡ್ ಪೊಲಿಟಿಕ್ಸ್, ನ್ಯೂಡೆಲ್ಲಿ, ಗ್ಯಾನ್ ಪಬ್ಲಿಷಿಂಗ್ ಹೌಸ್, ೧೯೯೫, ಪು. ೮೬

೨೪. ಪೂನಮ್ ವತ್ಸ, ಪೊಲಿಟಿಕಲ್ ಪಾರ್ಟಿಸಿಪೇಷನ್ ಆಂಡ್ ಕ್ಯಟಿಟೂಡಿನಲ್ ಟ್ರಾನ್ಸ್‌ಫರ್ಮೇಷನ್ ಆಫ್ ರೂರಲ್ ವುಮೆನ್, ಡೆಲ್ಲಿ, ಅಭಿಜಿತ್ ಪಬ್ಲಿಕೇಷನ್, ೨೦೦೪,

೨೫. ಬಷಿರುದ್ದೀನ್ ಅಹ್ಮದ್, "ಓಟಿಂಗ್ ಇನ್ ಇಂಡಿಯಾ– II– ಪೊಲಿಟಿಕಲ್ ಸ್ಟ್ರಟಿಫಿಕೇಷನ್ ಆಫ್ ಇಂಡಿಯ" ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,(ವಾರ್ಷಿಕ ಸಂಖ್ಯೆ) ಜನವರಿ ೧೯೭೧, ಪು.೨೫೧

೨೬. ಲೆಸ್ಟರ್ ಡಬ್ಲ್ಯೂ ಮಿಲ್‌ಬ್ರಾತ್, ಪೊಲಿಟಿಕಲ್ ಪಾರ್ಟಿಸಿಪೇಷನ್–ಹೌ ಆಂಡ್ ವೈ ಡು

ಪೀಪಲ್ ಗೆಟ್ ಇನ್‌ವಾಲ್ವಡ್ ಇನ್ ಪಾಲಿಟಿಕ್ಸ್, ಚಿಕಾಗೋ, ರ್‍ಯಾಂಡ್ ಮ್ಯಾಕ್‌ನಲ್ಲಿ, ಪಬ್ಲಿಷಿಂಗ್, ೧೯೭೭, ಪು.೮೦

೨೭. ಎಸ್.ಅಕಿನ್‌ಚನ್, ಪೂರ್ವೋಕ್ತ, ಪು.೮೬

೨೮. ಆರ್.ಟಿ.ಜಂಗಮ್, ಟೆಕ್ಸ್ಟ್ ಬುಕ್ ಆಫ್ ಪೊಲಿಟಿಕಲ್ ಸೋಷಿಯಾಲಜಿ, ನ್ಯೂಡೆಲ್ಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೮೨, ಪು.೧೮೧

೨೯. ಎ.ಕೆ.ಮುಖ್ಯೋಪಾಧ್ಯಾಯ, ಪೊಲಿಟಿಕಲ್ ಸೋಷಿಯಾಲಜಿ, ಕಲ್ಕತ್ತಾ, ಕೆ.ವಿ.ಭಾಗ್ಚಿ ಆಂಡ್ ಕಂಪನಿ, ೧೯೮೦, ಪು.೧೨

೩೦. ಸಂಪಾ ಗುಹಾ, ಪೊಲಿಟಿಕಲ್ ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಛೇಂಜಿಂಗ್ ಸೊಸೈಟಿ, ನ್ಯೂಡೆಲ್ಲಿ, ಇಂಟರ್-ಇಂಡಿಯಾ ಪಬ್ಲಿಕೇಷನ್, ೧೯೯೬, ಪು.೨೪

೩೧. ಸಿಡ್ನಿ ವೆರ್ಬ ಮತ್ತು ಇತರರು, ಪಾರ್ಟಿಸಿಪೇಷನ್ ಆಂಡ್ ಇಕ್ವಾಲಿಟಿ, ಏ ಸೆವೆನ್ ನೇಷನ್ ಕಂಪ್ಯಾರಿಜನ್, ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೧೯೭೮, ಪು.೪೬

೩೨. ಲೆಸ್ಟರ್ ಮಿಲ್‌ಬ್ರಾತ್ ಆಂಡ್ ಎಂ.ಎಲ್.ಗೋಯೆಲ್, ಪೂರ್ವೋಕ್ತ, ಪು.೦೨

೩೩. ಮ್ಯಾಕ್ ಕ್ಲೋಸ್ಕಿ, ಹೆಚ್.,"ಪೊಲಿಟಿಕಲ್ ಪಾರ್ಟಿಸಿಪೇಷನ್" ಎನ್‌ಸೈಕ್ಲೋಪಿಡಿಯಾ, ಆಫ್ ಸೋಷಿಯಲ್ ಸೈನ್ಸಸ್ ನ್ಯೂಯಾರ್ಕ್, ಕಾಲಿಯರ್, ಮ್ಯಾಗ್‌ಮಿಲನ್, ೧೯೬೮, ಪು.೨೫

೩೪. ಮಿಖಾಯಿಲ್ ರುಷ್ ಆಂಡ್ ಪಿಲಿಪ್ಸ್ ಅತೋಫ್, "ಇಂಟ್ರಡಕ್ಷನ್ ಟು ಪೊಲಿಟಿಕಲ್ ಸೋಷಿಯಾಲಜಿ- ವೆಸರ್ನ್ ಪ್ರಿಂಟಿಂಗ್ ಸರ್ವಿಸ್, ೧೯೭೧, ಪು.೭೫-೭೮

೩೫. ಮಿಲ್‌ಬ್ರಾತ್, ಪೂರ್ವೋಕ್ತ, ಪು-೪೬

೩೬. ಮಿಲ್ ಬ್ರಾತ್, ಪೂರ್ವೋಕ್ತ, ಪು.೧೧೪

೩೭. ನಿನಿಯಾನ್ ಸ್ಮಾರ್ಟ್, "ರಿಲಿಜಿಯನ್ ಅಂಡ್ ಪೊಲಿಟಿಕ್ಸ್" ಜೋಯಲ್ ಕ್ರಿಯಾಗರ್ (ಸಂ) ಪೊಲಿಟಿಕ್ಸ್ ಆಫ್ ದ ವರ್ಲ್ಡ್, ನ್ಯೂಯಾರ್ಕ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ೨೦೦೧, ಪು-೭೨೨

೩೮. ಎಸ್.ಕ್ಯೂ.ಎ.ನಖ್ವಿ, ಸೋಶಿಯಲ್ ಚೇಂಜ್ ಅಂಡ್ ಪೊಲಿಟಿಕಲ್ ಪಾರ್ಟಿಸಿಪೇಷನ್, ನ್ಯೂಡೆಲ್ಲಿ, ಕಾಮನ್‌ವೆಲ್ತ್ ಪಬ್ಲಿಕೇಷನ್, ೧೯೮೯, ಪು-೨೨

೩೯. ಹೆಚ್.ಮ್ಯಾಕ್ ಕ್ಲೋಸ್ಕಿ, ಪೂರ್ವೋಕ್ತ. ಪು.೨೫೩

೪೦. ಲೆಸ್ಟರ್ ಡಬ್ಲ್ಯೂ ಮಿಲ್‌ಬ್ರಾತ್, ಪೂರ್ವೋಕ್ತ, ಪು - ೧೪೬

೪೧. ಮಿಲ್ ಬ್ರಾತ್, ಪೂರ್ವೋಕ್ತ, ಪು-೧೩೨

೪೨. ರಜನಿ ಕೊಠಾರಿ, ಕಾಸ್ಟ್ ಇನ್ ಇಂಡಿಯನ್ ಪೊಲಿಟಿಕ್ಸ್, ಡೆಲ್ಲಿ, ಓರಿಯಂಟ್ ಲಾಂಗ್‌ಮನ್, ಪಬ್ಲಿಕೇಷನ್, ೧೯೫೪ ಪು –೬೮

೪೩. ಎಂ.ಎನ್.ಶ್ರೀನಿವಾಸ್, ಸೋಷಿಯಲ್ ಛೇಂಜ್ ಇನ್ ಮಾಡರ್ನ್ ಇಂಡಿಯಾ, ಕ್ಯಾಲಿಫೋರ್ನಿಯ, ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯ ಪ್ರೆಸ್, ೧೯೬೬ ಪು–೦೬.

೪೪. ಆರ್. ಚಂಡಿದಾಸ್, "ಹೌ ಕ್ಲೋಸ್ ಟು ಇಕ್ವಾಲಿಟಿ ಆರ್ ಷೆಡ್ಯೂಲ್ಡ್ ಕಾಸ್ಟ್" ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾ.ಸಂ. ೪ ಸಂ.೨೪, ಜೂನ್, ೧೯೬೯, ಪು – ೯೭೫–೯೭೯

೪೫. ಸತೀಶ್ ಸಬರ್ವಾಲ್, "ದ ರಿಸರ್ವ್ಡ್ ಕಾನ್ಸ್ಟಿಟ್ಯೂಯನ್ಸಿ ಕ್ಯಾಂಬಿನೇಟ್ಸ್ ಅಂಡ್ ಕಾನ್ಸಿಕ್ವೆನ್ಸೀಸ್, ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾ.ಸಂ.೭, ಸಂ.೨, ೧೯೭೨, ಪು – ೭೮

೪೬. ಘನಶ್ಯಾಂ ಷಾ, ಪೊಲಿಟಿಕ್ಸ್ ಆಫ್ ಷೆಡ್ಯೂಲ್ಡ್ ಕಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್, ಬಾಂಬೆ, ವೋರ ಅಂಡ್ ಕಂಪನಿ, ೧೯೭೫, ಪು–೨೮.

೪೭. ಎನ್.ಡಿ. ಪಾಮರ್, ಎಲೆಕ್ಷನ್ಸ್ ಅಂಡ್ ಪೊಲಿಟಿಕಲ್ ಡೆವಲಪ್‌ಮೆಂಟ್ –ದ ಸೌತ್ ಏಷ್ಯನ್ ಎಕ್ಸ್‌ಪೀರಿಯನ್ಸ್, ನ್ಯೂ ಡೆಲ್ಲಿ, ವಿಕಾಸ್ ಪಬ್ಲಿಕೇಷಿಂಗ್ ಹೌಸ್, ೧೯೭೬, ಪು–೩೮.

೪೮. ಎಸ್.ಎಲ್. ಮಹಾರಿಯ, "ಹೆಲ್ಪಿಂಗ್ ವೀಕರ್ ಸೆಕ್ಷನ್", ಕುರುಕ್ಷೇತ್ರ, ವಾ.ಸಂ. ೨೪, ಸಂ.೧೨ ೧೯೭೮, ಪು –೪೮

೪೯. ಲೀಲಾ ವಸಾರಿಯ "ದ ಹರಿಜನ್ಸ್ ವರ್ಸನಿಂಗ್ ಪ್ಲೈಟ್" ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾ. ಸಂ.೯, ಸಂ.೫, ಫೆಬ್ರವರಿ, ೧೯೭೯, ಪು – ೫೬.

೫೦. ಯು.ಗುರುಮೂರ್ತಿ, ಪಂಚಾಯತ್ ರಾಜ್ ಆಂಡ್ ವೀಕರ್ ಸೆಕ್ಷನ್ಸ್, ನ್ಯೂಡೆಲ್ಲಿ, ಆಶಿಷ್ ಪಬ್ಲಿಕೇಷನ್ಸ್, ೧೯೮೭, ಪು.೫೬–೬೧

೫೧. ಸಿ.ಕೆ.ಶ್ಯಾಮಲ, "ಎಲೆಕ್ಟೆಡ್ ರೆಪ್ರೆಂಜೆಂಟೇಷನ್ ಇನ್ ರೂರಲ್ ಡಿಸೆಂಟ್ರಲೈಜ್ಡ್ ಗವರ್ನೆನ್ಸ್: ಸೋಷಿಯೋ ಎಕನಾಮಿಕ ಅನಾಲಿಸಿಸ್ ಆಫ್ ಜಿಲ್ಲಾ ಪಂಚಾಯತ್ ಮೆಂಬರ್ಸ್ ಆಫ್ ಕರ್ನಾಟಕ, ಮ್ಯಾನ್ ಆಂಡ್ ಡೆವಲಪ್‌ಮೆಂಟ್, ಸಂಪುಟ ಸಂ.೨೩, ಸಂ.೨, ಜೂನ್ ೨೦೦೧, ಪು.೮–೧೮

೫೨. ವಿಜಯಕುಮಾರ್, ಶೆಡ್ಯೂಲ್ಡ್ ಕಾಸ್ಟ್ ಪಂಚಾಯತ್ ಪ್ರಧಾನ್ಸ್ ಇನ್ ಇಂಡಿಯಾ: ಎ ಸ್ಟಡೀ ಆಫ್ ವೆಸ್ಟರ್ನ್ ಉತ್ತರ ಪ್ರದೇಶ್, ಡೆಲ್ಲಿ, ಅಜಂತಾ ಪಬ್ಲಿಕೇಷನ್ಸ್, ೧೯೮೯,ಪು.೬೬

೫೩. ಎಸ್.ಸುಮತಿ ಆಂಡ್ ವಿ.ಸುದರ್ಶನ್, ವಾಟ್ ಡಜ್ ದ ನ್ಯೂ ಪಂಚಾಯತ್ ಸಿಸ್ಟಮ್ ಗ್ಯಾರಂಟಿ– ಎ ಕೇಸ್ ಸ್ಟಡಿ ಆಫ್ ಪಾಪಪಟ್ಟಿ, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ. ಸಂ. – ಆಗಸ್ಟ್ ೨೦ ೨೦೦೫, ಪು.೩೭೫೧ ರಿಂದ ೩೭೫೭

೫೪. ಆರ್.ವೆಂಕಟರವಿ, ಎ ಸ್ಟಡಿ ಆನ್ ಶೆಡ್ಯೂಲ್ಡ್ ಕಾಸ್ಟ್ಸ್ ಮೆಂಬರ್ಸ್ ಇನ್ ಪಂಚಾಯತ್‌ರಾಜ್ ಇನ್ಸಿಟಿಟ್ಯೂಷನ್ಸ್, ನೆಲ್ಲೂರು ಡಿಸ್ಟ್ರಿಕ್ಟ್ ಆಫ್ ಆಂಧ್ರಪ್ರದೇಶ, ಸ್ಟಡಿ ರಿಪೋರ್ಟ್, ಕೌನ್ಸಿಲ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್, ಹೈದರಾಬಾದ್ ೨೦೦೨, ಪು.೮೩–೮೫

೫೫. ಜಿ.ಕೆ.ಲಿಟೆನ್, ಡೆವಲಪ್‌ಮೆಂಟ್ ಡೆವಲೂಷನ್ ಆಂಡ್ ಡೆಮಾಕ್ರಸಿ; ವಿಲೇಜ್ ಡಿಸ್ಕೋರ್ಸ್, ಇನ್ ವೆಸ್ಟ್ ಬೆಂಗಾಲ್, ಸೇಜ್ ಪಬ್ಲಿಕೇಷನ್, ನ್ಯೂಡೆಲ್ಲಿ, ೧೯೯೬ ಪು.೮೮

ಅಧ್ಯಾಯ –೩
ದಲಿತರ ಸಂವಿಧಾನಾತ್ಮಕ ರಕ್ಷಣೆ ಮತ್ತು ಸಮಾಜೋ–ಆರ್ಥಿಕ ಸ್ಥಿತಿಗಳು

೩.೧. ದಲಿತರಿಗೆ ಸಂವಿಧಾನಾತ್ಮಕ ರಕ್ಷಣೆಗಳು
೩.೨. ಶಾಸನ ಬದ್ಧ ಆಯೋಗದಿಂದ ದಲಿತ ಸಬಲೀಕರಣ
೩.೩. ಸ್ವಾತಂತ್ರ್ಯೋತ್ತರ ಭಾರತದ ದಲಿತರ ಸ್ಥಿತಿಗತಿಗಳು
೩.೪. ದಲಿತ ಮಹಿಳೆಯರ ಆರ್ಥಿಕ ಸ್ಥಾನ
೩.೫. ದಲಿತ ಮಹಿಳೆಯರ ಶಿಕ್ಷಣ
೩.೬ ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಲಿತರ ಶೈಕ್ಷಣಿಕ ಸ್ಥಿತಿ
೩.೭. ಭಾರತೀಯ ಅಸಮಾನ ಸಮಾಜದ ಮತ್ತೊಂದು ಮುಖ
೩.೮. ದಲಿತರು ಮತ್ತು ಉನ್ನತ ಸ್ಥಾನಮಾನಗಳಿಗೆ ಮೀಸಲಾತಿ
೩.೯. ದಲಿತರ ಆರ್ಥಿಕ ಮತ್ತು ರಾಜಕೀಯ ಸ್ಥಿತಿ

ಅಧ್ಯಾಯ ೦೩

ದಲಿತರ ಸಂವಿಧಾನಾತ್ಮಕ ರಕ್ಷಣೆ ಮತ್ತು ಸಮಾಜೋ-ಆರ್ಥಿಕ ಸ್ಥಿತಿಗಳು

೩.೧. ದಲಿತರಿಗೆ ಸಂವಿಧಾನಾತ್ಮಕ ರಕ್ಷಣೆಗಳು:

ಭಾರತದ ಬ್ರಿಟೀಷರ ಆಳ್ವಿಕೆಯಲ್ಲಿ ದಲಿತರ ಸಮಸ್ಯೆಗಳನ್ನು ಕಾನೂನು ಮತ್ತು ರಾಜಕಾರಣದ ಬೆಳಕಿಗೆ ತರಲಾಯಿತು. ಸ್ವಾತಂತ್ರ್ಯದ ನಂತರ ದಲಿತರ ಪ್ರಾಚೀನ ಸಮಸ್ಯೆಯನ್ನು ಹೋಗಲಾಡಿಸಲು ವ್ಯಾಪಕವಾದ ಪ್ರಚಾರವನ್ನು ಕೈಗೊಳ್ಳಲಾಯಿತು. ಕಾನೂನಾತ್ಮಕವಾಗಿ ಹಾಗೂ ವಾಸ್ತವಿಕವಾಗಿ ಸಮಾನತೆ ಮತ್ತು ನ್ಯಾಯವನ್ನು ಜಾರಿಗೊಳಿಸಲು ಕ್ರಮಕೈಗೊಳ್ಳಲಾಯಿತು.[೧] ದೇಶದಲ್ಲಿ ಸಾಮಾಜಿಕ ಕ್ರಾಂತಿಯನ್ನು ತರುವ ವಿಶ್ವಾಸದೊಂದಿಗೆ ಸಂವಿಧಾನ ರಚನಾ ಸಮಿತಿಯು ದೇಶದ ಸಂವಿಧಾನವನ್ನು ರಚಿಸಿದೆ. ಮಧ್ಯಯುಗೀನ ಕಾಲದ ಹುಟ್ಟು, ಧರ್ಮ, ಸಂಪ್ರದಾಯ ಮತ್ತು ಸಮುದಾಯ ಮತ್ತು ಸಾಮಾಜಿಕ ರಚನೆಯ ಪುನರ್‌ರಚನೆಯನ್ನು ಆಧುನಿಕ ಬುನಾದಿಗಳಾದ ಕಾನೂನು, ವ್ಯಕ್ತಿಗತ ಅರ್ಹತೆ ಮತ್ತು ಧರ್ಮನಿರಪೇಕ್ಷ ಶಿಕ್ಷಣದ ಮೂರ್ತ ಸಾಮಾಜಿಕ ಕ್ರಾಂತಿಯನ್ನು ಸಾಧಿಸಿಕೊಳ್ಳುವ ವಿಶ್ವಾಸವನ್ನು ಸಂವಿಧಾನ ಹೊಂದಿತ್ತು.[೨] ಸಮಾನತೆ ಮತ್ತು ನ್ಯಾಯವನ್ನು ಒದಗಿಸುವುದು ನಮ್ಮ ಸಂವಿಧಾನದ ಮುಖ್ಯ ಧ್ಯೇಯ. ಭಾರತ ಅಸಮಾನತೆಗಳನ್ನು ಸಾಂಸ್ಥೀಕರಿಸಿಕೊಂಡಿರುವ ದೇಶ. ಆದರೆ ಸಂವಿಧಾನ ಯಾವುದೇ ವರ್ಗಕ್ಕೆ ಯಾವುದೇ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ. ಇಡೀ ದೇಶವನ್ನು ಸಮಾನ ಹಂತಕ್ಕೆ ತಂದಾಗ ಮಾತ್ರ ಸಮಾನತೆಯ ತತ್ವ ಪ್ರಜಾಪ್ರಭುತ್ವದಲ್ಲಿ ಕ್ರಿಯಾಶೀಲವಾಗಿರಲು ಸಾಧ್ಯ.[೩] ಹಾಗಾಗಿ ನಮ್ಮ ಸಂವಿಧಾನ ಇತರೆ ಸಮುದಾಯದೊಂದಿಗೆ ಸಮಾನತೆಯನ್ನು ಸಾಧಿಸಿಕೊಳ್ಳಲು, ಹಿಂದುಳಿದ ಸಮುದಾಯಗಳಿಗೆ ತಾತ್ಕಾಲಿಕ ಅವಕಾಶಗಳನ್ನು ನೀಡಿದೆ. ಇದರೊಂದಿಗೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಭಾಷೆ, ಸಂಸ್ಕೃತಿಗಳನ್ನು ರಕ್ಷಿಸಿ ಕೊಳ್ಳುವ ಅವಕಾಶವನ್ನು ನೀಡಲಾಗಿದೆ.[೪] ಅಗತ್ಯವಿರುವ ಸಮುದಾಯಗಳಿಗೆ ರಕ್ಷಣೆಯನ್ನು ಪಡೆದುಕೊಳ್ಳಲು ಮೀಸಲಾತಿ ರೂಪದ ಅವಕಾಶವನ್ನು ಸಂವಿಧಾನ ನೀಡಿದೆ. ರಾಜ್ಯವು ಮೀಸಲಾತಿಯನ್ನು ಒದಗಿಸುವ ಮೂಲಕ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳಲ್ಲಿ ಉದ್ಭವಿಸಿದ

ಅಸಮಾನತೆಯನ್ನು ಹೋಗಲಾಡಿಸಿ ನಿರ್ಲಕ್ಷಿತ ಸಮುದಾಯಗಳನ್ನು ಮೇಲೆತ್ತುವ ಮೂಲಕ ಅಸಮಾನತೆಯನ್ನು ನಿವಾರಿಸಬಹುದಾಗಿದೆ. ನಮ್ಮ ಸಂವಿಧಾನವು ದಲಿತರಿಗೆ ಹಲವಾರು ರಕ್ಷಣೆಗಳನ್ನು ನೀಡಿದೆ. ಚಾರಿತ್ರಿಕ ಕಾರಣಗಳಿಗಾಗಿ ಶತಮಾನಗಳಿಂದ ನಿರ್ಲಕ್ಷಿಸಲ್ಪಟ್ಟ ಹಾಗೂ ಹಿಂದುಳಿದ ಸ್ಥಿತಿಯಲ್ಲಿದ್ದ ಸಮುದಾಯಗಳನ್ನು ಸಾಮಾಜಿಕ ಬದಲಾವಣೆಗೆ ಒಳಪಡಿಸುವ ಉದ್ದೇಶದಿಂದ ಇಂತಹ ರಕ್ಷಣಾತ್ಮಕ ಅವಕಾಶಗಳನ್ನು ಸಂವಿಧಾನದಲ್ಲಿ ಸೃಷ್ಟಿಸಲಾಗಿದೆ.

ಭಾರತದಲ್ಲಿ ವಿಧಿಗಳಲ್ಲಿ ದಲಿತರ ರಕ್ಷಣೆ:

ಭಾರತ ಸಂವಿಧಾನದ ೧೪ನೇ ವಿಧಿಯು ಕಾನೂನಿನ ಮುಂದೆ ಸಮಾನತೆಯನ್ನು ಒದಗಿಸುತ್ತದೆ. ಈ ವಿಧಿಯನ್ವಯ ಯಾವುದೇ ವ್ಯಕ್ತಿಗೆ ಸಮಾನತೆಯನ್ನು ನಿರಾಕರಿಸಬಾರದು ಅಥವಾ ದೇಶದಲ್ಲಿ ತಾರತಮ್ಯವನ್ನು ತೋರಬಾರದು.[೫] ಅದೇ ಪ್ರಕಾರ ೧೫ ವಿಧಿಯು ಧರ್ಮ, ಕುಲ, ಜಾತಿ, ಲಿಂಗ ಮತ್ತು ಜನ್ಮಸ್ಥಳದ ಆಧಾರದ ಮೇಲೆ ರಾಜ್ಯವು ಪಕ್ಷಪಾತ ಮಾಡುವುದನ್ನು ನಿಷೇಧಿಸುತ್ತದೆ.[೬] ನಮಗೆಲ್ಲಾ ತಿಳಿದಿರುವಂತೆ ಚರಿತ್ರೆಯಲ್ಲಿ ನಡೆದ ಅಹಿತಕರ ಘಟನೆಗಳಿಂದಾಗಿ ಭಾರತೀಯ ಸಮಾಜದಿಂದ ಬಹುದೊಡ್ಡ ಸಮುದಾಯವನ್ನು ಅಭಿವೃದ್ಧಿಯಿಂದ ವಂಚಿತಗೊಳಿಸಲಾಯಿತು. ಇಲ್ಲಿಯವರೆಗೆ ಭಾರತ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿದೆ. ಆದರೂ ಬಹುಸಂಖ್ಯಾತ ಗುಂಪನ್ನು ಅಸ್ಪೃಶ್ಯತೆಯ ಹೆಸರಿನಲ್ಲಿ ದೂರ ಇಡಲಾಗಿದೆ. ಚರಿತ್ರೆಯಲ್ಲಿ ದಾಖಲಾಗಿರುವಂತೆ, ತಲೆಮಾರಿನಿಂದ ತಲೆಮಾರಿನವರೆಗೆ ದಲಿತರು ಶೋಷಣೆಯನ್ನು ಅನುಭವಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಂವಿಧಾನದ ೧೭ನೇ ವಿಧಿಯ ಪ್ರಕಾರ ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದೆ.[೭] ಈ ವಿಧಿಯ ಪ್ರಕಾರ ಅಸ್ಪೃಶ್ಯತೆಯನ್ನು ಯಾವುದೇ ರೂಪದಲ್ಲಿ ಆಚರಿಸುವುದನ್ನು ನಿಷೇಧಿಸಿದೆ. ಸಂವಿಧಾನದ ಈ ವಿಧಿಯು ದಲಿತರಿಗೆ ಸಮಾನತೆಯನ್ನು ಪಡೆಯುವ ರಕ್ಷಣೆಯಾಗಿ ಕಾರ್ಯನಿರ್ವಹಿಸುತ್ತಿದೆ.

ದಲಿತರ ದೃಷ್ಟಿಯಿಂದ ಸಂವಿಧಾನದ ೨೯ನೇ ವಿಧಿಯು ಮಹತ್ವ ಪಡೆದುಕೊಂಡಿದೆ. ಇದು ದಲಿತರನ್ನು ಅಭಿವೃದ್ಧಿ ದೃಷ್ಟಿಯಿಂದ ಮೇಲೆತ್ತುವ ಕಾರಣಕ್ಕಾಗಿ ಮಹತ್ವ ಪಡೆದುಕೊಂಡಿದೆ. ಈ ವಿಧಿಯು ದಲಿತರಿಗೆ ತಮ್ಮ ಜೀವನ ವಿಧಾನವನ್ನು ನಿರ್ಧರಿಸಿಕೊಳ್ಳುವ ಸ್ವಾತಂತ್ರ್ಯ ನೀಡಿದೆ. ದೇಶದ ಯಾವುದೇ ನಾಗರಿಕ ಭಾರತದ ಭೂಪ್ರದೇಶದ ಯಾವುದೇ ಪ್ರದೇಶದಲ್ಲಿ ವಾಸಿಸುವ, ತಮ್ಮದೇ ಆದ ಭಾಷೆ, ಲಿಪಿ ಮತ್ತು ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಹಕ್ಕು ಹೊಂದಿದ್ದಾರೆ.[೮] ಈ ವಿಧಿಯು ಭಾರತದ ಸಾಂಸ್ಕೃತಿಕ ಲಕ್ಷಣವಾದ ವೈವಿಧ್ಯತೆಯಲ್ಲಿ ಏಕತೆ ಎಂಬ ಧ್ಯೇಯವನ್ನು ಎತ್ತಿ ಹಿಡಿಯುತ್ತದೆ. ಇದೇ ವಿಧಿಯ ಎರಡನೇ ಉಪ ವಿಧಿ ಹೇಳುವ ಪ್ರಕಾರ ರಾಜ್ಯದಿಂದ

ಸ್ಥಾಪಿತವಾಗಿರುವ ಮತ್ತು ರಾಜ್ಯದ ಅನುದಾನವನ್ನು ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮ, ಜಾತಿ, ಭಾಷೆ ಇತರೆ ಯಾವುದೇ ತಾರತಮ್ಯಗಳನ್ನು ಮಾಡದೇ ಪ್ರವೇಶ ನೀಡತಕ್ಕದ್ದು. ಸಂವಿಧಾನದ ೪೬ನೇ ವಿಧಿಯು ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಯನ್ನು ಕಾಪಾಡಲು ಒತ್ತು ನೀಡುತ್ತದೆ ಈ ವಿಧಿ ಹೇಳುವ ಪ್ರಕಾರ ರಾಜ್ಯವು ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿ ಕಾಪಾಡಲು ಕ್ರಮಕೈಗೊಳ್ಳತಕ್ಕದ್ದು. ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಸಾಮಾಜಿಕ ಅನ್ಯಾಯ ಮತ್ತು ಇತರೆ ಎಲ್ಲಾ ಶೋಷಣೆಗಳಿಂದ ಕಾಪಾಡತಕ್ಕದ್ದು.[೯]

ದಲಿತರು ಮತ್ತು ಮೀಸಲಾತಿ ಸೌಲಭ್ಯ ರಾಜಕೀಯ :

೧೯ನೇ ಶತಮಾನದವರೆಗೆ ಭಾರತೀಯ ಸಮಾಜದ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡಿರಲಿಲ್ಲ. ೧೯೧೯ರ ಕಾಯ್ದೆಯ ನಂತರ ನಿರ್ಲಕ್ಷಿತ ಸಮುದಾಯಗಳಿಗೆ ಹೊಸ ಅನನ್ಯತೆಯನ್ನು ನೀಡಲಾಯಿತು.[೧೦] ಸ್ವಾತಂತ್ರ್ಯದ ನಂತರ ಶಾಸಕಾಂಗಗಳು ಮತ್ತು ದೇಶದ ಅತ್ಯುನ್ನತ ಶಾಸನ ರಚನಾ ಕೇಂದ್ರವಾದ ಸಂಸತ್ತಿನಲ್ಲಿ ದಲಿತರಿಗೆ ಪ್ರಾತಿನಿಧ್ಯವನ್ನು ನೀಡುವ ಮೂಲಕ ದಲಿತ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡಲು ಆಲೋಚಿಸಲಾಯಿತು. ಈ ಹಿನ್ನೆಲೆಯಲ್ಲಿ ಸಂವಿಧಾನದಲ್ಲಿ ೩೩೦ ಮತ್ತು ೩೩೨ನೇ ವಿಧಿಗಳನ್ನು ಸೇರ್ಪಡೆಗೊಳಿಸಲಾಯಿತು. ಈ ವಿಧಿಗಳು ಲೋಕಸಭೆ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡುತ್ತವೆ. ಈ ಮೀಸಲಾತಿಯನ್ನು ದಲಿತ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ನೀಡಲಾಯಿತು. ಆದರೆ ಗಮನಾರ್ಹ ಸಂಗತಿ ಎಂದರೆ, ಪರೋಕ್ಷವಾಗಿ ಆಯ್ಕೆಗೊಳ್ಳುವ ರಾಜ್ಯಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಮೀಸಲಾತಿ ನೀಡಿಲ್ಲ. ೧೯೫೦ರಲ್ಲಿ ಸಂವಿಧಾನ ಜಾರಿಗೊಂಡಾಗ ಮೀಸಲಾತಿಯು ೧೦ ವರ್ಷಗಳಿಗೆ ಮಾತ್ರ ಎಂದು ತೀರ್ಮಾನಿಸಲಾಯಿತು. ಆದರೆ ಇಂದಿಗೂ ದಲಿತರ ರಾಜಕೀಯ ಸಬಲೀಕರಣ ಸಾಧ್ಯವಾಗದೇ ಇರುವುದರಿಂದ ಸಂವಿಧಾನದ ೩೩೦, ೩೩೨ ಮತ್ತು ೩೩೪ನೇ ವಿಧಿಗಳನ್ನು ಕಾಲ ಕಾಲಕ್ಕೆ ತಿದ್ದುಪಡಿ ಮಾಡಿ ಮೀಸಲಾತಿಯನ್ನು ಇಂದಿನವರೆಗೂ ಮುಂದುವರೆಸಲಾಗಿದೆ. ೬೮ ವರ್ಷಗಳ ನಂತರವೂ ದಲಿತರ ರಾಜಕೀಯ ಸಬಲೀಕರಣ ನಿರೀಕ್ಷಿತ ಮಟ್ಟವನ್ನು ಮುಟ್ಟಿದೆಯೇ ಎನ್ನುವುದು ಇಂದಿಗೂ ಸ್ಪಷ್ಟಗೊಳ್ಳದ ಸಂಗತಿ. ೩೩೫ನೇ ವಿಧಿಯ ಪ್ರಕಾರ ದಲಿತರಿಗೆ ಆಡಳಿತಾತ್ಮಕ ಹುದ್ದೆಗಳಲ್ಲಿ ಮೀಸಲಾತಿ ನೀಡಲಾಗಿದೆ. ಆಡಳಿತ ವ್ಯವಸ್ಥೆಯ ವಿವಿಧ ಭಾಗಗಳಲ್ಲಿ ದಲಿತ ಸಮುದಾಯ ಪ್ರಭಾವ ಬೀರಿ ಅವರ ಹಿತಾಸಕ್ತಿಯನ್ನು ಕಾಪಾಡಲು ಸಂವಿಧಾನ ಅವಕಾಶ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಸಮುದಾಯಗಳಿಗೆ ವಿಶೇಷ ಅಧಿಕಾರಿಯನ್ನು ನೇಮಕ

ಮಾಡುವ ಅಧಿಕಾರ ರಾಷ್ಟ್ರಪತಿಗಳಿಗಿದೆ. ಈ ಅಧಿಕಾರಿಯ ಪ್ರಮುಖ ಕರ್ತವ್ಯವೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವ ಎಲ್ಲಾ ವಿಷಯಗಳನ್ನು ಪರಿಶೀಲನೆ ಮಾಡುವ ಅಧಿಕಾರ ಹೊಂದಿರುತ್ತಾರೆ. ಸಂವಿಧಾನದ ೩೩೮ನೇ ವಿಧಿಯ ಪ್ರಕಾರ ದಲಿತ ಸಮುದಾಯದ ರಕ್ಷಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಈ ಅಧಿಕಾರಿಗೆ ವರದಿ ಮಾಡತಕ್ಕದ್ದು. ಸಂವಿಧಾನದ ೩೪೦ನೇ ವಿಧಿಯು ಹಿಂದುಳಿದ ವರ್ಗಗಳ ಸ್ಥಿತಿಗಳನ್ನು ಅಧ್ಯಯನ ಮಾಡಲು ಹಿಂದುಳಿದ ಆಯೋಗವನ್ನು ರಚಿಸುವ ಅವಕಾಶ ನೀಡಿದೆ.

ಸ್ವಾತಂತ್ರ್ಯ ಮತ್ತು ಭಾರತದ ಸಂವಿಧಾನ ಜಾರಿಗೊಂಡ ನಂತರ ಭಾರತದ ರಾಷ್ಟ್ರಪತಿಗಳು ೩೬೬ ಮತ್ತು ೩೪೧ನೇ ವಿಧಿಯ ಪ್ರಕಾರ ಪರಿಶಿಷ್ಟ ಜಾತಿಗಳ ಅಧಿನಿಯಮವನ್ನು ಹೊರಡಿಸಿದರು. ಸಂವಿಧಾನದ ೩೬೬ ನೇ ವಿಧಿಯು ಪರಿಶಿಷ್ಟ ಜಾತಿಯನ್ನು ಅರ್ಥೈಸಲಾಗಿದೆ. ೩೪೧ನೇ ವಿಧಿಯ ಪ್ರಕಾರ ಪರಿಶಿಷ್ಟ ಜಾತಿಯಲ್ಲಿ ಬರುವ ವಿವಿಧ ಪ್ರಕಾರಗಳು ಮತ್ತು ಉಪಜಾತಿಗಳನ್ನು ಪಟ್ಟಿ ಮಾಡಲಾಗಿದೆ.[೧೧] ಭಾರತ ಸಂವಿಧಾನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜೀವನಕ್ಕೆ ಸಂಬಂಧಿಸಿದ ವಿವಿಧ ಆಯಾಮಗಳ ತೀಕ್ಷ್ಣ ಸಂಗತಿಗಳಿಗೆ ಸ್ಪಂದಿಸುತ್ತದೆ. ಮೂಲಭೂತವಾಗಿ ಸಂವಿಧಾನವು ಯಾವುದೇ ಧರ್ಮವನ್ನು ಮಾನ್ಯ ಮಾಡಿಲ್ಲ. ಎಲ್ಲಾ ಸಮುದಾಯಗಳಿಗೂ ಸಮಾನ ದೃಷ್ಟಿಯಿಂದ ನೋಡುವ ಕಾರಣಕ್ಕಾಗಿ ಈ ಅಂಗೀಕಾರ ಕೈಗೊಳ್ಳಲಾಗಿದೆ. ದುರ್ಬಲ ವರ್ಗಗಳನ್ನು ಇತರೆ ಸಮುದಾಯಗಳೊಂದಿಗೆ ಸಮಾನವಾಗಿ ಮೇಲೆತ್ತುವ ವಿವಿಧ ಅವಕಾಶಗಳನ್ನು ಸಂವಿಧಾನದಲ್ಲಿ ಸೃಷ್ಟಿಸಲಾಗಿದೆ. ಗ್ರಾಮ ಪಂಚಾಯತ್‌ನಿಂದ ಮೊದಲುಗೊಂಡು ದೇಶದ ಸಂಸತ್ತಿನವರೆಗೆ ಸ್ಥಾನಗಳಿಗೆ ಮೀಸಲಾತಿ ನೀಡುವ ಮೂಲಕ ದಲಿತರನ್ನು ರಾಜಕೀಯ ಮುಖ್ಯವಾಹಿನಿಗೆ ತರಲು ಕ್ರಮ ಕೈಗೊಳ್ಳಲಾಗಿದೆ. ಸರ್ಕಾರಗಳು ಕೈಗೊಂಡ ಸಮಾಜ ಸುಧಾರಣಾ ನೀತಿಗಳು, ಸಂವಿಧಾನಾತ್ಮಕ ಕ್ರಮಗಳು ಮತ್ತು ನೀತಿಗಳ ಮೂಲಕ ದಲಿತರ ಅಭಿವೃದ್ಧಿ ಮತ್ತು ಬದಲಾವಣೆಯನ್ನು ತಂದುಕೊಳ್ಳಲಾಗಿದೆ. ಶತಮಾನಗಳಿಂದ ಈ ಸಮುದಾಯಗಳನ್ನು ನಿರ್ಲಕ್ಷಿಸಲಾಗಿದ್ದು, ಈ ಕಾರಣಕ್ಕಾಗಿ ಈ ಸಮುದಾಯಗಳಿಗೆ ಮೀಸಲಾತಿ ನೀಡಲಾಗಿದೆ. ಮತ್ತೊಂದು ಅರ್ಥದಲ್ಲಿ ಹೇಳುವುದಾದರೆ ಮೀಸಲಾತಿಯು ರಕ್ಷಣಾತ್ಮಕ ಅಥವಾ ಸಕಾರಾತ್ಮಕ ತಾರತಮ್ಯವಾಗಿದೆ. ಇದು ಸಮಸ್ಯೆಯ ಪರಿಹಾರಕ್ಕೆ ಕಂಡುಕೊಂಡ ಹೊಸ ವಿಧಾನವಾಗಿದೆ. ದೇಶ ಸಾಧಿಸಿಕೊಂಡ ಒಟ್ಟಾರೆ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡಿದರೆ ದಲಿತರು ಇಂದಿಗೂ ಹಿಂದುಳಿದಿರುವ ಸಂಗತಿ ಕಂಡು ಬರುತ್ತದೆ. ನಾವು ಪ್ರಜಾಪ್ರಭುತ್ವದಲ್ಲಿ ಸಮಾನತೆಯ ಬಗ್ಗೆ ಮಾತನಾಡುತ್ತೇವೆ. ಆದರೆ ಇಂದಿಗೂ ಶೇ.೨೪ರಷ್ಟು ತಳಸಮುದಾಯದ ವ್ಯಕ್ತಿಗಳಿಗೆ ನೈಜ ಸ್ವಾತಂತ್ರ್ಯ ಮತ್ತು ಸಮಾನತೆ

ನಿರಾಕರಿಸಲಾಗಿದೆ. ಬಹುಸಂಖ್ಯಾತರು ಅಸ್ಪೃಶ್ಯರಾಗಿ ಜೀವಿಸುತ್ತಿದ್ದು, ಅವರು ದೇಶದ ಎರಡನೇ ದರ್ಜೆಯ ನಾಗರಿಕರಾಗಿದ್ದಾರೆ. ಕೆಲವು ಪ್ರದೇಶಗಳಲ್ಲಿ ಅವರ ಜೀವನ ಪಶುಗಳಿಗಿಂತ ಭಿನ್ನವಾಗಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿರುವ ನೀರು, ಬಾವಿ ಮತ್ತು ದೇವಸ್ಥಾನಗಳ ಪ್ರವೇಶ ಪಡೆಯುವಲ್ಲಿ ಇಂದಿಗೂ ಮುಜುಗರ ಅನುಭವಿಸುತ್ತಿದ್ದಾರೆ. ಭಾರತ ಸ್ವಾತಂತ್ರ್ಯ ಪಡೆದಾಗ ಹೊಸ ಯುಗ ಆರಂಭವಾಯಿತು. ಸ್ವತಂತ್ರವಾಗಿ ಜೀವನ ನಡೆಸುವ ಅಭಿಲಾಷೆ ಎಲ್ಲರಿಗೂ ಮೂಡಿತು. ಇಂತಹ ಅಭಿಲಾಷೆ ದಲಿತ ಸಮುದಾಯಕ್ಕೆ ಹೆಚ್ಚಾಗಿತ್ತು. ಆದರೆ ದಲಿತರಿಗೆ ಬಡತನದಿಂದ ಸ್ವಾತಂತ್ರ್ಯ ಮತ್ತು ಸಾಮಾಜಿಕ ತಾರತಮ್ಯದಿಂದ ವಿಮುಕ್ತರಾಗಲಿಲ್ಲ. ಸಂವಿಧಾನದಲ್ಲಿ ವಿಶೇಷ ರಕ್ಷಣಾತ್ಮಕ ಸಂಗತಿಗಳನ್ನು ಸೇರ್ಪಡೆಗೊಳಿಸಿದ್ದರೂ ಅವುಗಳ ಕಾರ್ಯಾಚರಣೆ ದೋಷಪೂರಿತವಾಗಿ ಕಾರ್ಯಗತಗೊಳಿಸುವವರು ಅರೆಮನಸ್ಸು ಹೊಂದಿದ್ದರಿಂದ ಅವುಗಳು ಸಂವಿಧಾನದಲ್ಲೇ ಉಳಿದುಕೊಂಡವು.[೧೨] ದಲಿತರು ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆದರೂ ಸ್ವತಂತ್ರ್ಯ ಭಾರತದಲ್ಲಿ ದಲಿತರು ಸಾಂಪ್ರದಾಯಿಕ ಗುಲಾಮರಾಗಿಯೇ ಮುಂದುವರೆದಿದ್ದಾರೆ. ಭಾರತಕ್ಕೆ ಅತ್ಯಂತ ಶ್ರೀಮಂತ ಸಂಸ್ಕೃತಿಯನ್ನು ಪಡೆದ ಹೆಮ್ಮೆಯಿದೆ. ಆದರೆ ಮೇಲ್ವರ್ಗದವರಿಂದ ಕೆಳವರ್ಗದವರ ಮೇಲೆ ಧರ್ಮವರಿಂದ ಕೆಳಧರ್ಮದವರ ನಿರಂತರ ಶೋಷಣೆ ಮುಕ್ತಾಯಗೊಂಡಿಲ್ಲ.[೧೩] ಸಂವಿಧಾನದಲ್ಲಿ ದಲಿತರ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸೃಷ್ಟಿಸಲಾದ ಅವಕಾಶಗಳ ಮೂಲಕ ಸಮಾಜದಲ್ಲಿ ಸಂಚಲನ ಉಂಟು ಮಾಡಲಾಗಿದೆ. ಆದರೆ ಇದರ ಫಲ ದಲಿತರಿಗೆ ಸಂಪೂರ್ಣವಾಗಿ ದೊರೆತಿಲ್ಲ. ಜಾತಿ ಆಧಾರಿತ ತಾರತಮ್ಯ ಮತ್ತು ದಲಿತರ ಮಹಿಳೆಯರ ಲೈಂಗಿಕ ಶೋಷಣೆ ನಿರಂತರವಾಗಿ ಮುಂದುವರೆದಿದೆ. ಬಹುಜನ ಸಮಾಜ ಪಕ್ಷದಂತಹ ಪಕ್ಷ ಮತ್ತು ಇತರೆ ರಾಜಕೀಯ ಸಂಘಟನೆಯ ಮೂಲಕ ದಲಿತರ ಹಕ್ಕುಗಳು ಮತ್ತು ರಾಜಕೀಯ ಅಸ್ಮಿತೆಯನ್ನು ಸೃಷ್ಟಿಸಲಾಗಿದೆ. ಆದರೆ ಇದರ ಫಲ ಕನಿಷ್ಟ ಸಂಖ್ಯೆಯ ದಲಿತರಿಗೆ ದೊರೆತಿದೆ.

೩.೨. ಶಾಸನ ಬದ್ಧ ಆಯೋಗದಿಂದ ದಲಿತರ ಸಬಲೀಕರಣ

ಭಾರತದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು ತನ್ನ ಅಧಿಕಾರದ ಮೂಲಕ ಶಾಸನ ಬದ್ಧ ಆಯೋಗವನ್ನು ಸ್ಥಾಪಿಸಿ ದುರ್ಬಲ ವರ್ಗಗಳನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ವಿಶೇಷ ಶಾಸನಗಳನ್ನು ಮತ್ತು ರಕ್ಷಣಾತ್ಮಕ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಎರಡು ಶಾಸನಬದ್ಧ ಆಯೋಗಗಳಾದ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ ಮತ್ತು ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗ, ಈ ಎರಡೂ ಆಯೋಗಗಳು ಪರಿಶಿಷ್ಟ ಜಾತಿ ಸಮುದಾಯದ

ಹಿತಾಸಕ್ತಿಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗಗಳು ಈ ಸಮುದಾಯಗಳ ವೈಯಕ್ತಿಕ ದೂರುಗಳು ಮತ್ತು ಕುಂದುಕೊರತೆಗಳ ಮನವಿಗಳನ್ನು ಸ್ವೀಕರಿಸಿ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪ್ರಕರಣವನ್ನು ಸಂಸತ್ತಿಗೆ ವರದಿ ಮಾಡುತ್ತದೆ. ಈ ಆಯೋಗವು ವಿಶೇಷ ಅನುದಾನ ಯೋಜನೆಯ ಕಾರ್ಯಾಚರಣೆ ಮತ್ತು ಪ್ರಗತಿಯನ್ನು ಪರಿಶೀಲಿಸುತ್ತದೆ. ಈ ಅಯೋಗವು ಜಿಲ್ಲಾ ಅಭಿವೃದ್ಧಿ ಆಯುಕ್ತರು ಅಥವಾ ಜಿಲ್ಲಾಧಿಕಾರಿಗಳೊಂದಿಗೆ ನೇರವಾದ ಸಂವಾದ ಏರ್ಪಡಿಸಿ ಸರ್ಕಾರ ದಲಿತರ ಅಭಿವೃದ್ಧಿಗಾಗಿ ರೂಪಿಸಿರುವ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ವಿಮರ್ಶಿಸುವ ಕಾರ್ಯ ಕೈಗೊಳ್ಳುತ್ತದೆ. ಮಲ ಹೊರುವ ಪದ್ಧತಿಯನ್ನು ನಿಷೇಧಿಸುವುದು ಮತ್ತು ಸಫಾಯಿ ಕರ್ಮಚಾರಿಗಳಿಗೆ ವಿವಿಧ ಸರ್ಕಾರೇತರ ಸಂಸ್ಥೆಗಳ ಸಂಯೋಜನೆಯೊಂದಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಪುನರ್‌ವಸತಿ ಕಲ್ಪಿಸುವ ಕ್ರಮ ಕೈಗೊಳ್ಳುತ್ತದೆ. ಆದರೂ ೯ನೇ ಪಂಚವಾರ್ಷಿಕ ಯೋಜನೆ ಹೊತ್ತಿಗೆ (೨೦೦೨) ಸಫಾಯಿ ಕರ್ಮಚಾರಿಗಳ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹಾರಗೊಳಿಸುವುದು ಸಾಧ್ಯವಾಗಿಲ್ಲ. ೬,೫೩,೦೦೦ ಸಫಾಯಿ ಕರ್ಮಚಾರಿಗಳಲ್ಲಿ ಒಟ್ಟು ೩,೮೪,೦೦೦ ಸಫಾಯಿ ಕರ್ಮಚಾರಿಗಳಿಗೆ ಮಾತ್ರ ಪುನರ್ ವಸತಿ ಕಲ್ಪಿಸುವುದು ಸಾಧ್ಯವಾಗಿದೆ. ಇದರ ಜೊತೆಗೆ ೧,೪೭,೦೦೦ ಸಫಾಯಿ ಕರ್ಮಚಾರಿಗಳಿಗೆ ಪರ್ಯಾಯ ವೃತ್ತಿಗಳನ್ನು ಹುಡುಕಿಕೊಳ್ಳುವಂತೆ ಕ್ರಮ ಕೈಗೊಳ್ಳಲಾಗಿದೆ.[೧೪] ಈ ಆಯೋಗಗಳ ರಾಜ್ಯ ಕಚೇರಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ನೀತಿ ಮತ್ತು ಕಾರ್ಯಕ್ರಮ ಯೋಜನೆಯ ಬಗ್ಗೆ ನಿಗಾ ವಹಿಸುತ್ತದೆ. ಈ ಸಂಬಂಧ ಕೇಂದ್ರ ಕಚೇರಿಗೆ ಕಾಲಕಾಲಕ್ಕೆ ಮಾಹಿತಿ ನೀಡುತ್ತದೆ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ದಲಿತ ಸಮುದಾಯಗಳ ಬಗ್ಗೆ ಕೈಗೊಳ್ಳುವ ಕಾರ್ಯಕ್ರಮಗಳ ಅನುಷ್ಠಾನದ ವರದಿಯನ್ನು ಕೇಂದ್ರಕ್ಕೆ ಸಲ್ಲಿಸುತ್ತದೆ. ಆಯೋಗದ ರಾಜ್ಯ ಅಧಿಕಾರಿಗಳು ಸರ್ಕಾರಗಳ ಕಲ್ಯಾಣ ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡುತ್ತದೆ ಮತ್ತು ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ಅಧ್ಯಯನಕ್ಕೆ ಒಳಪಡಿಸುತ್ತಾರೆ. ಈ ಅಧ್ಯಯನದ ಫಲಿತಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಒತ್ತಾಯಿಸುತ್ತದೆ. ಆಯೋಗದ ರಾಜ್ಯ ಅಧಿಕಾರಿಗಳು ರಾಜ್ಯ ಆಡಳಿತ ವ್ಯವಸ್ಥೆಯೊಂದಿಗೆ ಸಂವಾದ ನಡೆಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿತಾಸಕ್ತಿಯನ್ನು ಕಾಪಾಡಲು ಸೂಕ್ತ ನಿರ್ದೇಶನಗಳನ್ನು ನೀಡುತ್ತದೆ. ಇದರೊಂದಿಗೆ ರಾಜ್ಯ ಸರ್ಕಾರವು ದಲಿತರ ಹಿತಾಸಕ್ತಿಗಾಗಿ ವಿನಿಯೋಗಿಸುವ ಅನುದಾನದ ಬಗ್ಗೆ ಸೂಕ್ತ ಮೇಲ್ವಿಚಾರಣೆ ಮಾಡುತ್ತದೆ. ರಾಜ್ಯ ಆಯೋಗದ ಅಧಿಕಾರಿಗಳು ತ್ರೈಮಾಸಿಕ ವರದಿಯಲ್ಲಿ ದಲಿತರ ಬಗ್ಗೆ

ಕೈಗೊಂಡ ಕ್ರಮಗಳನ್ನು ಕೇಂದ್ರ ಕಚೇರಿಗೆ ವರದಿ ಮಾಡುತ್ತಾರೆ. ಈ ವರದಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಸ್ಥಿತಿಗತಿಗಳ ಮಾಹಿತಿ ಲಭ್ಯವಾಗುತ್ತದೆ.[೧೫] ಭಾರತದ ಸಂವಿಧಾನ ಜಾರಿಗೊಂಡು ಸುಮಾರು ೭೦ ದಶಕಗಳು ಕಳೆದು ಹೋಗಿವೆ. ಸಂವಿಧಾನದ ಆಶಯಗಳು ಜಾರಿಗೊಂಡಿವೆಯೆ? ಸಂವಿಧಾನದ ಧ್ಯೇಯಗಳು ದಲಿತರ ಬದುಕಾಗಿ ಪರಿವರ್ತನೆಗೊಂಡಿದೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಕಷ್ಟಕರವಾದ ಸಂಗತಿ. ಏಕೆಂದರೆ, ದಲಿತರು ಇಂದಿಗೂ ಸಾಮಾಜಿಕವಾಗಿ, ಆರ್ಥಿಕವಾಗಿ ನಿಕೃಷ್ಟ ಸ್ಥಿತಿಯಲ್ಲಿಯೇ ಬದುಕುತ್ತಿದ್ದಾರೆ. ದಲಿತರಿಗೆ ಸಂಬಂಧಿಸಿದ ಅಧ್ಯಯನಗಳು ಈ ಅಂಶಗಳನ್ನು ದೃಢೀಕರಿಸುತ್ತವೆ. ಇಂತಹ ಅಧ್ಯಯನಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

೩.೩. ಸ್ವಾತಂತ್ರ್ಯೋತ್ತರ ಭಾರತದ ದಲಿತರ ಸ್ಥಿತಿಗತಿಗಳು

೨೦೧೧ರ ಜನಗಣತಿಯ ಪ್ರಕಾರ ದೇಶದಲ್ಲಿ ಪರಿಶಿಷ್ಟ ಜಾತಿಗಳ ಒಟ್ಟು ಜನಸಂಖ್ಯೆ ೧೦,೪೭,೪,೯೯೨ ಇದ್ದು, ಅವರಲ್ಲಿ ಪುರುಷರ ಸಂಖ್ಯೆ ೫೨,೬೪,೫೪೫ ರಷ್ಟಿದ್ದು, ಮಹಿಳೆಯರ ಸಂಖ್ಯೆ ೫೨೧೦೪೪೭ರಷ್ಟಿದೆ. ಪರಿಶಿಷ್ಟ ಜಾತಿ ಸಮುದಾಯದವರು ಬಹುತೇಕ ಗ್ರಾಮಗಳಲ್ಲಿ ವಾಸಿಸುತ್ತಾರೆ. ಕೇವಲ ಶೇ.೧೪ರಷ್ಟು ಜನ ಮಾತ್ರ ನಗರ ವಾಸಿಗಳಾಗಿದ್ದಾರೆ. ಪರಿಶಿಷ್ಟ ಜಾತಿ ಸಮುದಾಯಗಳು ಭಾರತದ ಎಲ್ಲಾ ಪ್ರದೇಶಗಳಲ್ಲಿ ಪಸರಿಸಿದ್ದು, ಅವರು ಬಹುತೇಕ ಗ್ರಾಮಗಳು ಅಥವಾ ಅತೀ ಚಿಕ್ಕ ಗ್ರಾಮಗಳಲ್ಲಿ ವಾಸಿಸುತ್ತಾರೆ. ಅವರಲ್ಲಿ ಕಡಿಮೆ ಸಂಖ್ಯೆಯಷ್ಟು ಜನ ಸಣ್ಣಹಿಡುವಳಿದಾರರಾಗಿದ್ದು, ಬಹುಸಂಖ್ಯಾತರು ಕೃಷಿ ಕಾರ್ಮಿಕರಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಚರ್ಮ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಬಹುತೇಕ ಈ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಪಶ್ಚಿಮ ಭಾರತದ ಬಹುಸಂಖ್ಯಾತ ಪರಿಶಿಷ್ಟ ಜಾತಿ ಸಮುದಾಯಗಳು ನೇಕಾರಿಕೆಯನ್ನು ಅವಲಂಬಿಸಿವೆ. ನಗರ ಭಾಗದ ಬಹುತೇಕರು ಅಸಂಘಟಿತ ಕಾರ್ಮಿಕರಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಸಫಾಯಿ ಕರ್ಮಚಾರಿ ಮತ್ತು ಸ್ವಚ್ಛತಾ ಕಾರ್ಯದಲ್ಲಿ ಈ ಸಮುದಾಯ ಕಾರ್ಯನಿರ್ವಹಿಸುತ್ತಿದ್ದು ಇವರ ಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಇದರ ಜೊತೆಗೆ ಈ ಸಮುದಾಯವು ಅಸ್ಪೃಶ್ಯತೆ, ಮಾನವ ಹಕ್ಕುಗಳಿಂದ ವಂಚಿತರಾಗಿ ಸಾಮಾಜಿಕ ಶೋಷಣೆಗೆ ಒಳಗಾಗಿವೆ. ಈ ದೇಶದ ೨/೩ರಷ್ಟು ಜೀತದಾಳುಗಳು ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಅಭಿಪ್ರಾಯಪಟ್ಟಿರುವಂತೆ ಈ ಸಮುದಾಯ ಬಡವರಾಗಿದ್ದು, ಅನಕ್ಷರಸ್ಥರಾಗಿದ್ದು

ಕೌಶಲ್ಯಗಳಿಲ್ಲದೆ ಆಧುನಿಕ ಯುಗದಲ್ಲಿ ಸ್ಪರ್ಧೆ ಮಾಡುವ ಸಾಮರ್ಥ್ಯ ಪಡೆದುಕೊಂಡಿಲ್ಲ. ಹಾಗಾಗಿ ಈ ಸಮುದಾಯದಲ್ಲಿ ಭೂಮಿ ಮತ್ತು ಸಾಂಪ್ರದಾಯಿಕ ವೃತ್ತಿಗೆ ಸಂಬಂಧಪಟ್ಟಂತೆ ಮೇಲ್ಮುಖ ಚಲನೆ ಸಾಧ್ಯವಾಗಿಲ್ಲ. ಸಮುದಾಯದಲ್ಲಿ ಒಂದು ಸಣ್ಣ ಮಧ್ಯಮವರ್ಗ ಸೃಷ್ಟಿಯಾಗಿದ್ದರೂ ಅವರ ಅಭಿವೃದ್ಧಿ ವೇಗ ತೀವ್ರವಾಗಿಲ್ಲ.[೧೬] ಪರಿಶಿಷ್ಟ ಜಾತಿ ಸಮುದಾಯದ ಮಹಿಳೆಯ ಸ್ಥಿತಿ ಅತ್ಯಂತ ನಿಕೃಷ್ಟವಾಗಿದೆ. ಮಹಿಳೆಯರ ಸಂಗತಿಗಳನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೩.೪. ದಲಿತ ಮಹಿಳೆ : ದಲಿತರಲ್ಲೇ ದಲಿತರು

ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಎಲ್ಲಾ ಸಮುದಾಯಗಳಲ್ಲಿ ಮಹಿಳೆಗಿಂತ ಪುರುಷರು ಪ್ರಾಬಲ್ಯ ಹೊಂದಿದ್ದಾರೆ. ಧರ್ಮ, ಸಾಮಾಜಿಕ ವ್ಯವಸ್ಥೆ ಮತ್ತು ಆರ್ಥಿಕ ವ್ಯವಸ್ಥೆಗಳು ಕೂಡ ಮಹಿಳೆಯರಿಗಿಂತ ಪುರುಷರೇ ಶ್ರೇಷ್ಠರು ಎಂಬಂತೆ ನಿರೂಪಿಸಿದೆ. ಭಾರತೀಯ ಸಮಾಜದಲ್ಲಿ ಕೂಡು ಕುಟುಂಬ ವ್ಯವಸ್ಥೆ ಪ್ರಧಾನ ಸಾಮಾಜಿಕ ಸಂಸ್ಥೆಯಾಗಿದ್ದು ಇದು ಪುರುಷ ಮತ್ತು ಮಹಿಳೆಯರಲ್ಲಿ ಅಸಮಾನತೆಯನ್ನು ಉಂಟು ಮಾಡಿದೆ. ಭಾರತೀಯ ಸಮಾಜದಲ್ಲಿ ಮಹಿಳೆಯರನ್ನು ಶೂದ್ರರಿಗೆ ಹೋಲಿಸಲಾಗುತ್ತದೆ. ಹಾಗಾಗಿ ಅವರಿಗೆ ಕುಟುಂಬದಲ್ಲಿ ಕನಿಷ್ಟ ಸ್ಥಾನ ನೀಡಲಾಗಿದ್ದು, ಕನಿಷ್ಟ ಸ್ವಾತಂತ್ರ್ಯಕ್ಕೆ ಸೀಮಿತಗೊಳಿಸಲಾಗಿದೆ. ಹಿಂದೂ ಸಮಾಜ ಮಹಿಳೆಯರಿಗೆ ಅತ್ಯಂತ ನಿಕೃಷ್ಟ ಸ್ಥಾನ ನೀಡಿದೆ. ಇದು ಮೇಲ್ಜಾತಿಯ ಮಹಿಳೆಯರ ಸಮಸ್ಯೆಯಾದರೆ, ದಲಿತ ಮಹಿಳೆಯರ ಸ್ಥಿತಿ ಇನ್ನೂ ನಿಕೃಷ್ಟ ಸ್ಥಿತಿಯನ್ನು ತಲುಪಿದೆ. ದಲಿತ ಮಹಿಳೆಯರಿಗೆ ಶಿಕ್ಷಣ ಪಡೆಯುವುದಾಗಲಿ, ಆಸ್ತಿ ಹೊಂದುವ ಅಧಿಕಾರವಾಗಲಿ ನೀಡಿಲ್ಲ. ಹಾಗಾಗಿ ಜಾತಿ ವ್ಯವಸ್ಥೆಯ ಹಿನ್ನೆಲೆಯಲ್ಲಿ ದಲಿತ ಮಹಿಳೆಯರು ವಂಚನೆಗೆ ಒಳಗಾಗಿದ್ದಾರೆ.[೧೭] ಮೇಲ್ಜಾತಿಯ ಮಹಿಳೆಯರಿಗೆ ಹೋಲಿಸಿದರೆ, ಜಾತಿ ಹಿನ್ನೆಲೆಯಲ್ಲಿ ದಲಿತ ಮಹಿಳೆಯರು ಹೆಚ್ಚು ಶೋಷಣೆಗೆ ಒಳಗಾಗಿದ್ದಾರೆ. ಮೊದಲನೆಯದಾಗಿ ರಕ್ಷಣೆ, ಪರಾವಲಂಬನೆ, ಅನಕ್ಷರತೆ, ಅರಿವಿನ ಕೊರತೆ, ಬಡತನ, ಸಮಸ್ಯೆಗಳಿಗೆ ಧ್ವನಿ ಇಲ್ಲದಿರುವುದು ಮುಂತಾದ ಸಂಗತಿಗಳಲ್ಲಿ ಶೋಷಣೆಗೆ ಒಳಗಾಗಿದ್ದಾರೆ. ದಲಿತ ಮಹಿಳೆಯರು ಅಸ್ಪೃಶ್ಯತೆಯ ಶೋಷಣೆ, ಮೂಲಭೂತ ಅವಶ್ಯಕತೆಗಳು ಮತ್ತು ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗಿದ್ದಾಳೆ. ವಿಶೇಷವಾಗಿ ಗ್ರಾಮೀಣ ಭಾಗದ ದಲಿತ ಮಹಿಳೆಯರು ಲೈಂಗಿಕ ಶೋಷಣೆಗೆ ಒಳಗಾಗುತ್ತಿರುವುದು ಹೆಚ್ಚಾಗುತ್ತಿದೆ. ಎರಡನೆಯದಾಗಿ ದಲಿತ ಮಹಿಳೆಯರು ದಲಿತ ಸಮುದಾಯದಲ್ಲೇ ದಲಿತರಾಗಿರುವುದು ಗಮನಾರ್ಹವಾಗಿದೆ. ದೇಶದ ಶೇ.೯೦ರಷ್ಟು ದಲಿತ ಮಹಿಳೆಯರು ಅನಕ್ಷರಸ್ಥರಾಗಿ, ಭೂರಹಿತ ಕೃಷಿ ಕಾರ್ಮಿಕರಾಗಿ, ದಲಿತ ಸಮುದಾಯದಲ್ಲೇ ಮೂಲಭೂತ ಸಂಪನ್ಮೂಲಗಳಿಂದ ವಂಚನೆಗೆ ಒಳಗಾಗಿದ್ದಾಳೆ.[೧೮] ವಿವಿಧ ಮೂಲಭೂತ

ಸೌಕರ್ಯಗಳ ಕೊರತೆಯಿಚಿದಾಗಿ ದಲಿತ ಮಹಿಳೆ ಸುಲಭವಾಗಿ ಲೈಂಗಿಕ ಹಿಂಸಾಚಾರಕ್ಕೆ ಒಳಗಾಗುತ್ತಿದ್ದಾಳೆ.

ಲೈಂಗಿಕ ಹಿಂಸಾಚಾರ

ದಲಿತ ಮಹಿಳೆಯು ತನ್ನ ಕುಟುಂಬದ ನಿರ್ವಹಣೆಗಾಗಿ ಹೊರಗಡೆ ದುಡಿಯುವುದು ಅನಿವಾರ್ಯವಾಯಿತು. ಹೊರಗಡೆ ದುಡಿಮೆಯ ಸ್ಥಳಗಳು ದಲಿತ ಮಹಿಳೆಯರಿಗೆ ಸುರಕ್ಷಿತವಾಗಿಲ್ಲ. ಇಂತಹ ಕಡೆ ಅವರು ನಾನಾ ರೀತಿಯ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಬಹುತೇಕ ಸಂದರ್ಭದಲ್ಲಿ ದಲಿತ ಮಹಿಳೆಯ ಅತ್ಯಾಚಾರ ಗಂಭೀರ ಪ್ರಕರಣವಾಗಿ ದಾಖಲಾಗುವುದಿಲ್ಲ. ಹಾಗಾಗಿ ದಲಿತ ಮಹಿಳೆಯರು ತಮಗಾಗುವ ಲೈಂಗಿಕ ಹಿಂಸಾಚಾರಗಳನ್ನು ಮೌನವಾಗಿಯೇ ಸಹಿಸಿಕೊಳ್ಳಬೇಕಾದ ಸಂದರ್ಭಕ್ಕೆ ಒಳಗಾಗುತ್ತಾರೆ.[೧೯]

ಭಾರತದಂತಹ ದೇಶದಲ್ಲಿ ಶೌಚಾಲಯಗಳ ಕೊರತೆ ದೊಡ್ಡ ಸಮಸ್ಯೆಯಾಗಿದೆ. ಇದು ಕೆಲವೊಮ್ಮೆ ಸಾರ್ವಜನಿಕ ವ್ಯಾಜ್ಯಗಳಿಗೆ ಕಾರಣವಾಗುತ್ತಿದೆ. ಶೌಚಾಲಯ ಭೂರಹಿತರು ಮತ್ತು ಬಡವರು ಎದುರಿಸುತ್ತಿರುವ ಮುಖ್ಯ ಕೊರತೆಯಾದರೆ ದಲಿತ ಮಹಿಳೆಯರಿಗೆ ಶೌಚಾಲಯ ಎನ್ನುವುದು ದೊಡ್ಡ ಸವಾಲಿನ ಪ್ರಶ್ನೆಯಾಗಿದೆ. ಇಂತಹ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ದಲಿತ ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವುದು ಹೆಚ್ಚಾಗುತ್ತಿದೆ.[೨೦] ೧೯೮೯ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದು ಅತ್ಯಂತ ಪ್ರಬಲವಾದ ಕಾಯ್ದೆಯಾಗಿದ್ದರೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಲ್ಲಿ ವಿಫಲವಾಗಿದೆ. ಪ್ರತಿನಿತ್ಯ ಅಸಂಖ್ಯಾತ ದಲಿತ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯವಾಗುತ್ತಿದೆ. ಈ ಪ್ರಕರಣಗಳಿಗೆ ಬಲಿಯಾದ ಕೆಲವರು ಮಾತ್ರ ದೂರು ಸಲ್ಲಿಸುತ್ತಾರೆ. ದೂರು ಸಲ್ಲಿಸಿದ ಪ್ರಕರಣಗಳನ್ನು ಮಾತ್ರ ಪೊಲೀಸರು ದಾಖಲಿಸುತ್ತಾರೆ. ಅವುಗಳಲ್ಲಿ ಕನಿಷ್ಠ ಸಂಖ್ಯೆಯ ಜನರಿಗೆ ಮಾತ್ರ ಶಿಕ್ಷೆಯಾಗುತ್ತಿದೆ. ಇದರ ಸಮಸ್ಯೆ ಕೇವಲ ಕಾನೂನಿನಲ್ಲಿ ಮಾತ್ರ ಇಲ್ಲ. ಬದಲಾಗಿ ಯಾವ ಸಾಮಾಜಿಕ ಸಂದರ್ಭದಲ್ಲಿ ಈ ಕಾಯ್ದೆ ಕಾರ್ಯನಿರ್ವಹಿಸುತ್ತಿದೆ ಎನ್ನುವುದು ಮುಖ್ಯವಾಗುತ್ತದೆ.[೨೧] ಅತ್ಯಂತ ನೋವಿನ ಸಂಗತಿ ಎಂದರೆ, ಈ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇತ್ತೀಚಿನ ದತ್ತಾಂಶಗಳು ಹೇಳುವ ಪ್ರಕಾರ ೧೯೯೮ರಲ್ಲಿ ೬೩೪ ಪ್ರಕರಣಗಳು, ೧೯೯೯ರಲ್ಲಿ ೧೦೦೦ ಪ್ರಕರಣಗಳು ಮತ್ತು ೨೦೦೦ದಲ್ಲಿ ೧೦೮೩ ದಲಿತ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ.[೨೨] ಈ

ಸಮಸ್ಯೆಗಳ ವಿರುದ್ಧ ದಲಿತ ಮಹಿಳೆಯರು ಧ್ವನಿ ಎತ್ತುವ ಸ್ಥಿತಿಯಲ್ಲಿ ಇಲ್ಲ. ಇದರ ಮೂಲ ಕಾರಣ ದಲಿತ ಮಹಿಳೆಯರ ಅನಕ್ಷರತೆ.

ದಲಿತ ಮಹಿಳೆಯರ ಆರ್ಥಿಕ ಸ್ಥಾನ

ದಲಿತ ಮಹಿಳೆಯರ ಕನಿಷ್ಟ ಸಾಕ್ಷರತೆ ಮತ್ತು ಬಡತನದಿಂದಾಗಿ ಅವರ ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಮನೆಯ ಹೊರಗಡೆ ದುಡಿಮೆ ಮಾಡುವುದು ಅನಿವಾರ್ಯವಾಗಿದೆ. ಇವರು ಸಾಮಾನ್ಯವಾಗಿ ಕೃಷಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಾರೆ. ಕನಿಷ್ಟ ಸಾಕ್ಷರತೆ, ಕನಿಷ್ಟ ಸಾಮಾಜಿಕ ಸ್ಥಾನ ಮತ್ತು ಕೌಶಲ್ಯಗಳ ಕೊರತೆಯಿಂದಾಗಿ ಅವರು ಶಾರೀರಿಕ ಶ್ರಮವನ್ನು ಅವಲಂಬಿಸುವುದು ಅನಿವಾರ್ಯವಾಗಿದ್ದು ಅವರು ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿದ್ದಾರೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರೇ ದೀರ್ಘಾವಧಿ ಕಾಲ ಕೆಲಸ ನಿರ್ವಹಿಸುತ್ತಾರೆ. ಹಾಗಾಗಿ ಮನೆಯ ಹೊರಗಡೆ ಹೆಚ್ಚು ದುಡಿಮೆ ಮಾಡುತ್ತಿರುವುದರಿಂದ ಅವರ ಮಕ್ಕಳನ್ನು ಸರಿಯಾಗಿ ಪೋಷಿಸುವುದು ಸಾಧ್ಯವಾಗುತ್ತಿಲ್ಲ. ಮನೆಯ ಒಳಗಡೆ ಮತ್ತು ಹೊರಗಡೆ ಅತಿಹೆಚ್ಚು ಶ್ರಮವಹಿಸಿ ದುಡಿದರೂ ಅವರು ತಮ್ಮ ಗಂಡಂದಿರಿಂದ ದೈಹಿಕ ಹಿಂಸೆಗೆ ಒಳಗಾಗುತ್ತಿದ್ದಾರೆ. ಇವರ ದೈಹಿಕ ಶ್ರಮ ಮತ್ತು ಆರ್ಥಿಕ ಆದಾಯಗಳನ್ನು ಸಮಾಜ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಸಮಾಜದಲ್ಲಿ ಪುರುಷರು ಮತ್ತು ಮಹಿಳೆಯರ ನಡುವಿನ ಕೂಲಿ ತಾರತಮ್ಯ ಮುಂದುವರೆದಿದೆ. ದಲಿತ ಮಹಿಳೆಯರಿಗೆ ಕನಿಷ್ಟ ಕೂಲಿ ನೀಡಲಾಗುತ್ತಿದೆ. ಉದ್ಯೋಗ ಖಾತ್ರಿ ಯೋಜನೆಗಳಲ್ಲೂ ಅವರು ತಾರತಮ್ಯಕ್ಕೆ ಒಳಗಾಗಿದ್ದು ಉದ್ಯೋಗದ ದಿನಗಳ ಖಾತ್ರಿ ದೊರೆಯುತ್ತಿಲ್ಲ. ಕೂಲಿ ಕಾರ್ಮಿಕರು ಕಡಿಮೆ ಸಂಖ್ಯೆಯಲ್ಲಿದ್ದಾಗ ಮಾತ್ರ ದಲಿತ ಮಹಿಳೆಯರಿಗೆ ಕೂಲಿ ಕೆಲಸ ಲಭ್ಯವಾಗುತ್ತಿದೆ. ಶೇ.೮೦ರಷ್ಟು ದಲಿತ ಮಹಿಳೆಯರು ಕೃಷಿ ವಲಯವನ್ನು ಅವಲಂಬಿಸಿದ್ದಾರೆ. ಈ ವಲಯವು ಅಸಂಘಟಿತವಾಗಿದ್ದು ಇದರಲ್ಲಿ ಸಾಮಾಜಿಕ ಭದ್ರತೆ ದೊರೆಯುತ್ತಿಲ್ಲ. ದಲಿತ ಮಹಿಳೆಯರು ಹೆರಿಗೆ, ಮಕ್ಕಳ ಪೋಷಣೆಗೆ ರಜೆ, ಉಚಿತ ಹಾಲು, ಭವಿಷ್ಯ ನಿಧಿ ಮುಂತಾದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಈ ಅವಕಾಶ ವಂಚನೆ ಕೈಗಾರಿಕಾ ವಲಯಗಳಲ್ಲೂ ಮುಂದುವರೆದಿದೆ. ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ದಲಿತ ಮಹಿಳೆಯರು ತಮ್ಮ ಚಿಕ್ಕ ಮಕ್ಕಳನ್ನು ಸೀರೆಯ ಸಹಾಯದಿಂದ ತಯಾರಿಸಿದ ತೊಟ್ಟಿಲಲ್ಲಿ ಮಲಗಿಸುವುದು ಅನಿವಾರ್ಯವಾಗಿದ್ದು, ಕೆಲವು ಸಂದರ್ಭಗಳಲ್ಲಿ ಕೆಲಸದ ಅವಧಿಯಲ್ಲಿ ಚಿಕ್ಕ ಮಕ್ಕಳಿಗೆ ಹಾಲುಣಿಸುವ ಅವಕಾಶವು ಲಭ್ಯವಾಗುತ್ತಿಲ್ಲ. ಮೇಲ್ಜಾತಿಯ ಭೂಮಾಲೀಕರು ದಲಿತ ಮಹಿಳೆಯರನ್ನು ಕೂಲಿ ಕೆಲಸ ನಿರ್ವಹಿಸಲು ಆಹ್ವಾನಿಸುತ್ತಿಲ್ಲ.[೨೩] ೧೯೯೧ರಲ್ಲಿ ಶೇ.೭೦ರಷ್ಟು

ಗ್ರಾಮೀಣ ಭಾಗದ ದಲಿತ ಮಹಿಳೆಯರು ಕೃಷಿ ಕಾರ್ಮಿಕರಾಗಿ ಕಾರ್ಯನಿರ್ವಹಿಸಿರುವುದು ದಾಖಲಾಗಿದೆ. ಕೇವಲ ಶೇ.೧೯ರಷ್ಟು ಮಹಿಳೆಯರು ಮಾತ್ರ ಭೂಮಾಲೀಕರಾಗಿದ್ದಾರೆ. ಅದೇ ಪ್ರಕಾರ ನಗರ ಪ್ರದೇಶಗಳಲ್ಲಿ ಶೇ.೩.೨೭ರಷ್ಟು ದಲಿತ ಮಹಿಳೆಯರು ನಿರುದ್ಯೋಗಿಗಳಾಗಿದ್ದಾರೆ. ಮೇಲಾಗಿ ಅತ್ಯಂತ ಕಡಿಮೆ ಆದಾಯ ತರುವ ಆಸ್ತಿಗಳಿಂದಾಗಿ ದಲಿತ ಮಹಿಳೆಯರು ಭೂಮಾಲೀಕರ ಕೂಲಿ ಕೆಲಸಗಳಿಗೆ ಅವಲಂಬನೆ ಅನಿವಾರ್ಯವಾಗಿದೆ. ಹಾಗಾಗಿ ಇಂತಹ ಸ್ಥಳಗಳಲ್ಲಿ ದಲಿತ ಮಹಿಳೆಯರು ಲೈಂಗಿಕ ಶೋಷಣೆಗೆ ಒಳಗಾಗುತ್ತಾರೆ. ಈ ಪರಿಸ್ಥಿತಿಯಿಂದಾಗಿ ದಲಿತ ಮಹಿಳೆಯರು ನಾಗರಿಕ, ರಾಜಕೀಯ ಮತ್ತು ಆರ್ಥಿಕ ಹಕ್ಕುಗಳಿಂದ ವಂಚಿತರಾಗಿದ್ದಾರೆ.[೨೪] ದಲಿತ ಕುಟುಂಬಗಳಲ್ಲಿ ಅಪ್ರಾಪ್ತ ಬಾಲಕಿಯರ ದುಡಿಮೆ ಅನಿವಾರ್ಯವಾಗಿದ್ದು ಅವರು ಮಕ್ಕಳ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಅಧ್ಯಯನ ಹೇಳುವಂತೆ, ದಲಿತ ಸಮುದಾಯದ ಬಾಲಕಿಯರು ೨೦ ವರ್ಷಗಳ ಒಳಗೆ ಕೂಲಿ ಮಾರುಕಟ್ಟೆಗೆ ಪ್ರವೇಶ ಮಾಡುತ್ತಿದ್ದು ಅವರ ಸಂಖ್ಯೆ ಶೇ.೩೧.೬ರಷ್ಟಿದೆ. ಸೇವೆಯ ಅಭದ್ರತೆ ಮತ್ತು ಕನಿಷ್ಠ ಕೂಲಿ ಈ ಸಮುದಾಯಗಳಿಗೆ ಅನಿವಾರ್ಯವಾಗಿದ್ದು ಇದು ಬಹುತೇಕ ದಲಿತ ಕುಟುಂಬಗಳ ಬಾಲಕಿಯರು ಕುಟುಂಬದ ಆರ್ಥಿಕ ನಿರ್ವಹಣೆಗಾಗಿ ಹೊರಗಡೆ ದುಡಿಯುವುದು ಮತ್ತು ಮನೆಯ ಒಳಗಡೆಯೂ ಸಹಾಯ ನೀಡುವುದು ಅನಿವಾರ್ಯವಾಗಿದೆ.[೨೫] ಚಂಡಿದಾಸ್ ಅಧ್ಯಯನ ಹೇಳುವಂತೆ ಪರಿಶಿಷ್ಟ ಜಾತಿ ಸಮುದಾಯಗಳು ಸಮಾನತೆಯೊಂದಿಗೆ ಅಂತರವನ್ನು ಕಂಡುಕೊಂಡಿದ್ದಾರೆ. ಕಳೆದ ಎರಡು ದಶಕಗಳಲ್ಲಿ ಸಾಮಾನ್ಯ ಸಮುದಾಯದೊಂದಿಗೆ ಸಮಾನವಾದ ಸ್ಥಾನಕ್ಕೆ ಪರಿಶಿಷ್ಟರನ್ನು ತರಲು ವಿಶೇಷ ರಿಯಾಯಿತಿಗಳನ್ನು ನೀಡಲಾಗಿದೆ. ಆದರೂ ಅವರ ಜೀವನದಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ ಇಂದಿಗೂ ಪರಿಶಿಷ್ಟ ಸಮುದಾಯಗಳು ಅಭಿವೃದ್ಧಿಯ ಅಂಚಿನಲ್ಲಿ ಉಳಿದುಕೊಂಡಿವೆ. ಕೃಷಿ ವಲಯದಲ್ಲಿ ಇಂದಿಗೂ ಸಾಮಾನ್ಯ ಸಮುದಾಯದೊಂದಿಗೆ ಹೋಲಿಸಿದರೆ, ಭೂಮಿ ಮತ್ತು ಹಿಡುವಳಿಗಳ ಗಾತ್ರದಲ್ಲಿ ಹಿಂದುಳಿದಿದ್ದಾರೆ. ನಗರೀಕರಣ, ಶಿಕ್ಷಣ ಮತ್ತು ತಲಾವರಮಾನದಲ್ಲೂ ಪರಿಶಿಷ್ಟರು ಅತ್ಯಂತ ಹಿಂದುಳಿದಿದ್ದಾರೆ.[೨೬] ಅಸ್ಪೃಶ್ಯತೆ, ಕೆಳಮಟ್ಟದ ಸಾಮಾಜಿಕ ಸ್ಥಾನಮಾನ, ಅಶುದ್ಧ ವೃತ್ತಿಗಳು, ಬಡತನ ಮತ್ತು ನಿರುದ್ಯೋಗ, ಶಿಕ್ಷಣದ ಕೊರತೆ ಮತ್ತು ತಳಮಟ್ಟದ ಜೀವನ ಮುಂತಾದವುಗಳು ದುರ್ಬಲ ಸಮುದಾಯಗಳ ಲಕ್ಷಣಗಳಾಗಿವೆ. ಸರ್ಕಾರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರೂ ಅವುಗಳು ದುರ್ಬಲ ಸಮುದಾಯಗಳನ್ನು ಪ್ರಭಾವಿಸಿಲ್ಲ. ಏಕೆಂದರೆ ಸಂಪನ್ಮೂಲಗಳು ಲಭ್ಯವಿದ್ದರೂ ಅವುಗಳ ಉಪಯೋಗಿಸುವಿಕೆಯನ್ನು ನಿರ್ಬಂಧಿಸಲಾಗಿದೆ ಮತ್ತು ಸಂಪನ್ಮೂಲಗಳು ಉಪಯೋಗಿಸಿಕೊಳ್ಳುವ

ಸಾಮರ್ಥ್ಯವನ್ನು ದುರ್ಬಲ ಸಮುದಾಯಗಳಿಗೆ ನೀಡಲಾಗಿಲ್ಲ.[೨೭] ಲೀಲಾ ವಸಾರಿಯ ಅವರು ತಮಿಳುನಾಡಿನ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು ೧೦೦೦ ಗ್ರಾಮೀಣ ಕುಟುಂಬಗಳಲ್ಲಿ ೮೦೦ ಹರಿಜನರನ್ನು ಮತ್ತು ೨೦೦ ಹರಿಜನೇತರ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕ ಸೂಚಿಯನ್ನು ಆಧರಿಸಿ ಹರಿಜನರು ಅನುಭವಿಸುತ್ತಿರುವ ತಾರತಮ್ಯ ಮತ್ತು ೧೯೫೦ ರಿಂದ ೧೯೭೦ರ ಎರಡು ದಶಕಗಳಲ್ಲಿ ಬಡತನದಲ್ಲಾಗಿರುವ ಪರಿವರ್ತನೆಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಿತ್ತು. ಅಧ್ಯಯನ ಕಂಡುಕೊಂಡಿರುವ ಪ್ರಕಾರ ೧೯೭೦ ರ ದಶಕದಲ್ಲಿ ಹರಿಜನರ ತಲಾ ವರಮಾನ ೨೭೦ ರೂ. ಗಳಾಗಿದ್ದು, ಹರಿಜನೇತರ ತಲಾವರಮಾನ ೪೦೬ ರೂಪಾಯಿಗಳಾಗಿದ್ದವು. ಹರಿಜನರು ಮತ್ತು ಹರಿಜನೇತರರು ಕೂಲಿ ಕೆಲಸಗಳಲ್ಲಿ ತೊಡಗಿದ್ದು ಅವರಿಬ್ಬರ ಕೂಲಿಗಳಲ್ಲಿ ವ್ಯತ್ಯಾಸಗಳಿವೆ. ಸಣ್ಣ ಹಿಡುವಳಿ ಮತ್ತು ಕಡಿಮೆ ಕೂಲಿಯ ವೃತ್ತಿಗಳಿಂದಾಗಿ ಹರಿಜನರ ಆದಾಯಗಳು ಕಡಿಮೆಯಾಗಿವೆ.[೨೮] ಮುಮ್ತಾಜ್ ಅಲಿ ಖಾನ್ ಅಧ್ಯಯನದಲ್ಲಿ ಪರಿಶಿಷ್ಟರು ವಿವಿಧ ವಲಯಗಳಲ್ಲಿ ಹೊಂದಿರುವ ಬದಲಾವಣೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಸಮುದಾಯದ ಜೀವನ ಮಟ್ಟವನ್ನು ಎತ್ತರಿಸುವಲ್ಲಿ ಸರ್ಕಾರದ ನೀತಿಗಳು ಮತ್ತು ಕಾರ್ಯಕ್ರಮಗಳ ಪಾತ್ರವನ್ನು ಮೌಲ್ಯಮಾಪನ ಮಾಡಲಾಗಿದೆ. ಅಧ್ಯಯನದ ಫಲಿತಗಳು ಹೇಳುವಂತೆ ಪರಿಶಿಷ್ಟ ಸಮುದಾಯಗಳು ಸರ್ಕಾರದ ಕಾರ್ಯಕ್ರಮಗಳಿಂದ ಹೆಚ್ಚು ಆರ್ಥಿಕ ಲಾಭವನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ.[೨೯] ಪಿ.ಬಿ.ಸಿಂಗ್ ಅಧ್ಯಯನವು ದಲಿತರ ಕೊರತೆಗಳು ಮತ್ತು ರಾಜಕೀಯ ಪ್ರಜ್ಞೆಯನ್ನು ಕುರಿತು ಕೈಗೊಳ್ಳಲಾಗಿದೆ. ಸಮಾಜದಲ್ಲಿ ಭೌತಿಕ ಮತ್ತು ಭೌತಿಕೇತರ ಸಂಪನ್ಮೂಲಗಳ ಅಸಮಾನ ಹಂಚಿಕೆಯಿಂದಾಗಿ ದಲಿತರಿಗೆ ಸಂಪನ್ಮೂಲಗಳ ಕೊರತೆ ಉಂಟಾಗಿದೆ. ಎಲ್ಲಾ ಸಮಾಜದಲ್ಲಿ ವಾಸ್ತವಿಕವಾಗಿ ಕೆಲವು ಸಮುದಾಯಗಳು ಹೆಚ್ಚು ಸಾಮಾಜಿಕ ಸಂಪನ್ಮೂಲಗಳನ್ನು ಅನುಭವಿಸುತ್ತವೆ. ಆದರೆ ಚರಿತ್ರೆಯ ಉದ್ದಕ್ಕೂ ದಲಿತ ಸಮುದಾಯಗಳು ಸಮಾಜೋ-ಆರ್ಥಿಕ ಸೌಲಭ್ಯಗಳಿಂದ ವಂಚಿತವಾಗಿ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿವೆ. ಇಂತಹ ಸಮಸ್ಯೆಗಳಿಂದಾಗಿ ದಲಿತರು ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ.[೩೦]

೩.೫. ದಲಿತ ಮಹಿಳೆಯರ ಶಿಕ್ಷಣ

ಇತರೆ ಸಮುದಾಯದ ಮಹಿಳೆಯರಿಗೆ ಹೋಲಿಸಿದರೆ ದಲಿತ ಮಹಿಳೆಯರ ಶೈಕ್ಷಣಿಕ ಸ್ಥಿತಿ ಅತ್ಯಂತ ನಿಕೃಷ್ಟವಾಗಿದೆ. ದಲಿತ ಮಹಿಳೆಯರ ಕನಿಷ್ಟ ಸಾಕ್ಷರತೆಯಿಂದಾಗಿ ಇವರಿಗೆ ಸಾಮಾಜಿಕ

ಗೌರವವಿಲ್ಲ, ಇವರನ್ನು ಆರ್ಥಿಕವಾಗಿ ವಂದಿಸಲಾಗಿದೆ. ಹಾಗಾಗಿ ಮಹಿಳೆಯರು ಸಮಾಜದಲ್ಲಿ ಪ್ರಬಲವಾದ ಸ್ಥಾನ ಪಡೆಯುವಲ್ಲಿ ಪ್ರಮುಖ ತೊಡಕು ಅನುಭವಿಸುತ್ತಿದ್ದಾರೆ. ಈ ಸ್ಥಿತಿಯು ಮಹಿಳೆಯರ ಸಾಮಾಜಿಕ ಅಭಿವೃದ್ಧಿ, ಆರ್ಥಿಕ ಪ್ರಗತಿ ಮತ್ತು ರಾಜಕೀಯ ಪ್ರಬುದ್ಧತೆಯ ಮೇಲೆ ಪ್ರಭಾವ ಬೀರುತ್ತದೆ. ದಲಿತ ಮಹಿಳೆಯ ಕನಿಷ್ಠ ಸಾಕ್ಷರತೆಯಿಂದಾಗಿ ಅವರ ಮಕ್ಕಳ ಪೋಷಣೆಗೂ ತೊಡಕಾಗಿದೆ. ಅಂತಿಮವಾಗಿ ಮಹಿಳೆಯರು ಕೀಳರಿಮೆಯಿಂದಾಗಿ ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಸಾಧ್ಯವಾಗುವುದಿಲ್ಲ.

೩.೬. ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಲಿತರ ಶೈಕ್ಷಣಿಕ ಸ್ಥಿತಿ :

ಕೋಷ್ಠಕ ೩.೧.ರಲ್ಲಿ ತಿಳಿಸುವಂತೆ, ೧೯೬೧ರಲ್ಲಿ ದೇಶದ ಒಟ್ಟು ಸಾಕ್ಷರತೆ ಶೇ.೨೪.೦೨ರಷ್ಟಿದ್ದು, ದಲಿತ ಪುರುಷರ ಸಾಕ್ಷರತೆ ಶೇ.೧೬.೯ ಇದ್ದು, ದಲಿತ ಮಹಿಳೆಯರ ಸಾಕ್ಷರತೆ ಕೇವಲ ಶೇ.೩.೨೯ ಕಂಡು ಬಂದಿದೆ. ೧೯೭೧ರಲ್ಲಿ ದೇಶದ ಒಟ್ಟು ಸಾಕ್ಷರತೆ ಶೇ.೨೯.೪೬ರಷ್ಟಿದ್ದು, ದಲಿತ ಪುರುಷರ ಸಾಕ್ಷರತೆ ಶೇ. ೨೨.೩೬ ಆದರೆ, ದಲಿತ ಮಹಿಳೆಯರ ಸಾಕ್ಷರತೆ ಶೇ.೬.೪೪ರಷ್ಟು ದಾಖಲಾಗಿದೆ. ೧೯೮೧ರಲ್ಲಿ ಒಟ್ಟು ಸಾಕ್ಷರತೆ ಶೇ.೪೩.೬೭ರಷ್ಟು ದಾಖಲಾಗಿದ್ದು ದಲಿತ ಪುರುಷರ ಸಾಕ್ಷರತೆ ಶೇ.೩೧.೧೨ರಷ್ಟಿದ್ದು, ದಲಿತ ಮಹಿಳೆಯರ ಶೇ.೧೦.೯೩ರಷ್ಟು ದಾಖಲಾಗಿದೆ. ಆದರೆ ೧೯೯೧ರ ಜನಗಣತಿಯ ಪ್ರಕಾರ ದೇಶದ ಒಟ್ಟು ಸಾಕ್ಷರತೆ ಶೇ.೫೨.೨೧ರಷ್ಟು ದಾಖಲಾಗಿದ್ದು ದಲಿತ ಪುರುಷರ ಸಾಕ್ಷರತೆ ಶೇ.೪೯.೯೧ ದಾಖಲಾಗಿದ್ದು ದಲಿತ ಮಹಿಳೆಯರ ಸಾಕ್ಷರತೆ ಗಣನೀಯವಾಗಿ ಹೆಚ್ಚಳವಾಗಿದ್ದು ಅವರ ಸಾಕ್ಷರತೆ ಶೇ.೨೩.೭೬ರಷ್ಟು ದಾಖಲಾಗಿದೆ. ೧೯೮೧ರಿಂದ ೧೯೯೧ರ ಹತ್ತು ವರ್ಷಗಳ ಅವಧಿಯಲ್ಲಿ ದಲಿತ ಮಹಿಳೆಯರ ಸಾಕ್ಷರತೆ ಪ್ರಮಾಣ ಗಣನೀಯವಾಗಿ ಹೆಚ್ಚಳ ಕಂಡರೂ ಕೂಡ ದಲಿತ ಪುರುಷರಿಗೆ ಹೋಲಿಸಿದರೆ ಮತ್ತು ಇತರೆ ಸಮುದಾಯದ ಮಹಿಳೆಯರಿಗೆ ಹೋಲಿಸಿದರೆ, ದಲಿತ ಮಹಿಳೆಯರ ಸಾಕ್ಷರತೆ ಕನಿಷ್ಠ ಮಟ್ಟದಲ್ಲಿದೆ. ಸರ್ಕಾರದ ದಾಖಲೆಗಳ ಪ್ರಕಾರ ದಲಿತ ಸಮುದಾಯದ ಬಾಲಕಿಯರು ಮಧ್ಯದಲ್ಲಿಯೇ ಶಾಲೆ ಬಿಡುವವರ ಸಂಖ್ಯೆಯಲ್ಲಿಯೂ ಗಣನೀಯ ಹೆಚ್ಚಳ ಕಂಡು ಬಂದಿದೆ.

ಅರ್ಧದಲ್ಲೇ ಶಾಲೆ ತೊರೆಯುವ ದಲಿತ ಮಕ್ಕಳು:

ಕೋಷ್ಟಕ ೩.೨.ರಲ್ಲಿ ಕಂಡು ಬರುವಂತೆ ೧೯೮೮-೮೯ ಮತ್ತು ೧೯೯೦-೯೧ರ ಕಾಲಾವಧಿಯಲ್ಲಿ ಇತರೆ ಸಮುದಾಯದ ಮಧ್ಯದಲ್ಲೇ ಶಾಲೆ ಬಿಡುವ ಬಾಲಕಿಯರ ಸಂಖ್ಯೆಗೆ ಪರಿಶಿಷ್ಟ ಜಾತಿಯ ಬಾಲಕಿಯರ ಸಂಖ್ಯೆಯನ್ನು ಹೋಲಿಸಿದರೆ ಆತಂಕ ಉಂಟಾಗುತ್ತದೆ. ೧೯೮೮-೮೯ರ

ಕಾಲಾವಧಿಯಲ್ಲಿ ಸಾಮಾನ್ಯ ಸಮುದಾಯದ ಮಧ್ಯದಲ್ಲೇ ಪ್ರಾಥಮಿಕ ಶಾಲೆಯನ್ನು ತೊರೆಯುವ ಮಕ್ಕಳ ಸಂಖ್ಯೆ ಶೇ.೪೭.೬೯ ರಷ್ಟು ಇದ್ದರೆ, ದಲಿತ ಸಮುದಾಯದ ಬಾಲಕಿಯರ ಸಂಖ್ಯೆ ಶೇ.೫೩.೩೯ ಕಂಡು ಬರುತ್ತದೆ. ಮಾಧ್ಯಮಿಕ ಹಂತದಲ್ಲಿ ಸಾಮಾನ್ಯ ಸಮುದಾಯದ ಬಾಲಕಿಯರು ಶೇ.೬೮.೩ರಷ್ಟು ಬಾಲಕಿಯರು ಮಧ್ಯದಲ್ಲಿಯೇ ಶಾಲೆಯನ್ನು ತೊರೆದರೆ ದಲಿತ ಸಮುದಾಯದ ಶಾಲೆಯನ್ನು ತೊರೆಯುವ ಬಾಲಕಿಯರ ಸಂಖ್ಯೆ ಶೇ.೭೩.೬ರಷ್ಟಿದೆ. ಇದೇ ಕಾಲಘಟ್ಟದಲ್ಲಿ ಪ್ರೌಢಶಾಲೆಯ ಹಂತದಲ್ಲಿ ಶಾಲೆಯನ್ನು ತೊರೆಯುವ ಸಾಮಾನ್ಯ ಸಮುದಾಯದ ಬಾಲಕಿಯರ ಸಂಖ್ಯೆ ಶೇ.೭೯.೪೬ರಷ್ಟು ಕಂಡು ಬಂದರೆ ದಲಿತ ಸಮುದಾಯದ ಬಾಲಕಿಯರಲ್ಲಿ ಪ್ರೌಢಶಾಲೆ ತೊರೆಯುವ ಸಂಖ್ಯೆ ಶೇ.೮೫.೬೨ರಷ್ಟಿದೆ. ಅದೇ ಪ್ರಕಾರ ೧೯೯೦-೯೧ರ ಕಾಲಾವಧಿಯಲ್ಲಿ ಮಾಧ್ಯಮಿಕ ಹಂತದಲ್ಲಿ ಶಾಲೆ ತೊರೆಯುವ ಸಾಮಾನ್ಯ ಸಮುದಾಯದ ಬಾಲಕಿಯರ ಸಂಖ್ಯೆ ಶೇ.೪೫.೯೭ರಷ್ಟಿದ್ದು ದಲಿತ ಸಮುದಾಯದ ಬಾಲಕಿಯರ ಸಂಖ್ಯೆ ೪೬.೭ರಷ್ಟಿದೆ. ಮಾಧ್ಯಮಿಕ ಹಂತದಲ್ಲಿ ಸಾಮಾನ್ಯ ಸಮುದಾಯದಲ್ಲಿ ಶಾಲೆ ತೊರೆಯುವ ಬಾಲಕಿಯರ ಸಂಖ್ಯೆ ಶೇ.೬೫.೧೩ರಷ್ಟಿದ್ದು, ದಲಿತ ಸಮುದಾಯದ ಬಾಲಕಿಯರ ಸಂಖ್ಯೆ ಶೇ.೭೩.೨೪ರಷ್ಟಿದೆ. ಇದೇ ಕಾಲಘಟ್ಟದಲ್ಲಿ ಪ್ರೌಢಶಾಲೆಯ ಹಂತದಲ್ಲಿ ಶಾಲೆ ತೊರೆಯುವ ಸಾಮಾನ್ಯ ಸಮುದಾಯದ ಬಾಲಕಿಯರ ಸಂಖ್ಯೆ ಶೇ.೭೬.೯೬ರಷ್ಟಿದ್ದು, ದಲಿತ ಸಮುದಾಯದ ಬಾಲಕಿಯರಲ್ಲಿ ಶಾಲೆ ತೊರೆಯುವ ಪ್ರಮಾಣ ಶೇ.೮೩.೩೮ರಷ್ಟು ದಾಖಲಾಗಿದೆ. ಒಟ್ಟಾರೆ ಈ ಎರಡೂ ಕಾಲಾವಧಿಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಹಂತಗಳಲ್ಲಿ ಮಧ್ಯದಲ್ಲೇ ಶಾಲೆ ತೊರೆಯುವ ಇತರೆ ಸಮುದಾಯದ ಬಾಲಕಿಯರಿಗೆ ಹೋಲಿಸಿದರೆ ದಲಿತ ಸಮುದಾಯದ ಶಾಲೆಯನ್ನು ಮಧ್ಯದಲ್ಲೇ ತೊರೆಯುವ ಬಾಲಕಿಯರ ಸಂಖ್ಯೆ ಅತಿ ಹೆಚ್ಚಾಗಿದೆ. ಇದು ಅತ್ಯಂತ ಕಳವಳಕಾರಿಯಾದ ಸಂಗತಿಯಾಗಿದ್ದು, ಇದರಿಂದಾಗಿ ದಲಿತ ಮಹಿಳೆಯರು ಕನಿಷ್ಠ ಸಾಕ್ಷರತೆ ಹೊಂದುತ್ತಿದ್ದಾರೆ.

೩.೭ ಭಾರತೀಯ ಅಸಮಾನ ಸಮಾಜದ ಮತ್ತೊಂದು ಮುಖ

ಅಂಬೇಡ್ಕರ್ ಪ್ರಕಾರ ೧೯೪೮ರಲ್ಲಿ ಶೇ.೩ರಷ್ಟು ಸಂಖ್ಯೆಯನ್ನು ಹೊಂದಿದ್ದ ಬ್ರಾಹ್ಮಣರು ಸರ್ಕಾರಿ ಉದ್ಯೋಗಗಳಲ್ಲಿ ಶೇ.೩೭ರಷ್ಟು ಗೆಜೆಟೆಡ್ ಅಧಿಕಾರಿ ಹುದ್ದೆಗಳನ್ನು ಹಾಗೂ ಶೇ.೪೩ರಷ್ಟು ನಾನ್‌ಗೆಜೆಟೆಡ್ ಹುದ್ದೆಗಳನ್ನು ಹೊಂದಿದ್ದರೆಂದು ಖುಷ್ವಂತ್ ಸಿಂಗ್ ಅವರು ೧೯೯೦ರಲ್ಲಿ ಪ್ರಕಟಿಸಿದ ಬ್ರಾಹ್ಮಿನ್ ಪವರ್ ಎಂಬ ಲೇಖನದಲ್ಲಿ ಹೇಳಿದ್ದಾರೆ. ಈ ಲೇಖನ ಪ್ರತಿಪಾದಿಸುವ ಪ್ರಕಾರ ಬ್ರಾಹ್ಮಣರು ನಮ್ಮ ದೇಶದ ಒಟ್ಟು ಜನಸಂಖ್ಯೆಯ ಶೇ.೩.೫ಕ್ಕಿಂತ ಹೆಚ್ಚಿಲ್ಲ.

ಇಂದು ಅವರು ಶೇ.೭೦ರಷ್ಟು ಸರ್ಕಾರಿ ಹುದ್ದೆಗಳನ್ನು ಹೊಂದಿದ್ದಾರೆ. ನಾಗರಿಕ ಸೇವೆಯ ಉನ್ನತ ಸ್ತರದಲ್ಲಿ ಉಪಕಾರ್ಯದರ್ಶಿ ಹುದ್ದೆಯನ್ನು ಮೊದಲುಗೊಂಡು ಪ್ರತಿ ೫೦೦ ಮಂದಿಯಲ್ಲಿ ೩೧೦ ಬ್ರಾಹ್ಮಣರು ಅಂದರೆ, ಶೇ.೬೩ರಷ್ಟು ಈ ಹುದ್ದೆಗಳಲ್ಲಿದ್ದಾರೆ. ೨೬ ಮಂದಿ ಮುಖ್ಯ ಕಾರ್ಯದರ್ಶಿಗಳಲ್ಲಿ ೧೯ ಮಂದಿ ಬ್ರಾಹ್ಮಣರು ೨೭ ರಾಜ್ಯಪಾಲರು ಹಾಗೂ ೧೩ ಲೆಫ್ಟಿನೆಂಟ್ ಗವರ್ನರ್‌ಗಳು ಬ್ರಾಹ್ಮಣರಾಗಿದ್ದಾರೆ. ೧೬ ಮಂದಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರಲ್ಲಿ ೯ ಮಂದಿ ಬ್ರಾಹ್ಮಣರು, ಹೈಕೋರ್ಟ್‌ಗಳ ೩೩೦ ನ್ಯಾಯಾಧೀಶರುಗಳಲ್ಲಿ ೧೬೬ ಮಂದಿ ಬ್ರಾಹ್ಮಣರು, ೧೪೦ ರಾಯಭಾರಿಗಳಲ್ಲಿ ೫೮ ಮಂದಿ ಬ್ರಾಹ್ಮಣರು ಒಟ್ಟು ೩೩೦೦ ಭಾರತೀಯ ಆಡಳಿತಾತ್ಮಕ ಸೇವೆಗಳಲ್ಲಿ ೨೩೭೬ ಮಂದಿ ಬ್ರಾಹ್ಮಣರಿದ್ದಾರೆ.[೩೧]

ಚುನಾಯಿತ ಹುದ್ದೆಗಳಲ್ಲಿ ಅವರ ಸಾಧನೆ ಉತ್ತಮವಾಗಿದೆ. ೫೦೮ ಲೋಕಸಭಾ ಸದಸ್ಯರಲ್ಲಿ ೧೯೦ ಮಂದಿ ಬ್ರಾಹ್ಮಣರು, ೨೪೪ ರಾಜ್ಯಸಭಾ ಸದಸ್ಯರಲ್ಲಿ ೮೯ ಮಂದಿ ಬ್ರಾಹ್ಮಣರು, ಶೇ.೩.೫ರಷ್ಟು ಜನಸಂಖ್ಯೆ ಇರುವ ಬ್ರಾಹ್ಮಣರು ದೇಶದಲ್ಲಿ ಲಭ್ಯವಿರುವ ಎಲ್ಲಾ ರೀತಿಯ ಶೇ.೩೬ ರಿಂದ ೬೩ರಷ್ಟು ಉತ್ತಮ ಹುದ್ದೆಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಇದು ಹೇಗಾಯಿತೆಂದು ನನಗೆ ತಿಳಿದಿಲ್ಲ. ಆದರೆ ಬ್ರಾಹ್ಮಣರ ಉನ್ನತ ಬುದ್ಧಿಮತ್ತೆ ಇದಕ್ಕೆ ಕಾರಣವೆಂದು ನಾನು ನಂಬಲಾರೆ ಎಂದು ಸಿಂಗ್ ಹೇಳುತ್ತಾರೆ. ಆದರೆ ಅರುಂಧತಿ ರಾಯ್ ಹೇಳುವ ಪ್ರಕಾರ ಖುಷ್ವಂತ್ ಸಿಂಗ್ ಉಲ್ಲೇಖಿಸಿದ ಈ ಅಂಕಿ–ಅಂಶಗಳು ಈಗ ಒಂದು ದಶಕದಷ್ಟು ಹಳೆಯದಾಗಿದ್ದು ನೂತನ ಅಧ್ಯಯನಕ್ಕೆ ಇನ್ನಷ್ಟು ಆಧಾರಗಳು ಅಗತ್ಯವಿದೆ. ಈಗ ಹಾಗೆ ನಡೆಯುವುದು ಸಾಧ್ಯವಿಲ್ಲ. ಅಭಿವೃದ್ಧಿ ಸಮಾಜಗಳ ಅಧ್ಯಯನ ಕೇಂದ್ರ (ಸಿಎಸ್‌ಡಿಎಸ್) ನಡೆಸಿದ ಸಮೀಕ್ಷೆಯ ಪ್ರಕಾರ, ೧೯೫೦ರಿಂದ ೨೦೦೦ ನಡುವೆ ಕಾರ್ಯನಿರ್ವಹಿಸಿದ ಶೇ.೪೭ರಷ್ಟು ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಬ್ರಾಹ್ಮಣರಾಗಿದ್ದಾರೆ. ಇದೇ ಅವಧಿಯಲ್ಲಿ ಹೈಕೋರ್ಟ್ ಹಾಗೂ ಕೆಳ ನ್ಯಾಯಾಲಯಗಳಲ್ಲಿರುವ ಶೇ.೪೦ರಷ್ಟು ಸಹ–ನ್ಯಾಯಾಧೀಶರು ಕೂಡ ಬ್ರಾಹ್ಮಣರು. ಹಿಂದುಳಿದ ವರ್ಗಗಳ ಆಯೋಗವು ೨೦೦೭ರಲ್ಲಿ ಸಲ್ಲಿಸಿದ ವರದಿಯ ಪ್ರಕಾರ ಭಾರತದ ಅಧಿಕಾರಶಾಹಿಯಲ್ಲಿ ಶೇ.೩೧.೧೭ರಷ್ಟು ಬ್ರಾಹ್ಮಣರಿದ್ದಾರೆ. ಅವರಲ್ಲಿ ಬಹುತೇಕ ಮಂದಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಈ ಸ್ಥಿತಿ ಮಾಧ್ಯಮ ವಲಯದಲ್ಲೂ ಮುಂದುವರೆದಿದೆ. ಬ್ರಾಹ್ಮಣರೂ ಕೂಡ ಸಾಂಪ್ರದಾಯಿಕವಾಗಿ ಮಾಧ್ಯಮದ ಮೇಲೆ ಪ್ರಾಬಲ್ಯವನ್ನು ಸಾಧಿಸಿದ್ದಾರೆ. ೨೦೦೬ರಲ್ಲಿ ಸಿ.ಎಸ್.ಡಿ.ಎಸ್. ನಡೆಸಿದ ಸಮೀಕ್ಷೆಯ ಪ್ರಕಾರ ಇಂಗ್ಲಿಷ್ ಮುದ್ರಣ ಮಾಧ್ಯಮದ ಶೇ.೯೦ರಷ್ಟು ಮಂದಿ ಹಾಗೂ ಟಿ.ವಿ.ವಾಹಿನಿಗಳ ಶೇ.೩೭ರಷ್ಟು ಮಂದಿ ನಿರೂಪಕರು ಮೇಲ್ಜಾತಿಯವರು. ಅವರಲ್ಲಿ ಶೇ.೮೯ರಷ್ಟು ಮಂದಿ ಬ್ರಾಹ್ಮಣರು. ಈ ೩೧೫

ಮಂದಿಯಲ್ಲಿ ಒಬ್ಬನೇ ಒಬ್ಬ ದಲಿತ ಅಥವಾ ಆದಿವಾಸಿ ಇರಲಿಲ್ಲ. ಶೂದ್ರರೆಂದು ಪರಿಗಣಿಸಲ್ಪಟ್ಟಿರುವ ಕೇವಲ ಶೇ.೪ರಷ್ಟು ಮಂದಿ ಹಾಗೂ ಶೇ.೩ರಷ್ಟು ಮಂದಿ ಮುಸ್ಲಿಮರಿದ್ದಾರೆ. ಇದು ಮಾಧ್ಯಮ ವ್ಯಕ್ತಿಗಳ ಸಂಗತಿಯಾದರೆ ಮಾಧ್ಯಮಗಳನ್ನು ನಡೆಸುತ್ತಿರುವವರ ಸಂಗತಿ ಇನ್ನೂ ಕುತೂಹಲಕಾರಿಯಾಗಿದೆ. ನಾಲ್ಕು ಅಂತರಾಷ್ಟ್ರೀಯ ದಿನಪತ್ರಿಕೆಗಳ ಪೈಕಿ, ಮೂರನ್ನು ವೈಶ್ಯ ಹಾಗೂ ಒಂದನ್ನು ಬ್ರಾಹ್ಮಣ ಕುಟುಂಬಗಳು ನಿಯಂತ್ರಿಸುತ್ತವೆ. ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆ ಹಾಗೂ ೨೪ ತಾಸುಗಳ ಸುದ್ದಿವಾಹಿನಿ ಟೈಮ್ಸ್ ನೌ ಅತ್ಯಂತ ದೊಡ್ಡ ಸಂಸ್ಥೆಯಾದ ಟೈಮ್ಸ್ ಗ್ರೂಪ್ ಸಂಸ್ಥೆಯ ಒಡೆತನವನ್ನು ಜೈನ ಕುಟುಂಬ ಹೊಂದಿದೆ. ಹಿಂದೂಸ್ತಾನ ಟೈಮ್ಸ್ ಪತ್ರಿಕೆಯನ್ನು ಮಾರವಾಡಿ ಬನಿಯಾಗಳಾದ ಭಾರತೀಯಗಳು, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಗೋಯಂಕಾಗಳು ಕೂಡಾ ಮಾರವಾಡಿ ಬನಿಯಗಳು, ದಿ ಹಿಂದೂ ಪತ್ರಿಕೆಯು ಬ್ರಾಹ್ಮಣ ಕುಟುಂಬದ ಒಡೆತನಕ್ಕೆ ಸೇರಿದೆ. ವಾರ್ಷಿಕವಾಗಿ ೫.೫೦ ಕೋಟಿ ಪ್ರಸಾರ ಸಂಖ್ಯೆಯುಳ್ಳ ಪತ್ರಿಕೆಯ ಒಡೆತನ ಕಾನ್ಪುರ ಮೂಲದ ಬನಿಯಾಗಳಾದ ಕಪೂರ್ ಕುಟುಂಬ ಹೊಂದಿದೆ. ವಾರ್ಷಿಕ ೧.೭೫ ಕೋಟಿ ಪ್ರಸಾರ ಸಂಖ್ಯೆ ಹೊಂದಿರುವ ಪ್ರಭಾವಿ ಹಿಂದೂ ಪತ್ರಿಕೆಯಾದ ದೈನಿಕ ಭಾಸ್ಕರ ಕೂಡ ಬನಿಯಾ ಜಾತಿಗೆ ಸೇರಿದ ಅಗರವಾಲ್ ಕುಟುಂಬಕ್ಕೆ ಸೇರಿದೆ. ರಿಲೈಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯು ಗುಜರಾತಿ ಬನಿಯಾಗಳಾದ ಅಂಬಾನಿ ಕುಟುಂಬಕ್ಕೆ ಸೇರಿದೆ. ಇವರು ೨೭ ಪ್ರಮುಖ ರಾಷ್ಟ್ರೀಯ ಮತ್ತು ಪ್ರಾದೇಶಿಕ ಟಿ.ವಿ.ವಾಹಿನಿಗಳ ಷೇರುಗಳ ಮೇಲೆ ನಿಯಂತ್ರಣ ಹೊಂದಿದ್ದಾರೆ. ಬೃಹತ್ ಟಿ.ವಿ.ಸುದ್ದಿ ಮತ್ತು ಮನೋರಂಜನಾ ಝೀ ಟಿ.ವಿ. ನೆಟ್‌ವರ್ಕ್ ಬನಿಯಾ ಜಾತಿಯ ಶುಭಶ್ಚಂದ್ರರ ಕೈಯಲ್ಲಿ ಸೇರಿದೆ.[೨]

ದಲಿತರಿಗೆ ಶಿಕ್ಷಣ ಕೊರತೆ ಶೈಕ್ಷಣಿಕ ಹಾಗೂ ಮೀಸಲಾತಿ ಮರೀಚಿಕೆ

ಸ್ವಾತಂತ್ರ್ಯದ ಬಳಿಕ ಐತಿಹಾಸಿಕ ಪ್ರಮಾದವನ್ನು ಸರಿಪಡಿಸುವ ಯತ್ನವಾಗಿ ಭಾರತ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರಿ ಸಂಸ್ಥೆಗಳ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಜಾರಿಗೊಳಿಸಿತು. ಮೀಸಲಾತಿಯು ಮುಖ್ಯವಾಹಿನಿಗೆ ಸೇರ್ಪಡೆಯಾಗಲು ಪರಿಶಿಷ್ಟರಿಗೆ ಇದ್ದ ಏಕೈಕ ಅವಕಾಶವಾಯಿತು.(ಆದರೆ ಇತರೆ ಧರ್ಮಗಳಿಗೂ ಮತಾಂತರಗೊಂಡರೂ ತಾರತಮ್ಯವನ್ನು ಎದುರಿಸುತ್ತಿರುವ ದಲಿತರಿಗೆ ಈ ನೀತಿ ಅನ್ವಯವಾಗುವುದಿಲ್ಲ.) ಓರ್ವ ದಲಿತ ಮೀಸಲಾತಿಗೆ ಅರ್ಹನಾಗಬೇಕಿದ್ದರೆ ಆತ ಹೈಸ್ಕೂಲ್ ಶಿಕ್ಷಣವನ್ನು ಪೂರೈಸಬೇಕಾಗುತ್ತದೆ. ಸರ್ಕಾರದ ದತ್ತಾಂಶಗಳ ಪ್ರಕಾರ ಶೇ.೭೧.೩ರಷ್ಟು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಶಿಕ್ಷಣವನ್ನು ಪ್ರವೇಶಿಸಿಲ್ಲ. ಅಂದರೆ ದಲಿತರಿಗೆ ಕೆಳಸ್ತರದ

ಸರ್ಕಾರಿ ಉದ್ಯೋಗಗಳನ್ನು ಮಾತ್ರ ಪಡೆಯಲು ಸಾಧ್ಯವಾಗಿದೆ. ಕೇವಲ ನಾಲ್ಕು ದಲಿತರ ಪೈಕಿ ಓರ್ವನಿಗೆ ಮಾತ್ರ ಮೀಸಲಾತಿ ಅನ್ವಯವಾಗುತ್ತದೆ. ೨೦೦೧ರ ಜನಗಣತಿ ಪ್ರಕಾರ ಶೇ.೨.೨೪ ದಲಿತರು ಪದವೀಧರರು ಹಾಗಾಗಿ ದಲಿತರು ಮೇಲ್‌ಸ್ತರದ ಉದ್ಯೋಗಗಳಲ್ಲಿ ಪ್ರವೇಶ ಪಡೆಯುವುದು ಸಾಧ್ಯವಾಗಲಿಲ್ಲ. ಹಾಗಾಗಿ ಹಳೆಯ ಸಾಮಾಜಿಕ ಸಮೀಕರಣಗಳನ್ನು ತಿದ್ದುವುದು ಸಾಧ್ಯವಾಗುತ್ತಿಲ್ಲ.

೩.೮ ದಲಿತರು ಮತ್ತು ಉನ್ನತ ಸ್ಥಾನಮಾನಗಳಿಗೆ ಮೀಸಲಾತಿ :

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗ ಹೇಳುವ ಪ್ರಕಾರ ಕೇಂದ್ರ ಸರ್ಕಾರದ ಸ್ವಾಮ್ಯದ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ 'ಎ' ದರ್ಜೆಯ ಅಧಿಕಾರಿಗಳ ಪೈಕಿ ಕೇವಲ ಶೇ.೮.೪ರಷ್ಟು ಮಂದಿ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ವಾಸ್ತವಿಕವಾಗಿ ಈ ಹುದ್ದೆಗಳಲ್ಲಿ ಪರಿಶಿಷ್ಟರಿಗೆ ಶೇ.೧೫ರಷ್ಟು ಉದ್ಯೋಗಗಳನ್ನು ಮೀಸಲಿರಿಸಬೇಕಾಗಿದೆ. ಭಾರತ ನ್ಯಾಯಾಂಗ ಸೇವೆಗಳಲ್ಲಿಯೂ ದಲಿತರಿಗೆ ಹಾಗೂ ಆದಿವಾಸಿಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಕೆಲವು ಕಳವಳಕಾರಿ ಅಂಕಿಅಂಶಗಳನ್ನು ಈ ವರದಿ ಮಂಡಿಸುತ್ತದೆ. ದೆಹಲಿ ಹೈಕೋರ್ಟಿನ ೨೦ ಮಂದಿ ನ್ಯಾಯಾಧೀಶರ ಪೈಕಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರು ಒಬ್ಬರೂ ಕೂಡ ಇಲ್ಲ. ಇತರೆ ಎಲ್ಲಾ ನ್ಯಾಯಾಂಗ ಹುದ್ದೆಗಳಲ್ಲಿಯೂ ಅವರ ಪ್ರಾತಿನಿಧ್ಯವು ಶೇ.೧.೨ರಷ್ಟಿದೆ. ೨೦೧೧ರ ಜನಗಣತಿಯ ಪ್ರಕಾರ ಭಾರತದ ೧೨೦ ಕೋಟಿ ಜನಸಂಖ್ಯೆಯಲ್ಲಿ ಶೇ.೨೫ರಷ್ಟು ದಲಿತರಿಗೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ ಪ್ರಮಾಣಕ್ಕನುಗುಣವಾಗಿ ಪ್ರಾತಿನಿಧ್ಯ ದೊರೆಯಬೇಕೆಂದು ಅಂದಿನ ರಾಷ್ಟ್ರಪತಿಗಳಾಗಿದ್ದ ಕೆ.ಆರ್.ನಾರಾಯಣನ್ ಅವರು ಸಲಹೆ ನೀಡಿದಾಗ ನ್ಯಾಯಾಂಗ ವಲಯದಲ್ಲಿ ಅಣುಕು ಮಾತುಗಳು ಕೇಳಿಬಂದಿದ್ದವು. ಈ ಮಾತಿಗೆ ಪ್ರತಿಕ್ರಿಯಿಸಿದ ಹಿರಿಯ ನ್ಯಾಯಾಧೀಶರೊಬ್ಬರು "ನ್ಯಾಯಾಂಗದಲ್ಲಿನ ಯಾವುದೇ ಮೀಸಲಾತಿಯು ಅದರ ಸ್ವಾತಂತ್ರ್ಯ ಹಾಗೂ ಕಾನೂನಿನ ಪ್ರಭುತ್ವಕ್ಕೆ ಎದುರಾಗುವ ಬೆದರಿಕೆಯಾಗಿದೆ" ಎಂದು ಹೇಳಿದ್ದಾರೆ. "ಉದ್ಯೋಗ ಮೀಸಲಾತಿಗಳು ಈಗ ಜಟಿಲವಾದ ವಿಷಯವಾಗಿದೆ. ಅರ್ಹತೆಯ ಆದ್ಯತೆಯನ್ನು ನಾನು ಬೆಂಬಲಿಸುತ್ತೇನೆ" ಎಂದು ಹಿರಿಯ ಕಾನೂನು ವಿದ್ವಾಂಸರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಸರ್ಕಾರಿ ಉದ್ಯೋಗಗಳು ಹಾಗೂ ವಿದ್ಯಾರ್ಥಿ ಕೋಟಾದಡಿ ನೀಡಲಾಗುವ ಮೀಸಲಾತಿ ವಿರುದ್ಧ ಮೇಲ್ಜಾತಿಯಿಂದ ತೀವ್ರವಾದ ಪ್ರತಿಭಟನೆಗಳು ಎದುರಾಗುತ್ತಿವೆ.[೩೩] ಪ್ರಗತಿಪರ ಸಾಮಾಜಿಕ ವಿಜ್ಞಾನಿಗಳು ಹಾಗೂ ಇತಿಹಾಸಕಾರರ ಭದ್ರ ಕೋಟೆ ಎಂದೇ ಪರಿಗಣಿಸಲ್ಪಟ್ಟಿರುವ ದೆಹಲಿಯ ಜವಹಾರ್‌ಲಾಲ್‌ನೆಹರು ವಿಶ್ವವಿದ್ಯಾಲಯದ ಕೇವಲ ಶೇ.೩.೨೯ರಷ್ಟು ದಲಿತರು

ಹಾಗೂ ಶೇ.೧.೪೪ರಷ್ಟು ಆದಿವಾಸಿ ಪಂಗಡಗಳಿಗೆ ಸೇರಿದವರಾಗಿದ್ದಾರೆ. ವಾಸ್ತವಿಕವಾಗಿ ಇಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ.೧೫ ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ.೭.೫ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿ ೬೯ ವರ್ಷಗಳಾದರೂ ಪರಿಸ್ಥಿತಿ ಯಾವುದೇ ಸುಧಾರಣೆ ಕಂಡು ಬಂದಿಲ್ಲ. ಇದು ಒಂದು ಮುಖವಾದರೆ ಉದ್ಯೋಗಗಳಲ್ಲಿ ಸೂಕ್ತ ಪ್ರಾತಿನಿಧ್ಯ ಇರುವ ಇಲಾಖೆಗಳ ಕಥೆ ವಿಚಿತ್ರವಾಗಿದೆ. ಸರ್ಕಾರದ ಒಂದು ಇಲಾಖೆಯಲ್ಲಿ ಮಾತ್ರ ದಲಿತರ ಅತಿಯಾದ ಪ್ರಾತಿನಿಧ್ಯವಿದೆ. ಅದರಲ್ಲಿ ಶೇ.೯೦ರಷ್ಟು ಮಂದಿ ರಸ್ತೆಗಳನ್ನು ಸ್ವಚ್ಛಗೊಳಿಸುವ, ಒಳಚರಂಡಿಗಳನ್ನು ನಿರ್ವಹಿಸುವ ಹಾಗೂ ಮ್ಯಾನ್‌ಹೋಲ್‌ಗಳನ್ನು ಸರಿಪಡಿಸುವ ಜಾಡಮಾಲಿಗಳಾಗಿ ನಿಯೋಜಿತರಾಗಿದ್ದಾರೆ. ಮಾಲ್‌ಗಳು ಮತ್ತು ಕಾರ್ಪೋರೇಟ್ ಕಚೇರಿಗಳಲ್ಲಿ ಮಾನವ ಪರಿಶ್ರಮದ ಅಗತ್ಯವಿಲ್ಲದಿರುವ ಅತ್ಯಾಧುನಿಕ ಶೌಚಗೃಹಗಳ ದ್ವಾರಪಾಲಕ ಹುದ್ದೆಗಳು ದಲಿತರಿಗೆ ದೊರೆಯಲಿವೆ. ನೀರಿನ ಬಳಕೆ ಇಲ್ಲದಂತಹ ಸಾಂಪ್ರದಾಯಿಕ ಶೌಚಾಲಯಗಳನ್ನು ಸ್ವಚ್ಛಗೊಳಿಸಿ ಅದರಲ್ಲಿನ ಮಾನವ ಮಲವನ್ನು ಬುಟ್ಟಿಗಳಲ್ಲಿ ಸಾಗಿಸುವ ಕಾಯಕದ ಮೂಲಕ ೧೦.೩೦ ಲಕ್ಷಕ್ಕೂ ಅಧಿಕ ದಲಿತರು ಜೀವನ ನಿರ್ವಹಿಸುತ್ತಿದ್ದಾರೆ. ಅವರಲ್ಲಿ ಬಹುತೇಕ ಮಂದಿ ಮಹಿಳೆಯರಾಗಿದ್ದಾರೆ. ಇದು ಕಾನೂನಿಗೆ ವಿರುದ್ಧವಾಗಿದ್ದರೂ ಭಾರತೀಯ ರೈಲ್ವೆಯು ಮಲಹೊರುವ ಕಾರ್ಮಿಕರಿಗೆ ಅತಿದೊಡ್ಡ ಉದ್ಯೋಗ ನೀಡುವ ಸಂಸ್ಥೆಯಾಗಿದೆ. ಇಲಾಖೆ ೧,೪೩೦೦ ರೈಲುಗಳು ಪ್ರತಿದಿನವೂ ದೇಶಾದ್ಯಂತ ೬೫,೦೦೦ ಕಿ.ಮೀ. ಪ್ರದೇಶದುದ್ದಕ್ಕೂ ೨.೫೦ ಕೋಟಿ ಪ್ರಯಾಣಿಕರನ್ನು ಸಾಗಿಸುತ್ತಿವೆ. ೧.೨೭ ಲಕ್ಷ ಮುಕ್ತ ವಿಸರ್ಜನೆಯ ಶೌಚಾಲಯಗಳ ಮೂಲಕ ಅವರ ಮಲ ರೈಲ್ವೆ ಹಳಿಗಳ ಮೇಲೆ ಬೀಳುತ್ತದೆ. ದಿನಕ್ಕೆ ಹಲವಾರು ಟನ್‌ಗಳಾಗುವಷ್ಟು ಅವರ ಮಲವನ್ನು ವಿಶೇಷವಾಗಿ ದಲಿತರಿಂದ ಯಾವುದೇ ಕೈಗವಸು (ಹ್ಯಾಂಡ್‌ಗ್ಲೌಸ್) ಅಥವಾ ಸಂರಕ್ಷಣಾತ್ಮಕ ಉಪಕರಣಗಳಿಲ್ಲದೆ ಕೈಯಿಂದಲೇ ಸ್ವಚ್ಛಗೊಳಿಸಲಾಗುತ್ತದೆ. ಮಲಹೊರುವಿಕೆ ನಿಷೇಧ ಕಾಯ್ದೆಯು ಸೆಪ್ಟಂಬರ್ ೨೦೧೩ರಂದು ಅನುಮೋದನೆ ಪಡೆಯಿತು. ಆದರೆ ಈ ಕಾಯ್ದೆಯನ್ನು ರೈಲ್ವೆ ಇಲಾಖೆ ಕಡೆಗಣಿಸಿದೆ. ಕಡುಬಡತನ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಸ್ಥಿರವಾದ ಕುಸಿತ ಕಂಡುಬಂದಿರುವ ಹಿನ್ನೆಲೆಯಲ್ಲಿ ದಲಿತರ ಒಂದು ವರ್ಗವು ತನ್ನ ಅನುವಂಶಿಕ ಮಲಹೊರುವ ಕಾರ್ಮಿಕ ಉದ್ಯೋಗವನ್ನು ಉಳಿಸಿಕೊಳ್ಳಲು ತೀವ್ರವಾಗಿ ಯತ್ನಿಸುತ್ತಿದೆ.[೩೪] ಇದು ದಲಿತರ ನೆಲೆಯಲ್ಲಿ ಭಾರತದ ಒಂದು ಮುಖವಾದರೆ, ಶ್ರೀಮಂತರು ಮತ್ತು ಮೇಲ್ಜಾತಿಗಳ ನೆಲೆಯಲ್ಲಿ ಭಾರತಕ್ಕೆ ಮತ್ತೊಂದು ಮುಖವಿದೆ. ದಲಿತರ ನಿಕೃಷ್ಟ ಸ್ಥಿತಿಯನ್ನು ಇನ್ನಷ್ಟು ತೀವ್ರವಾಗಿ ಅರ್ಥಮಾಡಿಕೊಳ್ಳಲು ಇದರ ಚರ್ಚೆ ಅಗತ್ಯ. ಈ ಚರ್ಚೆ ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೩.೯ ದಲಿತರ ಆರ್ಥಿಕ ಮತ್ತು ರಾಜಕೀಯ ಸ್ಥಿತಿ :

ರಾಮ್ ಶ್ರೀಯರ್ ರಾಯ್ ಹೇಳುವಂತೆ ಇಂದಿಗೂ ದಲಿತರು ಸಾಮಾನ್ಯರ ಸ್ಥಿತಿಯನ್ನು ತಲುಪಲು ಸಾಧ್ಯವಾಗಿಲ್ಲ. ಹಾಗಾಗಿ ದಲಿತರು, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ನಿಕೃಷ್ಟವಾದ ಸ್ಥಿತಿಯಲ್ಲಿದ್ದಾರೆ. ದಲಿತರ ನಿರಂತರವಾದ ಈ ಸ್ಥಿತಿಯಿಂದಾಗಿ ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿಯ ನಡುವಿನ ಸಂಬಂಧಗಳ ಬಗ್ಗೆ ವಿವಿಧ ಪ್ರಶ್ನೆಗಳು ಏಳುತ್ತಿವೆ.[೩೫] ಬೇಲ್ ಬಾಟಿಯಾ ಅವರ ರಾಜಸ್ಥಾನದ ದಲಿತರ ಅಧ್ಯಯನ ಹೇಳುವಂತೆ ರಾಜಸ್ಥಾನದ ಗ್ರಾಮದಲ್ಲಿ ಪ್ರಾಚೀನ ಕಾಲದಿಂದಲೂ ಅನುಸರಿಸಿಕೊಂಡು ಬರಲಾಗಿರುವ ದಲಿತರಿಗೆ ಮುಜುಗರವನ್ನುಂಟು ಮಾಡುವ ಆಚರಣೆಗಳು ಮುಕ್ತಾಯಗೊಂಡಿದ್ದರೂ, ತಾರತಮ್ಯದ ಹೊಸ ವಿಧಾನಗಳು ಆಚರಣೆಯಲ್ಲಿವೆ. ಇಂದಿಗೂ ಜಾತಿ ಆಧಾರಿತ ಶ್ರೇಣಿ ವ್ಯವಸ್ಥೆ ಮತ್ತು ಸಂಪ್ರದಾಯಿಕ ಅಧಿಕಾರ ಸಮಾಜದ ಸುವ್ಯವಸ್ಥೆಯನ್ನು ನಿಯಂತ್ರಿಸುತ್ತಿವೆ. ಇತರೆ ಸಮುದಾಯಗಳಿಗೆ ಹೋಲಿಸಿದರೆ ರಾಜ್ಯದ ಆಡಳಿತ, ನೀತಿಗಳು ದಲಿತರ ಸಂವಿಧಾನಾತ್ಮಕ ಹಕ್ಕುಗಳನ್ನು ರಕ್ಷಿಸುವಲ್ಲಿ ವಿಫಲವಾಗಿದೆ. ಕಾನೂನು ವ್ಯವಸ್ಥೆಯನ್ನು ಜಾರಿಗೊಳಿಸುವ ಸಂಸ್ಥೆಗಳ ದೃಷ್ಟಿಯಿಂದ ದಲಿತರು ಇಂದಿಗೂ ಅಸಮಾನ ನಾಗರೀಕರಾಗಿ ಮುಂದುವರೆದಿದ್ದಾರೆ. ಸಂಪ್ರದಾಯಿಕ ಶೋಷಣೆಯ ವಿಧಾನಗಳನ್ನು ಮುರಿಯುವಲ್ಲಿ ದಲಿತರು ವಿಫಲರಾಗಿದ್ದಾರೆ. ಶೋಷಣೆಯ ಚೌಕಟ್ಟುಗಳನ್ನು ಒಡೆಯುವ ಪ್ರಯತ್ನಗಳನ್ನು ಕೈಗೊಂಡರೆ ದಲಿತರನ್ನು ಏಕಾಂಗಿಯನ್ನಾಗಿಸಲಾಗುತ್ತದೆ.[೩೬]

ಕೋಷ್ಟಕ ೩.೧.

ದಲಿತರ ಸಾಕ್ಷರತೆಯ ವಿವರ

ವರ್ಷ	ಒಟ್ಟು ಭಾರತದ ಸಾಕ್ಷರತೆ	ಒಟ್ಟು ಭಾರತದ ಮಹಿಳೆಯರ ಸಾಕ್ಷರತೆ	ದಲಿತ ಪುರುಷರ ಸಾಕ್ಷರತೆ	ದಲಿತ ಮಹಿಳೆಯರ ಸಾಕ್ಷರತೆ
೧೯೬೧	೨೪.೦೨	೧೨.೯೫	೧೬.೯೬	೩.೨೯
೧೯೭೧	೨೯.೪೬	೧೮.೭೨	೨೨.೩೬	೬.೪೪
೧೯೮೧	೪೩.೬೭	೨೯.೮೫	೩೧.೧೨	೧೦.೯೩
೧೯೯೧	೫೨.೨೧	೩೯.೨೯	೪೯.೯೧	೨೩.೭೬
೨೦೦೧	೬೫.೩೮	೭೫.೯೬	೬೬.೬೪	೪೬.೯೦
೨೦೧೧	೭೪.೦೪	೮೨.೧೪	೭೫.೨	೫೬.೫

ಮಾಹಿತಿ ಮೂಲ: ಅಂತರ್ಜಾಲ ಮಾಹಿತಿ ೨೦೦೧ ಹಾಗೂ ೨೦೧೧ರ ಜನಗಣತಿ ವರದಿ ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ವರದಿ,

ಕೋಷ್ಟಕ ೩.೨.

ಮಧ್ಯದಲ್ಲೇ ಶಾಲೆ ತೊರೆದ ಮಕ್ಕಳ ವಿವರ

	ಪ್ರಾಥಮಿಕ ಶಾಲಾ ಹಂತ			ಮಾಧ್ಯಮಿಕ ಶಾಲಾ ಹಂತ			ಪ್ರೌಢಶಾಲೆ ಹಂತ		
ಕಾಲಾವಧಿ	ಪ.ಜಾ. ಬಾಲಕರು	ಪ.ಜಾ. ಬಾಲಕಿಯರು	ಸಾಮಾನ್ಯ ಬಾಲಕಿಯರು	ಪ.ಜಾ. ಬಾಲಕರು	ಪ.ಜಾ. ಬಾಲಕಿಯರು	ಸಾಮಾನ್ಯ ಬಾಲಕಿಯರು	ಪ.ಜಾ. ಬಾಲಕರು	ಪ.ಜಾ. ಬಾಲಕಿಯರು	ಸಾಮಾನ್ಯ ಬಾಲಕಿಯರು
೧೯೮೮-೮೯	೫೩.೩೯	೪೭.೨೪	೪೭.೬೯	೭೩.೬	೬೪.೩೭	೬೮.೩೧	೮೫.೬೨	ಲಭ್ಯವಿಲ್ಲ	೭೯.೪೬
೧೯೯೦-೯೧	೪೬.೨೭	೪೬.೨೭	೪೫.೯೭	೭೩.೨೪	೬೪.೩೪	೬೫.೧೩	೮೩.೩೮	೭೪.೨೩	೪೬.೯೬
೨೦೦೦-೦೧	೫೩.೨೨	೪೮.೨೩	೪೭.೦೪	೭೫.೨೩	೬೬.೬೫	೬೭.೨೦	೮೪.೦೦	೭೬.೨೫	೪೮.೫೫
೨೦೧೦-೧೧	೫೮.೨೪	೫೦.೪೪	೪೯.೨೨	೭೭.೬೪	೬೮.೭೦	೬೯.೪೪	೮೬.೨೩	೭೯.೩೩	೪೯.೫೧

ಮಾಹಿತಿ ಮೂಲ:

೧) ೧೯೯೨-೯೩ರ ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್, ಹೈದರಾಬಾದ್, ಪು.೨೫೧-೨೬೯)

೨) ೧೯೯೬-೯೭ ಮತ್ತು ೧೯೯೭-೯೮ರ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ವರದಿ ಪು.೭

೩) ಮ್ಯಾನ್‌ಪವರ್ ಪ್ರೊಫೈಲ್ ಇಂಡಿಯಾ, ಈಯರ್ ಬುಕ್, ೧೯೯೮, ಇನ್ಸಿಟಿಟ್ಯೂಟ್ ಆಫ್ ಅಪ್ಲೈಡ್ ಮ್ಯಾನ್ ಪವರ್ ರಿಸರ್ಚ್, ನ್ಯೂಡೆಲ್ಲಿ, ಮಾನಕ್ ಪಬ್ಲಿಕೇಷನ್, ೧೯೯೮, ಪು.೧೧೨

೪) ೨೦೦೧ ಮತ್ತು ೨೦೧೧ರ ಬಳ್ಳಾರಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪. ಬಳ್ಳಾರಿ ಜಿಲ್ಲಾ ಪಂಚಾಯತ್ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕರ್ನಾಟಕ ಸರ್ಕಾರ

ಕೊನೆಟಿಪ್ಪಣಿ:

೧. ಎನ್.ಎಸ್.ಗೆಹಲಾಟ್, "ದ ಪ್ಲೈಟ್ ಆಫ್ ಹ್ಯೂಮನ್ ರೈಟ್ಸ್ ಆಫ್ ಅನ್‌ಟಚಬಲ್ಸ್ ಆಂಡ್ ದಲಿತ್ಸ್ ಇನ್ ಇಂಡಿಯಾ: ಸಂ ಏರಿಯಾಸ್ ಆರ್‌ಟುಬಿ ಫೋಕಸ್ಡ್" ಜೇನಬ್‌ಬಾನು (ಸಂ) ಡಿಕ್ಲೈನ್ ಆಂಡ್ ಫಾಲ್ ಆಫ್ ಇಂಡಿಯನ್ ಪೊಲಿಟಿಕ್ಸ್, ಕಾನಿಶ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೯೯, ಪು.೨೧೪

೨. ಗ್ರಾನ್‌ವಿಲ್ಲೆ ಆಸ್ಟಿನ್, ದ ಇಂಡಿಯನ್ ಕಾನ್‌ಸ್ಟಿಟ್ಯೂಷನ್ : ಕಾರ್ನರ್ ಸ್ಟೋನ್ ಆಫ್ ಎ ನೇಷನ್, ಡೆಲ್ಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೭೨, ಪು.೨೬

೩. ದುರ್ಗದಾಸ್ ಬಸು, ಇಂಟ್ರೊಡಕ್ಷನ್ ಟು ದ ಇಂಡಿಯನ್ ಕಾನ್‌ಸ್ಟಿಟ್ಯೂಷನ್, ನ್ಯೂಡೆಲ್ಲಿ, ವಾಡ್ವ ಆಂಡ್ ಕಂಪನಿ ಲಾ ಪಬ್ಲೀಷರ್ಸ್, ೨೦೦೧, ಪು–೩೨೭

೪. ಪೂರ್ವೋಕ್ತ ಪು.೩೨೭

೫. ದುರ್ಗದಾಸ್ ಬಸು, ಇಂಟ್ರೊಡಕ್ಷನ್ ಟು ದ ಇಂಡಿಯನ್ ಕಾನ್‌ಸ್ಟಿಟ್ಯೂಷನ್, ನ್ಯೂಡೆಲ್ಲಿ, ವಾಡ್ವ ಆಂಡ್ ಕಂಪನಿ ಲಾ ಪಬ್ಲೀಷರ್ಸ್, ೨೦೦೧, ಪು–೮೧

೬. ಆರ್. ಚಂಡಿದಾಸ್, "ಹೌ ಕ್ಲೋಸ್ ಟು ಇಕ್ವಾಲಿಟಿ ಆರ್ ಷೆಡ್ಯೂಲ್ಡ್ ಕಾಸ್ಟ್" ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾ.ಸಂ. ೪ ಸಂ.೨೪, ಜೂನ್, ೧೯೬೯, ಪು – ೯೭೫–೯೭೯

೭. ಕೆ.ಡಿ.ಪುರಾನೆ, ಅನ್‌ಟಚಬಲ್ಸ್ ಆಂಡ್ ಲಾ–ದ ಗ್ರೌಂಡ್ ರಿಯಾಲಿಟಿ, ನ್ಯೂಡೆಲ್ಲಿ, ಗ್ಯಾನ್ ಪಬ್ಲಿಷಿಂಗ್ ಹೌಸ್, ೨೦೦೧, ಪು.೪೧

೮. ಜಿ.ಕೆ.ಘೋಷ್ ಮತ್ತು ಶುಕ್ಲಾ ಘೋಷ್, ದಲಿತ್ ವುಮನ್, ನ್ಯೂಡೆಲ್ಲಿ, ಎಪಿಎಚ್ ಪಬ್ಲಿಷಿಂಗ್ ಕಾರ್ಪೋರೇಷನ್, ೧೯೯೭, ಪು.೩೪

೯. ಮಹಿಂದ್ರಸಿಂಗ್ ಪಿ. ಕಾನ್ಸಿಟಿಟ್ಯೂಷನ್ ಆಫ್ ಇಂಡಿಯಾ, ಲಕ್ನೋ, ಈಸ್ಟರ್ನ್ ಬುಕ್ ಕಂಪನಿ, ೨೦೦೧, ಪು.೩೦೯

೧೦. ಕೆ.ಡಿ.ಪುರಾನೆ, ಅನ್‌ಟಚಬಿಲಿಟಿ ಆಂಡ್ ಲಾ: ದ ಗ್ರೌಂಡ್ ರಿಯಾಲಿಟಿ, ಗ್ಯಾನ್ ಪಬ್ಲಿಷಿಂಗ್

ಹೌಸ್, ನ್ಯೂಡೆಲ್ಲಿ, ೨೦೦೧, ಪು.೪೦

೧೧. ಇಮ್ಯಾನ್ಯುಯಲ್ ನಹರ್,"ರೆಸ್ಟೋರೇಷನ್ ಆಫ್ ಹ್ಯೂಮನ್‌ರೈಟ್ಸ್ ಆಂಡ್ ಡಿಗ್ನಿಟಿ ಟು ದಲಿತ್ಸ್: ಮೇನ್‌ಸ್ಟ್ರೀಮ್, ಸಂಪುಟ ಸಂಖ್ಯೆ XLV, ಏಪ್ರಿಲ್ ೨೧, ೨೦೦೭, ಪು.೧೩

೧೨. ಎನ್.ಎಸ್.ಗೆಹಲೋಟ್, "ದ ಪ್ಲೈಟ್ ಆಫ್ ಹ್ಯೂಮನ್ ರೈಟ್ಸ್, ಆಫ್ ಅನ್‌ಟಚಬಲ್ಸ್ ಆಂಡ್ ದಲಿತ್ಸ್ ಇನ್ ಇಂಡಿಯಾ.: ಸಮ್ ಏರಿಯಾಸ್ ಟು ಬಿ ಫೋಕಸ್ಡ್," ಜೇನಬ್‌ಬಾನು,(ಸಂ) ಡಿಕ್ಲೈನ್ ಆಂಡ್ ಫಾಲ್ ಆಫ್ ಇಂಡಿಯನ್ ಪೊಲಿಟಿಕ್ಸ್, ಕಾನಿಷ್ ಪಬ್ಲಿಷರ್ಸ್ ನ್ಯೂಡೆಲ್ಲಿ, ೧೯೯೯, ಪು.೨೧೪

೧೩. ಮಾರ್ಕ್ ಜರ್ಗೆಸ್‌ಮೇಯರ್, ರಿಲೀಜಿಯಸ್ ರೆಬೆಲ್ಸ್ ಇನ್ ಪಂಜಾಬ್: ಸೋಷಿಯಲ್ ವಿಜನ್ ಆಫ್ ಅನ್‌ಟಚಬಿಲಿಟಿ, ಡೆಲ್ಲಿ, ಅಜಂತಾ ಪಬ್ಲಿಕೇಷನ್, ೧೯೯೮, ಪು.೧೪

೧೪. ರಿಪೋರ್ಟ್ ಆಫ್ ನ್ಯಾಷನಲ್ ಕಮಿಷನ್ ಫಾರ್ ಎಸ್‌ಸಿಸ್ ಆಂಡ್ ಎಸ್‌ಟಿಸ್, ಉಲ್ಲೇಖ: ಅಂಕಿತ್ ಮಿಶ್ರಾ, ಎಂಪವರ್‌ಮೆಂಟ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್ ಥ್ರೂ ರಿಜರ್ವೇಷನ್ ಪಾಲಿಸಿ ವಿಥ್ ರೆಫರೆನ್ಸ್ ಟು ಡಾ.ಬಿ.ಆರ್.ಅಂಬೇಡ್ಕರ್ಸ್, ವಿಷನ್ ಆಂಡ್ ಚಾಲೆಂಜಸ್, ಇನ್ ಕರೆಂಟ್ ಸೋಷಿಯೋ ಲೀಗಲ್ ಮಿಲಿವ್, ಕಾನೂನು ವಿಭಾಗ, ಅಲಿಘಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೧೨, ಪು.೧೫೩

೧೫. ಆರ್.ವಿ.ಕೆ.ನಾಯ್ಡು, ಎಂಪವರ್‌ಮೆಂಟ್ ಶೆಡ್ಯೂಲ್ಡ್ ಕಾಸ್ಟ್ (ದಲಿತ ಸ್ಟಡೀಸ್), ಡೆಲ್ಲಿ, ಕಲಾಜ್ ಪಬಿಕೇಷನ್, ೨೦೦೪, ಪು.೨೭೩

.೧೬. ದ ಪ್ರಾಬ್ಲಮ್, ಸೆಮಿನಾರ್, ಸಂಪುಟ ಸಂ: ೪೭೧, ನವೆಂಬರ್, ೧೯೯೮, ಪು.೧೨

೧೭. ವಿಮಲ್ ಥೋರೋಟ್, "ದಲಿತ್ ವುಮೆನ್ ಆಂಡ್ ಹ್ಯೂಮನ್‌ರೈಟ್ಸ್: ಸಮ್ ನೆಗ್ಲೆಕ್ಟೆಡ್ ಇಶ್ಯೂಸ್," ಭಾರ್ಗವ ಆಂಡ್ ಆರ್.ಎಂ.ಪಾಲ್ (ಸಂ), ಹ್ಯೂಮನ್‌ರೈಟ್ಸ್ ಆಫ್ ದಲಿತ್ಸ್: ಸೊಸೈಟಲ್ ವೈಯಾಲೇಷನ್, ನ್ಯೂಡೆಲ್ಲಿ, ಗ್ಯಾಂಗ್ ಪಬ್ಲಿಷಿಂಗ್ ಹೌಸ್, ೧೯೯೯, ಪು.೧೬೮

೧೮. ಪ್ರಕಾಶ್ ಲೂಯಿಸ್, ಪೊಲಿಟಿಕಲ್ ಸೋಷಿಯಾಲಜಿ ಆಫ್ ದಲಿತ್ ಅಸರ್ಶನ್, ನ್ಯೂಡೆಲ್ಲಿ,

ಗ್ಯಾನ್ ಪಬ್ಲಿಷಿಂಗ್ ಹೌಸ್, ೨೦೦೩, ಪು.೧೬೦

೧೯. ಟಿ.ಸರ್ಕಾರ್, "ರಿಫ್ಲೆಕ್ಷನ್ ಆಫ್ ಬೈರಾತಿ ರೇಪ್ ಕೇಸ್", ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲೀ, ಸಂಪುಟ ಸಂ.೧೬, ಸಂಖ್ಯೆ ೦೩, ಫೆಬ್ರವರಿ ೨, ೧೯೮೧. ಪು.೬೭-೭೧

೨೦. ಬೇಲಾ ಮಾಲಿಕ್, "ಅನ್‌ಟಚಬಿಲಿಟಿ ಆಂಡ್ ದಲಿತ್ ವುಮೆನ್ಸ್ ಅಪ್ರೆಸ್ಸನ್," ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ ಸಂ.೩೪, ಸಂಖ್ಯೆ ೬, ಫೆಬ್ರವರಿ, ೧೯೯೯, ಪು.೩೨೩

೨೧. ಬೇಲಾ ಮಾಲಿಕ್, "ಅನ್‌ಟಚಬಿಲಿಟಿ ಆಂಡ್ ದಲಿತ್ ವುಮೆನ್ಸ್ ಅಪ್ರೆಸ್ಸನ್," ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ ಸಂ.೩೪, ಸಂಖ್ಯೆ ೬, ಫೆಬ್ರವರಿ, ೧೯೯೯, ಪು.೩೨೪

೨೨. ಕ್ರೈಮ್ಸ್ ಇನ್ ಇಂಡಿಯಾ, ೨೦೦೦: ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ, ಮಿನಿಸ್ಟ್ರೀ ಆಫ್ ಹೋಂ ಅಫೇರ್ಸ್,(ಉಲ್ಲೇಖ: ಬೇಲಾ ಮಾಲಿಕ್: ಪೂರ್ವೋಕ್ತ: ೩೨೪

೨೩. ಎ.ಎಸ್. ಜಾಧವ್, "ದಲಿತ್ ಅಮಾಂಗ್ ದಲಿತ್ಸ್: ಶೆಡ್ಯೂಲ್ಡ್ ಕಾಸ್ಟ್ ಆಂಡ್ ಶೆಡ್ಯೂಲ್ಡ್ ಟ್ರೈಬ್ಸ್ ವುಮೆನ್": ಜೋಗ್‌ದಂದ್, ಪಿ.ಜಿ.,(ಸಂಪಾದಿತ) ರಿಜರ್ವೇಷನ್ ಪಾಲಸಿ ಆಂಡ್ ದ ಎಂಪವರ್‌ಮೆಂಟ್ ಆಫ್ ದಲಿತ್ಸ್, ಮಿಖಾಯಿಲ್ ಎಸ್.ಎಂ.(ಸಂ). ದಲಿತ್ಸ್ ಇನ್ ಮಾಡ್ರನ್ ಇಂಡಿಯಾ: ವಿಜನ್ಸ್ ಆಂಡ್ ವ್ಯಾಲ್ಯೂಸ್, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೨೦೦೭, ಪು.೧೮೧

೨೪. ವಿಮಲ್ ಥೋರೋಟ್, "ದಲಿತ್ ವುಮೆನ್ ಆಂಡ್ ಹ್ಯೂಮನ್‌ರೈಟ್ಸ್: ಸಮ್ ನೆಗ್ಲೆಕ್ಟೆಡ್ ಇಶ್ಯೂಸ್," ಭಾರ್ಗವ ಆಂಡ್ ಆರ್.ಎಂ.ಪಾಲ್ (ಸಂ), ಹ್ಯೂಮನ್‌ರೈಟ್ಸ್ ಆಫ್ ದಲಿತ್ಸ್: ಸೊಸೈಟಲ್ ವೈಯಾಲೇಷನ್, ನ್ಯೂಡೆಲ್ಲಿ, ಗ್ಯಾಂಗ್ ಪಬ್ಲಿಷಿಂಗ್ ಹೌಸ್, ೧೯೯೯, ಪು.೧೭೦

೨೫. ಎಂ.ಇಂದಿರಾ, "ಕಾಸ್ಟ್ ಆಂಡ್ ವುಮೆನ್ ಪಾರ್ಟಿಸಿಪೇಷನ್ ಇನ್ ಲೇಬರ್ ಮಾರ್ಕೆಟ್:

ಎ ಕೇಸ್ ಸ್ಟಡಿ ಆಫ್ ಲ್ಯಾಂಡ್ ಲೆಸ್ ಲೇಬರ್ಸ್", ಸಿ.ಚಕ್ರಪಾಣಿ ಮತ್ತು ಎಸ್.ವಿಜಯಕುಮಾರ್,(ಸಂ), ಛೇಂಜಿಂಗ್ ಸ್ಟೇಟಸ್ ಆಂಡ್ ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಸೊಸೈಟಿ, ಡೆಲ್ಲಿ, ಎಂ.ಡಿ.ಪಬ್ಲಿಕೇಷನ್ಸ್, ೧೯೯೪, ಪು.೧೯೭–೧೯೮

೨೬. ಎಸ್.ಎಲ್. ಮಹಾರಿಯ, "ಹೆಲ್ಪಿಂಗ್ ವೀಕರ್ ಸೆಕ್ಷನ್", ಕುರುಕ್ಷೇತ್ರ, ವಾ.ಸಂ. ೨೪, ಸಂ.೧೨ ೧೯೭೮

೨೭. ಲೀಲಾ ವಸಾರಿಯ "ದ ಹರಿಜನ್ಸ್ ವರ್ಸನಿಂಗ್ ಪ್ಲೈಟ್" ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾ. ಸಂ.೯, ಸಂ.೫, ಫೆಬ್ರವರಿ, ೧೯೭೯

೨೮. ಮುಮ್ತಾಜ್ ಅಲಿಖಾನ್, ಷೆಡ್ಯೂಲ್ಡ್ ಕಾಸ್ಟ್ಸ್ ಅಂಡ್ ದೇರ್ ಸ್ಟೇಟಸ್ ಇನ್ ಇಂಡಿಯಾ, ನ್ಯೂಡೆಲ್ಲಿ, ಉಪ್ಪಲ್ ಪಬ್ಲಿಷಿಂಗ್ ಹೌಸ್, ೧೯೮೦

೨೯. ಪಿ.ಬಿ.ಸಿಂಗ್, "ಡಿಪ್ರೈವೇಷನ್ ಅಂಡ್ ಪೊಲಿಟಿಕಲ್ ಕ್ಯಾನ್ಷಿಯಸ್‌ನೆಸ್" ಬಿ.ಕೆ.ನಾರ್ಲ (ಸಂ), ಪೊಲಿಟಿಕಲ್ ಸೋಶಿಯಾಲಜಿ, ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೧೯೯೯

೩೦. ರಾಮ್ ಶ್ರೀಯರ್ ರಾಯ್, ದಲಿತ ಡೆವಲಪ್‌ಮೆಂಟ್ ಅಂಡ್ ಡೆಮಾಕ್ರಸಿ, ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೨೦೦೦

೩೧. ಅರುಂಧತಿ ರಾಯ್, ದಲಿತರ ದಮನಕ್ಕೆ ಜಾತಿ ಪದ್ಧತಿಯ ಅಸ್ತ್ರ : ಎ.ಎಸ್.ಪುತ್ತಿಗೆ,(ಸಂಪಾದಕ) ವಾರ್ತಾಭಾರತಿ, ೧೪ನೇ ವಾರ್ಷಿಕೋತ್ಸವ ವಿಶೇಷಾಂಕ, ಅಕ್ಟೋಬರ್ ೨೦೧೬, ಪು.೧೫

೩೨. ಅದೇ ಪು.೧೮–೨೦

೩೩. ಅದೇ ಪು. ಪು.೨೦

೩೪. ಅರುಂಧತಿ ರಾಯ್ ಪು.೩೪

೩೫. ಬೇಲಾ ಬಾಟಿಯಾ "ದಲಿತ್ ರೆಬಲಿಯನ್ ಅಗೆನ್ಸ್ಟ್ ಅನ್‌ಟಚ್‌ಬಿಲಿಟಿ ಇನ್ ಚಕ್‌ವಾರ್ಡ್". ಕಂಟ್ರಿಬ್ಯೂಷನ್ಸ್ ಟು ಇಂಡಿಯನ್ ಸೋಶಿಯಾಲಜಿ, ವಾ.ಸಂ.೪೦, ಸಂ.೧ ಜನವರಿ – ಏಪ್ರಿಲ್, ೨೦೦೬

೩೬. ಸರೋಜ್ ಕುಮಾರ್ ಜೆನಾ, *ಪೊಲಿಟಿಕಲ್ ಸೋಶಿಯಾಲಜಿ; ಎ ರಿಯಾಲಿಸ್ಟಿಕ್ ಎಪ್ರೋಚ್*, ನ್ಯೂಡೆಲ್ಲಿ: ಅನ್‌ಮೋಲ್ ಪಬ್ಲಿಕೇಷನ್ ಪ್ರೈ.ಲಿ., ೨೦೦೨, ಪು.೧೪೦

ಅಧ್ಯಾಯ –೪
ದಲಿತ ಪ್ರತಿನಿಧಿಗಳ ದಲಿತ ಅಸ್ಮಿತೆ ಮತ್ತು ಪಂಚಾಯತ್ ಕಾನೂನು ಗ್ರಹಿಕೆ

೪.೧. ದಲಿತ ಅಸ್ಮಿತೆ ಮತ್ತು ರಾಜಕೀಯ ಸಂಸ್ಕೃತಿ
೪.೨. ಮೀಸಲಾತಿ ಪ್ರಮಾಣದ ಬಗ್ಗೆ ದಲಿತ ಪ್ರತಿನಿಧಿಗಳ ನಿಲುವು
೪.೩. ದಲಿತ ಸಂಘಟನೆಗಳು ಮತ್ತು ದಲಿತರ ಅಭಿವೃದ್ಧಿ
೪.೪. ದಲಿತ ಸಂಘರ್ಷ ಸಮಿತಿ ಮತ್ತು ದಲಿತರ ಜೀವನ ಪರಿವರ್ತನೆಗಳು
೪.೫. ದಲಿತರು ಮತ್ತು ದಲಿತ ಸಂಘರ್ಷ ಸಮಿತಿಯ ವಿರೋಧಭಾಸಗಳು
೪.೬. ಅಸ್ಪೃಶ್ಯತೆ ಆಚರಣೆಯ ಬಗ್ಗೆ ದಲಿತ ಪ್ರತಿನಿಧಿಗಳ ಗ್ರಹಿಕೆಗಳು
೪.೭. ಅಸ್ಪೃಶ್ಯತೆ ಆಚರಣೆ ಸ್ಥಳ ಬಗ್ಗೆ ದಲಿತ ಪ್ರತಿನಿಧಿಗಳ ನಿಲುವುಗಳು
೪.೮. ದಲಿತ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳ ಬಗ್ಗೆ ದಲಿತ ಪ್ರತಿನಿಧಿಗಳ ನಿಲುವುಗಳು
೪.೯. ದಲಿತ ಪ್ರತಿನಿಧಿಗಳಲ್ಲಿ ಸಮುದಾಯದ ವಿಮೋಚನೆಗಾಗಿ ಹೋರಾಡಿದವರ ಗ್ರಹಿಕೆ
೪.೧೦. ೭೩ನೇ ಭಾರತ ಸಂವಿಧಾನದ ತಿದ್ದುಪಡಿಯ ಬಗ್ಗೆ ದಲಿತ ಪ್ರತಿನಿಧಿಗಳ ನಿಲು
೪.೧೧. ಗ್ರಾಮ ಸ್ವರಾಜ್ಯದ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು
೪.೧೨. ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು
೪.೧೩. ಗ್ರಾಮ ಸಭೆಯ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು
೪.೧೪. ಗ್ರಾಮ ಪಂಚಾಯತ್ ಕೋರಂ ಮತ್ತು ಕಾರ್ಯವಿಧಾನದ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು
೪.೧೫. ಸ್ಥಾಯಿ ಸಮಿತಿಗಳ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು
೪.೧೬. ಸಾಮಾಜಿಕ ನ್ಯಾಯ ಸಮಿತಿಯ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು

ಅಧ್ಯಾಯ –೪

ದಲಿತ ಪ್ರತಿನಿಧಿಗಳ ದಲಿತ ಅಸ್ಮಿತೆ ಮತ್ತು ಪಂಚಾಯತ್ ಕಾನೂನು ಗ್ರಹಿಕೆ

ಭಾರತದಂತಹ ಶ್ರೇಣೀಕೃತ ಮತ್ತು ಅಸಮಾನ ಸಮಾಜದಲ್ಲಿ ಎಲ್ಲಾ ಸಮುದಾಯಗಳ ರಾಜಕೀಯ ಸಂಸ್ಕೃತಿಯನ್ನು ಏಕರೂಪಿಗೊಳಿಸುವುದು ಸಾಧ್ಯವಾಗಿರುವುದಿಲ್ಲ. ಲೂಸಿಯಾನ್ ಪೇಯ್ ಪ್ರತಿಪಾದಿಸುವಂತೆ ಸಮುದಾಯವಾರು – ರಾಜಕೀಯ ಸಂಸ್ಕೃತಿಗಳು ಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಒಟ್ಟಾರೆ ಸಮಾಜದ ರಾಜಕೀಯ ಸಂಸ್ಕೃತಿಯ ಮೂಲಕ ವ್ಯವಸ್ಥೆಯನ್ನು ವಿಶ್ಲೇಷಿಸುವುದು ಮತ್ತು ನಿರ್ದಿಷ್ಟ ತೀರ್ಮಾನಗಳಿಗೆ ಮುಟ್ಟುವುದು ಸಾಧ್ಯವಿಲ್ಲ. ಆರ್ಥಿಕವಾಗಿ ಹಿಂದುಳಿದ, ಸಾಮಾಜಿಕವಾಗಿ, ನಿರ್ಲಕ್ಷಿಸಲ್ಪಟ್ಟ, ಮತ್ತು ರಾಜಕೀಯವಾಗಿ ಒತ್ತಡಗಳಲ್ಲೂ ಅಥವಾ ಬೇಡಿಕೆಗಳನ್ನು ಮಂಡಿಸುವ ದಲಿತ ಸಮುದಾಯದ ರಾಜಕೀಯ ಗ್ರಹಿಕೆಗಳನ್ನು ಬಹುತೇಕ ಅಧ್ಯಯನಗಳು ನಿರ್ಲಕ್ಷಿಸಿವೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಅಧ್ಯಯನದ ಮೂಲಕ ದಲಿತರ ಪ್ರತಿನಿಧಿಗಳ ರಾಜಕೀಯ ಸಂಸ್ಕೃತಿಯನ್ನು ಕಂಡುಕೊಂಡು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೪.೧ ದಲಿತ ಅಸ್ಮಿತೆ ಮತ್ತು ರಾಜಕೀಯ ಸಂಸ್ಕೃತಿ

ಈ ಹಿಂದೆ ಚರ್ಚಿಸಿರುವಂತೆ ಭಾರತವು ಶ್ರೇಣೀಕೃತ ಮತ್ತು ಅಸಮಾನ ನೆಲೆಯಲ್ಲಿ ರೂಪುಗೊಂಡಿದೆ. ಶತಮಾನಗಳಿಗೆ ಹೋಲಿಸಿದರೆ ಸ್ವಾತಂತ್ರೋತ್ತರ ಭಾರತದ ಏಪ್ಪತ್ತು ದಶಕಗಳ ನಂತರವೂ ದಲಿತರ ಸ್ಥಿತಿಗಳಲ್ಲಿ ಗಣನೀಯ ಬದಲಾವಣೆ ಕಂಡು ಬಂದಿಲ್ಲ. ಅನಕ್ಷರತೆ, ಬಡತನ, ಅಸ್ಪೃಶ್ಯತೆ, ಸಾಮಾಜಿಕ, ತಾರತಮ್ಯ ಎದುರಿಸುತ್ತಿರುವ ದಲಿತರು ಅರ್ಹತೆ ಇಲ್ಲದಿದ್ದರೂ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಪುಕ್ಕಟೆಯಾಗಿ ಪಡೆಯುತ್ತಿರುವವರು ಎನ್ನುವ ಆರೋಪಗಳೆ ದಲಿತ ಅಸ್ಮಿತೆಗಳಾಗಿವೆ. ಸಂಸ್ಕೃತದ 'ದಲ್' ಎನ್ನುವುದು ದಲಿತ ಶಬ್ದದ ಮೂಲ ಪದವಾಗಿದೆ. ದಲಿತರೆಂದರೆ ಮುರಿದ, ಛಿದ್ರಗೊಂಡ, ಕೆಳಕ್ಕೆ ಎಸೆಯಲ್ಪಟ್ಟ, ನಾಶಗೊಳ್ಳುವ ಎನ್ನುವ ಅರ್ಥವಿದೆ. ಆದರೆ ಭಾರತದಲ್ಲಿ ಜಾತಿಯನ್ನು ಆಯ್ದುಕೊಳ್ಳುವ ಅವಕಾಶಗಳು ಲಭ್ಯವಿಲ್ಲ.

ವರ್ಣಾಶ್ರಮ ವ್ಯವಸ್ಥೆಯ ಪ್ರಕಾರ ವ್ಯಕ್ತಿಯು ತನ್ನ ಪೂರ್ವಿಕರ ವೃತ್ತಿಯನ್ನೇ ಆಯ್ದುಕೊಳ್ಳಬೇಕು.[೧]

ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ನಂತರ ದೇಶದ ಸಂವಿಧಾನದ ಮೂಲಕ ದಲಿತರಿಗೆ ಇತರೆ ಸಮುದಾಯಗಳೊಂದಿಗೆ ಸಮಾನತೆಯನ್ನು ಸಾಧಿಸಿಕೊಳ್ಳಲು ಮೀಸಲಾತಿ ರೂಪದ ಅವಕಾಶವನ್ನು ನೀಡಲಾಗಿದೆ. ಚಾರಿತ್ರಿಕ ಕಾರಣಗಳಿಗಾಗಿ ಶತಮಾನಗಳಿಂದ ನಿರ್ಲಕ್ಷಿಸಲ್ಪಟ್ಟ ಹಾಗೂ ಹಿಂದುಳಿದ ಸ್ಥಿತಿಯಲ್ಲಿದ್ದ ದಲಿತ ಸಮುದಾಯಗಳನ್ನು ಸಾಮಾಜಿಕ ಬದಲಾವಣೆಗೆ ಒಳಪಡಿಸುವ ಉದ್ದೇಶದಿಂದ ಇಂತಹ ರಕ್ಷಣಾತ್ಮಕ ಅವಕಾಶಗಳನ್ನು ಒದಗಿಸಲಾಗಿದೆ.[೨]

ಮೀಸಲಾತಿಯು ಭಾರತದ ಅಸಮಾನ ಮತ್ತು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಸರಿಪಡಿಸುವ ಉತ್ತಮ ವಿಧಾನವೆಂದು ಪರಿಭಾವಿಸಲಾಗಿದೆ. ಆದರೆ ಮೀಸಲಾತಿ ಪರಿಕಲ್ಪನೆಗೆ ಸ್ಪಷ್ಟವಾದ ವ್ಯಾಖ್ಯಾನ ನೀಡುವುದು ಸರಳವಾದ ಸಂಗತಿಯಲ್ಲ. ಸಾಮಾನ್ಯವಾಗಿ ಮೀಸಲಾತಿಯನ್ನು ಸಕಾರಾತ್ಮಕ ತಾರತಮ್ಯ, ವಿರುದ್ಧ ಗತಿಯ ತಾರತಮ್ಯ ಅಥವಾ ಪರಿಹಾರಾತ್ಮಕ ತಾರತಮ್ಯವೆಂದು ಪರಿಭಾವಿಸಲಾಗುತ್ತದೆ. ಸಕಾರಾತ್ಮಕ ತಾರತಮ್ಯವೆಂದರೆ ಶೋಷಣೆಗೆ ಒಳಗಾದ ಸಮುದಾಯಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡುವುದು. ವಿರುದ್ಧ ಗತಿಯ ತಾರತಮ್ಯವೆಂದರೆ ಶತಮಾನಗಳಿಂದ ಒಂದು ನಿರ್ದಿಷ್ಟ ಸಮುದಾಯವನ್ನು ತಾರತಮ್ಯದಿಂದ ಮೂಲಕ ನಡೆಸಿಕೊಂಡ ಸಮುದಾಯಕ್ಕೆ ತಾರತಮ್ಯ ಮಾಡುವುದು. ಅದೇ ಪ್ರಕಾರ ಪರಿಹಾರಾತ್ಮಕ ತಾರತಮ್ಯವೆಂದರೆ ಚಾರಿತ್ರಿಕವಾಗಿ ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯಗಳಿಗೆ ವಿಶೇಷ ಸೌಲಭ್ಯಗಳನ್ನು ಮತ್ತು ರಕ್ಷಣೆಗಳನ್ನು ಒದಗಿಸುವುದಾಗಿದೆ.[೩]

ಸಮಾಜದ ಮುಖ್ಯವಾಹಿನಿಯಿಂದ ಹೊರಗುಳಿದ ಸಮುದಾಯಗಳನ್ನು ಒಳಗೊಳ್ಳುವಂತೆ ಮಾಡಲು ಮೀಸಲಾತಿಯು ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಗ್ರಹಿಸಲಾಗಿದೆ. ಧರ್ಮರಾಜ ಸಿಂಗ್ ಹೇಳುವಂತೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೇಶದ ವ್ಯಾಪಕ ರಾಜಕೀಯ ಸಂಸ್ಕೃತಿಯಲ್ಲಿ ದುರ್ಬಲ ಮತ್ತು ನಿರ್ಲಕ್ಷಿತ ಸಮುದಾಯಗಳನ್ನು ಒಳಗೊಳ್ಳುವಂತೆ ಮಾಡಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿ ಸಮುದಾಯಗಳಿಗೆ ಸಂವಿಧಾನಾತ್ಮಕ ರಕ್ಷಣೆ, ಮೀಸಲಾತಿ, ಮತ್ತು ಇತರೆ ಸೌಲಭ್ಯಗಳ ನೀಡುವಿಕೆಯು ಈ ಕ್ರಮಗಳ ಭಾಗವಾಗಿದೆ. ಗ್ರಾಮೀಣ ಸಮಾಜೋ –ಆರ್ಥಿಕ ಅಭಿವೃದ್ಧಿ ಮತ್ತು ಚಲನೆಗೆ ಪರಿಶಿಷ್ಟ ಜಾತಿಗಳ ರಾಜಕೀಯ ಪಾಲ್ಗೊಳ್ಳುವಿಕೆ ಮತ್ತು ನಾಯಕತ್ವ ಅತ್ಯಂತ ಮಹತ್ವ ಎಂದು ಪರಿಗಣಿಸಲಾಗಿದೆ. ಪರಿಶಿಷ್ಟ ಜಾತಿ ಸಮುದಾಯಗಳಿಗೆ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ನೀಡುವ ಮೀಸಲಾತಿಯು ಗ್ರಾಮೀಣ ಅಧಿಕಾರ ಸಂರಚನೆಯಲ್ಲಿ

ಪ್ರವೇಶ ಪಡೆಯಲು ಮತ್ತು ಸಮುದಾಯದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಮೀಸಲಾತಿಯು ಎಲ್ಲ ದುರ್ಬಲ ವರ್ಗಗಳಿಗೆ ಪಂಚಾಯತ್‌ಗಳಲ್ಲಿ ಸದಸ್ಯರಾಗುವ ಮತ್ತು ಅಧ್ಯಕ್ಷರಾಗುವ ಅವಕಾಶ ನೀಡುತ್ತದೆ.[೪] ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ಪ್ರಕಾರ ೫ನೇ ಪ್ರಕರಣದ ೪ನೇ ಉಪಪ್ರಕರಣದ ಪ್ರಕಾರ ಗ್ರಾಮ ಪಂಚಾಯಿತಿಯ ಒಟ್ಟು ಸ್ಥಾನಗಳಲ್ಲಿ ಶೇ.೩೩.೩ರಷ್ಟು ಸ್ಥಾನಗಳನ್ನು ಅನುಸೂಚಿತ ಜಾತಿಗಳಿಗೆ ಮೀಸಲಿಡತಕ್ಕದ್ದು ಮತ್ತು ಶೇ.೩೩.೩ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿರಿಸತಕ್ಕದ್ದು. ಈ ಸ್ಥಾನಗಳಲ್ಲಿ ಶೇ.೫೦ಕ್ಕೆ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸತಕ್ಕದ್ದು ಎಂದು ಸ್ಪಷ್ಟಪಡಿಸುತ್ತದೆ. ಮಹಿಳೆಯರಿಗೆ ನಿಗದಿಪಡಿಸಿದ ಶೇ.೫೦ರಷ್ಟು ಸ್ಥಾನಗಳ ಮೀಸಲಾತಿ ಕಾಯ್ದೆಯು ೩೦.೦೪.೨೦೧೫ರಿಂದ ಜಾರಿಗೊಂಡಿದೆ.[೫]

ಅಬ್ದುಲ್ ಅಜೀಜ್ ಅವರ ಅಧ್ಯಯನ ಹೇಳುವಂತೆ, ಪಂಚಾಯತ್ ಸ್ಥಾನಗಳನ್ನು ಪರಿಶಿಷ್ಟರಿಗೆ ನಿಗದಿ ಮಾಡುವ ಮೊದಲು ಅವುಗಳು ಮೇಲ್ಜಾತಿಯ ಜನರ ಕೈಯಲ್ಲೇ ಕೇಂದ್ರೀಕೃತಗೊಂಡಿದ್ದವು. ಮೀಸಲಾತಿ ನೀಡಿದ ನಂತರ ಗ್ರಾಮೀಣ ಅಧಿಕಾರವನ್ನು ಪರಿಶಿಷ್ಟ ಜಾತಿ ಸಮುದಾಯಗಳು ಹಂಚಿಕೊಳ್ಳಲು ಸಹಕಾರಿಯಾಯಿತು.[೬] ಪೀಟರ್ ರೋನಾಲ್ಡ್ ಡಿಸೋಜ ಅಧ್ಯಯನ ಹೇಳುವಂತೆ ೧೯೯೩ರಲ್ಲಿ ಜಾರಿಗೊಂಡ ೭೩ನೇ ಸಂವಿಧಾನ ತಿದ್ದುಪಡಿಯು ತಳಸಮುದಾಯಗಳಿಗೆ, ಮಹಿಳೆಯರಿಗೆ ಮತ್ತು ದಲಿತರಿಗೆ ಮೀಸಲಾತಿ, ವಿಕೇಂದ್ರೀಕೃತ ಯೋಜನೆ, ರಾಜ್ಯ ಚುನಾವಣಾ ಆಯೋಗದ ಸ್ಥಾಪನೆ ಮುಂತಾದ ಆವಿಷ್ಕಾರಗಳ ಮೂಲಕ ಪಂಚಾಯತ್ ವ್ಯವಸ್ಥೆಯು ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆ ಕ್ರಿಯಾಶೀಲಗೊಳ್ಳುವಂತೆ ಮಾಡಿದೆ. ಈ ಕಾಯ್ದೆಯು ರಾಜಕೀಯ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಿಸುವ ಮೂಲಕ ಹೊಸ ರಾಜಕೀಯ ಸಂಸ್ಕೃತಿ ಹೊರಹೊಮ್ಮುವ ನಿರೀಕ್ಷೆಯ ಸಂವಾದಗಳನ್ನು ಹುಟ್ಟು ಹಾಕಿದೆ.[೭]

ಪಂಚಾಯತ್ ಸದಸ್ಯರ ಅರಿವು:

ಯತೀಂದ್ರಸಿಂಗ್ ಸಿಸೋಡಿಯಾ ಅವರು, ಮಧ್ಯಪ್ರದೇಶದ ಬುಡಕಟ್ಟು ಪ್ರದೇಶಗಳಲ್ಲಿ ಪಂಚಾಯತ್ ಸಂಸ್ಥೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಫಲಿತಗಳು ಹೇಳುವ ಪ್ರಕಾರ, ಬೇರು ಮಟ್ಟದಲ್ಲಿ ಜನರ ಪಾಲ್ಗೊಳ್ಳುವಿಕೆ ನೀರಸವಾಗಿದ್ದು ಗ್ರಾಮಸಭೆಗಳು ತಮಗೆ ವಹಿಸಿದ ಕಾರ್ಯಗಳನ್ನು

ಪರಿಣಾಮಕಾರಿಯಾಗಿ ನಿರ್ವಹಿಸುತ್ತಿಲ್ಲ. ಹಾಗಾಗಿ ಗ್ರಾಮಸಭೆಗಳು ಕೇವಲ ಔಪಚಾರಿಕ ಸಂಸ್ಥೆಗಳಾಗಿ ಪರಿವರ್ತನೆಗೊಂಡಿವೆ. ರಾಜಕೀಯ ನಾಯಕತ್ವ ಮತ್ತು ಅಧಿಕಾರಶಾಹಿ ವರ್ಗಗಳು ಗ್ರಾಮಸಭೆಯನ್ನು ಬಲಪಡಿಸುವ ಯಾವ ಕ್ರಮಗಳನ್ನು ಕೈಗೊಂಡಿಲ್ಲ. ಬಹುತೇಕ ಪಂಚಾಯತ್ ಸದಸ್ಯರಿಗೆ ಗ್ರಾಮಸಭೆ ನಿರ್ವಹಿಸಲು ಬೇಕಾದ ಕೋರಂ ಬಗ್ಗೆ ಅರಿವು ಇಲ್ಲ. ಈ ಗ್ರಾಮಗಳು ಜಾತಿ, ವರ್ಗ ಮತ್ತು ಲಿಂಗದ ಆಧಾರದ ಮೇಲೆ ವಿಭಜಿಸಲ್ಪಟ್ಟಿವೆ. ಪಂಚಾಯತಿ ಅಧ್ಯಕ್ಷರೂ ಮತ್ತು ಇತರೆ ಪ್ರಭಾವಿ ಜನರು ನಿರ್ಣಯ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುತ್ತಿದ್ದಾರೆ.[೮] ಶ್ಯಾಮ್‌ನಂದರ್ ಚೌದರಿ ಅಧ್ಯಯನದ ಪ್ರಕಾರ ದಲಿತ ಪಂಚಾಯತ್ ಸದಸ್ಯರಿಗೆ ಸುತ್ತೋಲೆಯ ಮೇಲೆ ಸಹಿ ಮಾಡಲು ಹೇಳಲಾಗಿದೆಯೇ ಹೊರತು, ಅವರನ್ನು ಪಂಚಾಯತ್ ಸಭೆಗೆ ಭಾಗವಹಿಸಲು ಆಹ್ವಾನಿಸಿಲ್ಲ.[೯] ವೆಂಕಟರವಿಯವರ ಅಧ್ಯಯನ ಹೇಳುವಂತೆ, ಗ್ರಾಮ ಪಂಚಾಯತ್ ಸಭೆಗಳಲ್ಲಿ ದಲಿತ ಪ್ರತಿನಿಧಿಗಳ ಹಾಜರಾತಿ ಕನಿಷ್ಟ ಪ್ರಮಾಣದಲ್ಲಿದೆ. ದಲಿತ ಮಹಿಳಾ ಪ್ರತಿನಿಧಿಗಳ ಹಾಜರಾತಿ ಪುರುಷರಿಗಿಂತ ಕಡಿಮೆ ಇದೆ. ಕನಿಷ್ಟ ಸಾಕ್ಷರತೆ ಹೊಂದಿರುವ ಸದಸ್ಯರ ಹಾಜರಾತಿ ಕಡಿಮೆ ಇದ್ದು, ಜಾತಿ ಶ್ರೇಣಿ ವ್ಯವಸ್ಥೆ ಹಾಜರಾತಿಯನ್ನು ಗಾಢವಾಗಿ ಪ್ರಭಾವಿಸಿದೆ. ಇದರ ಜೊತೆಗೆ ದಲಿತ ಪ್ರತಿನಿಧಿಗಳ ಚರ್ಚೆಯಲ್ಲಿ ಪಾಲ್ಗೊಳ್ಳುವ ಪ್ರಮಾಣವು ಕಡಿಮೆ ಇದ್ದು ಮಹಿಳೆಯರು ಚರ್ಚೆಗಳಲ್ಲಿ ಪಾಲ್ಗೊಳ್ಳುವುದಿಲ್ಲ. ವಿಶೇಷವೆಂದರೆ ಪುರುಷರು ಮಹಿಳೆಯರಿಗೆ ಮಾತನಾಡುವ ಅವಕಾಶ ನೀಡುವುದಿಲ್ಲ. ಹಾಗಾಗಿ ಪಾಲ್ಗೊಳ್ಳುವಿಕೆ ಮತ್ತು ಶಿಕ್ಷಣದ ನಡುವೆ ನೇರವಾದ ಮತ್ತು ಸಕಾರಾತ್ಮಕವಾದ ಸಂಬಂಧವಿದೆ. ಅಧ್ಯಯನ ಗುರುತಿಸಿರುವ ಪ್ರಕಾರ ತರಬೇತಿ ಪಡೆದಿರುವವರು ತರಬೇತಿ ಪಡೆಯದವರಿಗಿಂತ ಸಕ್ರೀಯವಾಗಿ ನಿರ್ಣಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾರೆ.[೧೦] ಜೆ.ಕೆ.ಪುಂದಿರ್ ಅವರು ದಲಿತ ಸಮುದಾಯಗಳ ಪಾಲ್ಗೊಳ್ಳುವಿಕೆಯನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಪ್ರಕಾರ ಉತ್ತರ ಪ್ರದೇಶದ ಗ್ರಾಮಗಳಲ್ಲಿ ದಲಿತರ ಸಂಖ್ಯೆ ಅಧಿಕವಾಗಿದ್ದು ವಿವಿಧ ವೃತ್ತಿಗಳನ್ನು ನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಪಾಲ್ಗೊಳ್ಳುವಿಕೆ ಪರಿಣಾಮಕಾರಿಯಾಗಿದ್ದು ನಿರ್ಣಯ ಪ್ರಕ್ರಿಯೆ ಮತ್ತು ರಾಜಕೀಯ ನಿರ್ಣಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಇದು ಅವರ ಸಂಖ್ಯಾಬಲದಿಂದ ಸಾಧ್ಯವಾಗಿದೆ. ಅಧ್ಯಯನ ಹೇಳುವ ಪ್ರಕಾರ ರಾಜಕೀಯ ಮತ್ತು ನಿರ್ಣಯ ಪ್ರಕ್ರಿಯೆಯಲ್ಲಿ ದಲಿತರ ಪಾಲ್ಗೊಳ್ಳುವಿಕೆ ಗುಣಾತ್ಮಕವಾಗಿ ಮತ್ತು ಧನಾತ್ಮಕವಾಗಿ ಹೆಚ್ಚಾಗಿದೆ.[೧೧]

ಆದರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಇಂತಹ ರಾಜಕೀಯ ಸಂಸ್ಕೃತಿ ಇನ್ನು ಹೊರಹೊಮ್ಮದಿರುವುದು ವಿಷಾದನೀಯ ಸಂಗತಿಯಾಗಿದೆ. ಮೀಸಲಾತಿಯ ಉಪಯೋಗದ ಬಗ್ಗೆ

ದಲಿತ ಪ್ರತಿನಿಧಿಗಳು ವ್ಯಕ್ತಪಡಿಸುವ ಅಭಿಪ್ರಾಯವೇ ಇದಕ್ಕೆ ಕಾರಣವಾಗಿದೆ. ದಲಿತರಿಗೆ ಮೀಸಲಾತಿಯಿಂದ ಉಪಯೋಗವಾಗಿದೆಯೇ? ಎನ್ನುವ ಪ್ರಶ್ನೆಗೆ ಕ್ಷೇತ್ರ ಕಾರ್ಯದ ಮೂಲಕ ಅಭಿಪ್ರಾಯಗಳನ್ನು ಸಂಗ್ರಹಿಸಿ ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಕೋಷ್ಟಕ-೪.೧.೩ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಸಾಪೇಕ್ಷವಾಗಿ ಮುಂದುವರೆದ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇ.೬೧ ರಷ್ಟು ಪುರುಷರು ದಲಿತರಿಗೆ ಮೀಸಲಾತಿಯಿಂದ ಉಪಯೋಗವಿದೆ ಎಂಬುದನ್ನು ಒಪ್ಪುತ್ತಾರೆ. ಶೇ.೫.೬ ರಷ್ಟು ಪ್ರತಿನಿಧಿಗಳು ಮೀಸಲಾತಿಯಿಂದ ಉಪಯೋಗವಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಶೇ.೩೩.೪ ರಷ್ಟು ಪ್ರತಿನಿಧಿಗಳು ಮೀಸಲಾತಿಯ ಉಪಯೋಗದ ಬಗ್ಗೆ ಯಾವುದೇ ತಿಳುವಳಿಕೆ ಹೊಂದಿಲ್ಲ. ಅದೇ ಪ್ರಕಾರ ಈ ತಾಲ್ಲೂಕಿನ ಒಟ್ಟು ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡ ೧೪.೩ರಷ್ಟು ಮಹಿಳೆಯರು ಮೀಸಲಾತಿಯಿಂದ ಉಪಯೋಗವಾಗಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅಷ್ಟೇ ಪ್ರಮಾಣದ ಅಂದರೆ ಶೇಕಡ ೧೪.೩ ರಷ್ಟು ಮಹಿಳೆಯರು ಮೀಸಲಾಯಿತಿಯಿಂದ ಉಪಯೋಗವಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಶೇ.೭೧.೪ರಷ್ಟು ಮಹಿಳಾ ಪ್ರತಿನಿಧಿಗಳಿಗೆ ಮೀಸಲಾತಿ ಪರಿಕಲ್ಪನೆಯ ಅರಿವು ಇಲ್ಲದಿರುವುದು ಆತಂಕಕಾರಿ ಸಂಗತಿಯಾಗಿದೆ. ಒಟ್ಟಾರೆ ಬಳ್ಳಾರಿ ತಾಲ್ಲೂಕಿನ ದಲಿತ ಪ್ರತಿನಿಧಿಗಳಲ್ಲಿ ಮೀಸಲಾತಿಯಿಂದ ಉಪಯೋಗವಿದೆ ಎಂದು ನಂಬಿರುವ ಪ್ರತಿನಿಧಿಗಳಿಗಿಂತ ಮೀಸಲಾತಿ ಪರಿಕಲ್ಪನೆಯ ಅರಿವು ಇಲ್ಲದಿರುವವರ ಪ್ರಮಾಣ ಹೆಚ್ಚಾಗಿದೆ.

ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೬೬.೬ ರಷ್ಟು ಪ್ರತಿನಿಧಿಗಳ ಪ್ರಕಾರ ದಲಿತರಿಗೆ ಮೀಸಲಾತಿಯಿಂದ ಪ್ರಯೋಜನವಿದೆ. ಆದರೆ ಶೇಕಡ ೮.೩ರಷ್ಟು ಮೀಸಲಾತಿ ಉಪಯೋಗವನ್ನು ಒಪ್ಪುವುದಿಲ್ಲ. ಆದರೆ ಶೇಕಡ ೨೫ ರಷ್ಟು ಪುರುಷ ಪ್ರತಿನಿಧಿಗಳಿಗೆ ಮೀಸಲಾತಿ ಪರಿಕಲ್ಪನೆಯ ಅರಿವು ಇಲ್ಲ. ಒಟ್ಟಾರೆ ಈ ತಾಲ್ಲೂಕಿನ ಶೇಕಡ ೩೮.೫ ರಷ್ಟು ಪ್ರತಿನಿಧಿಗಳಿಗೆ ಮೀಸಲಾತಿಯಿಂದ ದಲಿತರಿಗೆ ಆಗುವ ಉಪಯೋಗದ ಅರಿವು ಹೊಂದಿದ್ದು, ಗರಿಷ್ಠ ಸಂಖ್ಯೆಯ ಅಂದರೆ ಶೇಕಡ ೫೩.೮ ರಷ್ಟು ದಲಿತ ಪ್ರತಿನಿಧಿಗಳಿಗೆ ಮೀಸಲಾತಿ ಪರಿಕಲ್ಪನೆಯ ಅರಿವು ಇಲ್ಲ.

ಇದೇ ಚಿತ್ರಣ ಅತ್ಯಂತ ಹಿಂದುಳಿದ ಕೂಡ್ಲಿಗಿ ತಾಲ್ಲೂಕಿನಲ್ಲೂ ಕಂಡು ಬರುತ್ತದೆ. ಈ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೫೩.೦ ರಷ್ಟು ಪ್ರತಿನಿಧಿಗಳು ಮೀಸಲಾತಿ

ಉಪಯೋಗದ ಬಗ್ಗೆ ಒಪ್ಪಿಗೆ ವ್ಯಕ್ತಪಡಿಸುತ್ತಾರೆ. ಆದರೆ ಸಮವಾಗಿ ಶೇಕಡ ೨೩.೫ ರಷ್ಟು ಮತ್ತು ೨೩.೫ ರಷ್ಟು ಪುರುಷ ಪ್ರತಿನಿಧಿಗಳು ಕ್ರಮವಾಗಿ, ಮೀಸಲಾತಿ ಉಪಯೋಗವನ್ನು ಒಪ್ಪುವುದಿಲ್ಲ ಮತ್ತು ಮೀಸಲಾತಿ ಪರಿಕಲ್ಪನೆಯ ಅರಿವು ಹೊಂದಿಲ್ಲ. ಈ ತಾಲ್ಲೂಕಿನ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡ ೧೫ ರಷ್ಟು ಮಹಿಳೆಯರು ಮಾತ್ರ ಮೀಸಲಾತಿ ಉಪಯೋಗವನ್ನು ಒಪ್ಪುತ್ತಾರೆ. ಆದರೆ ಶೇಕಡ ೨೫ ರಷ್ಟು ಮಹಿಳೆಯರು ಮತ್ತು ಶೇಕಡ ೬೦ ರಷ್ಟು ಮಹಿಳೆಯರು ಕ್ರಮವಾಗಿ ಮೀಸಲಾತಿಯ ಪರಿಕಲ್ಪನೆಯ ಅರಿವನ್ನು ಹೊಂದಿಲ್ಲ. ಒಟ್ಟಾರೆ ಈ ತಾಲ್ಲೂಕಿನ ದತ್ತಾಂಶಗಳು ಹೇಳುವ ಪ್ರಕಾರ ಶೇಕಡ ೩೨.೪ ರಷ್ಟು ಪ್ರತಿನಿಧಿಗಳು ದಲಿತರಿಗೆ ಮೀಸಲಾತಿ ಉಪಯೋಗವನ್ನು ಒಪ್ಪಿದರೆ ಗರಿಷ್ಠ ಸಂಖ್ಯೆಯ ಪ್ರತಿನಿಧಿಗಳಿಗೆ ಅಂದರೆ ಶೇಕಡ ೪೩.೩ ರಷ್ಟು ಸದಸ್ಯರಿಗೆ ಮೀಸಲಾತಿ ಪರಿಕಲ್ಪನೆಯ ಅರಿವು ಹೊಂದಿಲ್ಲ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಕೇವಲ ಶೇಕಡ ೩೫.೩ ರಷ್ಟು ದಲಿತ ಪ್ರತಿನಿಧಿಗಳು ಮಾತ್ರ ದಲಿತಿಗೆ ಮೀಸಲಾತಿ ಉಪಯೋಗದ ಅರಿವು ಇದ್ದು, ಶೇಕಡ ೫೦ರಷ್ಟು ದಲಿತ ಪ್ರತಿನಿಧಿಗಳಿಗೆ ಮೀಸಲಾತಿ ಪರಿಕಲ್ಪನೆಯ ಅರಿವು ಇಲ್ಲ. ಮೀಸಲಾತಿಯು ಫ್ಯೂಡಲ್ ವರ್ಗಗಳಿಗೆ ಮತ್ತು ಪಟ್ಟಭದ್ರ ಹಿತಾಸಕ್ತಿ ವರ್ಗಗಳಿಗೆ ಸೀಮಿತವಾಗಿದ್ದ ಗ್ರಾಮೀಣ ಅಧಿಕಾರಿಗಳಲ್ಲಿ ಮೀಸಲಾತಿಯು ದಲಿತರಿಗೆ ಅಧಿಕಾರ ಹಂಚಿಕೊಳ್ಳುವ ಅವಕಾಶ ನೀಡಿದೆ. ಆದರೆ ಬಳ್ಳಾರಿ ಜಿಲ್ಲೆಯ ಬಹುಸಂಖ್ಯಾತ ದಲಿತ ಪ್ರತಿನಿಧಿಗಳಿಗೆ ಮೀಸಲಾತಿ ಪರಿಕಲ್ಪನೆಯ ಅರ್ಥ ಮತ್ತು ಉಪಯೋಗದ ಸಂಗತಿ ಅರಿವಿಗೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ದಲಿತರಿಗೆ ನೀಡಿದ ಮೀಸಲಾತಿಯು ಹೊಸ ರಾಜಕೀಯ ಸಂಸ್ಕೃತಿಯನ್ನು ಹುಟ್ಟು ಹಾಕುವಲ್ಲಿ ವಿಫಲವಾದಂತೆ ಕಂಡು ಬರುತ್ತದೆ.

೪.೨. ಮೀಸಲಾತಿ ಪ್ರಮಾಣದ ಬಗ್ಗೆ ದಲಿತ ಪ್ರತಿನಿಧಿಗಳ ನಿಲುವು:

ಡಿ.ಎಲ್.ಶೇಟ್ ಅವರು ಹೇಳುವ ಪ್ರಕಾರ ಮೀಸಲಾತಿಯು ಶೋಷಿತ ಸಮುದಾಯಗಳಿಗೆ ನೀಡಿರುವ ಪ್ರಮುಖ ಪ್ರಬಲ ಅಸ್ತ್ರವಾಗಿದ್ದು, ಈ ಮೂಲಕ ನಿರ್ಲಕ್ಷಿತ ಸಮುದಾಯಗಳು ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅನುವು ಮಾಡಿಕೊಡುತ್ತದೆ.[೧೨]

ಕೋಷ್ಟಕ-೪.೨ರಲ್ಲಿ ಕಂಡು ಬರುವಂತೆ ೭೩ನೇ ಸಂವಿಧಾನ ತಿದ್ದುಪಡಿಗೆ ಮುಂಚೆ ಪಂಚಾಯತ್ ಸಂಸ್ಥೆಗಳಲ್ಲಿ ಶಾಸನ ಬದ್ದ ಮೀಸಲಾತಿ ಇರಲಿಲ್ಲ. ೭೩ನೇ ತಿದ್ದುಪಡಿ ಜಾರಿಗೊಂಡ ನಂತರ ಅನುಸೂಚಿತ ಜಾತಿಗಳಿಗೆ ಒಟ್ಟು ಸ್ಥಾನಗಳಲ್ಲಿ ಶೇಕಡ ೩೩.ರಷ್ಟು ಸ್ಥಾನಗಳಿಗೆ ಮೀಸಲಾತಿ

ನೀಡಲಾಗಿದೆ. ಈ ಸಂಗತಿಗಳ ಬಗ್ಗೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಿಗೆ ಸ್ಪಷ್ಟವಾದ ಅರಿವು ಇಲ್ಲದಿರುವುದು ಕಂಡು ಬರುತ್ತದೆ. ಮೀಸಲಾತಿಯ ಪರಿಕಲ್ಪನೆ ದಲಿತ ಸಮುದಾಯದ ಅಸ್ಮಿತೆ ಎಂದೇ ಪರಿಭಾವಿಸಲಾಗಿದೆ. ಮೀಸಲಾತಿಯ ಪ್ರಮಾಣದ ಬಗ್ಗೆ ದಲಿತ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದ್ದು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಸಾಪೇಕ್ಷವಾಗಿ ಮುಂದುವರೆದ ಬಳ್ಳಾರಿ ತಾಲ್ಲೂಕಿನ ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೭೨.೨ ರಷ್ಟು ಪ್ರತಿನಿಧಿಗಳಿಗೆ ಮೀಸಲು ಪ್ರಮಾಣ ತೃಪ್ತಿ ತಂದಿದೆ. ಆದರೆ ಶೇಕಡ ೧೧.೧ ರಷ್ಟು ಪ್ರತಿನಿಧಿಗಳಿಗೆ ತೃಪ್ತಿ ತಂದಿಲ್ಲ. ಆದರೆ ಶೇಕಡ ೧೬.೬ ರಷ್ಟು ಪ್ರತಿನಿಧಿಗಳಿಗೆ ದಲಿತರಿಗೆ ನಿಗದಿಯಾದ ಮೀಸಲಾತಿ ಪ್ರಮಾಣದ ಅರಿವು ಇಲ್ಲ. ಈ ತಾಲ್ಲೂಕಿನ ಒಟ್ಟು ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಕೇವಲ ಶೇಕಡ ೧೪.೩ ರಷ್ಟು ಮಹಿಳಾ ಪ್ರತಿನಿಧಿಗಳು ಮೀಸಲಾತಿ ಪ್ರಮಾಣದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರೆ, ಶೇಕಡ ೮೧ ರಷ್ಟು ಮಹಿಳಾ ಪ್ರತಿನಿಧಿಗಳಿಗೆ ದಲಿತರಿಗೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣದ ಅರಿವು ಇಲ್ಲ. ಒಟ್ಟಾರೆ ಈ ತಾಲ್ಲೂಕಿನಲ್ಲಿ ಶೇಕಡ ೪೧ ರಷ್ಟು ಪ್ರತಿನಿಧಿಗಳಿಗೆ ದಲಿತರಿಗೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣ ತೃಪ್ತಿಯಾಗಿದ್ದು, ಶೇಕಡ ೫೧.೩ರಷ್ಟು ದಲಿತ ಪ್ರತಿನಿಧಿಗಳಿಗೆ ದಲಿತರಿಗೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣದ ಅರಿವು ಇಲ್ಲ.

ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕಿನಲ್ಲಿ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೮೩.೩ರಷ್ಟು ಪ್ರತಿನಿಧಿಗಳಿಗೆ ದಲಿತರಿಗೆ ನಿಗದಿಪಡಿಸಿದ ಶೇಕಡ ೩೩.೩ ರಷ್ಟು ಮೀಸಲಾತಿ ಪ್ರಮಾಣದ ಬಗ್ಗೆ ತೃಪ್ತಿ ಇದೆ. ಉಳಿದ ಶೇಕಡ ೧೬.೭ರಷ್ಟು ಪ್ರತಿನಿಧಿಗಳಿಗೆ ಮೀಸಲಾತಿ ಪ್ರಮಾಣದ ಬಗ್ಗೆ ತೃಪ್ತಿ ಇಲ್ಲ. ಇಡೀ ತಾಲ್ಲೂಕಿನ ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡ ೨೧.೪ರಷ್ಟು ಮಹಿಳಾ ಪ್ರತಿನಿಧಿಗಳಿಗೆ ದಲಿತರಿಗೆ ನಿಗದಿಪಡಿಸಿದ ಪ್ರಮಾಣದ ಬಗ್ಗೆ ತೃಪ್ತಿ ಇದೆ. ಶೇಕಡ ೧೪.೩ರಷ್ಟು ಮಹಿಳೆಯರಿಗೆ ತೃಪ್ತಿ ಇಲ್ಲ. ಆದರೆ ಗರಿಷ್ಟ ಸಂಖ್ಯೆ ಅಂದರೆ ೬೪.೩ರಷ್ಟು ಮಹಿಳಾ ಪ್ರತಿನಿಧಿಗಳಿಗೆ ಪಂಚಾಯತ್‌ಗಳಲ್ಲಿ ದಲಿತರಿಗೆ ನಿಗದಿಪಡಿಸಿದ ಒಟ್ಟು ಸ್ಥಾನಗಳಲ್ಲಿ ಮೀಸಲಾತಿ ಪ್ರಮಾಣದ ಅರಿವು ಇಲ್ಲ. ಅತ್ಯಂತ ಹಿಂದುಳಿದ ಕೂಡ್ಲಿಗಿ ತಾಲ್ಲೂಕಿನಲ್ಲಿ ಇದೇ ಚಿತ್ರಣ ಮುಂದುವರೆದಿದೆ. ಈ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೫೮.೮ ರಷ್ಟು ಪುರುಷ ಪ್ರತಿನಿಧಿಗಳಿಗೆ ದಲಿತರಿಗೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣದ ಬಗ್ಗೆ ತೃಪ್ತಿ ಇದೆ.

ಆದರೆ ಶೇಕಡ ೧೭.೬ರಷ್ಟು ದಲಿತ ಪುರುಷರಿಗೆ ಮೀಸಲಾತಿ ಪ್ರಮಾಣ ತೃಪ್ತಿಯಾಗಿಲ್ಲ. ಆದರೆ ಶೇಕಡ ೨೩.೬ ರಷ್ಟು ದಲಿತ ಪುರುಷ ಪ್ರತಿನಿಧಿಗಳಿಗೆ ಪಂಚಾಯತ್‌ಗಳಲ್ಲಿ ದಲಿತರಿಗೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣದ ಅರಿವು ಇಲ್ಲ. ಒಟ್ಟಾರೆ ಈ ತಾಲ್ಲೂಕಿನ ದತ್ತಾಂಶಗಳು ಹೇಳುವ ಪ್ರಕಾರ ಶೇಕಡ ೩೫.೧ ರಷ್ಟು ದಲಿತ ಪ್ರತಿನಿಧಿಗಳಿಗೆ ಮೀಸಲಾತಿ ಪ್ರಮಾಣ ತೃಪ್ತಿ ತಂದಿದ್ದರೆ, ಶೇಕಡ ೫೧.೪ರಷ್ಟು ದಲಿತ ಪ್ರತಿನಿಧಿಗಳಿಗೆ ಪಂಚಾಯತ್‌ಗಳಲ್ಲಿ ನಿಗದಿಪಡಿಸಿದ ಮೀಸಲಾತಿ ಪ್ರಮಾಣದ ಅರಿವು ಇಲ್ಲದಿರುವುದು ಶೋಚನೀಯ ಸಂಗತಿ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಶೇಕಡ ೪೧.೨ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಪಂಚಾಯತ್ ಮೀಸಲಾತಿ ಪ್ರಮಾಣದ ಬಗ್ಗೆ ತೃಪ್ತಿ ತಂದಿದ್ದು, ಶೇಕಡ ೪೭ ರಷ್ಟು ದಲಿತ ಪ್ರತಿನಿಧಿಗಳಿಗೆ ಪಂಚಾಯತ್‌ಗಳಲ್ಲಿ ದಲಿತರಿಗೆ ನಿಗದಿಪಡಿಸಿದ ಮೀಸಲಾತಿಯ ಪ್ರಮಾಣದ ಅರಿವು ಇಲ್ಲದಿರುವುದು ಆತಂಕಕಾರಿ ಸಂಗತಿಯಾಗಿದೆ.

೪.೩ ದಲಿತ ಸಂಘಟನೆಗಳು ಮತ್ತು ದಲಿತರ ಅಭಿವೃದ್ಧಿ

ಒಂದು ಸಮುದಾಯವು ವಿಶೇಷವಾಗಿ ಅಭಿವೃದ್ಧಿಯಿಂದ ವಂಚಿತವಾದ, ಸಾಮಾಜಿಕ ಅಂಚಿಗೆ ತಳ್ಳಲ್ಪಟ್ಟ ಮತ್ತು ಅಸ್ಪೃಶ್ಯತೆಯನ್ನು ಅನುಭವಿಸುತ್ತಿರುವ ದಲಿತ ಸಮುದಾಯದ ಅಭಿವೃದ್ಧಿಗೆ ಹೋರಾಟ ಸಂಘಟನೆಗಳು ಅಗತ್ಯವಾಗಿವೆ. ಸಂಘಟನೆಗಳು ವಿವಿಧ ಚಳುವಳಿಯ ಮೂಲಕ ಒಂದು ಸಮುದಾಯದ ಸಮಾಜೋ-ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಗೆ ಕಾರಣವಾಗುತ್ತದೆ. ಚಳುವಳಿ ಎಂದರೆ ಕ್ರಾಂತಿ, ಪ್ರತಿಭಟನೆ, ಬಂಡಾಯ ಎಂದರ್ಥ. ಯಾವ ವ್ಯವಸ್ಥೆ ಜಡ್ಡುಗಟ್ಟಿ ಹೋಗಿರುತ್ತದೆಯೋ ಅಂತಹ ವ್ಯವಸ್ಥೆಯನ್ನು ಕಿತ್ತು ಎಸೆದು ಹೊಸ ಆಶಯದ, ಹೊಸ ತಾತ್ವಿಕತೆಯ ನವೀನ ಚಿಂತನೆ ಮಾದರಿಯ ವ್ಯವಸ್ಥೆಯನ್ನು ಹುಟ್ಟು ಹಾಕಲು ಸಹಾಯಕವಾಗುವ ಮಾರ್ಗವನ್ನೇ ಚಳುವಳಿಯೆಂದು ಗ್ರಹಿಸಲಾಗುತ್ತದೆ.[೧೩]

ದಲಿತ ಸಮುದಾಯದ ಸಾಮಾನ್ಯ ಜನರು ಮತ್ತು ಸ್ಥಳೀಯ ಸಂಸ್ಥೆಗಳ ಜನ ಪ್ರತಿನಿಧಿಗಳು ದಲಿತರ ಸಮಸ್ಯೆಗಳಿಗಾಗಿ ಹೋರಾಡುವ ಸಂಘಟನೆಗಳೊಂದಿಗೆ ಗುರುತಿಸಿಕೊಳ್ಳುವುದು ದಲಿತ ಪ್ರಮುಖ ಅಸ್ಮಿತೆಯೆಂದು ಗ್ರಹಿಸಲಾಗುತ್ತದೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕು, ಸಿರುಗುಪ್ಪ ತಾಲ್ಲೂಕು ಮತ್ತು ಕೂಡ್ಲಿಗಿ ತಾಲ್ಲೂಕುಗಳ ದಲಿತ ಪ್ರತಿನಿಧಿಗಳು ದಲಿತ ಸಂಘಟನೆಗಳನ್ನು ಹೇಗೆ ಗ್ರಹಿಸಿಕೊಂಡಿದ್ದಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡು ಕೊಳ್ಳಲಾಗಿದೆ. ಅದರ ದತ್ತಾಂಶಗಳನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಕೋಷ್ಟಕ–೪.೩.ರಲ್ಲಿ ಸ್ಪಷ್ಟಪಡಿಸಿರುವ ಪ್ರಕಾರ ಸಾಪೇಕ್ಷವಾಗಿ ಮುಂದುವರಿದ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೮೮.೮ ರಷ್ಟು ಪ್ರತಿನಿಧಿಗಳು ದಲಿತ ಸಮುದಾಯದ ಅಭಿವೃದ್ಧಿಗೆ ಸಂಘಟನೆಗಳು ಅಗತ್ಯವೆಂದು ಭಾವಿಸುತ್ತಾರೆ. ಆದರೆ ಶೇ.೫.೬ ರಷ್ಟು ಪ್ರತಿನಿಧಿಗಳಿಗೆ ಸಂಘಟನೆಗಳಿಗೆ ಸಾಮರ್ಥ್ಯದ ಅರಿವು ಇಲ್ಲ. ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಶೇ.೩೮.೧ ರಷ್ಟು ದಲಿತರ ಅಭಿವೃದ್ಧಿಗೆ ಸಂಘಟನೆಗಳು ಅಗತ್ಯವೆಂದು ಭಾವಿಸುತ್ತಾರೆ. ಆದರೆ ಶೇ.೫೨.೪ ರಷ್ಟು ಮಹಿಳಾ ಪ್ರತಿನಿಧಿಗಳಿಗೆ ದಲಿತ ಸಂಘಟನೆಗಳ ಅರಿವು ಇಲ್ಲ.

ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕಿನಲ್ಲಿ ಶೇಕಡ ೮೩.೪ ರಷ್ಟು ಪುರುಷರಿಗೆ ದಲಿತ ಸಂಘಟನೆಗಳ ಅಗತ್ಯದ ಅರಿವು ಇದೆ. ಆದರೆ ಶೇ.೮.೩ ರಷ್ಟು ಪ್ರತಿನಿಧಿಗಳಿಗೆ ಸಂಘಟನೆಗಳ ಸಾಮರ್ಥ್ಯದ ಅರಿವು ಇಲ್ಲ. ಈ ತಾಲ್ಲೂಕಿನ ಒಟ್ಟು ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡ ೩೫.೭ ರಷ್ಟು ಪ್ರತಿನಿಧಿಗಳಿಗೆ ದಲಿತ ಸಂಘಟನೆಗಳ ಅಗತ್ಯತೆಯ ಬಗ್ಗೆ ಅರಿವು ಇದೆ. ಆದರೆ ಶೇಕಡ ೫೭.೨ ರಷ್ಟು ಮಹಿಳಾ ಪ್ರತಿನಿಧಿಗಳಿಗೆ ದಲಿತ ಸಂಘಟನೆಗಳ ಅರಿವು ಹೊಂದಿಲ್ಲ.

ಅತ್ಯಂತ ಹಿಂದುಳಿದ ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇ.೮೮.೨ ರಷ್ಟು ಪ್ರತಿನಿಧಿಗಳಿಗೆ ದಲಿತರ ಅಭಿವೃದ್ಧಿಗೆ ದಲಿತ ಸಂಘಟನೆಗಳು ಅಗತ್ಯ ಎನ್ನುವ ಅರಿವು ಹೊಂದಿದ್ದಾರೆ. ಕನಿಷ್ಠ ಸಂಖ್ಯೆಯ ಅಂದರೆ ಶೇಕಡ ೫.೯ ರಷ್ಟು ಪ್ರತಿನಿಧಿಗಳಿಗೆ ದಲಿತರ ಅಭಿವೃದ್ಧಿಯ ಸಂಗತಿಗಳಲ್ಲಿ ದಲಿತ ಸಂಘಟನೆಗಳ ಪಾತ್ರ ಅಗತ್ಯವೆಂದು ಭಾವಿಸುತ್ತಾರೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೭.೮ ರಷ್ಟು ಪ್ರತಿನಿಧಿಗಳಿಗೆ ದಲಿತರ ಅಭಿವೃದ್ಧಿಗೆ ಸಂಘಟನೆಗಳ ಅಗತ್ಯವೆಂದು ಭಾವಿಸುತ್ತಾರೆ. ಆದರೆ ಶೇಕಡ ೩೪.೪ ರಷ್ಟು ಪ್ರತಿನಿಧಿಗಳು ದಲಿತರ ಅಭಿವೃದ್ಧಿಯಲ್ಲಿ ದಲಿತ ಸಂಘಟನೆಗಳ ಪಾತ್ರದ ಅರಿವು ಹೊಂದಿಲ್ಲ. ಕ್ಷೇತ್ರ ಕಾರ್ಯದ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಬಹುತೇಕ ಪುರುಷ ಪ್ರತಿನಿಧಿಗಳಿಗೆ ದಲಿತರ ಅಭಿವೃದ್ಧಿಗೆ ಸಂಘಟನೆಗಳು ಅಗತ್ಯ ಎನ್ನುವ ಅರಿವು ಇದ್ದು, ಮಹಿಳಾ ಪ್ರತಿನಿಧಿಗಳಿಗೆ ಇದರ ಅರಿವು ಇಲ್ಲ.

೪.೪. ದಲಿತ ಸಂಘರ್ಷ ಸಮಿತಿ ಮತ್ತು ದಲಿತರ ಅಭಿವೃದ್ಧಿ :

ದಲಿತ ಸಮುದಾಯದ ಸ್ವಾಭಿಮಾನ ಎತ್ತಿಹಿಡಿಯಲು ಮತ್ತು ದಲಿತರ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಜ್ಞಾವಂತ ದಲಿತ ಬುದ್ಧಿ ಜೀವಿ ಎಂದೇ ಗುರುತಿಸಿಕೊಂಡಿದ್ದ ಪ್ರೊ.ಬಿ.ಕೃಷ್ಣಪ್ಪನವರು ದಲಿತ ಸಂಘರ್ಷ ಸಮಿತಿಯನ್ನು ಸ್ಥಾಪಿಸಿದರು. ಈ ದಲಿತ ಸಂಘರ್ಷ ಸಮಿತಿ ಕರ್ನಾಟಕದ ಮೇರೆಯನ್ನು ಮೀರಿ ಹಳ್ಳಿಗಳಿಂದ ದಿಲ್ಲಿಯವರೆಗೂ ತನ್ನ ಶಾಖೆಯನ್ನು ತೆರೆಯಿತು. ಸಮಿತಿಯ ಬೆಳವಣಿಗೆಯಿಂದಾಗಿ ಶೋಷಿತ ವರ್ಗಗಳಿಗೆ ಧ್ವನಿ ಬಂದಂತಾಯಿತು. ಪ್ರೊ.ಬಿ.ಕೃಷ್ಣಪ್ಪ ಅವರೊಂದಿಗೆ ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಮತ್ತು ಪೊಲಂಕಿ ರಾಮಮೂರ್ತಿಯವರ ಚಿಂತನೆಗಳು ಒಳಗೊಂಡಿತು. ದಲಿತ ಸಂಘರ್ಷ ಸಮಿತಿಗೆ ಜೀವ ಬಂದಂತಾಗಿ ಕರ್ನಾಟಕ ತಳಸಮುದಾಯದ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದ ಭೂಮಿಕೆ ಸಿದ್ಧವಾಯಿತು. ಅನಕ್ಷರಸ್ಥರು, ಕೂಲಿ ಕಾರ್ಮಿಕರು ಮತ್ತು ಬಡವರನ್ನು ಒಳಗೊಂಡು ಎಲ್ಲರ ಮನಮುಟ್ಟುವಲ್ಲಿ ಯಶಸ್ವಿಯಾಯಿತು. ಆರಂಭದಲ್ಲಿ ಸಣ್ಣ–ಪುಟ್ಟ ಯಶಸ್ವಿಗೆ ಕಾರಣವಾಗಿದ್ದ ಸಮಿತಿಯು ನಂತರದ ದಿನಗಳಲ್ಲಿ ದಲಿತರಿಗೆ ಸ್ವಾಭಿಮಾನದ ಚೈತನ್ಯಶಕ್ತಿ ಮೂಡಿಸುವಲ್ಲಿ ಯಶಸ್ವಿಯಾಯಿತು.[೧೪]

ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯು ಹಲವಾರು ಹೋರಾಟಗಳನ್ನು ಕೈಗೊಂಡಿದೆ. ಅಂತರ್‌ಜಾತಿ ವಿವಾಹಕ್ಕೆ ಪ್ರೇರಣೆ, ಬೇರೆ ಧರ್ಮಗಳಿಗೆ ಮತಾಂತರ ಮಾಡಿಸುವುದು, ಅಸ್ಪೃಶ್ಯತೆ ನಿವಾರಣೆಗಾಗಿ ಚಳುವಳಿ ಮತ್ತು ಜಾತಿಪದ್ಧತಿಯನ್ನು ನಿವಾರಣೆ ಮಾಡಲು ಹೋರಾಟ ಮಾಡುವ ಮೂಲಕ ದಲಿತರಿಗೆ ಸಾಮಾಜಿಕ ನ್ಯಾಯ ಕೊಡಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದೆ. ದಲಿತರಿಗೆ ಆರ್ಥಿಕವಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಭೂ ಹೋರಾಟಗಳನ್ನು ಕೈಗೊಂಡಿದೆ. ಸಿದ್ದಲಿಪುರ ಭೂ ಹೋರಾಟ, ಮೃಶನಹಳ್ಳಿ ಭೂ ಹೋರಾಟ, ನಾಸಂದ್ರ ಭೂ ಹೋರಾಟ, ಬಳ್ಳುಹಟ್ಟಿ ಕಾವಲು ಭೂ ಹೋರಾಟ ಮತ್ತು ದೇವಲಾಪುರ ಭೂ ಹೋರಾಟ ಮುಂತಾದ ಭೂ ಹೋರಾಟಗಳ ಮೂಲಕ ದಲಿತರಿಗೆ ಭೂಮಿ ಕೊಡಿಸಿ ದಲಿತರು ಆರ್ಥಿಕವಾಗಿ ಸದೃಢರಾಗುವಂತೆ ಮಾಡುವಲ್ಲಿ ದಲಿತ ಸಂಘರ್ಷ ಸಮಿತಿ ಯಶಸ್ವಿಯಾಗಿದೆ.[೧೫] ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಹುಟ್ಟು, ಹೋರಾಟ ಮತ್ತು ಯಶಸ್ಸಿನ ಚರಿತ್ರೆಯನ್ನು ಅವಲೋಕಿಸಿದರೆ ದಲಿತ ಸಂಘರ್ಷ ಸಮಿತಿಯು ದಲಿತರ ಪ್ರಮುಖ ಅಸ್ಮಿತೆಯಾಗಿದೆ. ಇಂತಹ ದಲಿತ ಸಂಘಷ ಸಮಿತಿಯು ಬಳ್ಳಾರಿ ಜಿಲ್ಲೆಯ ದಲಿತರ ಸಮಾಜೋ–ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿದೆಯೇ? ಈ ಸಂಗತಿಯನ್ನು ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಹೇಗೆ ಪರಿಭಾವಿಸಿಕೊಂಡಿದ್ದಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ

ಮೂಲಕ ಕಂಡುಕೊಳ್ಳಲಾಗಿದೆ. ಈ ದತ್ತಾಂಶಗಳ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಸಾಪೇಕ್ಷವಾಗಿ ಮುಂದುವರೆದ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೪೪.೪ ರಷ್ಟು ಪ್ರತಿನಿಧಿಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯು ಅವರ ಸಮಾಜೋ-ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿದೆ. ಆದರೆ ಶೇಕಡ ೫೦ ರಷ್ಟು ಪ್ರತಿನಿಧಿಗಳ ಪ್ರಕಾರ, ದಲಿತ ಸಂಘರ್ಷ ಸಮಿತಿಯು ಅವರ ಸಮಾಜೋ-ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿಲ್ಲ. ಈ ತಾಲ್ಲೂಕಿನ ಒಟ್ಟು ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡ ೨೩.೮ ರಷ್ಟು ಮಹಿಳಾ ಪ್ರತಿನಿಧಿಗಳು ಮಾತ್ರ ದಲಿತ ಸಂಘರ್ಷ ಸಮಿತಿಯಿಂದ ಅವರ ಸಮಾಜೋ-ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆ ಆಗಿರುವುದನ್ನು ಗುರುತಿಸುತ್ತಾರೆ. ಆದರೆ ಶೇಕಡ ೫೭.೨ ರಷ್ಟು ಮಹಿಳಾ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ಹೋರಾಟಗಳ ಗ್ರಹಿಕೆಯೇ ಇಲ್ಲ.

ಕೋಷ್ಟಕ-೪.೪.ರ ದತ್ತಾಂಶಗಳು ಸ್ಪಷ್ಟಪಡಿಸುವಂತೆ ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕಿನಲ್ಲಿ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೪೧.೭ ರಷ್ಟು ಪುರುಷರ ಪ್ರಕಾರ ದಲಿತ ಸಂಘರ್ಷ ಸಮಿತಿಯು ತಮ್ಮ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿರುವುದನ್ನು ಒಪ್ಪುತ್ತಾರೆ. ಆದರೆ ಶೇಕಡ ೫೮.೩ ರಷ್ಟು ಪುರುಷ ಪ್ರತಿನಿಧಿಗಳ ಪ್ರಕಾರ ಸಮಿತಿಯು ಅವರ ಸಮಾಜೋ-ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿಲ್ಲ. ಈ ತಾಲ್ಲೂಕಿನ ಒಟ್ಟು ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡ ೧೪.೩ ರಷ್ಟು ಮಹಿಳಾ ಪ್ರತಿನಿಧಿಗಳ ಪ್ರಕಾರ ಸಮಿತಿಯು ಅವರ ಸಮಾಜೋ-ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿದೆ. ಆದರೆ ಶೇಕಡ ೫೭.೧ ರಷ್ಟು ಮಹಿಳಾ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ಹೋರಾಟಗಳ ಗ್ರಹಿಕೆ ಇಲ್ಲ.

ಅತ್ಯಂತ ಹಿಂದುಳಿದ ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೩೫.೫ ರಷ್ಟು ದಲಿತ ಪುರುಷ ಪ್ರತಿನಿಧಿಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯು ಅವರ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿದೆ. ಆದರೆ ಗರಿಷ್ಠ ಸಂಖ್ಯೆಯ ಅಂದರೆ ಶೇಕಡ ೫೮.೮ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯು ಅವರ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿಲ್ಲ. ತಾಲ್ಲೂಕಿನ ಒಟ್ಟು ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡ ೧೦ರಷ್ಟು ಮಹಿಳೆಯರ ಪ್ರಕಾರ ದಲಿತ

ಸಂಘರ್ಷ ಸಮಿತಿಯು ಅವರ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿದೆ. ಆದರೆ ಶೇಕಡ ೬೦ ರಷ್ಟು ಮಹಿಳಾ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ಹೋರಾಟಗಳ ಗ್ರಹಿಕೆ ಇಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳ ಗ್ರಹಿಕೆಗಳನ್ನು ಸಂಕ್ಷಿಪ್ತಗೊಳಿಸಿ ಹೇಳುವುದಾದರೆ ಶೇಕಡ ೨೭.೫ ರಷ್ಟಡು ಪ್ರತಿನಿಧಿಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯು ಅವರ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿದೆ. ಆದರೆ ಇದಕ್ಕೆ ವಿರುದ್ಧವಾಗಿ ಶೇಕಡ ೩೯.೨ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯು ಅವರ ಸಮಾಜೋ ಆರ್ಥಿಕ ಜೀವನವನ್ನು ಪ್ರಭಾವಿಸಿಲ್ಲ. ಅಂತಿಮವಾಗಿ ಹೇಳುವುದಾದರೆ ದಲಿತ ಸಂಘರ್ಷ ಷಮಿತಿಯು ದಲಿತ ಸಮಾಜೋ-ಆರ್ಥಿಕ ಜೀವನವನ್ನು ಅಷ್ಟಾಗಿ ಪ್ರಭಾವಿಸಿಲ್ಲ.

೪.೫. ದಲಿತ ಸಂಘರ್ಷ ಸಮಿತಿ ಮತ್ತು ದಲಿತರ ಜೀವನ ಪರಿವರ್ತನೆಗಳು :

ಹಿಂದಿನ ವಿಶ್ಲೇಷಣೆಯಲ್ಲಿ ಕಂಡುಕೊಂಡಿರುವಂತೆ, ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೭.೫ ರಷ್ಟು ಪ್ರತಿನಿಧಿಗಳು ಮಾತ್ರ ದಲಿತ ಸಂಘರ್ಷ ಸಮಿತಿಯು ಅವರ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿರುವುದನ್ನು ಗುರುತಿಸುತ್ತಾರೆ. ಆದರೆ ಹೆಚ್ಚು ಪ್ರತಿನಿಧಿಗಳು ಗ್ರಹಿಸುವ ಪ್ರಕಾರ ಶೇ.೩೯.೨ರಷ್ಟು ದಲಿತ ಸಂಘರ್ಷ ಸಮಿತಿಯು ಅವರ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿಲ್ಲ. ದಲಿತ ಸಂಘರ್ಷ ಸಮಿತಿಯು ದಲಿತರ ಸಾಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿದೆ ಎಂದು ಗುರುತಿಸಿರುವವರು ಒಟ್ಟು ನಾಲ್ಕು ಸಹಾಯಗಳನ್ನು ಮಾಡುವ ಮೂಲಕ ತಮ್ಮ ಜೀವನವನ್ನು ಪ್ರಭಾವಿಸಿರುವುದನ್ನು ಗುರುತಿಸಿದ್ದಾರೆ. ದಲಿತ ಸಂಘರ್ಷ ಸಮಿತಿಯವರು ದಲಿತರಿಗೆ ಇತರೆ ಸಮುದಾಯದವರು ಕಿರುಕುಳ ನೀಡಿದಾಗ ದಲಿತರನ್ನು ಬೆಂಬಲಿಸುವುದು, ಎರಡನೆಯದಾಗಿ ದಲಿತರ ಹೊಲ-ಗದ್ದೆಗಳ ಬಗ್ಗೆ ವ್ಯಾಜ್ಯಗಳಾದಾಗ ಬೆಂಬಲಕ್ಕೆ ನಿಲ್ಲುವುದು, ಮೂರನೆಯದಾಗಿ ಸರ್ಕಾರಿ ಇಲಾಖೆಗಳಿಂದ ಮತ್ತು ಬ್ಯಾಂಕ್‌ಗಳಿಂದ ಸಾಲವನ್ನು ಕೊಡಿಸುವುದು. ನಾಲ್ಕನೆಯದಾಗಿ ಸರ್ಕಾರಿ ಇಲಾಖೆಗಲಲ್ಲಿ ದಲಿತರ ಕೆಲಸಗಳು ವಿಳಂಬವಾದಾಗ ಸದರಿ ಅಧಿಕಾರಿಗಳೊಂದಿಗೆ, ಮಾತನಾಡಿ ಸಹಾಯ ಮಾಡುವುದು. ಹೀಗೆ ನಾಲ್ಕು ರೀತಿಯಲ್ಲಿ ದಲಿತರ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸಿದ್ದಾರೆ. ಇವುಗಳ ವಿವರಗಳನ್ನು ತಾಲ್ಲೂಕುವಾರು ಅಧ್ಯಯನ ಮಾಡಿ ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಕೋಷ್ಟಕ–೪.೫.(ಅ) ದತ್ತಾಂಶಗಳು ಸ್ಪಷ್ಟಪಡಿಸುವಂತೆ ಸಾಪೇಕ್ಷವಾಗಿ ಮುಂದುವರೆದ ಬಳ್ಳಾರಿ ತಾಲ್ಲೂಕಿನಲ್ಲಿ ದಲಿತ ಸಂಘರ್ಷ ಸಮಿತಿಯು ದಲಿತರ ಸಮಾಜೋ–ಆರ್ಥಿಕ ಜೀವನವನ್ನು ಪ್ರಭಾವಿಸಿದೆ ಎಂದು ಗ್ರಹಿಸುವ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೨೩ ರಷ್ಟು ಪ್ರತಿನಿಧಿಗಳ ಅಭಿಪ್ರಾಯದ ಪ್ರಕಾರ ದಲಿತ ಸಂಘರ್ಷ ಸಮಿತಿಯವರು ದಲಿತರಿಗೆ ಇತರೆ ಸಮುದಾಯದವರು ಕಿರುಕುಳ ನೀಡಿದಾಗ ಬೆಂಬಲಕ್ಕೆ ಬರುತ್ತಾರೆ. ಶೇಕಡ ೩೭.೭ ರಷ್ಟು ಪ್ರತಿನಿಧಿಗಳ ಪ್ರಕಾರ ದಲಿತರ ಹೊಲ–ಗದ್ದೆಗಳು ವ್ಯಾಜ್ಯಕ್ಕೆ ಒಳಗಾದಾಗ ಸಹಾಯಕ್ಕೆ ಬಂದು ವ್ಯಾಜ್ಯಗಳನ್ನು ಪರಿಹರಿಸುತ್ತಾರೆ. ಶೇಕಡ ೧೫.೫ ರಷ್ಟು ಸದಸ್ಯರು ಅಭಿಪ್ರಾಯ ಪಡುವ ಪ್ರಕಾರ ದಲಿತರ ಆರ್ಥಿಕ ಅಭಿವೃದ್ಧಿಗೆ ಸರ್ಕಾರಿ ಇಲಾಖೆಗಳು ಮತ್ತು ಬ್ಯಾಂಕ್‌ಗಳಿಂದ ಸಾಲ ಕೊಡಿಸುತ್ತಾರೆ. ಶೇ.೩೦.೮ ರಷ್ಟು ಪ್ರತಿನಿಧಿಗಳು ಅಭಿಪ್ರಾಯ ಪಡುವ ಪ್ರಕಾರ ಸರ್ಕಾರಿ ಇಲಾಖೆಗಳಲ್ಲಿ ದಲಿತರ ಕೆಲಸಗಳು ವಿಳಂಬವಾದಾಗ ಸದರಿ ಅಧಿಕಾರಿಯೊಂದಿಗೆ ಮಾತನಾಡಿ ಸಹಾಯ ಮಾಡುತ್ತಾರೆ.

ಅತೀ ಹಿಂದುಳಿದಿರುವ ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ.೨೮.೬ ರಷ್ಟು ಪ್ರತಿನಿಧಿಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯವರು ದಲಿತರಿಗೆ ಇತರೆ ಸಮುದಾಯದವರು ಕಿರುಕುಳ ನೀಡಿದಾಗ ಸಹಾಯಕ್ಕೆ ಬರುತ್ತಾರೆ. ಶೇಕಡ ೧೪.೩ ರಷ್ಟು ಪ್ರಕಾರ ದಲಿತರ ಹೊಲ–ಗದ್ದೆಗಳ ವ್ಯಾಜ್ಯಗಳಾದಾಗ ಸಹಾಯಕ್ಕೆ ಬರುತ್ತಾರೆ. ಶೇಕಡ ೧೬.೩ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯವರು ಸರ್ಕಾರಿ ಇಲಾಖೆಗಳು ಮತ್ತು ಬ್ಯಾಂಕ್‌ನಿಂದ ಸಾಲ ಪಡೆಯಲು ಸಹಕರಿಸುತ್ತಾರೆ. ಅತೀ ಹೆಚ್ಚು ಪ್ರತಿನಿಧಿಗಳು ಅಂದರೆ ಶೇಕಡ ೪೨.೮ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ಸರ್ಕಾರಿ ಇಲಾಖೆಗಳಲ್ಲಿ ದಲಿತರ ಕೆಲಸಗಳು ವಿಳಂಬವಾದಾಗ ಸಹಾಯ ಮಾಡುತ್ತಾರೆ.

ಅತ್ಯಂತ ಹಿಂದುಳಿದ ಕೂಡ್ಲಿಗಿ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೧೨.೫ ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವಂತೆ ದಲಿತ ಸಂಘರ್ಷ ಸಮಿತಿಯವರು ದಲಿತರಿಗೆ ಇತರೆ ಸಮುದಾಯದವರು ಕಿರುಕುಳ ನೀಡಿದರೆ ಸಹಾಯ ಮಾಡುತ್ತಾರೆ. ಶೇ. ೧೨.೫ ರಷ್ಟು ಅಭಿಪ್ರಾಯ ಪಡುವ ಪ್ರಕಾರ ಹೊಲ–ಗದ್ದೆಗಳ ವ್ಯಾಜ್ಯಗಳನ್ನು ಪರಿಹರಿಸುತ್ತಾರೆ. ಶೇ. ೧೨.೫ ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ಸರ್ಕಾರಿ ಇಲಾಖೆಗಳ ಮತ್ತು ಬ್ಯಾಂಕುಗಳಿಂದ ಸಾಲ ಕೊಡಿಸಲು ಸಹಾಯ ಮಾಡುತ್ತಾರೆ. ಆದರೆ ಅತಿ ಹೆಚ್ಚು ಶೇಕಡ ೬೨.೫ ರಷ್ಟು ದಲಿತ ಪ್ರತಿನಿಧಿಗಳು ಗುರುತಿಸುವ

ಪ್ರಕಾರ ಸರ್ಕಾರ ಇಲಾಖೆಗಳಲ್ಲಿ ದಲಿತರ ಕೆಲಸಗಳು ವಿಳಂಬವಾದಾಗ ಸಮಿತಿಯವರು ಸಹಾಯ ಮಾಡುತ್ತಾರೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯಲ್ಲಿ ದಲಿತ ಸಂಘರ್ಷ ಸಮಿತಿ ದಲಿತ ಸಮಾಜೋ-ಆರ್ಥಿಕ ಜೀವನವನ್ನು ಪ್ರಭಾವಿಸುತ್ತದೆ ಎಂದು ಗ್ರಹಿಸುವ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೧.೪ ರಷ್ಟು ಪ್ರತಿನಿಧಿಗಳು ಅಭಿಪ್ರಾಯದ ಪ್ರಕಾರ ದಲಿತ ಸಂಘರ್ಷ ಸಮಿತಿಯವರು ದಲಿತರಿಗೆ ಇತರೆ ಸಮುದಾಯದಿಂದ ಕಿರುಕುಳವಾದಾಗ ಸಹಾಯ ಮಾಡುತ್ತಾರೆ. ಶೇಕಡ ೨೧.೪ ರಷ್ಟು ಪ್ರತಿನಿಧಿಗಳು ಅಭಿಪ್ರಾಯ ಪಡುವ ಪ್ರಕಾರ ದಲಿತರ ಹೊಲ-ಗದ್ದೆಗಳ ವ್ಯಾಜ್ಯಗಳನ್ನು ಪರಿಹರಿಸುತ್ತಾರೆ. ಶೇಕಡ ೧೪.೩ ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ದಲಿತರಿಗೆ ಸರ್ಕಾರಿ ಇಲಾಖೆಗಳು ಮತ್ತು ಬ್ಯಾಂಕ್‌ಗಳಿಂದ ಸಾಲ ಕೊಡಿಸುತ್ತಾರೆ. ಆದರೆ ಅತೀ ಹೆಚ್ಚು ಶೇಕಡ ೪೨.೯ ರಷ್ಟು ಪ್ರತಿನಿಧಿಗಳು ಗುರುತಿಸುವ ಪ್ರಕಾರ ಸರ್ಕಾರಿ ಕಚೇರಿಗಳಲ್ಲಿ ದಲಿತರ ಕೆಲಸಗಳು ವಿಳಂಬವಾದಾಗ ಸಹಾಯ ಮಾಡುತ್ತಾರೆ. ಕ್ಷೇತ್ರ ಕಾರ್ಯಗಳ ದತ್ತಾಂಶಗಳು ಎರಡು ಆತಂಕಕಾರಿ ಚಿತ್ರಣವನ್ನು ನೀಡುತ್ತವೆ.

ಬಳ್ಳಾರಿ ಜಿಲ್ಲೆಯಲ್ಲಿ ಅತೀ ಹೆಚ್ಚು ದಲಿತರ ಪ್ರತಿನಿಧಿಗಳು ಗ್ರಹಿಸುವ ಪ್ರಕಾರ ಸರ್ಕಾರಿ ಕಚೇರಿಗಳಲ್ಲಿ ದಲಿತರ ಕೆಲಸಗಳು ವಿಳಂಬವಾದಾಗ ಸಮಿತಿಯವರ ಮಧ್ಯಸ್ಥಿಕೆಯಿಂದ ಸಮಸ್ಯೆ ಪರಿಹಾರವಾಗುತ್ತಿದೆ. ಅಂದರೆ ಇಂದಿಗೂ ದಲಿತರಿಗೂ ಸ್ವತಂತ್ರವಾಗಿ ಸರ್ಕಾರಿ ಕೆಲಸಗಳನ್ನು ಮಾಡಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವುದು ಒಂದು ಕಡೆಯಾದರೆ ದಲಿತ ಸಂಘರ್ಷ ಸಮಿತಿಯವರು ದಲಿತರಿಗೆ ಸರ್ಕಾರಿ ಕೆಲಸದ ವಿಳಂಬಗಳನ್ನು ತಪಿಸುವುದಕ್ಕೆ ಮಾತ್ರ ಸೀಮಿತಗೊಂಡಿದ್ದಾರೆ ಎನ್ನುವುದು ಮತ್ತೊಂದೆಡೆ ಕಂಡು ಬರುತ್ತದೆ.

೪.೬ ದಲಿತರು ಮತ್ತು ದಲಿತ ಸಂಘರ್ಷ ಸಮಿತಿಯ ವಿರೋಧಭಾಸಗಳು :

ಎರಡು ದಶಕಗಳ ಹಿಂದೆ ದಲಿತ ಸಂಘರ್ಷ ಸಮಿತಿಯು ಕೈಗೊಂಡ ಅಂತರ್‌ಜಾತಿ ವಿವಾಹಗಳು, ಮತಾಂತರಕ್ಕೆ ಉತ್ತೇಜನ, ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಟ, ಜಾತಿಪದ್ಧತಿಯ ವಿರೋಧಿ ಹೋರಾಟ, ಮತ್ತು ಭೂ ಹೋರಾಟಗಳು ಇಂದಿನ ತಲೆಮಾರಿನ ದಲಿತರ ಗ್ರಹಿಕೆಯ ಭಾಗವಾಗಿ ಉಳಿದಿಲ್ಲ. ಅಥವಾ ಇಂದಿನ ತಲೆಮಾರಿಗೆ ಹೋರಾಟದ ಫಲಗಳು ತಲುಪಿಲ್ಲ. ಅಧ್ಯಯನಗಳು ಹೇಳುವಂತೆ ಯಾವುದೇ ಸೈದ್ಧಾಂತಿಕ ಚಳುವಳಿ ಮತ್ತು ಆಚರಣೆಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಸಿದ್ಧಾಂತವು ಪೇಲವವಾಗಿದ್ದರೆ ಆಚರಣೆಯಲ್ಲಿ ಯಾವುದೇ ಸಾಧನೆ

ಯಾಗುವುದಿಲ್ಲ. ಆಚರಣೆ ಉಗ್ರವಾಗಿದ್ದು, ಸಿದ್ಧಾಂತವೇ ಇಲ್ಲವಾದಲ್ಲಿ ಯಾವುದೇ ಸಾಧನೆಯಾಗದೇ ಕೇವಲ ಸಾಹಸಕ್ಕೆ ಸೀಮಿತಗೊಳ್ಳುತ್ತದೆ. ದಲಿತ ಸಂಘರ್ಷ ಸಮಿತಿಯ ಸಂಕುಚಿತವಾದ ಜಾತಿವಾದವು ಅದರ ಕಾರ್ಯಕರ್ತರಿಗೆ ಮತ್ತು ನಾಯಕರಿಗೆ ರಾಜಕೀಯ ಮತ್ತು ಆರ್ಥಿಕ ನೆಲೆಯ ತಿಳುವಳಿಕೆ ನೀಡುವಲ್ಲಿ ಸಂಪೂರ್ಣ ವಿಫಲವಾಯಿತು. ಇದರ ಜೊತೆಗೆ ಸಮಿತಿಯು ತಾವು ಅನುಭವಿಸುವ ಫಲಗಳಿಗೆ ಹೋರಾಟವೇ ಮೂಲವೆಂಬ ಜ್ಞಾನ ತಿಳಿಯಪಡಿಸುವಲ್ಲಿ ವಿಫಲವಾಯಿತು. ಹಾಗಾಗಿ ನಿಧಾನವಾಗಿ ಹೋರಾಟಗಳು ಯಾಂತ್ರಿಕವಾದವು. ಕಾಲಾನುಕ್ರಮವಾಗಿ ಸಂಘಟನೆಯ ಚಟುವಟಿಕೆಗಳ ದಲಿತರಿಗೆ ಸರ್ಕಾರಿ ಸೌಲಭ್ಯಗಳನ್ನು ಕೊಡಿಸುವುದಕ್ಕೆ ಸೀಮಿತವಾದವು. ರಾಜ್ಯ ನಾಯಕರು ಬೆಂಗಳೂರು ಸೇರಿದರು. ಉಳಿದವರು ಜಿಲ್ಲಾಧಿಕಾರಿ ಕಚೇರಿ, ತಾಲ್ಲೂಕು ಕಚೇರಿ ಮತ್ತು ಆರ್.ಟಿ.ಓ, ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ಮುಂತಾದ ಸುರಕ್ಷಿತ ತಾಣಗಳನ್ನು ಆಶ್ರಯಿಸಿದರು. ಹಾಗಾಗಿ ಸಂಘಟನೆಯ ಚಟುವಟಿಕೆಗಳು ವಿಶ್ರಾಂತಿ ಪಡೆದುಕೊಂಡವು.[೧೬]

ಇತ್ತೀಚೆಗೆ ದಲಿತರಲ್ಲೇ ದಲಿತ ಸಂಘರ್ಷ ಸಮಿತಿ ಎಂದರೆ ಅಪನಂಬಿಕೆಯ ಸಂಘಟನೆಯಾಗಿ ಗೋಚರಿಸುತ್ತಿರುವಂತೆ ಕಂಡು ಬರುತ್ತಿದೆ. ಈ ಸಂಗತಿಗಳನ್ನು ಕ್ಷೇತ್ರ ಅಧ್ಯಯನ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ. ಈ ಹಿಂದೆ ಚರ್ಚಿಸಿರುವಂತೆ ಬಳ್ಳಾರಿ ಜಿಲ್ಲೆಯ ಬಹುತೇಕ ದಲಿತ ಪ್ರತಿನಿಧಿಗಳು ದಲಿತ ಸಂಘರ್ಷ ಸಮಿತಿಯ ಬಗ್ಗೆ ಸಕಾರಾತ್ಮಕ ಅಭಿಪ್ರಾಯ ಹೊಂದಿಲ್ಲ. ಅದಕ್ಕೆ ವಿವಿಧ ಕಾರಣಗಳನ್ನು ವ್ಯಕ್ತಪಡಿಸುತ್ತಾರೆ.

ಕೋಷ್ಟಕ–೪.೫.(ಬ)ರಲ್ಲಿ ಹೇಳಿರುವಂತೆ ಸಾಪೇಕ್ಷವಾಗಿ ಮುಂದುವರಿದ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭.೭ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯು ವಿವಿಧ ಬಣಗಳಾಗಿ ಹೊಡೆದು ಹಂಚಿಹೋಗಿರುವುದರಿಂದ ದಲಿತರಿಗೆ ಸಹಾಯ ಮಾಡುವುದು ಸಾಧ್ಯವಾಗುತ್ತಿಲ್ಲ. ಶೇಕಡ ೨೩ ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ದಲಿತ ಸಂಘರ್ಷ ಸಮಿತಿಯು ದಲಿತರ ಸಮಸ್ಯೆಗೆ ಸ್ಪಂದಿಸುವುದಿಲ್ಲ. ಆತಂಕಕಾರಿ ಸಂಗತಿ ಎಂದರೆ ಶೇಕಡ ೩೦.೮. ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ದಲಿತ ಸಂಘರ್ಷ ಸಮಿತಿಯ ನಾಯಕರು ಸುಳ್ಳು ಆಶ್ವಾಸನೆಗಳನ್ನು ನೀಡುತ್ತಾರೆ. ನಿರಾಶದಾಯಕ ಸಂಗತಿ ಎಂದರೆ ಶೇಕಡ ೩೦.೮ ರಷ್ಟು ಪ್ರತಿನಿಧಿಗಳ ಅಭಿಪ್ರಾಯದ ಪ್ರಕಾರ ಸಮಿತಿಯ ನಾಯಕರು ಹಣ ಪಡೆದರೂ ಸಹಾಯ ಮಾಡುವುದಿಲ್ಲ. ಶೇಕಡ

೭.೭ ರಷ್ಟು ಪ್ರತಿನಿಧಿಗಳು ಹೇಳುವಂತೆ ದಲಿತ ಸಂಘರ್ಷ ಸಮಿತಿಯವರು ಇತರೆ ಸಮುದಾಯದ ಸಮಸ್ಯೆಗಳಿಗೆ ಹೆಚ್ಚು ಸ್ಪಂದಿಸುತ್ತಾರೆ.

ಅತೀ ಹಿಂದುಳಿದ ಸಿರುಗುಪ್ಪ ತಾಲ್ಲೂಕಿನಲ್ಲಿ ಒಟ್ಟು ಸದಸ್ಯರಲ್ಲಿ ಶೇಕಡ ೧೮.೨ ರಷ್ಟು ಸದಸ್ಯರ ಅಭಿಪ್ರಾಯದ ಪ್ರಕಾರ ದಲಿತ ಸಂಘರ್ಷ ಸಮಿತಿ ಅವರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ. ಶೇ.೩೬.೪ ರಷ್ಟು ಪ್ರತಿನಿಧಿಗಳ ಅಭಿಪ್ರಾಯದಂತೆ ಸುಳ್ಳು ಆಶ್ವಾಸನೆಗಳನ್ನು ನೀಡುತ್ತಾರೆ. ಶೇ. ೨೭ರಷ್ಟು ಪ್ರತಿನಿಧಿಗಳ ಪ್ರಕಾರ ನಾಯಕರು ಹಣ ಪಡೆದರೂ ದಲಿತರಿಗೆ ಸಹಾಯ ಮಾಡುವುದಿಲ್ಲ. ಶೇಕಡ ೧೮.೨ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯ ನಾಯಕರು ಇತರೆ ಸಮುದಾಯಗಳಿಗೆ ಹೆಚ್ಚು ಸ್ಪಂದಿಸುತ್ತಾರೆ. ದತ್ತಾಂಶಗಳು ಹೇಳುವಂತೆ ಅತ್ಯಂತ ಹಿಂದುಳಿದ ಕೂಡ್ಲಿಗಿ ತಾಲ್ಲೂಕಿನ ಚಿತ್ರಣಗಳಲ್ಲಿ ಹೆಚ್ಚು ಬದಲಾವಣೆ ಇಲ್ಲ. ಈ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೧೨.೫ ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ಸಮಿತಿಯಲ್ಲಿ ವಿವಿಧ ಬಣಗಳಿರುವುದರಿಂದ ದಲಿತರ ಸಮಸ್ಯೆಗೆ ಸ್ಪಂದಿಸುವುದು ಸಾಧ್ಯವಾಗುತ್ತಿಲ್ಲ. ಶೇಕಡ ೨೫ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯು ದಲಿತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ವಿಷಾದದ ಸಂಗತಿ ಎಂದರೆ ಶೇಕಡ ೩೭.೫ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯ ನಾಯಕರು ಸುಳ್ಳು ಆಶ್ವಾಸನೆಗಳನ್ನು ನೀಡುತ್ತಾರೆ. ಶೇಕಡ ೧೨.೫ ರಷ್ಟು ಪ್ರತಿನಿಧಿಗಳ ಪ್ರಕಾರ ಕೆಲವು ನಾಯಕರು ಹಣ ಪಡೆದುಕೊಂಡರು ಸಹಾಯ ಮಾಡುವುದಿಲ್ಲ. ಉಳಿದ ಶೇ.೧೨.೫ ರಷ್ಟು ಸದಸ್ಯರ ಅಭಿಪ್ರಾಯದ ಪ್ರಕಾರ ಸಮಿತಿಯ ನಾಯಕರು ಇತರೆ ಸಮುದಾಯಗಳ ಸಮಸ್ಯೆಗಳಿಗೆ ಹೆಚ್ಚಾಗಿ ಸ್ಪಂದಿಸುತ್ತಾರೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಸಮುದಾಯದ ಪ್ರತಿನಿಧಿಗಳಲ್ಲಿ ಶೇಕಡ ೭.೫. ರಷ್ಟು ಸಮಿತಿಯಲ್ಲಿ ಬಣಗಳಾಗಿರುವುದರಿಂದ ಸ್ಪಂದನೆ ಸಾಧ್ಯವಾಗುತ್ತಿಲ್ಲ. ಶೇಕಡ ೨೨.೫ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯು ದಲಿತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಶೇಕಡ ೪೦ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯ ನಾಯಕರು ಸುಳ್ಳು ಆಶ್ವಾಸನೆಗಳನ್ನು ನೀಡುತ್ತಿದ್ದಾರೆ. ಶೇಕಡ ೨೨.೫ ರಷ್ಟು ಪ್ರತಿನಿಧಿಗಳ ಪ್ರಕಾರ ದಲಿತರಿಗೆ ಸಹಾಯ ಮಾಡಲು ದಲಿತರಿಂದ ಹಣ ಪಡೆದು ವಂಚಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಉಳಿದಂತೆ ಶೇಕಡ ೭.೫ ರಷ್ಟು ಪ್ರತಿನಿಧಿಗಳ ಪ್ರಕಾರ ಸಮಿತಿಯ ನಾಯಕರು ದಲಿತರಿಗಿಂತ ಇತರೆ ಸಮುದಾಯದ ನಾಯಕರಿಗೆ ಹೆಚ್ಚು ಸ್ಪಂದಿಸುತ್ತಿದ್ದಾರೆ.

ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ದಲಿತ ಸಂಘರ್ಷ ಸಮಿತಿಯ ನಾಯಕರು ದಲಿತ ಸಮುದಾಯಕ್ಕೆ ಸುಳ್ಳು ಆಶ್ವಾಸನೆ ನೀಡುತ್ತಿದ್ದಾರೆ. ಅವರಿಗೆ ನೀಡುವ ಸಹಾಯಕ್ಕೆ ಬದಲಾಗಿ ಹಣ

ಪಡೆಯುತ್ತಿದ್ದಾರೆ. ಕೆಲವರು ಹಣ ಹಿಂತಿರುಗಿಸದೆ ವಂಚಿಸುತ್ತಿದ್ದಾರೆ. ಮತ್ತು ಸಮಿತಿಯ ಕೆಲ ನಾಯಕರು ಸಮುದಾಯಕ್ಕಿಂತ ತಮ್ಮ ಲಾಭದ ಹಿತದೃಷ್ಟಿಯಿಂದ ಇತರೆ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ಹಾಗಾಗಿ ದಲಿತ ಸಂಘರ್ಷ ಸಮಿತಿಯು ದಲಿತರ ಅಸ್ಮಿತೆ ಎನ್ನುವ ಅಂಶ ಮಸುಕಾಗಿದೆ.

೪.೭ ಅಸ್ಪೃಶ್ಯತೆ ಆಚರಣೆ ಬಗ್ಗೆ ದಲಿತ ಪ್ರತಿನಿಧಿಗಳ ಗ್ರಹಿಕೆಗಳು :

ಭಾರತೀಯ ಸಮಾಜ ವರ್ಣವ್ಯವಸ್ಥೆಯ ಮೇಲೆ ಹುಟ್ಟಿ ಬೆಳೆದಿದ್ದು, ೨೧ನೇ ಶತಮಾನದ ಕಾಲಘಟ್ಟದಲ್ಲಿ ಅಸ್ಪೃಶ್ಯತೆ ಇಂದಿಗೂ ಜೀವಂತವಾಗಿದೆ. ಜನಪ್ರತಿನಿಧಿಗಳು ಮತ್ತು ಅಧಿಕಾರಶಾಹಿಗಳಿಗೂ ಅಸ್ಪೃಶ್ಯತೆ ಕಾಡುತ್ತಲೆ ಇದೆ. ಅಸ್ಪೃಶ್ಯತೆ ಇಂದಿಗೂ ಜೀವಂತವಿದೆಯೇ ಎನ್ನುವ ಪ್ರಶ್ನೆಗೆ ಪ್ರತಿನಿಧಿಗಳು ಅತ್ಯಂತ ಆಸಕ್ತಿಕರ ರೀತಿಯಲ್ಲಿ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಕೋಷ್ಟಕ–೪.೬ ರಲ್ಲಿ ಕಂಡು ಬರುವಂತೆ – ಬಳ್ಳಾರಿ ತಾಲ್ಲೂಕಿನ ಪುರುಷ ಪ್ರತಿನಿಧಿಗಳು ಶೇ.೫೫.೬ರಷ್ಟು ಪ್ರತಿನಿಧಿಗಳು ಮತ್ತು ಶೇ.೨೮.೬ ರಷ್ಟು ಮಹಿಳಾ ಪ್ರತಿನಿಧಿಗಳು ಅಸ್ಪೃಶ್ಯತೆ ಆಚರಣೆ ಜೀವಂತವಿದೆ ಎನ್ನುವುದನ್ನು ಸ್ಪಷ್ಟವಾಗಿ ಗ್ರಹಿಸುತ್ತಾರೆ. ಅದೇ ಪ್ರಕಾರ ಸಿರುಗುಪ್ಪ ತಾಲ್ಲೂಕಿನ ಶೇಕಡ ೫೮.೩ ರಷ್ಟು ದಲಿತ ಪುರುಷ ಪ್ರತಿನಿಧಿಗಳು ಶೇ. ೪೨.೮ರಷ್ಟು ದಲಿತ ಮಹಿಳಾ ಪ್ರತಿನಿಧಿಗಳು ಅಸ್ಪೃಶ್ಯತೆ ಆಚರಣೆಯ ಜೀವಂತಿಕೆಯನ್ನು ಗುರುತಿಸುತ್ತಾರೆ. ಕೂಡ್ಲಿಗಿ ತಾಲ್ಲೂಕಿನ ಶೇಕಡ ೬೪.೭ರಷ್ಟು ಮತ್ತು ಶೇಕಡ ೪೫ರಷ್ಟು ಮಹಿಳಾ ಪ್ರತಿನಿಧಿಗಳು ಅಸ್ಪೃಶ್ಯತೆ ಆಚರಣೆಯಲ್ಲಿರುವುದನ್ನು ಗುರುತಿಸುತ್ತಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪುರುಷ ಪ್ರತಿನಿಧಿಗಳಲ್ಲಿ ಶೇಕಡ ೫೯.೬ಷ್ಟು ದಲಿತ ಪುರುಷ ಪ್ರತಿನಿಧಿಗಳು ಮತ್ತು ಶೇ. ೩೮.೨ ರಷ್ಟು ದಲಿತ ಮಹಿಳಾ ಪ್ರತಿನಿಧಿಗಳು ಇಂದಿಗೂ ಅಸ್ಪೃಶ್ಯತೆ ಆಚರಣೆ ಜಾರಿಯಲ್ಲಿರುವುದನ್ನು ಒಪ್ಪುತ್ತಾರೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಶೇ. ೪೮ರಷ್ಟು ಜನಪ್ರತಿನಿಧಿಗಳು ಅಸ್ಪೃಶ್ಯತಾ ಆಚರಣೆ ಜಾರಿಯಲ್ಲಿರುವುದನ್ನು ಒಪ್ಪುತ್ತಾರೆ ಎನ್ನುವುದು ಇಂದಿಗೂ ದಲಿತ ಸಮುದಾಯದಲ್ಲಿ ಸಮಾಜ ನಡೆಸಿಕೊಳ್ಳುತ್ತಿರುವ ರೀತಿಗೆ ಹಿಡಿದ ಕನ್ನಡಿಯಾಗಿದೆ. ಹಾಗಾದರೆ ಅಸ್ಪೃಶ್ಯತೆಯನ್ನು ಎಲ್ಲೆಲ್ಲಿ ಆಚರಿಸಲಾಗುತ್ತಿದೆ ಎಂಬುದು ಪ್ರಮುಖವಾದ ಸಂಗತಿ. ಇದರ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಪಡೆದುಕೊಂಡು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೪.೮ ಅಸ್ಪೃಶ್ಯತಾ ಆಚರಣೆ ಸ್ಥಳಗಳ ಬಗ್ಗೆ ದಲಿತ ಪ್ರತಿನಿಧಿಗಳ ನಿಲುವುಗಳು:

ಕೋಷ್ಟಕ ೪.೭ ರಲ್ಲಿ ಕಂಡು ಬರುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ.೬೮.೮ರಷ್ಟು ಪ್ರತಿನಿಧಿಗಳ ಪ್ರಕಾರ ಅಸ್ಪೃಶ್ಯತೆಯನ್ನು ಹೆಚ್ಚಾಗಿ ದೇವಸ್ಥಾನಗಳಲ್ಲಿ ಆಚರಿಸಲಾಗುತ್ತಿದೆ. ಶೇಕಡ ೧೨.೫ ರಷ್ಟು ಪ್ರತಿನಿಧಿಗಳ ಪ್ರಕಾರ ಅಸ್ಪೃಶ್ಯತೆ ಆಚರಣೆಯು ಹೋಟೆಲ್‌ಗಳಲ್ಲಿ ಕಂಡು ಬರುತ್ತದೆ. ಅತ್ಯಂತ ಖೇದಕರ ಸಂಗತಿ ಎಂದರೆ ಶೇಕಡ ೧೨.೫ರಷ್ಟು ದಲಿತ ಪ್ರತಿನಿಧಿಗಳು ಪ್ರಕಾರ ಪಂಚಾಯತ್‌ಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತದೆ.

ಇದೇ ಚಿತ್ರಣ ಸಿರುಗುಪ್ಪ ತಾಲ್ಲೂಕಿನಲ್ಲಿಯೂ ಮುಂದುವರೆದಿದೆ. ಈ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭೭ ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ದೇವಸ್ಥಾನಗಳಲ್ಲಿ ಅಸ್ಪೃಶ್ಯತೆಯನ್ನು ಹೆಚ್ಚಾಗಿ ಆಚರಿಸಲಾಗುತ್ತಿದೆ. ಶೇ.೧೫.೪ರಷ್ಟು ಪ್ರತಿನಿಧಿಗಳ ಪ್ರಕಾರ ಹೋಟೆಲ್‌ಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಅದೇ ಪ್ರಕಾರ ಶೇಕಡ ೭.೬ ರಷ್ಟು ಪ್ರತಿನಿಧಿಗಳ ಪ್ರಕಾರ ಪಂಚಾಯತ್‌ಗಳಲ್ಲೂ ಕೂಡ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಈ ಚಿತ್ರಣ ಕೂಡ್ಲಿಗಿ ತಾಲ್ಲೂಕಿನಲ್ಲಿಯೂ ಭಿನ್ನವಾಗಿಲ್ಲ. ಈ ತಾಲ್ಲೂಕಿನ ಶೇ.೭೦ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ಅಸ್ಪೃಶ್ಯತೆಯನ್ನು ದೇವಸ್ಥಾನದಲ್ಲಿ ಆಚರಿಸಲಾಗುತ್ತಿದೆ. ಶೇಕಡ ೨೦ರಷ್ಟು ಪ್ರತಿನಿಧಿಗಳ ಪ್ರಕಾರ ಸಾರ್ವಜನಿಕ ಹೋಟೆಲ್ ಅಸ್ಪೃಶ್ಯತೆಯ ಆಚರಣೆಯ ಎರಡನೆಯ ಸ್ಥಾನವಾಗಿದೆ.

ಶೇಕಡ ೧೦.೭ ರಷ್ಟು ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ ಪಂಚಾಯತ್‌ಗಳಲ್ಲಿ ಅಸ್ಪೃಶ್ಯತೆ ಆಚರಿಸಲಾಗುತ್ತಿದೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೭೧.೪ ರಷ್ಟು ಪ್ರತಿನಿಧಿಗಳ ಪ್ರಕಾರ ದೇವಸ್ಥಾನಗಳಲ್ಲಿ, ಶೇಕಡ ೧೬.೩ ರಷ್ಟು ಪ್ರತಿನಿಧಿಗಳ ಪ್ರಕಾರ ಹೋಟೆಲ್‌ಗಳಲ್ಲಿ ಹಾಗೂ ಶೇಕಡ ೧೦.೩ರಷ್ಟು ಪ್ರತಿನಿಧಿಗಳ ಪ್ರಕಾರ ಪಂಚಾಯತ್‌ಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಸಂವಿಧಾನಬದ್ಧವಾಗಿ ಮತ್ತು ಕಾನೂನುಬದ್ಧವಾಗಿ ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳಿಗೂ ಅಸ್ಪೃಶ್ಯತೆ ದೂರವಾಗಿಲ್ಲ ಎನ್ನುವುದು ಪಂಚಾಯತ್ ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ.

೪.೯ ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳ ಬಗ್ಗೆ ದಲಿತ ಪ್ರತಿನಿಧಿಗಳ ನಿಲುವುಗಳು:

ಭಾರತದ ರಾಜಕೀಯ ವ್ಯವಸ್ಥೆ ಬಹು ಪಕ್ಷ ಪದ್ಧತಿಯನ್ನು ಅಂಗೀಕರಿಸಿದೆ. ಚುನಾವಣೆಯಲ್ಲಿ ವಿವಿಧ ಪಕ್ಷಗಳು ಅಧಿಕಾರಕ್ಕಾಗಿ ಚುನಾವಣೆಗೆ ಸ್ಪರ್ಧಿಸುತ್ತವೆ. ವಿವಿಧ ಸಮುದಾಯಗಳ ಅಭಿವೃದ್ಧಿಗಾಗಿ ಪ್ರಣಾಳಿಕೆಗಳನ್ನು ರೂಪಿಸುತ್ತವೆ. ಇದರಲ್ಲಿ ದಲಿತರ ಅಭಿವೃದ್ಧಿಯೂ ಒಂದು. ದಲಿತ

ಪ್ರತಿನಿಧಿಗಳು ಯಾವ ಪಕ್ಷಗಳನ್ನು ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ ಎಂಬುದನ್ನು ಹೇಗೆ ಗ್ರಹಿಸುತ್ತಾನೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೮ರಲ್ಲಿ ಕಂಡು ಬರುವಂತೆ ಬಳ್ಳಾರಿ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೬೬.೭ ರಷ್ಟು ಪ್ರತಿನಿಧಿಗಳು ಕಾಂಗ್ರೆಸ್ ಪಕ್ಷವನ್ನು ಶೇಕಡ ೨೫.೬ ರಷ್ಟು ಬಿ.ಜೆ.ಪಿ. ಪಕ್ಷವನ್ನು ಮತ್ತು ೫.೧ ರಷ್ಟು ಪ್ರತಿನಿಧಿಗಳು ಜನತಾದಳ ಪಕ್ಷವನ್ನು ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳೆಂದು ಗುರುತಿಸುತ್ತಾರೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೬೧.೫ ರಷ್ಟು ಪ್ರತಿನಿಧಿಗಳು ಕಾಂಗ್ರೆಸ್ ಪಕ್ಷವನ್ನು, ಶೇಕಡ ೧೫.೪ ರಷ್ಟು ಪ್ರತಿನಿಧಿಗಳು ಬಿ.ಜೆ.ಪಿ. ಪಕ್ಷವನ್ನು ಮತ್ತು ೧೫.೪ ರಷ್ಟು ಜನತಾದಳ ಪಕ್ಷವನ್ನು ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳೆಂದು ಗುರುತಿಸುತ್ತಾರೆ. ಈ ಚಿತ್ರಣ ಕೂಡ್ಲಿಗಿ ತಾಲ್ಲೂಕಿನಲ್ಲಿಯೂ ಮುಂದುವರೆದಿದ್ದು, ಶೇಕಡ ೬೨.೨ ರಷ್ಟು ದಲಿತ ಪ್ರತಿನಿಧಿಗಳು ಕಾಂಗ್ರೆಸ್ ಪಕ್ಷವನ್ನು ಶೇಕಡ ೨೧.೬ ರಷ್ಟು ಪ್ರತಿನಿಧಿಗಳು ಬಿ.ಜೆ.ಪಿ. ಪಕ್ಷವನ್ನು ಮತ್ತು ೧೩.೪ ರಷ್ಟು ಪ್ರತಿನಿಧಿಗಳು ಜನತಾ ದಳ ಪಕ್ಷವನ್ನು ದಲಿತರ ಅಭಿವೃದ್ಧಿಗೆ ಶ್ರಮಿಸುವ ಪಕ್ಷಗಳೆಂದು ಗುರುತಿಸುತ್ತಾರೆ.

ಒಟ್ಟಾರೆ ದತ್ತಾಂಶಗಳು ಹೇಳುವ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೬೩.೭ ರಷ್ಟು ದಲಿತ ಪ್ರತಿನಿಧಿಗಳು ಕಾಂಗ್ರೆಸ್ ಪಕ್ಷವನ್ನು, ಶೇಕಡ ೨೧.೬ ರಷ್ಟು ಬಿ.ಜೆ.ಪಿ ಪಕ್ಷವನ್ನು ಮತ್ತು ೧೦.೮ ರಷ್ಟು ಪ್ರತಿನಿಧಿಗಳು ಜನತಾದಳ ಪಕ್ಷವನ್ನು ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳೆಂದು ಗ್ರಹಿಸುತ್ತಾರೆ. ದತ್ತಾಂಶಗಳು ಹೇಳುವ ಪ್ರಕಾರ ದಲಿತ ಮುಖ್ಯಮಂತ್ರಿ ಹೊಂದಿರುವ ಬಿ.ಎಸ್.ಪಿ ಪಕ್ಷ ಮತ್ತು ಇತರೆ ಪಕ್ಷಗಳಾದ ಆರ್.ಪಿ.ಐ, ದಲಿತ ಪ್ಯಾಂಥರ್ಸ್, ಲೋಕಶಕ್ತಿ, ಮುಂತಾದ ಪಕ್ಷಗಳನ್ನು ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳೆಂದು ಗುರುತಿಸುವವರ ಪ್ರಮಾಣ ಅತ್ಯಂತ ಕಡಿಮೆಯಾಗಿದೆ.

೪.೧೦ ದಲಿತ ಪ್ರತಿನಿಧಿಗಳಲ್ಲಿ ಸಮುದಾಯದ ವಿಮೋಚನೆಗಾಗಿ ಹೋರಾಡಿದವರ ಗ್ರಹಿಕೆ:

ಭಾರತೀಯ ಸಮಾಜದಲ್ಲಿ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ದಲಿತರ ವಿಮೋಚನೆಗಾಗಿ ಹೋರಾಡಿದವರ ದೊಡ್ಡ ಪರಂಪರೆ ನಮ್ಮ ದೇಶಕ್ಕಿದೆ. ಈ ಪಟ್ಟಿಯಲ್ಲಿ ಜ್ಯೋತಿಬಾಫುಲೆ, ಸಾವಿತ್ರಿಫುಲೆ, ಡಾ.ಬಿ.ಆರ್.ಅಂಬೇಡ್ಕರ್, ಸಾಹುಮಹಾರಾಜ್ ಮತ್ತು ಡಾ.ಬಾಬುಜಗಜೀವನರಾಂ ಮುಂತಾದವರ ಹೆಸರು ಮುಂಚೂಣಿಗೆ ಬರುತ್ತವೆ. ದಲಿತ ಪ್ರತಿನಿಧಿಗಳು ಈ ಹೋರಾಟಗಾರರನ್ನು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ

ಕಂಡುಕೊಳ್ಳಲಾಗಿದ್ದು, ಅದರ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ. ಕೋಷ್ಟಕ ೪.೯ರಲ್ಲಿ ಕಂಡು ಬರುವಂತೆ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೧೨.೮ ರಷ್ಟು ದಲಿತ ಪ್ರತಿನಿಧಿಗಳು ಮಾತ್ರ ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರ ಹೆಸರುಗಳನ್ನು ಉಲ್ಲೇಖಿಸುತ್ತಾರೆ. ಅವರಲ್ಲಿ ಶೇಕಡ ೨೭.೮ ರಷ್ಟು ದಲಿತ ಪುರುಷ ಪ್ರತಿನಿಧಿಗಳು ಮೂರಕ್ಕಿಂತ ದಲಿತ ವಿಮೋಚನಾಗಾರರ ಹೆಸರನ್ನು ಮಾತ್ರ ಉಲ್ಲೇಖಿಸುತ್ತಾರೆ. ಆದರೆ ಯಾವ ಮಹಿಳಾ ಪ್ರತಿನಿಧಿಗಳು ಮೂರಕ್ಕಿಂತ ಹೆಚ್ಚು ವಿಮೋಚನಾಗಾರರ ಹೆಸರನ್ನು ಗುರುತಿಸುವಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಶೂನ್ಯವಾಗಿದೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೯.೨ ರಷ್ಟು ಪ್ರತಿನಿಧಿಗಳು ಮಾತ್ರ ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರ ಹೆಸರನ್ನು ಗುರುತಿಸುತ್ತಾರೆ. ಇವರಲ್ಲಿ ಶೇಕಡ ೪೧.೭ ರಷ್ಟು ಪುರುಷ ಪ್ರತಿನಿಧಿಗಳು ಮಾತ್ರ ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರ ಹೆಸರು ಗುರುತಿಸುತ್ತಾರೆ. ಆದರೆ ಇಲ್ಲಿಯೂ ಕೂಡ ಯಾವ ಮಹಿಳೆಯು ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರ ಹೆಸರನ್ನು ಗುರುತಿಸುವುದಿಲ್ಲ. ಈ ಸಂಗತಿಗಳನ್ನು ಕೂಡ್ಲಿಗಿ ತಾಲ್ಲೂಕಿನಲ್ಲಿಯೂ ಭಿನ್ನವಾಗಿ ನೋಡಲಾಗುವುದಿಲ್ಲ. ಈ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೬.೨ ರಷ್ಟು ದಲಿತ ಪ್ರತಿನಿಧಿಗಳು ಮಾತ್ರ ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರನ್ನು ಗುರುತಿಸುತ್ತಾರೆ. ಅದರಲ್ಲಿ ಶೇಕಡ ೩೫.೩ ರಷ್ಟು ದಲಿತ ಪುರುಷರಿದ್ದರೆ ಯಾವ ಮಹಿಳೆಯರು ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರನ್ನು ಗುರುತಿಸುವುದಿಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೬.೬ ರಷ್ಟು ಪ್ರತಿನಿಧಿಗಳು ಮಾತ್ರ ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರ ಹೆಸರುಗಳನ್ನು ಗುರುತಿಸುತ್ತಾರೆ. ಅತ್ಯಂತ ಖೇದಕರ ಸಂಗತಿ ಎಂದರೆ ಬಳ್ಳಾರಿ ಜಿಲ್ಲೆಯ ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಮೂರಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರ ಹೆಸರನ್ನು ಗುರುತಿಸಲು ಮಹಿಳಾ ಪ್ರತಿನಿಧಿಗಳ ಸಂಖ್ಯೆ ಶೂನ್ಯವಾಗಿದೆ.

೪.೧೧. ೭೩ನೇ ಭಾರತದ ಸಂವಿಧಾನದ ತಿದ್ದುಪಡಿಯ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು:

ಸಂವಿಧಾನದ ೭೩ನೇ ತಿದ್ದುಪಡಿಯ ನಂತರ ಭಾರತದ ರಾಜಕೀಯ ವ್ಯವಸ್ಥೆಯು ಮೂರು ಹಂತಗಳ ಫೆಡರಲ್ ವ್ಯವಸ್ಥೆಯಾಗಿ ರೂಪುಗೊಂಡಿದೆ. ಈ ತಿದ್ದುಪಡಿಯು ಪ್ರಮುಖ ಉದ್ದೇಶ ಗ್ರಾಮೀಣ ಭಾಗದ ಹೆಚ್ಚಿನ ಜನರು, ಗ್ರಾಮ ಸ್ವರಾಜ್ಯ, ಸ್ಥಳೀಯ ಸ್ವಯಂ ಆಡಳಿತ ಘಟಕಗಳಲ್ಲಿ ಭಾಗವಹಿಸುವಂತೆ ಮಾಡಲು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಚುನಾಯಿತ ನಿಕಾಯಗಳೊಂದಿಗೆ ಮೂರು ಹಂತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸ್ಥಾಪಿಸುವ ಪ್ರಮುಖ

ಉದ್ದೇಶವನ್ನು ಹೊಂದಿದೆ. ಇದರೊಂದಿಗೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು. ಗ್ರಾಮೀಣ ಕರ್ನಾಟಕದಲ್ಲಿ ವ್ಯಾಜ್ಯಮುಕ್ತ, ಶೋಷಣೆ ಮುಕ್ತ, ಭಯಮುಕ್ತ ಹಾಗೂ ಸಮಾನತಾವಾದಿ ರಾಜ್ಯವನ್ನಾಗಿ ರೂಪಿಸುವ ಗುರಿಯನ್ನು ಈ ತಿದ್ದುಪಡಿ ಹೊಂದಿದೆ. ಇದರೊಂದಿಗೆ ಮಹಿಳಾ ಸಬಲೀಕರಣ, ಆರ್ಥಿಕ ಅಭ್ಯುದಯ, ಸಾಮಾಜಿಕ ಸಮಾನತೆ ಸಾಧಿಸುವುದು ಗ್ರಾಮೀಣ ಜನರ ಬದುಕಿನಲ್ಲಿ ಪರ್ಯಾಯ ಆದಾಯ ಮೂಲಗಳನ್ನು ಕಲ್ಪಿಸುವುದು, ಹಾಗೂ ನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಜನರು ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮಾಡುವ ಗುರಿ ಹೊಂದಲಾಗಿದೆ. ಇಂತಹ ಧ್ಯೇಯೋದ್ದೇಶ ಹೊಂದಿರುವ ಸಂವಿಧಾನ ತಿದ್ದುಪಡಿಯ ಬಗ್ಗೆ ದಲಿತ ಪ್ರತಿನಿಧಿಗಳು ಎಷ್ಟರ ಮಟ್ಟಿನ ಅರಿವು ಹೊಂದಿದ್ದಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೧೦ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಸಂವಿಧಾನ ತಿದ್ದುಪಡಿಯು ಧ್ಯೇಯದ್ದೇಶಗಳ ಬಗ್ಗೆ ಸ್ಪಷ್ಟ ಅರಿವು ಇದೆ. ಅವರಲ್ಲಿ ೫.೫. ರಷ್ಟು ಪುರುಷರು ಮತ್ತು ೪.೮ ರಷ್ಟು ಮಹಿಳೆಯರು ಕಂಡು ಬರುತ್ತಾರೆ. ಆದರೆ ಶೇಕಡ ೭೯.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಸಂವಿಧಾನ ತಿದ್ದುಪಡಿಯ ಆಶಯಗಳ ಅರಿವು ಇಲ್ಲ. ಅದರಲ್ಲಿ ಶೇಕಡ ೭೨.೩ ರಷ್ಟು ಪುರುಷ ಪ್ರತಿನಿಧಿಗಳು ಹಾಗೂ ಶೇಕಡ ೮೫.೭ ರಷ್ಟು ಮಹಿಳೆಯರಿಗೆ ಸಂವಿಧಾನದ ತಿದ್ದಪಡಿಯ ಅರಿವು ಇಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೫.೪ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಸಂವಿಧಾನ ತಿದ್ದುಪಡಿಯ ಅರಿವು ಇದೆ. ಅವರಲ್ಲಿ ಶೇಕಡ. ೨.೫ ರಷ್ಟು ಪುರುಷ ಪ್ರತಿನಿಧಿಗಳು ಮತ್ತು ಶೇಕಡ. ೭೨. ರಷ್ಟು ಮಹಿಳಾ ಪ್ರತಿನಿಧಿಗಳಿದ್ದಾರೆ. ಆದರೆ ಈ ತಾಲ್ಲೂಕಿನ ಶೇಕಡ ೫೩.೮ ರಷ್ಟು ದಲಿತ ಪ್ರತಿನಿಧಿಗಳಿಗೆ ಸಂವಿಧಾನ ತಿದ್ದುಪಡಿಯ ಆಶಯಗಳ ಅರಿವು ಇಲ್ಲ. ಅವರಲ್ಲಿ ಶೇ. ೩೩.೩ ರಷ್ಟು ಪುರುಷ ಪ್ರತಿನಿಧಿಗಳು ಮತ್ತು ಶೇಕಡ. ೭೧.೪ ರಷ್ಟು ಮಹಿಳಾ ಪ್ರತಿನಿಧಿಗಳು ಒಳಗೊಂಡಿದ್ದಾರೆ.

ಈ ಚಿತ್ರಣ ಕೂಡ್ಲಿಗಿ ತಾಲ್ಲೂಕಿನ ಪ್ರತಿನಿಧಿಗಳಲ್ಲಿ ಮುಂದುವರೆದಿದೆ. ಈ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇ. ೧೦.೮ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಸಂವಿಧಾನ ತಿದ್ದುಪಡಿಯ ಆಶಯಗಳ ಅರಿವು ಇದೆ. ಅದರಲ್ಲಿ ಶೇ. ೧೭.೬ ರಷ್ಟು ಪುರುಷ ಪ್ರತಿನಿಧಿಗಳು ಮತ್ತು ಕೇವಲ ಶೇಕಡ ೫ ರಷ್ಟು ಮಹಿಳಾ ಪ್ರತಿನಿಧಿಗಳು ಒಳಗೊಂಡಿದ್ದಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಕೇವಲ ಶೇಕಡ ೯.೮ ರಷ್ಟು ಪ್ರತಿನಿಧಿಗಳಿಗೆ ಮಾತ್ರ ತಿದ್ದುಪಡಿಯ ಆಶಯಗಳ ಅರಿವು ಇದ್ದು ಶೇ. ೬೮.೬

ರಷ್ಟು ಪ್ರತಿನಿಧಿಗಳಿಗೆ ಸಂವಿಧಾನ ತಿದ್ದುಪಡಿಯ ಆಶಯಗಳ ಅರಿವು ಇಲ್ಲ. ಇದರ ಜೊತೆಗೆ ಪುರುಷ ಪ್ರತಿನಿಧಿಗಳೊಂದಿಗೆ ಹೋಲಿಸಿದರೆ ಮಹಿಳಾ ಪ್ರತಿನಿಧಿಗಳ ಅರಿವಿನ ಮಟ್ಟ ಅತ್ಯಂತ ಕನಿಷ್ಠ ಪ್ರಮಾಣದಲ್ಲಿದೆ.

೪.೧೨ ಗ್ರಾಮ ಸ್ವರಾಜ್ಯದ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು:

ಜನವಸತಿ ಸಭೆ, ವಾರ್ಡ್ ಸಭೆ, ಮತ್ತು ಗ್ರಾಮಸಭೆಗಳನ್ನು ಅಭಿವೃದ್ಧಿ ಚಿಂತನ, ಮಂಥನ, ವೇದಿಕೆಗಳಂತೆ, ಬಳಕೆ ಮಾಡಿಕೊಂಡು ನೇರವಾಗಿ ಪಾಲ್ಗೊಳ್ಳುವಂತೆ ಮಾಡಿ ಜನರ ಧ್ವನಿ ನೀತಿ ರಚನೆ ಕಾರ್ಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುಗಳಾಗಿರುವ ಜನರು ಆಡಳಿತದಲ್ಲಿ ಪ್ರತಿನಿಧಿಸುವಂತೆ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಆ ಮೂಲಕ ಮಹಾತ್ಮಾ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯವನ್ನು ಮಾಡುವುದು. ೧೯೯೩ ರ ಅಧಿನಿಯಮದ ಧ್ಯೇಯವಾಗಿದೆ.[೧೭]

೧೯೯೩ರ ಅಧಿನಿಯಮದ ಪ್ರಕಾರ ಜನವಸತಿ ಸಭೆ, ವಾರ್ಡ್ ಸಭೆ, ಮತ್ತು ಗ್ರಾಮಸಭೆಗಳು ಗ್ರಾಮ ಪಂಚಾಯಿತಿಯ ಘಟಕಗಳಾಗಿರತಕ್ಕದಲ್ಲ.[೧೮] ಈ ಘಟಕಗಳು ಗ್ರಾಮೀಣ ಜನರನ್ನು ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಸ್ಥಳೀಯ ಆಧ್ಯತೆಯನ್ನು ಆಧಾರಿಸಿ ಯೋಜನೆ ರೂಪಿಸುವ ನಿಟ್ಟಿನಲ್ಲಿ ಪ್ರಮುಖ ಮಾಧ್ಯಮಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ಗ್ರಾಮ ಸ್ವರಾಜ್ಯದ ಘಟಕಗಳ ಬಗ್ಗೆ ದಲಿತ ಪ್ರತಿನಿಧಿಗಳ ಅರಿವಿನ ಮಟ್ಟವನ್ನು ಕ್ಷೇತ್ರದ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಠಕ ೪.೧೧ರ ದತ್ತಾಂಶಗಳು ಹೇಳುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೧೫.೪ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಗ್ರಾಮಸ್ವರಾಜ್ಯ ಘಟಕಗಳ ಅರಿವು ಇದೆ. ಆದರೆ ಶೇಕಡ ೮೪.೬ ರಷ್ಟು ಪ್ರತಿನಿಧಿಗಳಿಗೆ ಗ್ರಾಮಸ್ವರಾಜ್ಯ ಘಟಕಗಳ ಅರಿವು ಇಲ್ಲ. ಪುರುಷ ಪ್ರತಿನಿಧಿಗಳಿಗೆ ಹೋಲಿಸಿದರೆ ಮಹಿಳಾ ಪ್ರತಿನಿಧಿಗಳ ಅರಿವಿನ ಮಟ್ಟ ಅತ್ಯಂತ ಕನಿಷ್ಠ ಮಟ್ಟದಲ್ಲಿದೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭.೭ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಸ್ವರಾಜ್ಯದ ಘಟಕಗಳ ಅರಿವು ಇದ್ದು, ಬಹುಸಂಖ್ಯಾತ ಅಂದರೆ ೯೨.೩ ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮ ಸ್ವರಾಜ್ಯದ ಘಟಕಗಳ ಅರಿವು ಇಲ್ಲ. ಈ ಚಿತ್ರಣ ಕೂಡ್ಲಿಗಿ ತಾಲ್ಲೂಕಿನಲ್ಲೂ ಮುಂದುವರೆದಿದೆ. ಈ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳ ಶೇಕಡ ೧೦.೮ರಷ್ಟು ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಸ್ವರಾಜ್ಯ ಘಟಕಗಳ ಅರಿವು ಇದ್ದು ಉಳಿದ ಶೇಕಡ ೮೯.೨ ರಷ್ಟು ಪ್ರತಿನಿಧಿಗಳಿಗೆ ಗ್ರಾಮಸ್ವರಾಜ್ಯ ಘಟಕಗಳ ಅರಿವು ಇಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೧.೮ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಸ್ವರಾಜ್ಯ ಘಟಕಗಳ ಬಗ್ಗೆ ಅರಿವು ಇದೆ. ಆದರೆ

ಬಹುಸಂಖ್ಯಾತ ಅಂದರೆ ಶೇಕಡ ೮೮.೨ ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮಸ್ವರಾಜ್ಯ ಘಟಕಗಳ ಅರಿವು ಇಲ್ಲ. ಒಟ್ಟಾರೆ ದಲಿತ ಪುರುಷ ಪ್ರತಿನಿಧಿಗಳಿಗೆ ಹೋಲಿಸಿದರೆ ದಲಿತ ಮಹಿಳಾ ಪ್ರತಿನಿಧಿಗಳ ಅರಿವಿನ ಮಟ್ಟ ಕನಿಷ್ಠ ಪ್ರಮಾಣದಲ್ಲಿದೆ.

೪.೧೩. ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು:

೧೯೯೩ರ ಅಧಿನಿಯಮದ ಪ್ರಕಾರ ವಾರ್ಡ್ ಸಭೆಯು ಕನಿಷ್ಠ ಪಕ್ಷ ೬ ತಿಂಗಳಿಗೊಮ್ಮೆ ಸೇರತಕ್ಕದ್ದು. ವಾರ್ಡ್ ಸಭೆಗೆ ಸೇರುವ ಒಟ್ಟು ಮತದಾರರಲ್ಲಿ ಶೇಕಡ ೩೦ರಷ್ಟು ಮಹಿಳೆಯರು ಇರತಕ್ಕದ್ದು, ಈ ವಾರ್ಡ್ ಸಭೆಯು ಯೋಜನೆಗಳ ಅನುಷ್ಠಾನ, ಅರ್ಹ ಫಲಾನುಭವಿಗಳ ಗುರುತಿಸುವಿಕೆ, ತೆರಿಗೆ ಸಂದಾಯ ಮಾಡಲು ಪ್ರೇರೇಪಿಸುವುದು, ವಿವಿಧ ಮೂಲಭೂತ ಸೌಕರ್ಯಗಳ ಪೂರೈಕೆ, ಮುಂತಾದ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಈ ಸಭೆಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ನಿರ್ಣಯಗಳನ್ನು ಹಾಜರಿರುವ ಮತ್ತು ಮತಚಲಾಯಿಸುವ ಸದಸ್ಯರ ಬಹುಮತದಿಂದ ಅಂಗೀಕರಿಸತಕ್ಕದ್ದು ಎಂದು ನಿಯಮ ಸ್ಪಷ್ಟಪಡಿಸುತ್ತದೆ.[೧೯] ಇದರ ಜೊತೆಗೆ ಜನವಸತಿ ಸಭೆಗಳ ಸುರಕ್ಷಿತವಲ್ಲದ ಜನರ ಹಕ್ಕುಗಳನ್ನು ರಕ್ಷಿಸುವುದು, ಯೋಜನೆಗಳಿಗೆ ಆದ್ಯತೆಗಳನ್ನು ನಿಗದಿಪಡಿಸುವುದು. ಅರ್ಹ ಫಲಾನುಭವಿಗಳನ್ನು ಗುರುತಿಸುವುದು, ಜಾತಿ ತಾರತಮ್ಯವನ್ನು ತಡೆಯುವುದು. ಹಾಗೂ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರ ಹೊಂದಿದೆ. ನಿಯಮಾವಳಿ ಪ್ರಕಾರ ಈ ಸಭೆಯಲ್ಲಿ ಶೇಕಡ ೩೦ಕ್ಕೆ ಕಡಿಮೆ ಇಲ್ಲದಂತೆ ಮಹಿಳೆಯರು ಭಾಗವಹಿಸಲು ಕ್ರಮಕೈಗೊಳ್ಳತಕ್ಕದ್ದು.[೨೦]

ಮೇಲಿನ ಈ ಘಟಕಗಳು ಗ್ರಾಮೀಣ ಜನರು ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮಾಡುವ ಸಾಧನಗಳಾಗಿವೆ. ಇಂತಹ ಘಟಕಗಳ ಬಗ್ಗೆ ದಲಿತ ಪ್ರತಿನಿಧಿಗಳು ಅರಿವು ಹೊಂದಿದ್ದಾರೆಯೇ? ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡು ಕೊಳ್ಳಲಾಗಿದೆ. ಕೋಷ್ಟಕ ೪.೧೨ರ ದತ್ತಾಂಶಗಳು ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೩.೩ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಇವುಗಳ ಅರಿವು ಇದೆ. ಆದರೆ ಶೇಕಡ ೬೬.೭ ರಷ್ಟು ದಲಿತ ಪ್ರತಿನಿಧಿಗಳಿಗೆ ಇವುಗಳ ಅರಿವು ಇಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೫ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಅರಿವು ಇದ್ದು ಶೇಕಡ ೬೧.೫ರಷ್ಟು ದಲಿತ ಪ್ರತಿನಿಧಿಗಳಿಗೆ ಅರಿವು ಇಲ್ಲ. ಕೂಡ್ಲಿಗಿ ತಾಲ್ಲೂಕಿನ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೯.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಉತ್ತಮ ಅರಿವು ಇದೆ. ಒಟ್ಟಾರೆ ಬಳ್ಳಾರಿ

ಜಿಲ್ಲೆಯ ದಲಿತ ಪ್ರತಿನಿಧಿಗಳಿಗೆ ಶೇಕಡ ೪೪.೧ರಷ್ಟು ದಲಿತ ಪ್ರತಿನಿಧಿಗಳಿಗೆ ಉತ್ತಮ ಅರಿವು ಇದ್ದು ಬಹುಸಂಖ್ಯಾತ ಅಂದರೆ ಶೇಕಡ ೫೫.೯ ರಷ್ಟು ದಲಿತ ಪ್ರತಿನಿಧಿಗಳಿಗೆ ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳ ಅರಿವು ಇಲ್ಲ. ಪುರುಷ ಪ್ರತಿನಿಧಿಗಳೊಂದಿಗೆ ಹೋಲಿಸಿದರೆ ಮಹಿಳಾ ದಲಿತ ಪ್ರತಿನಿಧಿಗಳ ಅರಿವಿನ ಮಟ್ಟ ಕನಿಷ್ಠ ಮಟ್ಟದಲ್ಲಿದೆ.

೪.೧೪. ಗ್ರಾಮಸಭೆಯ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು:

೧೯೯೩ರ ಪಂಚಾಯತ್ ರಾಜ್ಯ ಅಧಿನಿಯಮದ ಪ್ರಕಾರ ಗ್ರಾಮಸಭೆಯು ಗ್ರಾಮಪಂಚಾಯ್ತಿಯಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳ ಮತ್ತು ಕೇಂದ್ರ ಮತ್ತು ರಾಜ್ಯ ಮತ್ತು ಜಿಲ್ಲಾ ವಲಯದ ಎಲ್ಲ ಸರ್ಕಾರಿ ಕಾರ್ಯಕ್ರಮಗಳನ್ನು ನೆರವೇರಿಸುವಲ್ಲಿ, ಅನುಷ್ಠಾನಕ್ಕೆ ತರುವುದರಲ್ಲಿ, ಮೇಲ್ವಿಚಾರಣೆ ಮಾಡುವುದರಲ್ಲಿ ಮತ್ತು ಮೌಲ್ಯಮಾಪನ ಮಾಡುವುದರಲ್ಲಿ ಗ್ರಾಮದ ಎಲ್ಲ ನಾಗರಿಕರು ನೇರವಾಗಿ ಭಾಗಿಯಾಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಗ್ರಾಮಸಭೆ ಗ್ರಾಮಮಟ್ಟದಲ್ಲಿ ಸ್ಥಳೀಯ ಸ್ವಯಂ ಆಡಳಿತ ಮೂಲಘಟಕವಾಗಿರತಕ್ಕದ್ದು ಎಂದು ಸ್ಪಷ್ಟಪಡಿಸಿದೆ.[೨೧]

ಈ ಗ್ರಾಮ ಸಭೆಯು ಗ್ರಾಮದ ಅಭಿವೃದ್ಧಿಗಾಗಿ ಸಮೀಕ್ಷೆಗಳನ್ನು ನಡೆಸುವುದು, ಸುರಕ್ಷಿತವಲ್ಲದ ವಾರ್ಡ್‌ಗಳಿಗೆ ಆಗಿರುವ ಪ್ರಯೋಜನೆಗಳನ್ನು ಖಚಿತಪಡಿಸಿಕೊಳ್ಳುವುದು, ವಾರ್ಡ್ ಸಭೆಗಳು ಮತ್ತು ಜನವಸತಿ ಸಭೆಗಳು ರೂಪಸಿದ ಯೋಜನೆಗಳನ್ನು ಅನುಮೋದಿಸುವುದು, ಉತ್ತಮ ಸಾಮಾಜಿಕ ನ್ಯಾಯ ಪರಿಸರ ಇರುವಂತೆ ಸುನಿಶ್ಚಿತಪಡಿಸಿಕೊಳ್ಳುವುದು. ತಾರತಮ್ಯವನ್ನು ತಡೆಗಟ್ಟುವುದು, ಲೆಕ್ಕಪತ್ರಗಳ ವಾರ್ಷಿಕ ವರದಿಯನ್ನು ಚರ್ಚಿಸುವುದು ಮತ್ತು ಅನುಮೋದಿಸುವುದು. ಅನುಸರಣ ಕ್ರಮ ಕೈಗೊಂಡಿರುವುದರ ಬಗ್ಗೆ ಮಾಹಿತಿ ಪಡೆಯುವುದು ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮಹಿಳೆ ಮತ್ತು ಮಕ್ಕಳ ಸಬಲೀಕರಣಕ್ಕಾಗಿ ವಿಶೇಷ ಗ್ರಾಮಸಭೆಯನ್ನು ಕರೆಯುವ ಅಧಿಕಾರವನ್ನು ಪಡೆದುಕೊಂಡಿದೆ. ಈ ಗ್ರಾಮಸಭೆಗಳ ಸಭೆಯನ್ನು ಕನಿಷ್ಠ ಆರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಕರೆಯುವುದನ್ನು ನಿಯಮಗಳೆ ಸ್ಪಷ್ಟಪಡಿಸಿವೆ.[೨೨] ಅಂದರೆ ಗ್ರಾಮಸಭೆಯು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೇರ ಪ್ರಜಾಪ್ರಭುತ್ವವಾಗಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ನಿಯಮಾವಳಿ ರೂಪಿಸಿದೆ. ಗ್ರಾಮ ಪಂಚಾಯಿತಿ ಸದಸ್ಯರಿಗೆ ತಮ್ಮ ಪ್ರಸ್ತಾವನೆಗಳನ್ನು ನೇರವಾಗಿ ಮಂಡಿಸುವ ಅವಕಾಶ ಲಭ್ಯವಾಗುತ್ತದೆ. ಈ ಗ್ರಾಮಸಭೆಯ ಬಗ್ಗೆ ದಲಿತ ಪ್ರತಿನಿಧಿಗಳಿಗೆ ಇರುವ ಅರಿವಿನ ಮಟ್ಟವನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೧೩ರ ದತ್ತಾಂಶಗಳು ಸ್ಪಷ್ಟಪಡಿಸುವಂತೆ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೩.೬ ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮಸಭೆಯ ಅಧಿಕಾರಿಗಳು ಮತ್ತು ಮಹತ್ವದ ಬಗ್ಗೆ ಸ್ಪಷ್ಟ ಅರಿವು ಹೊಂದಿದ್ದು, ಶೇಕಡ ೫೬.೪ ರಷ್ಟು ಪ್ರತಿನಿಧಿಗಳಿಗೆ ಗ್ರಾಮ ಸಭೆಯು ಮಹತ್ವದ ಅರಿವು ಇಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಗ್ರಾಮಸಭೆಯ ಅರಿವು ಇದ್ದು ಬಹುಸಂಖ್ಯಾತ ಅಂದರೆ ಶೇಕಡ ೬೧.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮಸಭೆಯ ಅರಿವು ಇಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೭.೪ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಗ್ರಾಮಸಭೆಯ ಮಹತ್ವದ ಅರಿವು ಇದೆ. ಆದರೆ ಶೇಕಡ ೬೨.೬ ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮಸಭೆಯ ಮಹತ್ವದ ಅರಿವು ಇಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೨ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಗ್ರಾಮಸಭೆಯ ಮಹತ್ವ ಮತ್ತು ಅದರ ಪ್ರಕಾರ್ಯಗಳ ಬಗ್ಗೆ ಅರಿವು ಹೊಂದಿದ್ದಾರೆ. ಆದರೆ ಶೇಕಡ ೬೧.೮ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮಸಭೆಯ ಮಹತ್ವ ಮತ್ತು ಅದರ ಪ್ರಕಾರ್ಯಗಳ ಬಗ್ಗೆ ಯಾವುದೇ ಅರಿವು ಇಲ್ಲ. ದಲಿತ ಪುರುಷ ಪ್ರತಿನಿಧಿಗಳೊಂದಿಗೆ ಹೋಲಿಸಿದರೆ ದಲಿತ ಮಹಿಳಾ ಪ್ರತಿನಿಧಿಗಳ ಗ್ರಾಮ ಸಭೆಯು ಅರಿವಿನ ಮಟ್ಟ ಕನಿಷ್ಠ ಮಟ್ಟದಲ್ಲಿದೆ. ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿಯೂ ಮಹಿಳೆಯರ ಅರಿವಿನ ಮಟ್ಟ ಕನಿಷ್ಠ ಮಟ್ಟದಲ್ಲಿದೆ.

೪.೧೫. ಗ್ರಾಮ ಪಂಚಾಯತ್ ಕೋರಂ ಮತ್ತು ಕಾರ್ಯ ವಿಧಾನದ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು :

ಗ್ರಾಮ ಪಂಚಾಯತ್ ಸಭೆಗಾಗಿ ಒಟ್ಟು ಸದಸ್ಯರ ಅರ್ಧದಷ್ಟು ಸದಸ್ಯರು ಇರತಕ್ಕದ್ದು, ಸಭೆಗೆ ಗೊತ್ತುಪಡಿಸುವ ಕಾಲದಲ್ಲಿ ಕೋರಂ ಇರದಿದ್ದರೆ ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯು ಮೂವತ್ತು ನಿಮಿಷಗಳವರೆಗೆ ಕಾಯತಕ್ಕದ್ದು ಮತ್ತು ಅಂತಹ ಅವಧಿಯಲ್ಲಿ ಕೋರಂ ಇಲ್ಲದಿದ್ದರೆ ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯವರು ಸಭೆಯನ್ನು ಮೂರನೇ ದಿನಕ್ಕೆ ಅಥವಾ ತರುವಾಯ ದಿನದಂದು ಮುಂದೂಡತಕ್ಕದ್ದು.[೨೩] ಪಂಚಾಯತ್ ಕಾರ್ಯನಿರ್ವಹಣೆಯಲ್ಲಿ ದಲಿತ ಪ್ರತಿನಿಧಿಗಳು ಸಕ್ರೀಯವಾಗಿ ಪಾಲ್ಗೊಳ್ಳುವಲ್ಲಿ ಕೋರಂ ಪ್ರಮುಖ ಪಾತ್ರವಹಿಸುತ್ತದೆ ಎಂದು ಗ್ರಹಿಸಲಾಗಿದೆ. ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಿಗೆ ಗ್ರಾಮ ಪಂಚಾಯತಿಯ ಕೋರಂ ಬಗ್ಗೆ ಇರುವ ಅರಿವನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೧೪ರ ದತ್ತಾಂಶಗಳ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಪಂಚಾಯಿತಿಯ ಕೋರಂ ಬಗ್ಗೆ ಅರಿವು ಇದೆ. ಆದರೆ ಶೇಕಡ ೬೧.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಕೋರಂ ಅರಿವು ಇಲ್ಲ. ಆದರೆ ಸಿರುಗುಪ್ಪ ತಾಲ್ಲೂಕಿನ ದಲಿತ ಪ್ರತಿನಿಧಿಗಳಲ್ಲಿ ಗರಿಷ್ಟ ಸಂಖ್ಯೆ ಅಂದರೆ ಶೇಕಡ ೬೯.೨ ರಷ್ಟು ಸದಸ್ಯರಿಗೆ ಕೋರಂ ಬಗ್ಗೆ ಉತ್ತಮ ಅರಿವು ಇದೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೫.೧ ರಷ್ಟು ಸದಸ್ಯರಿಗೆ ಮಾತ್ರ ಕೋರಂ ಬಗ್ಗೆ ಅರಿವು ಇದ್ದು, ಶೇಕಡ ೬೪.೯ ರಷ್ಟು ಸದಸ್ಯರಿಗೆ ಕೋರಂ ಬಗ್ಗೆ ಅರಿವು ಇಲ್ಲ. ಸಿರುಗುಪ್ಪ ತಾಲ್ಲೂಕನ್ನು ಹೊರತುಪಡಿಸಿದರೆ, ಬಳ್ಳಾರಿ ಮತ್ತು ಕೂಡ್ಲಿಗಿ ತಾಲ್ಲೂಕಿನ ದಲಿತ ಪ್ರತಿನಿಧಿಗಳು ಉತ್ತಮ ಅರಿವು ಹೊಂದಿಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೫.೧ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಪಂಚಾಯತಿಯ ಕೋರಂ ಬಗ್ಗೆ ಅರಿವು ಇದ್ದು, ಶೇಕಡ ೫೪.೯ ರಷ್ಟು ದಲಿತ ಪ್ರತಿನಿಧಿಗಳಿಗೆ ಇದರ ಅರಿವು ಇಲ್ಲ. ಒಟ್ಟಾರೆ ಜಿಲ್ಲೆಯ ದಲಿತ ಪುರುಷ ಪ್ರತಿನಿಧಿಗಳಿಗೆ ಹೋಲಿಸಿದರೆ ದಲಿತ ಮಹಿಳಾ ಪ್ರತಿನಿಧಿಗಳ ಅರಿವಿನ ಮಟ್ಟ ಕನಿಷ್ಠ ಪ್ರಮಾಣದಲ್ಲಿದೆ.

೪.೧೬. ಸ್ಥಾಯಿ ಸಮಿತಿಗಳ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು:

೧೯೯೩ರ ನಿಯಮಾವಳಿಯ ಪ್ರಕಾರ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಚುನಾವಣೆಯ ಮೂಲಕ ಈ ಮುಂದಿನ ಸಮಿತಿಗಳನ್ನು ರಚಿಸತಕ್ಕದ್ದು.

೧) ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು, ಹಾಗೂ ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿಯನ್ನು ನೆರವೇರಿಸತಕ್ಕದ್ದು.

೨) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಇತರೆ ಹಿತದೃಷ್ಟಿಗಳಿಗೆ ಉತ್ತೇಜನ ನೀಡಲು ಸಾಮಾಜಿಕ ನ್ಯಾಯಸಮಿತಿಯನ್ನು ರಚಿಸತಕ್ಕದ್ದು.

೩) ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರೆ ಕಾರ್ಯಗಳನ್ನು ನಿರ್ವಹಿಸಲು ಸಮಿತಿಯನ್ನು ರಚಿಸತಕ್ಕದ್ದು. ಪ್ರತಿಯೊಂದು ಸಮಿತಿಯು ಸಂದರ್ಭಾನುಸಾರ ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಸೇರಿದಂತೆ ಮೂರಕ್ಕಿಂತ ಕಡಿಮೆ ಇಲ್ಲದಷ್ಟು ಮತ್ತು ಐದಕ್ಕಿಂತ ಹೆಚ್ಚು ಇಲ್ಲದಷ್ಟು

ಸದಸ್ಯರಿಂದ ಕೂಡಿರತಕ್ಕದ್ದು. ಗ್ರಾಮ ಪಂಚಾಯಿತಿಯ ಸದಸ್ಯರು ಉತ್ಪಾದನಾ ಸಮಿತಿಯ ಮತ್ತು ಸೌಕರ್ಯ ಸಮಿತಿಯ ಪದ ನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರತಕ್ಕದ್ದು. ಉಪಾಧ್ಯಕ್ಷರು ಸಾಮಾಜಿಕ ನ್ಯಾಯ ಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರತಕ್ಕದ್ದು.[೨೪] ಗ್ರಾಮ ಪಂಚಾಯಿಗಳಲ್ಲಿ ಸುರಕ್ಷಿತವಲ್ಲದ ಸಮುದಾಯಗಳ ಹಿತಾಸಕ್ತಿಯನ್ನು ರಕ್ಷಿಸಲು ಈ ಸಮಿತಿಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು ಗ್ರಹಿಸಲಾಗಿದೆ. ದಲಿತ ಪ್ರತಿನಿಧಿಗಳು ಪಂಚಾಯತ್ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಈ ಸ್ಥಾಯಿ ಸಮಿತಿಗಳ ಅರಿವು ಅಗತ್ಯವಾಗುತ್ತದೆ.

ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಿಗೆ ಸ್ಥಾಯಿ ಸಮಿತಿಗಳ ಬಗ್ಗೆ ಇರುವ ಅರಿವನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೧೫ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಸ್ಥಾಯಿ ಸಮಿತಿಗಳಿಗೆ ಸ್ಪಷ್ಟವಾದ ಅರಿವು ಇದೆ. ಆದರೆ ಶೇಕಡ ೬೧.೫ ರಷ್ಟು ದಲಿತ ಪ್ರತಿನಿಧಿಗಳಿಗೆ ಸ್ಥಾಯಿಸಮಿತಿಗಳ ಸ್ಪಷ್ಟವಾದ ಅರಿವು ಇಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೫.೬ ರಷ್ಟು ದಲಿತ ಪ್ರತಿನಿಧಿಗಳಿಗೆ ಸ್ಥಾಯಿ ಸಮಿತಿಗಳ ಅರಿವು ಇದ್ದು, ಉಳಿದ ಶೇಕಡ ೬೫.೪ ರಷ್ಟು ದಲಿತ ಪ್ರತಿನಿಧಿಗಳಿಗೆ ಸ್ಥಾಯಿ ಸಮಿತಿಗಳ ಅರಿವು ಇಲ್ಲ. ಅದೇ ಪ್ರಕಾರ ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೯.೭ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಸ್ಥಾಯಿ ಸಮಿತಿಗಳ ಅರಿವು ಇದ್ದು, ಉಳಿದ ಶೇಕಡ ೭೦.೩ ರಷ್ಟು ದಲಿತ ಪ್ರತಿನಿಧಿಗಳಿಗೆ ಸ್ಥಾಯಿ ಸಮಿತಿಗಳ ಅರಿವು ಇಲ್ಲ. ಒಟ್ಟಾರೆ, ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಸದಸ್ಯರಿಗೆ ಮಾತ್ರ ಸ್ಥಾಯಿ ಸಮಿತಿಗಳ ಸ್ಪಷ್ಟ ಅರಿವಿದ್ದು, ಉಳಿದ ಶೇಕಡ ೬೫.೭ ರಷ್ಟು ದಲಿತ ಸದಸ್ಯರಿಗೆ ಸ್ಥಾಯಿ ಸಮಿತಿಗಳ ಕಾರ್ಯ ಅಧಿಕಾರಗಳ ಬಗ್ಗೆ ಯಾವುದೇ ಅರಿವು ಇಲ್ಲ. ಜಿಲ್ಲೆಯ ೩ ತಾಲ್ಲೂಕುಗಳಲ್ಲೂ ದಲಿತ ಪುರುಷ ಪ್ರತಿನಿಧಿಗಳಿಗೆ ಹೋಲಿಸಿದರೆ, ದಲಿತ ಮಹಿಳಾ ಪ್ರತಿನಿಧಿಗಳಿಗೆ ಸ್ಥಾಯಿ ಸಮಿತಿಗಳ ಬಗ್ಗೆ ಯಾವುದೇ ತಿಳುವಳಿಕೆ ಇಲ್ಲದಿರುವುದು ಸ್ಪಷ್ಟವಾಗುತ್ತದೆ.

೪.೧೭ ಸಾಮಾಜಿಕ ನ್ಯಾಯ ಸಮಿತಿಯ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು:

೧೯೯೩ರ ಪಂಚಾಯತ್ ಅಧಿನಿಯಮದ ಪ್ರಕಾರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ

ಹಿತದೃಷ್ಟಿಗಳಿಗೆ ಉತ್ತೇಜನ ನೀಡಲು ಸಹಾಯಕವಾಗುತ್ತದೆ. ಸಾಮಾಜಿಕ ಅನ್ಯಾಯ ಮತ್ತು ವಿವಿಧ ಶೋಷಣೆಗಳಿಂದ ನಿರ್ಲಕ್ಷಿತ ಸಮುದಾಯಗಳನ್ನು ರಕ್ಷಿಸಲು ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿಯನ್ನು ರಚಿಸತಕ್ಕದ್ದು ಎಂದು ನಿಯಮಾವಳಿ ಸ್ಪಷ್ಟಪಡಿಸುತ್ತವೆ.

ನಡವಳಿಯ ಪ್ರಕಾರ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಟ ಪಕ್ಷ ಒಬ್ಬ ಮಹಿಳಾ ಸದಸ್ಯೆ ಹಾಗೂ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳ ಒಟ್ಟು ಸದಸ್ಯರು ಇರತಕ್ಕದ್ದು.[೨೫] ಗ್ರಾಮ ಪಂಚಾಯಿತಿ ವ್ಯಾಪ್ತಿಯಿರುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ, ಮಹಿಳೆಯರ ಹಾಗೂ ಅಸುರಕ್ಷತವಲ್ಲದ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡಲು ದಲಿತ ಸಮುದಾಯದ ಅಭಿವೃದ್ಧಿಗೆ ರಚನಾತ್ಮಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವಲ್ಲಿ ಸಾಮಾಜಿಕ ನ್ಯಾಯ ಸಮಿತಿಯು ಪ್ರಮುಖ ಪಾತ್ರವಹಿಸುತ್ತದೆ ಎಂದು ಗ್ರಹಿಸಲಾಗಿದೆ. ಸಾಮಾಜಿಕ ನ್ಯಾಯ ಸಮಿತಿಯು ನೇರವಾಗಿ ದಲಿತರಿಗೆ ಮತ್ತು ದುರ್ಬಲ ವರ್ಗಗಳ ಹಿತಾಸಕ್ತಿಗಳಿಗೆ ಸಂಬಂಧಿಸಿರುವುದರಿಂದ ದಲಿತ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯ ಸಮಿತಿಯ ಅರಿವು ಮುಖ್ಯ ಎಂದು ಗ್ರಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳ ಅರಿವನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡು ಕೊಳ್ಳಲಾಗಿದೆ.

ಕೋಷ್ಟಕ ೪.೧೬ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೫.೯ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಸಾಮಾಜಿಕ ನ್ಯಾಯ ಸಮಿತಿಯು ಕಾರ್ಯವಿಧಾನ ಮತ್ತು ಅಧಿಕಾರದ ಬಗ್ಗೆ ಸ್ಪಷ್ಟ ಅರಿವು ಇದೆ. ಆದರೆ ಶೇಕಡ ೬೪.೧ ರಷ್ಟು ದಲಿತ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯ ಸಮಿತಿಯ ಅರಿವು ಇಲ್ಲ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೪.೬ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಸಾಮಾಜಿಕ ನ್ಯಾಯ ಸಮಿತಿಯು ಅರಿವು ಇದ್ದು, ಉಳಿದ ೬೫.೪ ರಷ್ಟು ಸದಸ್ಯರಿಗೆ ಸಾಮಾಜಿಕ ನ್ಯಾಯ ಸಮಿತಿಯ ಬಗ್ಗೆ ಸ್ಪಷ್ಟತೆ ಇಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೨. ರಷ್ಟು ಸದಸ್ಯರಿಗೆ ಮಾತ್ರ ಸಾಮಾಜಿಕ ನ್ಯಾಯ ಸಮಿತಿಯ ಸ್ಪಷ್ಟತೆ ಇದ್ದು, ಉಳಿದ ಶೇಕಡ ೬೭.೬ ರಷ್ಟು ದಲಿತ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯ ಸಮಿತಿಯ ಅರಿವು ಇಲ್ಲ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೪.೩ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಸಾಮಾಜಿಕ ನ್ಯಾಯ ಸಮಿತಿಯ ಕಾರ್ಯ ವಿಧಾನ ಮತ್ತು ಅದರ

ಅಧಿಕಾರಗಳ ಬಗ್ಗೆ ಅರಿವು ಹೊಂದಿದ್ದು, ಉಳಿದ ಬಹುತೇಕ ಅಂದರೆ ಶೇಕಡ ೬೫.೭ ರಷ್ಟು ದಲಿತ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯ ಸಮಿತಿಯ ಕಾರ್ಯ ವಿಧಾನ ಮತ್ತು ಅಧಿಕಾರಗಳ ಯಾವುದೇ ಸ್ಪಷ್ಟ ಅರಿವು ಇಲ್ಲ. ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ದಲಿತ ಪುರುಷ ಪ್ರತಿನಿಧಿಗಳಿಗೆ ಹೋಲಿಸಿದರೆ, ದಲಿತ ಮಹಿಳಾ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯ ಸಮಿತಿಯ ಕಾರ್ಯವಿಧಾನ ಮತ್ತು ಅದರ ಅಧಿಕಾರಿಗಳ ಅರಿವಿನ ಕೊರತೆ ಇರುವುದು ಅತ್ಯಂತ ಖೇದಕರ ಸಂಗತಿಯಾಗಿದೆ.

೪.೧೮ ಪಂಚಾಯಿತಿ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು:

೧೯೯೩ರ ನಿಯಮಾವಳಿಗಳ ಅಧ್ಯಾಯ ೪ ಎ ಭಾಗದಲ್ಲಿ ಸ್ಪಷ್ಟಪಡಿಸಿರುವ ಪ್ರಕಾರ ಪಂಚಾಯಿತಿ ಸದಸ್ಯರು ನಿರ್ದಿಷ್ಟ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ಹೊಂದಿರತಕ್ಕದ್ದು. ಅವುಗಳಲ್ಲಿ ಪ್ರಮುಖವಾದವುಗಳು ಎಂದರೆ, ತನ್ನ ಕ್ಷೇತ್ರದ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದು, ನಾಗರೀಕರು ಮಾಡಿದ ಮನವಿಗಳಿಗೆ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಪ್ರತಿಕ್ರಿಯಿಸುವುದು, ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸುವುದು. ನೈತಿಕತೆಯ ಗರಿಷ್ಟ ಗುಣಮಟ್ಟವನ್ನು ನಿರ್ವಹಿಸುವುದು. ಯಾವುದೇ ಭೇದ ಮಾಡದೆ ಎಲ್ಲರನ್ನು ಸಮಾನವಾಗಿ ಗೌರವಿಸುವುದು, ಪ್ರದೇಶದ ಉತ್ತಮ ಆಡಳಿತದಲ್ಲಿ ಭಾಗವಹಿಸುವುದು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪಂಚಾಯಿತಿ ನಿವಾಸಿಗಳ ಪಾಲ್ಗೊಳ್ಳುವಿಕೆಯನ್ನು ಸಕ್ರೀಯವಾಗಿ ಪ್ರೋತ್ಸಾಹಿಸುವುದು ಮುಂತಾದ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು ಎಂದು ಸ್ಪಷ್ಟಪಡಿಸುತ್ತದೆ.[೨೬]

ಜನಪ್ರತಿನಿಧಿಗಳು ತಾವು ನಿರ್ವಹಿಸುವ ಜವಾಬ್ದಾರಿಗಳ ಬಗ್ಗೆ ಮತ್ತು ಕರ್ತವ್ಯಗಳ ಬಗ್ಗೆ ಸ್ಪಷ್ಟವಾದ ಅರಿವು ಹೊಂದಿದ್ದಾಗ ಮಾತ್ರ ಯೋಜನೆಗಳನ್ನು ಸಕ್ರೀಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಎಂದು ಗ್ರಹಿಸಲಾಗಿದೆ. ದಲಿತ ಪ್ರತಿನಿಧಿಗಳು ನಿಯಮಾವಳಿಗಳ ಪ್ರಕಾರ ತಮಗೆ ವಹಿಸಲಾದ ಕರ್ತವ್ಯಗಳು ಮತ್ತು ಜವಾಬ್ದಾರಿಯನ್ನು ಅರಿತುಕೊಂಡಾಗ ಸಮುದಾಯದ ಹಿತಾಸಕ್ತಿಯನ್ನು ಕಾಪಾಡಲು ಸಾಧ್ಯವಾಗುತ್ತದೆ ಎಂದು ಗ್ರಹಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ತಮಗೆ ವಹಿಸಲಾದ ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಎಷ್ಟರಮಟ್ಟಿಗೆ ಗ್ರಹಿಸಿದ್ದಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ ೪.೧೭ರ ದತ್ತಾಂಶಗಳು ಸ್ಪಷ್ಟಪಡಿಸುವಂತೆ, ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೧ ರಷ್ಟು ಪ್ರತಿನಿಧಿಗಳಿಗೆ ಮಾತ್ರ ನಿಯಮಾವಳಿಗಳ ಪ್ರಕಾರ ಪಂಚಾಯತ್ ಸದಸ್ಯರಿಗೆ ಪ್ರದತ್ತವಾಗಿರುವ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಇಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೫ ರಷ್ಟು ಪ್ರತಿನಿಧಿಗಳಿಗೆ ಮಾತ್ರ ನಿಯಮಾವಳಿಗಳ ಪ್ರಕಾರ ದತ್ತವಾಗಿರುವ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಇಲ್ಲ. ಶೇಕಡ ೬೧.೫ರಷ್ಟು ಸದಸ್ಯರಿಗೆ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಸ್ಪಷ್ಟತೆ ಇಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೩೨.೪ರಷ್ಟು ಸದಸ್ಯರಂತೆ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಅರಿವು ಇದ್ದು, ಬಹುತೇಕ ಅಂದರೆ ಶೇಕಡ ೬೭.೬ರಷ್ಟು ದಲಿತ ಪ್ರತಿನಿಧಿಗಳಿಗೆ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಸ್ಪಷ್ಟತೆ ಇಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೭.೩ ರಷ್ಟು ಪ್ರತಿನಿಧಿಗಳಿಗೆ ಮಾತ್ರ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಅರಿವು ಇದೆ. ಆದರೆ ಬಹುಸಂಖ್ಯಾತ ಅಂದರೆ ಶೇಕಡ ೬೨.೭ ರಷ್ಟು ದಲಿತ ಪ್ರತಿನಿಧಿಗಳಿಗೆ ನಿಯಮಾವಳಿಗಳ ಮೂಲಕ ದತ್ತವಾಗಿರುವ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಬಗ್ಗೆ ಸ್ಪಷ್ಟವಾದ ಅರಿವು ಇಲ್ಲದಿರುವುದು ಸಮುದಾಯದ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ವಿಷಾದನೀಯ ಸಂಗತಿ ಆಗಿದೆ. ಜಿಲ್ಲೆಯ ೩ ತಾಲ್ಲೂಕುಗಳಲ್ಲಿ ದಲಿತ ಪುರುಷ ಪ್ರತಿನಿಧಿಗಳಿಗೆ ಹೋಲಿಸಿದರೆ ದಲಿತ ಮಹಿಳಾ ಪ್ರತಿನಿಧಿಗಳ ಜವಾಬ್ದಾರಿ ಮತ್ತು ಕರ್ತವ್ಯಗಳ ಅರಿವಿನ ಮಟ್ಟ ಅತ್ಯಂತ ಕೆಳಮಟ್ಟದಲ್ಲಿದೆ.

ಕೋಷ್ಟಕ –೪.೧.

ದಲಿತರಿಗೆ ಮೀಸಲಾತಿಯಿಂದ ಉಪಯೋಗವಿದೆಯೆಂದು ಭಾವಿಸುತ್ತೀರಾ?

	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು
ಹೌದು	೧೧ (೬೧.೦)	೦೩ (೧೪.೩)	೧೪ (೩೫.೯)	೦೮ (೬೬.೭)	೦೨ (೧೪.೩)	೧೦ (೩೮.೫)	೦೯ (೫೩.೦)	೦೩ (೧೫)	೧೨ (೩೨.೪)	೨೮ (೫೯.೬)	೦೮ (೧೪.೫)	೩೬ (೩೫.೩)
ಇಲ್ಲ	೦೧ (೦೫.೬)	೦೩ (೧೪.೩)	೦೪ (೧೦.೨)	೦೧ (೮.೩)	೦೧ (೭.೧)	೦೨ (೭.೭)	೦೪ (೨೩.೫)	೦೫ (೨೫)	೦೯ (೨೪.೩)	೦೬ (೧೨.೮)	೦೯ (೧೬.೪)	೧೫ (೧೪.೭)
ಗೊತ್ತಿಲ್ಲ	೦೬ (೩೩.೪)	೧೫ (೭೧.೪)	೨೧ (೫೪)	೦೩ (೨೫)	೧೧ (೭೮.೬)	೧೪ (೫೩.೮)	೦೪ (೨೩.೨)	೧೨ (೬೦)	೧೬ (೪೩.೩)	೧೩ (೨೭.೬)	೩೮ (೬೯.೧)	೫೧ (೫೦)
ಒಟ್ಟು	೧೮ (೧೦೦)	೨೧ (೧೦೦)	(೩೯) (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ -೪.೨.

ಪಂಚಾಯಿತಿಗಳಲ್ಲಿ ದಲಿತರಿಗೆ ನಿಗದಿಪಡಿಸಿದ ಶೇಕಡ ೩೩.೩. ರಷ್ಟು ಪ್ರಮಾಣ ಸರಿಯಾಗಿದೆ ಎಂದು ಭಾವಿಸುತ್ತೀರಾ?

	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು
ಹೌದು	೦೮ (೪೪.೪)	೦೫ (೨೩.೮)	೧೩ (೩೩.೩)	೦೫ (೧೪.೩)	೦೨ (೧೪.೩)	೦೭ (೨೭)	೦೬ (೩೫.೩)	೦೨ (೧೦)	೦೮ (೨೧.೬)	೧೯ (೨೧.೬)	೦೯ (೧೮.೪)	೩೬ (೩೫.೩)
ಇಲ್ಲ	೦೯ (೫೦)	೦೪ (೧೯)	೧೩ (೩೩.೩)	೦೭ (೨೮.೬)	೦೪ (೨೮.೬)	೧೧ (೪೨.೩)	೧೦ (೫೮.೬)	೦೬ (೩೦)	೧೬ (೪೩.೨)	೨೬ (೫೫.೩)	೧೪ (೨೫.೫)	೧೫ (೧೪.೭)
ಗೊತ್ತಿಲ್ಲ	೦೧ (೫.೬)	೧೨ (೫೭.೮)	೧೩ (೩೩.೩)	೦೦ (೦೦)	೦೮ (೫೭.೧)	೦೮ (೩೨.೭)	೦೧ (೫.೯)	೧೨ (೬೦)	೧೩ (೬೦)	೦೨ (೪.೮)	೩೨ (೫೮.೧)	೫೧ (೫೦)
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ –೪.೩

ದಲಿತರ ಅಭಿವೃದ್ಧಿಗಾಗಿ ದಲಿತ ಸಂಘಟನೆಗಳು ಇರಬೇಕೆಂದು ಭಾವಿಸುತ್ತೀರಾ

	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು
ಹೌದು	೧೬ (೮೮.೮)	೦೮ (೩೮.೧)	೨೪ (೬೧.೫)	೧೦ (೮೩.೪)	೦೫ (೩೫.೭)	೧೫ (೫೭.೭)	೧೫ (೮೮.೨)	೦೫ (೨೫)	೨೦ (೫೪.೧)	೪೧ (೮೭.೨)	೧೮ (೩೨.೭)	೫೯ (೫೭.೮)
ಇಲ್ಲ	೦೧ (೫.೬)	೦೨ (೯.೫)	೦೩ (೭.೭)	೦೧ (೮.೩)	೦೧ (೭.೧)	೦೨ (೫.೯)	೦೧ (೫.೯)	೦೨ (೧೦)	೦೩ (೮.೧)	೦೩ (೬.೪)	೦೫ (೯.೧)	೦೮ (೭.೮)
ಗೊತ್ತಿಲ್ಲ	೦೧ (೫.೬)	೧೧ (೫೨.೪)	೧೨ (೩೦.೮)	೦೧ (೮.೩)	೦೮ (೫೭.೨)	೦೯ (೩೪.೬)	೦೧ (೫.೯)	೧೩ (೬೫)	೧೪ (೩೭.೮)	೦೩ (೬.೪)	೩೨ (೫೮.೨)	೩೫ (೩೪.೪)
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ ೪.೪.

ದಲಿತ ಸಂಘರ್ಷ ಸಮಿತಿಯು ದಲಿತರ ಸಮಾಜೋ-ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿದೆಯಾ?

	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು
ಹೌದು	೦೮ (೪೪.೪)	೦೫ (೨೩.೮)	೧೩ (೩೩.೩)	೦೫ (೪೧.೭)	೦೨ (೧೪.೩)	೦೭ (೨೭)	೦೬ (೩೫.೩)	೦೨ (೧೦)	೦೮. (೨೧.೬)	೧೯ (೨೧.೬)	೦೯ (೪೦.೪)	೨೮ (೨೭.೫)
ಇಲ್ಲ	೦೯ (೫೦)	೦೪ (೧೯)	೧೩ (೩೩.೩)	೦೭ (೫೮.೩)	೦೭ (೫೮.೩)	೧೧ (೪೨.೩)	೧೦ (೫೮.೮)	೦೬ (೩೦)	೧೬ (೪೩.೨)	೨೬ (೪೩.೨)	೧೪ (೨೫.೫)	೪೦ (೩೯.೨)
ಗೊತ್ತಿಲ್ಲ	೦೧ (೫.೬)	೧೨ (೫೭.೨)	೧೩ (೩೩.೩)	೦೦ (೦೦)	೦೮ (೫೭.೧)	೦೮ (೩೦.೭)	೦೧ (೫.೯)	೧೨ (೬೦)	೧೩ (೩೫.೨)	೧೩ (೩೫.೨)	೩೨ (೫೮.೧)	೩೪ (೩೩.೩)
ಒಟ್ಟು	೧೮ (೫.೬)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೩೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ ೪.೫ (ಅ)
ದಲಿತ ಸಂಘರ್ಷ ಸಮಿತಿಯು ದಲಿತರ ಸಮಾಜೋ-ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿದೆಯಾ?

	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು
ಇತರೆ ಸಮುದಾಯದವರು ಕಿರುಕುಳ ನೀಡಿದರೆ ನಿಮ್ಮ ಬೆಂಬಲಕ್ಕೆ ಬರುತ್ತಾರೆ	೦೨ (೨೫)	೦೧ (೨೦)	೦೩ (೨೩.೦)	೦೧ (೨೦)	೦೧ (೫೦)	೦೨ (೨೮.೬)	೦೧ (೧೬.೭)	೦೦ (೦೦)	೦೧ (೧೨.೫)	೦೪ (೨೧.೦)	೦೨ (೨೨.೨)	೦೬ (೨೧.೪)
ಹೊಸಗದ್ದೆಗಳ ವ್ಯಾಜ್ಯಗಳಾದಾಗ ವಿವಾದ ಪರಿಹರಿಸುತ್ತಾರೆ.	೦೨ (೨೫)	೦೨ (೪೦)	೦೪ (೩೦.೭)	೦೧ (೨೦)	೦೦ (೦೦)	೦೧ (೧೪.೩)	೦೧ (೧೬.೭)	೦೦ (೦೦)	೦೧ (೧೨.೫)	೦೪ (೨೧.೦)	೦೨ (೨೨.೨)	೦೬ (೨೧.೪)
ಸರ್ಕಾರಿ ಮತ್ತು ಬ್ಯಾಂಕ್‌ಗಳಿಂದ ಸಾಲ ಕೊಡಿಸುತ್ತಾರೆ	೦೧ (೧೨.೫)	೦೧ (೨೦)	೦೨ (೧೫.೫)	೦೧ (೨೦)	೦೦ (೦೦)	೦೧ (೧೪.೩)	೦೧ (೧೬.೭)	೦೦ (೦೦)	೦೧ (೧೨.೫)	೦೩ (೧೫.೮)	೦೧ (೧೧.೧)	೦೪ (೧೪.೩)
ಸರ್ಕಾರಿ ಇಲಾಖೆಗಳಲ್ಲಿ ನಿಮ್ಮ ಕೆಲಸ ವಿಳಂಬವಾದಾಗ ಸಹಾಯ ಮಾಡುತ್ತಾರೆ.	೦೩ (೩೭.೫)	೦೧ (೨೦)	೦೪ (೩೦.೮)	೦೨ (೪೦)	೦೧ (೫೦)	೦೩ (೪೨.೮)	೦೩ (೫೦)	೦೨ (೧೦೦)	೦೫ (೬೨.೫)	೦೮ (೪೨.೨)	೦೪ (೪೪.೫)	೧೨ (೪೨.೯)
ಒಟ್ಟು	೦೮ (೧೦೦)	೦೫ (೧೦೦)	೧೩ (೧೦೦)	೦೫ (೧೦೦)	೦೨ (೧೦೦)	೦೭ (೧೦೦)	೦೬ (೧೦೦)	೦೨ (೧೦೦)	೦೮ (೧೦೦)	೧೯ (೧೦೦)	೦೯ (೧೦೦)	೨೮ (೧೦೦)

ಕೋಷ್ಟಕ ೪.೫ (ಬ)

ಇಲ್ಲವಾದರೆ ಕಾರಣವೇನು?

ವಿವರ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು	ಪು.	ಮಹಿಳೆ	ಒಟ್ಟು
ದಲಿತ ಸಂಘರ್ಷ ಸಮಿತಿಯಲ್ಲಿ ವಿವಿಧ ಬಣಗಳಾಗಿರುವುದರಿಂದ ಪರಿಹಾರ ಕೈಗೊಂಡಿಲ್ಲ	೦೧ (೧೧.೨)	೦೦ (೦೦)	೦೧ (೭.೭)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೨ (೧೨.೫)	೦೩ (೧೧.೫)	೦೦ (೦೦)	೦೩ (೭.೫)
ನಮ್ಮ ಸಮಸ್ಯೆಗಳಿಗೆ ಬೇಗ ಸ್ಪಂದಿಸುವುದಿಲ್ಲ	೦೨ (೨೨.೨)	೦೧ (೨೫)	೦೩ (೨೩.೦)	೦೧ (೨೫)	೦೧ (೨೫)	೦೨ (೧೮.೨)	೦೨ (೩೩.೩)	೦೨ (೩೩.೩)	೦೪ (೨೫)	೦೫ (೧೯.೨)	೦೪ (೨೮.೬)	೦೯ (೨೨.೫)
ಸುಳ್ಳು ಆಶ್ವಾಸನೆ ನೀಡುತ್ತಾರೆ.	೦೩ (೩೩.೩)	೦೧ (೨೫)	೦೪ (೩೦.೮)	೦೨ (೨೫.೬)	೦೨ (೫೦)	೦೪ (೩೬.೪)	೦೩ (೫೦)	೦೩ (೫೦)	೦೬ (೩೭.೫)	೦೮ (೩೦.೬)	೦೮ (೫೭.೨)	೧೬ (೪೦)
ಕೆಲವು ನಾಯಕರು ಹಣ ಪಡೆದರು ಸಹ ಮಾಡುವುದಿಲ್ಲ	೦೩ (೩೩.೩)	೦೧ (೨೫)	೦೪ (೩೦.೮)	೦೩ (೪೨.೮)	೦೦ (೦೦)	೦೩ (೨೭.೦)	೦೦ (೦೦)	೦೦ (೦೦)	೦೨ (೧೨.೫)	೦೮ (೩೦.೮)	೦೧ (೭.೧)	೦೫ (೨೨.೫)
ಇತರೆ ಸಮುದಯಾದ ಸಮಸ್ಯೆಗಳಿಗೆ ಹೆಚ್ಚು ಸ್ಪಂದಿಸುತ್ತಾರೆ.	೦೦ (೦೦)	೦೧ (೨೫)	೦೧ (೭.೭)	೦೧ (೧೪.೩)	೦೧ (೨೫)	೦೨ (೧೮.೨)	೦೨ (೧೬.೭)	೦೧ (೧೬.೭)	೦೨ (೧೨.೫)	೦೨ (೭.೭)	೦೧ (೭.೧)	೦೩ (೭.೫)
ಒಟ್ಟು	೦೯ (೧೦೦)	೦೪ (೧೦೦)	೧೩ (೧೦೦)	೦೭ (೧೦೦)	೦೪ (೧೦೦)	೧೧ (೦೦)	೦೧ (೧೬.೭)	೦೬ (೧೦೦)	೧೬ (೧೦೦)	೨೬ (೧೦೦)	೧೪ (೧೦೦)	೪೦ (೧೦೦)

ಕೋಷ್ಟಕ ಸಂಖ್ಯೆ – ೪.೬

ಅಸ್ಪೃಶ್ಯತೆ ಇಂದಿಗೂ ಜೀಂತವಿದೆಯೆಂದು ಭಾವಿಸುತ್ತೀರಾ ?

	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಹೌದು	೧೦ (೫೫.೬)	೦೬ (೨೮.೬)	೧೬ (೪೧)	೦೭ (೫೮.೩)	೦೬ (೪೨.೮)	೧೩ (೫೦)	೧೧ (೬೪.೭)	೦೯ (೪೫)	೨೦ (೫೪)	೨೮ (೫೯.೬)	೨೧ (೩೮.೨)	೪೯ (೪೮)
ಇಲ್ಲ	೦೭ (೩೮.೯)	೦೧ (೪.೮)	೦೮ (೨೦.೫)	೦೧ (೮.೩)	೦೨ (೧೪.೪)	೦೩ (೧೧.೫)	೦೨ (೧೧.೮)	೦೧ (೫)	೦೩ (೮.೧)	೧೦ (೨೧.೩)	೦೪ (೭.೩)	೧೪ (೧೩.೭)
ಗೊತ್ತಿಲ್ಲ	೦೧ (೫.೫.)	೧೪ (೬೬.೬)	೧೫ (೩೮.೫)	೦೪ (೩೩.೪)	೦೬ (೪೨.೮)	೧೦ (೩೮.೫)	೦೪ (೨೩.೫)	೧೦ (೫೦)	೧೪ (೩೭.೯)	೦೯ (೧೯.೧)	೩೦ (೫೪.೫)	೩೯ (೩೮.೩)
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ -೪.೭

ಅಸ್ಪೃಶ್ಯತೆ ಎಲ್ಲೆಲ್ಲಿ ಆಚರಿಸಲಾಗುತ್ತಿದೆ

ಸ್ಥಳೀಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಹೋಟೆಲ್	೦೧ (೧೦)	೦೧ (೧೬.೭)	೦೨ (೧೨.೫)	೦೧ (೧೪.೩)	೦೧ (೧೬.೭)	೦೨ (೧೫.೪)	೦೨ (೧೮.೨)	೦೨ (೨೨.೨)	೦೪ (೨೦)	೦೪ (೧೪.೩)	೦೪ (೧೯)	೦೮ (೧೬.೩)
ದೇವಸ್ಥಾನ	೦೭ (೭೦)	೦೪ (೬೬.೭)	೧೧ (೬೮.೮)	೦೫ (೭೧.೪)	೦೫ (೮೩.೩)	೧೦ (೭೭)	೦೮ (೭೨.೭)	೦೬ (೬೬.೭)	೧೪ (೭೦)	೨೦ (೭೧.೪)	೧೫ (೭೧.೫)	೩೫ (೭೧.೪)
ಶಾಲೆಗಳು	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
ಆಸ್ಪತ್ರೆಗಳು	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
ಪಂಚಾಯತ್	೦೧ (೧೦)	೦೧ (೧೬.೬)	೦೨ (೧೨.೫)	೦೧ (೧೪.೩)	೦೦ (೦೦)	೦೧ (೭.೬)	೦೧ (೯.೧)	೦೧ (೧೧.೧)	೦೨ (೧೦)	೦೩ (೧೦.೭)	೦೨ (೯.೫)	೦೫ (೧೦.೩)
ಸರ್ಕಾರಿ ಕಛೇರಿ	೦೧ (೧೦)	೦೦ (೦೦)	೦೧ (೬.೨)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೩.೬)	೦೦ (೦೦)	೦೧ (೨.೦)
ಇತರೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
ಒಟ್ಟು	೧೦ (೧೦೦)	೦೬ (೧೦೦)	೧೬ (೧೦೦)	೦೭ (೧೦೦)	೦೬ (೧೦೦)	೧೩ (೧೦೦)	೧೧ (೧೦೦)	೦೯ (೧೦೦)	೨೦ (೧೦೦)	೨೮ (೧೦೦)	೨೧ (೧೦೦)	೪೯ (೧೦೦)

ಕೋಷ್ಟಕ -೪.೮
ದಲಿತರ ಅಭಿವೃದ್ಧಿಗೆ ದುಡಿಯುವ ಪಕ್ಷಗಳು

ಪಕ್ಷಗಳ ಹೆಸರು	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಬಿಬಿಎಸ್‌ಪಿ	೦೧ (೫.೫)	೦೦ (೦೦)	೦೧ (೨.೬)	೦೨ (೧೬.೭)	೦೦ (೦೦)	೦೨ (೭.೭)	೦೧ (೫.೯)	೦೦ (೦೦)	೦೧ (೨.೭)	೦೪ (೮.೫)	೦೦ (೦೦)	೦೪ (೩.೯)
ಆರ್.ಪಿ.ಐ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
ದಲಿತ ಪ್ಯಾಂಥರ್ಸ್	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
ಲೋಕಶಕ್ತಿ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
ಕಾಂಗ್ರೆಸ್	೧೧ (೬೧.೨)	೧೫ (೭೧.೫)	೨೬ (೬೬.೭)	೦೭ (೫೮.೩)	೦೯ (೬೪.೩)	೧೬ (೬೧.೫)	೧೦ (೫೮.೮)	೧೩ (೬೫)	೨೩ (೬೨.೨)	೨೮ (೫೯.೬)	೩೭ (೬೭.೩)	೬೫ (೬೩.೭)
ಬಿಜೆಪಿ	೦೬ (೩೩.೩)	೦೪ (೧೯)	೧೦ (೨೫.೬)	೦೧ (೮.೩)	೦೩ (೨೧.೪)	೦೪ (೧೫.೪)	೦೪ ೨೩.೫)	೦೪ (೨೦)	೦೮ (೨೧.೬)	೧೧ (೨೩.೪)	೧೧ (೨೦)	೨೨ (೨೧.೬)
ಜನತಾದಳ	೦೦ (೦೦)	೦೨ (೯.೫)	೦೨ (೫.೧)	೦೨ (೧೬.೭)	೦೨ (೧೪.೩)	೦೪ (೧೫.೪)	೦೨ (೧೧.೮)	೦೩ (೧೫)	೦೫ (೧೩.೪)	೦೪ (೮.೫)	೦೭ (೧೨.೭)	೧೧ (೧೦.೮)
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೪೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ -೪.೯

ಭಾರತದಲ್ಲಿ ದಲಿತರ ವಿಮೋಚನೆಗಾಗಿ ಹೋರಾಡಿದವರು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಒಂದು ಹೆಸರು	೦೩ (೧೬.೬)	೧೫ (೭೧.೪)	೧೮ (೪೬.೨)	೦೧ (೮.೩)	೦೯ (೬೪.೩)	೧೦ (೩೮.೫)	೦೫ (೨೯.೪)	೦೮ (೪೦)	೧೩ (೩೫.೨)	೦೯ (೧೯.೧)	೩೨ (೫೮.೨)	೪೧ (೪೦.೨)
ಎರಡು ಹೆಸರು	೦೫ (೨೭.೮)	೦೩ (೧೪.೩)	೦೮ (೨೦.೫)	೦೨ (೧೬.೭)	೦೩ (೨೧.೪)	೦೫ (೧೯.೨)	೦೨ (೧೧.೮)	೦೮ (೪೦)	೧೦ (೨೭)	೦೯ (೧೯.೧)	೧೪ (೨೫.೪)	೨೩ (೨೨.೫)
ಮೂರು ಹೆಸರು	೦೫ (೨೭.೮)	೦೩ (೧೪.೩)	೦೮ (೨೦.೫)	೦೪ (೩೩.೩)	೦೨ (೧೪.೩)	೦೬ (೨೩.೧)	೦೪ (೨೩.೫)	೦೪ (೨೦)	೦೮ (೨೧.೬)	೧೩ (೨೭.೮)	೦೯ (೧೬.೪)	೨೨ (೨೧.೬)
ಮೂರಕ್ಕಿಂತ ಹೆಚ್ಚು ಹೆಸರು	೦೫ (೨೭.೮)	೦೦ (೦೦)	೦೫ (೧೨.೮)	೦೫ (೪೧.೭)	೦೦ (೦೦)	೦೫ ೧೯.೨)	೦೬ (೩೫.೩)	೦೦ (೦೦)	೦೬ (೧೬.೨)	೧೬ (೩೪)	೦೦ (೦೦)	೧೬ (೧೬.೬)
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ -೪.೧೦

೭೩ನೇ ಸಂವಿಧಾನ ತಿದ್ದುಪಡಿಯ ಬಗ್ಗೆ ಸದಸ್ಯರ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಪೂರ್ಣ ತಿಳಿದಿದೆ	೦೧ (೫.೫)	೦೧ (೪.೮)	೦೨ (೫.೧)	೦೩ (೨೫)	೦೧ (೭.೧)	೦೪ (೧೫.೪)	೦೩ (೧೭.೬)	೦೧ (೫)	೦೪ (೧೦.೮)	೦೭ (೧೪.೯)	೦೩ (೫.೪)	೧೦ (೯.೮)
ಸ್ವಲ್ಪ ತಿಳಿದಿದೆ	೦೪ (೨೨.೨)	೦೨ (೯.೫)	೦೬ (೧೫.೪)	೦೫ (೪೧.೭)	೦೩ (೨೧.೪)	೦೮ (೩೦.೮)	೦೪ (೨೩.೫)	೦೪ (೨೦)	೦೮ (೨೧.೬)	೧೩ (೨೭.೬)	೦೯ (೧೬.೪)	೨೨ (೨೧.೬)
ತಿಳಿದಿಲ್ಲ	೧೩ (೭೨.೩)	೧೮ (೮೫.೭)	೩೧ (೭೯.೫)	೦೪ (೩೩.೩)	೧೦ (೭೧.೪)	೧೪ (೫೩.೮)	೧೦ (೫೮.೯)	೧೫ (೭೫)	೨೫ (೬೭.೬)	೨೭ (೫೭.೫)	೪೩ (೭೮.೨)	೭೦ (೬೮.೬)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ -೪.೧೧

ಗ್ರಾಮ ಸ್ವರಾಜ್ಯದ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಸರಿಯಾದ ಉತ್ತರ	೦೪ (೨೨.೨)	೦೨ (೯.೫)	೦.೬ (೧೫.೪)	೦೨ (೧೬.೭)	೦೦ (೦೦)	೦೨ (೭.೭)	೦೩ (೧೭.೬)	೦೧ (೦೫)	೦೪ (೧೦.೮)	೦೯ (೧೯.೧)	೦೩ (೫.೫)	೧೨ (೧೧.೮)
ತಪ್ಪು ಉತ್ತರ	೧೪ (೭೭.೮)	೧೯ (೯೦.೫)	೩೩ (೮೪.೬)	೧೦ (೮೩.೩)	೧೪ (೧೦೦)	೨೪ (೯೨.೩)	೧೪ ೮೨.೪)	೧೯ (೯೫)	೩೩ (೮೯.೨)	೩೮ (೮೦.೯)	೫೨ (೯೪.೫)	೯೦ (೮೮.೨)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ-೪.೧೨

ವಾರ್ಡ್ ಸಭೆಗಳು ಮತ್ತು ಜನವಸತಿಗಳ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಸರಿಯಾದ ಉತ್ತರ	೦೮ (೪೪.೪)	೦೫ (೨೩.೮)	೧೩ (೩೩.೩)	೦೫ (೪೧.೭)	೦೫ (೩೫.೭)	೧೦ (೩೮.೫)	೦೭ (೪೧.೨)	೧೫ ((೭೫)	೨೨ (೫೯.೫)	೨೦ (೪೨.೬)	೨೫ (೫೫.೫)	೪೫ (೪೪.೧)
ತಪ್ಪು ಉತ್ತರ	೧೦ (೫೫.೬)	೧೬ (೭೬.೨)	೨೬ (೬೬.೭)	೦೭ (೫೮.೩)	೦೯ (೬೪.೩)	೧೬ (೬೧.೫)	೧೦ (೫೮.೮)	೦೫ (೨೫)	೧೫ (೪೦.೫)	೨೭ (೫೭.೪)	೩೦ ೫೪.೫)	೫೭ (೫೫.೯)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ-೪.೧೩

ಗ್ರಾಮಸಭೆಯ ಬಗ್ಗೆ ಸದಸ್ಯರ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಸರಿಯದ ಉತ್ತರ	೧೧ (೬೧.೧)	೦೬ (೨೮.೬)	೧೭ (೪೩.೬)	೦೭ (೫೮.೩)	೦೩ (೨೧.೪)	೧೦ (೩೮೪೬)	೦೭ (೪೧.೨)	೦೫ (೨೫)	೧೨ (೩೨.೪)	೨೫ (೪೮.೯೨)	೧೪ (೨೫.೫)	೩೦ (೩೮.೨)
ತಪ್ಪು ಉತ್ತರ	೦೭ (೩೮.೯)	೧೫ (೭೧.೪)	೨೨ (೫೬.೪)	೦೫ (೪೧.೭)	೧೧ (೭೮.೬)	೧೬ (೬೧.೫)	೧೦ (೫೮.೮)	೧೫ (೭೫)	೨೫ (೬೭.೬)	೨೨ (೪೬.೫)	೪೧ (೭೪.೫)	೬೩ (೬೧.೮)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ–೪.೧೪

ಗ್ರಾಮ ಸಭೆಯ ಬಗ್ಗೆ ಸದಸ್ಯರ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಸರಿಯಾದ ಉತ್ತರ	೦೯ (೫೦)	೦೫ (೨೩.೮)	೨೫ (೬೪.೧)	೦೫ (೪೧.೭)	೦೯ (೬೪.೩)	೧೪ (೫೩.೮)	೦೯ (೫೨.೯)	೦೫ (೨೫)	೧೪ (೩೭.೮)	೨೩ (೪೫.೯)	೧೯ (೩೪.೫)	೪೨ (೪೧.೨)
ತಪ್ಪು ಉತ್ತರ	೦೯ (೫೦)	೧೬ (೭೬.೨)	೧೪ (೩೫.೯)	೦೭ (೫೮.೩)	೦೫ (೩೫.೭)	೧೨ (೪೬.೨)	೦೮ (೪೭.೧)	೧೫ (೭೫)	೨೩ (೬೨.೨)	೨೪ (೫೧.೧)	೩೬ (೬೫.೫)	೬೦ (೫೮.೮)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ–೪.೧೫

ಗ್ರಾಮ ಪಂಚಾಯಿ ಸಭೆಯ ಕೋರಂ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಸರಿಯಾದ ಉತ್ತರ	೧೦ (೫೫.೫)	೦೫ (೨೩.೮)	೧೫ (೩೮.೫)	೦೭ (೫೮.೩)	೧೧ (೭೮.೬)	೧೮ (೬೯.೨)	೦೯ (೫೨.೯)	೦೪ (೨೦)	೧೩ (೩೫.೧)	೨೬ (೫೫.೩)	೨೦ (೩೬.೪)	೪೬ (೪೫.೧)
ತಪ್ಪು ಉತ್ತರ	೦೮ (೪೪.೫)	೧೬ (೭೬.೨)	೨೪ (೬೧.೫)	೦೫ (೪೧.೭)	೦೩ (೨೧.೪)	೦೮ (೩೦.೮)	೦೮ (೪೭.೧)	೧೬ (೮೦)	೨೪ (೬೪.೯)	೨೧ (೪೪.೭)	೩೫ (೬೩.೬)	೫೬ (೫೪.೯)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ–೪.೧೬

ಗ್ರಾಮ ಸಭೆಯ ಸಭೆ ಕರೆಯುವ ಬಗ್ಗೆ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಸರಿಯಾದ ಉತ್ತರ	೦೮ (೪೪.೪)	೦೪ (೧೯.೦)	೧೨ (೩೦.೮)	೦೫ (೪೧.೭)	೦೨ (೧೪.೩)	೦೭ (೨೬.೯)	೦೫ (೨೯.೪)	೦೪ (೨೦)	೦೯ (೨೪.೩)	೧೮ (೩೮.೩)	೧೦ (೧೮.೨)	೨೮ (೨೭.೫)
ತಪ್ಪು ಉತ್ತರ	೧೦ (೫೫.೬)	೧೭ (೮೧.೦)	೨೭ (೬೯.೨)	೦೭ (೫೮.೩)	೧೨ (೮೫.೭)	೧೯ (೭೩.೧)	೧೨ (೭೦.೬)	೧೬ (೮೦)	೨೮ (೭೫.೭)	೨೯ (೬೧.೭)	೪೫ (೮೧.೮)	೭೪ (೭೨.೫)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ-೪.೧೭

ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿಯಗಳ ಅರಿವು

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಸರಿಯಾದ ಉತ್ತರ	೧೧ (೬೧.೧)	೦೪ (೧೯.೦)	೧೫ (೩೮.೫)	೦೬ (೫೦)	೦೩ (೨೧.೪)	೦೯ (೩೪.೬)	೦೯ (೫೩.೦)	೦೨ (೧೦)	೧೧ (೨೯.೭)	೨೬ (೫೫.೩)	೦೯ (೧೬.೪)	೩೫ (೩೪.೩)
ತಪ್ಪು ಉತ್ತರ	೦೭ (೩೮.೯)	೧೭ (೮೧.೦)	೨೪ (೬೧.೫)	೦೬ (೫೦)	೧೧ (೭೮.೬)	೧೭ (೬೫.೪)	೦೮ (೪೭.೦)	೧೮ (೯೦)	೨೬ (೭೦.೩)	೨೧ (೪೪.೭)	೪೬ (೮೩.೬)	೬೭ (೬೫.೭)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೊನೆಟಿಪ್ಪಣಿ:

೧. ಎಸ್. ಗೆಹಲೂಟ್, ದ. ಫ್ಲೈಟ್ ಆಫ್ ಹ್ಯೂಮನ್ ರೈಟ್ಸ್ ಆಫ್ ಎನ್ ಅನ್‌ಟಚಬಲ್ಸ್, ಅಂಡ್ ದಲಿತ ಇನ್ ಇಂಡಿಯಾ, ಸಮ್ ಎರಿಯಾಸ್ ಆರ್ ಟು ಬಿ ಫೋಕಸ್ಡ್ "ಚೇನಾಬ್ ಬಾನು (ಸಂ), ಡಿಕ್ಲೈನ್ ಆಂಡ್ ಫಾಲ್ ಆಫ್ ಇಂಡಿಯನ್ ಪೊಲಿಟಿಕ್ಸ್, ಕಾನಿಷ್ಕ ಪಬ್ಲಿಕೇಷನ್, ನ್ಯೂಡೆಲ್ಲಿ ೧೯೯೯. ಪು.೨೧೪

೨. ದುರ್ಗದಾಸ್ ಬಸು, ಇಂಟ್ರಡಕ್ಷನ್ ಟು ದಿ ಇಂಡಿಯನ್ ಕಾನ್ಸಿಟಿಟ್ಯೂಷನ್, ನ್ಯೂಡೆಲ್ಲಿ, ವಾಡ್ವ ಅಂಡ್ ಕಂಪನಿ, ಲಾ ಪಬ್ಲಿಷರ್ಸ್, ೨೦೦೧, ಪು.೮೧

೩. ವಿ.ಸಂತೋಷ ಕುಮಾರ್, ಸೋಷಿಯಲ್ ಜಸ್ಟೀಸ್ ಆಂಡ್ ಪಾಲಿಟಿಕ್ಸ್, ಆಫ್ ರಿಜರ್ವೇಷನ್ ಇನ್ ಇಂಡಿಯಾ, ದ ಪೋಸ್ಟ್ ಮಂಡಲ್, ನ್ಯೂಡೆಲ್ಲಿ, ಮಿತ್ತಲ್ ಪಬ್ಲಿಕೇಷನ್, ೧೯೯೯. ಪು. ೬೧-೬೨

೪. ಜಾರ್ಜ್ ಮ್ಯಾಥ್ಯೂವ್, ಪವರ್ ಟು ದ ಪೀಪಲ್, ಎಂ.ಕೆ.ಸಂತಾನಂ (ಸಂ), ಫಿಫ್ಟಿ ಈಯರ್ಸ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್, ನ್ಯೂಡೆಲ್ಲಿ, ಪಬ್ಲಿಕೇಷನ್, ಡಿವಿಜನ್ ಮಿನಿಸ್ಟ್ರೀ ಆಫ್ ಇನ್‌ಫರ್ ಮೇಷನ್ ಆಂಡ್ ಬ್ರಾಡ್ ಕಾಸ್ಟಿಂಗ್ ಗೌರ್ನಮೆಂಟ್ ಆಫ್ ಇಂಡಿಯಾ, ೨೦೦೦ ಪು.೨೭-೬೨

೫. ಪುಲಿಯಾನಿ, ಪು.೫೩

೬. ಅಬ್ದುಲ್ ಅಜೀಜ್, ಡಿಸೆಂಟ್ರಲೈಜೇಷನ್, : ಮಂಡಲ ಪಂಚಾಯತ್ ಸಿಸ್ಟಮ್ ಇನ್ ಕರ್ನಾಟಕ ಹೈದರಾಬಾದ್ ನ್ಯಾಷನಲ್ ಇನ್ಸ್‌ಟಿಟೂಟ್ ಅಫ್ ರೂರಲ್ ಡೆವಲಪ್ ಮೆಂಟ್, ೧೯೯೪. ಪು.೧೩೨-೧೪೭

೭. ಪೀಟರ್ ರೋನಾಲ್ಡ್ ಡಿಸೋಜ, ದ ಸ್ಟ್ರಗಲ್ ಫಾರ ಲೋಕಲ್ ಗವರ್ನಮೆಂಟ್ ಇಂಡಿಯನ್ ಡೆಮಾಕ್ರಸಿಸ್ ನ್ಯೂಫೇಸ್, ಪಬ್ಲೀಷರ್ಸ್, ದ ಜರ್ನಲ್ ಆಫ್ ಫೆಡರಲಿಸಂ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೨೦೦೩, ಸಂಪು. ಸಂ. ೩೩, ಸಂಖ್ಯೆ. ೪ ಪು. ಸಂ.(೧೯-೧೮) ಪು. ೧೯-೪೮

೮. ಯತೀಂದ್ರಸಿಂಗ್ ಸಿಸೋಡಿಯಾ, ಪಂಚಾಯತ್ ರಾಜ್ ಇನ್ ಟ್ರೈಬಲ್ ರೀಜನ್ ಆಫ್ ಮಧ್ಯಪ್ರದೇಶ್; ಲಾ ಆಂಡ್ ಪ್ರಾಕ್ಟೀಸಿಂಗ್ ಫಂಕ್ಷನಿಂಗ್ ಆಫ್ ಪಂಚಾಯತ್ ರಾಜ್ ಸಿಸ್ಟಮ್, ಯತೀಂದ್ರಸಿಂಗ್ ಸಿಸೋಡಿಯಾ (ಸಂ), ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ,

2005, ಪು.143–156

೯. ಶ್ಯಾಮ್‌ನಂದನ್ ಚೌಧರಿ, ದಲಿತ್ ಆಂಡ್ ಟ್ರೈಬಲ್ ಲೀಡರ್‌ಶಿಪ್ ಇನ್ ಪಂಚಾಯತ್, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, 2004, ಪು.50

೧೦. ಆರ್.ವೆಂಕಟರವಿ, ಎ ಸ್ಟಡಿ ಆನ್ ಶೆಡ್ಯೂಲ್ಡ್ ಕಾಸ್ಟ್ಸ್ ಮೆಂಬರ್ಸ್ ಇನ್ ಪಂಚಾಯತ್‌ರಾಜ್ ಇನ್ಸಿಟಿಟ್ಯೂಷನ್ಸ್, ನೆಲ್ಲೂರು ಡಿಸ್ಟ್ರಿಕ್ಟ್ ಆಫ್ ಆಂಧ್ರಪ್ರದೇಶ, ಸ್ಟಡಿ ರಿಪೋರ್ಟ್, ಕೌನ್ಸಿಲ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್, ಹೈದರಾಬಾದ್ 2002, ಪು.53–86

೧೧. ಜೆ.ಕೆ.ಪುಂದಿರ್, ಛೇಂಜಿಂಗ್ ಪ್ಯಾಟ್ರನ್ ಆಫ್ ಶೆಡ್ಯೂಲ್ಡ್ ಕಾಸ್ಟ್, ರಾವತ್ ಪಬ್ಲಿಕೇಷನ್, ಜೈಪುರ್, 1997, ಪು.85–98

೧೨. ಡಿ.ಎಲ್.ಶೇಟ್, ರಿಜರ್‌ವೇಷನ್ ಪಾಲಿಸಿ ರಿನಿಜಿಬೇಕ್ ಡಾ. ಗುರುಪ್ರೀತ್ ಮಹಾಜನ್ (ಸಂ) ಡೆಮಾಕ್ರಸಿ, ಡಿಫರೆನ್ಸ್/ ಆಂಡ್ ಸೋಷಿಯಲ್ ಜಸ್ಟೀಸ್, ದೆಹಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೮, ಪು. ಸಂ.೪೯೧

೧೩. ಡಾ.ಹೆಚ್. ಕುಮಾರಸ್ವಾಮಿ, ದಲಿತ ಚಳುವಳಿ ಮತ್ತು ಸಾಮಾಜಿಕ ನ್ಯಾಯ, ಹೊಸಪೇಟೆ, ದಲಿತ ಅಭಿವೃದ್ಧಿ ಸಂಸ್ಥೆ, ೨೦೧೦, ಪು. ಸಂ.೧೩

೧೪. ಪೂರ್ವೋಕ್ತ ಪು. ಸಂ.೨

೧೫. ಪೂರ್ವೋಕ್ತ ಪು. ೨೧–೫೨

೧೬. ಪೂರ್ವೋಕ್ತ ಪು. ೧೩೨–೧೩೩

೧೭. ಪುಲಿಯಾನಿ ಪು. ಸಂ: ೨೧–೨೨

೧೮. ಅದೇ ಪು. ಪು.೩೧

೧೯. ಅದೇ ಪು. ೩೧–೩೨

೨೦. ಅದೇ ಪು. ೩೫–೩೬

೨೧. ಅದೇ ಪು. ೪೦

೨೨. ಅದೇ ಪು.೪೫

೨೩. ಅದೇ ಪು.೮೭

೨೪. ಅದೇ ಪು. ೯೯-೧೦೦

೨೫. ಅದೇ ಪು. ೯೯-೧೦೦

೨೬. ಅದೇ ಪು. ೧೨೮-೧೨೯

ಅಧ್ಯಾಯ –೫
ಪಂಚಾಯತ್ ಅಧಿಕಾರ ಪ್ರಕ್ರಿಯೆಯಲ್ಲಿ ದಲಿತ ಪ್ರತಿನಿಧಿಗಳ ಸಹಭಾಗಿತ್ವ

೫.೧. ರಾಜಕೀಯ ಸಹಭಾಗಿತ್ವದ ಪರಿಕಲ್ಪನೆ
೫.೨. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ದಲಿತರ ಸಹಭಾಗಿತ್ವ
೫.೩. ವಾರ್ಡ್‌ಸಭೆ/ಜನವಸತಿ ಸಭೆಗಳ ಆಯೋಜನೆಯಲ್ಲಿ ದಲಿತ ಪ್ರತಿನಿಧಿಗಳು
೫.೪. ಗ್ರಾಮ ಸಭೆಯಲ್ಲಿ ದಲಿತ ಪ್ರತಿನಿಧಿಗಳ ಸಹಭಾಗಿತ್ವ
೫.೫. ಗ್ರಾಮ ಸಭೆ ಮತ್ತು ದಲಿತ ಪ್ರತಿನಿಧಿಗಳ ಸಮಸ್ಯೆಗಳು
೫.೬. ಗ್ರಾಮ ಪಂಚಾಯಿತಿ ಸಭೆ ಮತ್ತು ದಲಿತ ಪ್ರತಿನಿಧಿಗಳ ಸಹಭಾಗಿತ್ವ
೫.೭. ದಲಿತ ಸಮುದಾಯದ ಪ್ರತಿನಿಧಿಗಳು ಮತ್ತು ಚರ್ಚೆಯ ವಿಷಯಗಳು
೫.೮. ನಿರ್ಣಯ ಪ್ರಕ್ರಿಯೆ ಮತ್ತು ದಲಿತ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ
೫.೯. ದಲಿತ ಪ್ರತಿನಿಧಿಗಳು ಮತ್ತು ಆಸಕ್ತಿ ವಿಷಯಗಳು
೫.೧೦.ದಲಿತ ಪ್ರತಿನಿಧಿಗಳು ಮತ್ತು ಪ್ರಸ್ತಾವನೆ ಮಂಡನೆ
೫.೧೧.ದಲಿತ ಪ್ರತಿನಿಧಿಗಳು ಮತ್ತು ದಲಿತ ಸಮುದಾಯಕ್ಕೆ ಸ್ಪಂದನೆ
೫.೧೨.ದಲಿತ ಪ್ರತಿನಿಧಿಗಳು ಮತ್ತು ದಲಿತ ಸಮುದಾಯ ಪಡೆದುಕೊಂಡ ಸಹಾಯಗಳು
೫.೧೩.ದಲಿತ ಅಧ್ಯಕ್ಷರುಗಳ ಅಧಿಕಾರ ನಿರ್ವಹಣೆ: ಒಂದು ಅವಲೋಕನ

ಅಧ್ಯಾಯ –೫

ಪಂಚಾಯತ್ ಅಧಿಕಾರ ಪ್ರಕ್ರಿಯೆಯಲ್ಲಿ ದಲಿತ ಪ್ರತಿನಿಧಿಗಳ ಸಹಭಾಗಿತ್ವ

ಅರಿಸ್ಟಾಟಲ್ ಪರಿಭಾವಿಸಿರುವಂತೆ ಮಾನವನು ರಾಜಕೀಯ ಜೀವಿಯಾಗಿದ್ದಾನೆ. ರಾಜಕೀಯ ಚಟುವಟಿಕೆಗಳ ಮೂಲಕ ಮಾವನು ತನ್ನನ್ನು ತಾನು ಸ್ಪಷ್ಟವಾಗಿ ಮತ್ತು ವಿಶ್ವಾಸಾರ್ಹತೆಯಿಂದ ತನಗೆ ಸಂಬಂಧಿಸಿದ ಗುಂಪಿನೊಂದಿಗೆ ಗುರುತಿಸಿಕೊಳ್ಳುತ್ತಾನೆ. ಇಂದು ರಾಜ್ಯದ ವ್ಯವಸ್ಥೆಯು ನಗರ ರಾಜ್ಯದ ಪರಿಕಲ್ಪನೆಯಿಂದ ಆಧುನಿಕ ಪ್ರಜಾಸತ್ತಾತ್ಮಕ ರಾಜ್ಯದ ವ್ಯವಸ್ಥೆಗೆ ರೂಪಾಂತರಗೊಂಡಿದೆ. ಹೀಗಾಗಿ ಅರಿಸ್ಟಾಟಲ್‌ರ ಕಾಲಘಟ್ಟಕ್ಕೆ ಹೋಲಿಸಿದರೆ ಮಾನವ ರಾಜಕೀಯ ಸಹಭಾಗಿತ್ವವು ಇಂದು ಗುಣಾತ್ಮಕ ಬದಲಾಣೆಯನ್ನು ಪಡೆದುಕೊಂಡಿದೆ. ಇಂದಿನ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳ ಸ್ಥಾಪನೆಗೆ ಪ್ರಜ್ಞಾಪೂರ್ವಕವಾದ ಈ ದೃಢವಾದ ರಾಜಕೀಯ ಸಹಭಾಗಿತ್ವದ ಅಗತ್ಯವಿದೆ. ಈ ರೀತಿಯಲ್ಲಿ ರೂಪುಗೊಂಡ ಪ್ರಜಾಸತ್ತಾತ್ಮಕ ಸಂಸ್ಥೆಯ ಪ್ರತಿಯೊಬ್ಬ ನಾಗರಿಕನಿಗೂ ಉಪಯುಕ್ತವಾಗಿರುತ್ತವೆ.

ರಾಜಕೀಯ ವ್ಯವಸ್ಥೆಯಲ್ಲಿ ಜನರ ಪಾಲ್ಗೊಳ್ಳುವಂತೆ ಇಂದು ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದೆ. ಗುರಿಗಳ ನಿಗದಿಕರಿಸುವಿಕೆ ಮತ್ತು ನೀತಿಗಳ ರೂಪಿಸುವಿಕೆ ಹಾಗೂ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಜನರ ಪಾಲ್ಗೊಳ್ಳುವಿಕೆ ಅಗತ್ಯವೆಂದು ಪರಿಗಣಿಸಲಾಗುತ್ತಿದೆ. ರಾಜಕೀಯ ಪಾಲ್ಗೊಳ್ಳುವಿಕೆಯು ಜನರಿಗೆ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಅವಕಾಶ ನೀಡುತ್ತಿರುವುದರಿಂದ ರಾಜಕೀಯ ಸಹಭಾಗಿತ್ವ ಇಂದು ರಾಜಕೀಯ ಮಹತ್ವ ಪಡೆದುಕೊಳ್ಳುತ್ತಿದೆ.

ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಉಳಿವಿಗೆ ರಾಜಕೀಯ ಪಾಲ್ಗೊಳ್ಳುವಿಕೆ ಮುಖ್ಯ ಪಾತ್ರ ವಹಿಸುತ್ತದೆ. ರಾಜಕೀಯ ಅರಿವಿನ ಕೊರತೆ ಮತ್ತು ನಿಷ್ಕ್ರಿಯತೆಗಳು ರಾಜಕೀಯ ವ್ಯವಸ್ಥೆಯನ್ನು ಬೇಜವಾಬ್ದಾರಿಯುತಗೊಳಿಸಿ ಅಂತಿಮವಾಗಿ ರಾಜಕೀಯ ವ್ಯವಸ್ಥೆಯನ್ನು ಸ್ಥಗಿತಗೊಳಿಸುತ್ತವೆ. ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಅರಿವು ಸಾಮಾನ್ಯ ನಾಗರಿಕನಿಗೆ ತಮ್ಮ ಹಿತಾಸಕ್ತಿಗಳನ್ನು ಸ್ಪಷ್ಟಪಡಿಸಿಕೊಳ್ಳುವ ಪ್ರಜ್ಞೆಯನ್ನು ಮೂಡಿಸುತ್ತಿದೆ. ರಾಜಕೀಯ ಪ್ರಜ್ಞೆಯಿಂದ ಸೃಷ್ಟಿಗೊಂಡ ಹಿತಾಸಕ್ತಿಗಳು ಅವುಗಳ ಕ್ರೋಢೀಕರಣಗಳಾಗಿ ಪರಿವರ್ತಿತವಾಗಲು ಅವಕಾಶ ನೀಡುತ್ತಿದೆ. ಹಿತಾಸಕ್ತಿಗಳ ಕ್ರೋಢೀಕರಣವು ನಾಗರಿಕರ ಸಂಘಟನೆ ಸಹಕಾರಿ ಯಾಗುತ್ತಿದೆ. ಜನಶಕ್ತಿ ಸಂಘಟನೆಯು ರಾಜಕೀಯ ವ್ಯವಸ್ಥೆಯಲ್ಲಿ ಸಕ್ರಿಯ ಮತ್ತು ಪರಿಣಾಮಕಾರಿ

ಪಾಲ್ಗೊಳ್ಳುವಿಕೆಯು ಅವಕಾಶ ನೀಡುತ್ತಿದೆ. ಈ ಎಲ್ಲ ಚರ್ಚೆಗಳ ಹಿನ್ನೆಲೆಯಲ್ಲಿ ರಾಜಕೀಯ ಸಹಭಾಗಿತ್ವವು ಇಂದು ಪ್ರಾಧಾನ್ಯತೆಯನ್ನು ಪಡೆದುಕೊಂಡಿದೆ.

ದೇಶದ ವಿವಿಧ ಭಾಗಗಳಲ್ಲಿ ದಲಿತರ ಜೀವನದ ವಿವಿಧ ಆಯಾಮಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಈಗಾಗಲೇ ಕೈಗೊಂಡಿರುವ ದಲಿತರಿಗೆ ಸಂಬಂಧಿಸಿದ ಬಹುತೇಕ ಅಧ್ಯಯನಗಳು ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ನೆಲಗಳಲ್ಲಿ ಕೈಗೊಳ್ಳಲಾಗಿದ್ದು, ಅವುಗಳಲ್ಲಿ ಕೆಲವು ಅಧ್ಯಯನಗಳು ಮಾತ್ರ ರಾಜಕೀಯ ನೆಲೆಯಲ್ಲಿ ಕೈಗೊಳ್ಳಲಾಗಿದ್ದು, ಅವುಗಳ ಸಂಖ್ಯೆ ಅತ್ಯಂತ ಕಡಿಮೆಯಾಗಿವೆ. ಆದ್ದರಿಂದ ರಾಜಕೀಯ ವ್ಯವಸ್ಥೆಯಲ್ಲಿ ದಲಿತರ ಪಾಲ್ಗೊಳ್ಳುವಿಕೆಯನ್ನು ಅಧ್ಯಯನಕ್ಕೆ ಒಳಪಡಿಸುವುದು ಇಂದಿನಿಂದ ಅಗತ್ಯವಾಗಿದೆ. ರಜನಿ ಕೊಠಾರಿಯವರ ಅಧ್ಯಯನ ಹೇಳುವಂತೆ ಭಾರತೀಯ ಸಮಾಜದ ವಿವಿಧ ವರ್ಗಗಳ ಕ್ರೋಢೀಕರಣವು ದೇಶದ ರಾಜಕಾರಣಕ್ಕೆ ಜಾತೀಯ ವಿಷಯಗಳನ್ನು ಒದಗಿಸಿಕೊಟ್ಟಿದೆ. ವಿವಿಧ ರಾಜಕೀಯ ಪಕ್ಷಗಳು ತಮ್ಮ ಬೆಂಬಲಿತ ನೆಲಗಳನ್ನು ವಿಸ್ತರಿಸಿಕೊಳ್ಳಲು ವಿವಿಧ ಜಾತಿ ಗುಂಪುಗಳ ಕ್ರೋಢೀಕರಣವನ್ನು ಒಂದು ತಂತ್ರವಾಗಿ ಬಳಸುತ್ತಿವೆ.[೧]

೫.೧. ರಾಜಕೀಯ ಸಹಭಾಗಿತ್ವ ಪರಿಕಲ್ಪನೆ :

ರಾಜಕೀಯ ಸಾಹಿತ್ಯದಲ್ಲಿ ರಾಜಕೀಯ ಸಹಭಾಗಿತ್ವವನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಷಿಸಲಾಗಿದೆ. ರಾಜಕೀಯ ಸಹಭಾಗಿತ್ವವು ಆಳುವ ವರ್ಗವನ್ನು ಆಯ್ಕೆ ಮಾಡುವಲ್ಲಿ ಜನತೆ ತೋರಿಸುವ ಸಕ್ರಿಯ ಮತ್ತು ಸ್ವಯಂ ಚಟುವಟಿಕೆಗಳನ್ನು ರಾಜಕೀಯ ಮಾಹಿತಿ ಪಡೆಯುವುದು, ಮತದಾನ, ರಾಜಕೀಯ ಚರ್ಚೆಯಲ್ಲಿ ಪಾಲ್ಗೊಳ್ಳುವುದು. ರಾಜಕೀಯ ಸಭೆಗಳಲ್ಲಿ ಪಾಲ್ಗೊಳ್ಳುವುದು, ರಾಜಕೀಯ ಪಕ್ಷಗಳಿಗೆ ವಂತಿಗೆ ನೀಡುವುದು ಈ ಜನಪ್ರತಿನಿಧಿಗಳೊಂದಿಗೆ ಸಂಪರ್ಕ ಹೊಂದುವುದು, ಪಕ್ಷದ ಸದಸ್ಯತ್ವ ಪಡೆಯುವುದು, ಪ್ರಚಾರ ಮಾಡುವುದು, ಮತದಾರರನ್ನು ನೋಂದಾಯಿಸುವುದು ಮುಂತಾದ ಸಂಗತಿಗಳು ರಾಜಕೀಯ ಸಹಭಾಗಿತ್ವ ಒಳಗೊಂಡಿದೆ. ರಾಜಕೀಯ ಪಾಲ್ಗೊಳ್ಳುವಿಕೆ ನಿಖರವಾಗಿ ರಾಜಕೀಯ ಚಟುವಟಿಕೆಯಾಗಿದ್ದು ಇವುಗಳು ವೃತ್ತಿಪರವಾಗಿ ರಾಜ್ಯದ ವ್ಯವಹಾರಗಳಲ್ಲಿ ಭಾಗವಹಿಸುವ ಖಾಸಗಿ ನಾಗರಿಕ ವರ್ತನೆ ಮತ್ತು ನಡವಳಿಗಳಿಗಿಂತ ಭಿನ್ನವಾಗಿದೆ.[೨]

ಬಸಿರುದ್ದೀನ್ ಅಹಮ್ಮದ್ ವ್ಯಾಖ್ಯಾನಿಸುವ ಪ್ರಕಾರ ರಾಜಕೀಯ ಸಹಭಾಗಿತ್ವದ ಪರಿಕಲ್ಪನೆಯನ್ನು ವಿಶ್ಲೇಷಿಸುವುದು ಕಷ್ಟಕರ ಸಂಗತಿ. ಏಕೆಂದರೆ ಈ ರಾಜಕೀಯ ಸಹಭಾಗಿತ್ವವು ವಿವಿಧ ಅಂಶಗಳ ಉತ್ಪಾದನೆಯಾಗಿದೆ.[೩] ಕೆಲವರಿಗೆ ರಾಜಕಾರಣ ನಿರಂತರವಾದ ಮತ್ತು ಜವಾಬ್ದಾರಿಯುತವಾದ ಸಂಗತಿಯಾಗಿದ್ದರೆ, ಮತ್ತೆ ಕೆಲವರಿಗೆ ಸಮಸ್ಯೆಗಳು ಎದುರಾದಾಗ ಮಾತ್ರ, ಬಳಕೆಯಾಗುವ

ಸಂಗತಿಯಾಗುತ್ತವೆ. ಆದ್ದರಿಂದ ರಾಜಕೀಯ ಸಹಭಾಗಿತ್ವವು ಹೆಚ್ಚು ಸಮಯೋಚಿತ, ಸಂದರ್ಭೋಚಿತ ಮತ್ತು ತಟಸ್ಥಿತಿಯಿಂದ ಹೆಚ್ಚು ಕ್ರಿಯಶೀಲತೆ ಮತ್ತು ನಿರಂತರತೆಯತ್ತ ವಿಸ್ತಾರಗೊಳ್ಳುತ್ತವೆ.[೪] ರಾಜಕೀಯ ಸಹಭಾಗಿತ್ವ ಒಂದು ನಾಗರಿಕ ಕರ್ತವ್ಯ ಮತ್ತು ದೇಶದ ಉತ್ತಮ ರಾಜಕೀಯ ಆರೋಗ್ಯದ ಸೂಚಿಯಾಗಿದೆ. ರಾಜಕೀಯ ಸಹಭಾಗಿತ್ವವು ವಿಶಾಲವಾದ ಅರ್ಥವನ್ನು ಒಳಗೊಂಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಟ್ಟಾರೆ ನೀಡುವ ಮತ್ತು ಹಿಂಪಡೆಯುವ ಪ್ರಮುಖ ಉದ್ಯಮವಾಗಿ ರಾಜಕೀಯ ಸಹಭಾಗಿತ್ವವು ಕಾರ್ಯನಿರ್ವಹಿಸುತ್ತದೆ ಮತ್ತು ಆಳುವವರು ಆಳಿಸಿಕೊಳ್ಳುವರಿಗೆ ಉತ್ತರದಾಯಿಯಾಗುವಂತೆ ಮಾಡುತ್ತವೆ.[೫] ರಾಜಕೀಯ ಸಹಭಾಗಿತ್ವವೆಂದರೆ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲ ವಿಧದ ಸಮುದಾಯಗಳ ಪಾಲ್ಗೊಳ್ಳುವಿಕೆಯಾಗಿದೆ.[೬] ರಾಜಕೀಯ ಪಾಲ್ಗೊಳ್ಳುವಿಕೆಯು ಎಲ್ಲ ರಾಜಕೀಯ ವ್ಯವಸ್ಥೆಗಳ ಅಗತ್ಯವಾಗಿದೆ. ಅಂತರ್ಗತೆ ದ್ರವ್ಯವಾಗಿದೆ.[೭] ರಾಜಕೀಯ ಸಹಭಾಗಿತ್ವವನ್ನು ಮೆರನ್ ವೀನೆರ್ ವ್ಯಾಖ್ಯಾನಿಸುವ ಪ್ರಕಾರ " ಸಾರ್ವಜನಿಕ ನೀತಿಗಳ ಆಯ್ಕೆಯಲ್ಲಿ ಸಾರ್ವಜನಿಕ ವ್ಯವಹಾರಗಳ ನಿರ್ವಹಣೆ ಮತ್ತು ರಾಜಕೀಯ ನಾಯಕರ ಆಯ್ಕೆಯ ಉದ್ದೇಶಕ್ಕಾಗಿ ಸಾರ್ವಜನಿಕ ವ್ಯವಹಾರದ ನಿರ್ವಹಣೆ ಮತ್ತು ರಾಜಕೀಯ ನಾಯಕರ ಆಯ್ಕೆಯ ಉದ್ದೇಶಕ್ಕಾಗಿ ಕೈಗೊಳ್ಳುವ ಯಶಸ್ವಿ ಅಥವಾ ವಿಫಲ, ಸಂಘಟಿತ, ಅಸಂಘಟಿತ ಆಕಸ್ಮಿಕ ಅಥವಾ ನಿರಂತರವಾದ ನಿಯಮಾನುಸಾರವಾದ ಅಥವಾ ನ್ಯಾಯಯಾನುಸಾರವಲ್ಲದ ವಿಧಾನಗಳನ್ನು ಒಳಗೊಂಡ ಸ್ವಯಂ ಕ್ರಿಯೆಗಳನ್ನು ರಾಜಕೀಯ ಸಹಭಾಗಿತ್ವ ಒಳಗೊಂಡಿದೆ.[೮] ರಾಜಕೀಯ ಸಹಭಾಗಿತ್ವವು ಖಾಸಗಿ ನಾಗರಿಕರ ಕಾನೂನು ಬದ್ಧ ಚಟುವಟಿಕೆಯಾಗಿದ್ದು, ಅವುಗಳು ಹೆಚ್ಚು ಕಡಿಮೆ ನೇರವಾಗಿ ಸರ್ಕಾರಿ ಸಿಬ್ಬಂದಿಯ ಆಯ್ಕೆ ಮತ್ತು ಅವರ ಕ್ರಿಯೆಗಳನ್ನು ಪ್ರಭಾವಿಸುವ ಉದ್ದೇಶವನ್ನು ಹೊಂದಿರುತ್ತವೆ ಎನ್ನುವುದು ಸಿಡ್ನಿ ವೆರ್ಬ್ ಸಿ.ಆಂಡ್ ಕಿಮ್ ಅವರ ಪ್ರತಿಪಾದನೆ.[೯] ಮಿಲ್‌ಬ್ರಾತ್ ಮತ್ತು ಗೋಯೆಲ್ ಪರಿಭಾವಿಸುವಂತೆ "ರಾಜಕೀಯ ಸಹಭಾಗಿತ್ವವು ಖಾಸಗಿ ವ್ಯಕ್ತಿಗಳ ಕಾರ್ಯಚರಣೆಯಾಗಿದ್ದು, ಇವುಗಳ ಮೂಲಕ ಸರ್ಕಾರಿ ಮತ್ತು ರಾಜಕಾರಣವನ್ನು ಪ್ರಭಾವಿಸುತ್ತಾರೆ. ಅಥವಾ ಬೆಂಬಲಿಸುತ್ತಾರೆ. ಇತರೆ ವ್ಯಾಖ್ಯಾನಗಳಿಗೆ ಹೋಲಿಸಿದರೆ ಈ ವ್ಯಾಖ್ಯಾನ ವ್ಯಾಪಕವಾಗಿದೆ. ಇದು ಕೇವಲ ರಾಜಕೀಯ ಹುಟ್ಟುವಳಿಗಳನ್ನು ಪ್ರಭಾವಿಸುವ ಕ್ರಿಯಾಶೀಲತೆಯನ್ನು ಒಳಗೊಂಡಿಲ್ಲ. ಬದಲಾಗಿ ಇದರೊಂದಿಗೆ ಬೆಂಬಲಿತ ಚಟುವಟಿಕೆಗಳನ್ನು ಸಹಭಾಗಿತ್ವವು ಒಳಗೊಂಡಿದೆ.[೧೦] ಮ್ಯಾಕ್‌ಕ್ಲೋಸ್ಕ್ ವ್ಯಾಖ್ಯಾನಿಸುವಂತೆ ರಾಜಕೀಯ ಸಹಭಾಗಿತ್ವವು ವ್ಯಕ್ತಿಗಳ ಸ್ವಯಂ ಚಟುವಟಿಕೆಗಳಾಗಿದ್ದು, ಇವುಗಳ ಮೂಲಕ ಆಳುವವರನ್ನು ಆಯ್ಕೆ ಮಾಡಲು ಸಮಾಜದ ವ್ಯಕ್ತಿಗಳೊಂದಿಗೆ ಭಾಗವಹಿಸುತ್ತಾರೆ ಮತ್ತು

ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೀತಿಗಳನ್ನು ರೂಪಿಸುವುದರಲ್ಲಿ ಜನರು ಭಾಗವಹಿಸುತ್ತಾರೆ.[೧೧]

ರುಷ್ ಮತ್ತು ಅತೋಷ್ ವಿವರಿಸುವ ಪ್ರಕಾರ ರಾಜಕೀಯ ಗುಂಪುಗಳ ಚಟುವಟಿಕೆಗಳಾದ ಚಳುವಳಿ, ಪಕ್ಷಗಳು, ಒತ್ತಡ ಗುಂಪುಗಳಲ್ಲಿ ಭಾಗವಹಿಸುವ ಕ್ರಿಯೆಗೆ ಸಂಬಂಧಿಸಿದೆ. ರಾಜಕೀಯ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನವನ್ನು ಹೊಂದುವುದು ಅನೌಪಚಾರಿಕ ಚಟುವಟಿಕೆಗಳಾದ ರಾಜಕೀಯ ಚರ್ಚೆ, ರಾಜಕೀಯ ಸಭೆಗಳಲ್ಲಿ ಭಾಗವಹಿಸುವುದು ಅಧಿಕಾರಿ ವರ್ಗವನ್ನು ರಾಜಕೀಯವಾಗಿ ಓಲೈಸಿಕೊಳ್ಳುವುದು ಮುಂತಾದ ಸಂಗತಿಗಳನ್ನು ಒಳಗೊಂಡಿದೆ.[೧೨]

ರಾಜಕೀಯ ಸಹಭಾಗಿತ್ವವನ್ನು ವಿವಿಧ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ರಾಜಕೀಯ ಸಹಭಾಗಿತ್ವ ವಿವಿಧ ವ್ಯಾಖ್ಯಾನಗಳನ್ನು ಸಂಕ್ಷಿಪ್ತಗೊಳಿಸುವುದಾದರೆ ರಾಜಕೀಯ ಸಹಭಾಗಿತ್ವವು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಾದರೆ ಮತ್ತು ಐದು ಸಮಾಜದ ಗುರಿಗಳನ್ನು ನಿಗದಿಪಡಿಸುವ ಮತ್ತು ಅವುಗಳ ಈಡೇರಿಕೆಗೆ ಮಾರ್ಗಗಳನ್ನು ಕಂಡುಕೊಲ್ಳುವ ಪ್ರಕ್ರಿಯೆಯಲ್ಲಿ ನಾಗರಿಕರು ಭಾಗವಹಿಸುವುದನ್ನು ಖಾತ್ರಿಪಡಿಸುತ್ತದೆ. ಸಾಮಾನ್ಯವಾಗಿ ರಾಜಕೀಯ ಸಹಭಾಗಿತ್ವವು ಮತದಾನ, ಚರ್ಚೆ ಮತ್ತು ಆಯ್ಕೆಗಳ ಬದಲಾವಣೆ, ಸಭೆಗಳಲ್ಲಿ ಭಾಗವಹಿಸುವಿಕೆ, ವಂತಿಗೆ ನಿಡುವುದು ಮತ್ತು ಪ್ರತಿನಿಧಿಗಳೊಂದಿಗೆ ಸಂಪರ್ಕ ಸಾಧಿಸುವ ಚಟುವಟಿಕೆಗಳನ್ನು ಕೂಡ ಒಳಗೊಂಡಿದೆ.

ಈ ಮೇಲಿನ ಎಲ್ಲಾ ವ್ಯಾಖ್ಯಾನಗಳು ಸಾಮಾನ್ಯ ನಾಗರೀಕರ ರಾಜಕೀಯ ಸಂಬಂಧಪಟ್ಟ ವ್ಯಾಖ್ಯಾನಗಳಾಗಿವೆ. ಈ ವ್ಯಾಖ್ಯಾನಗಳು ಸಾಮಾನ್ಯ ನಾಗರೀಕರು ರಾಜಕೀಯ ಮಾಹಿತಿಯನ್ನು ಪಡೆಯುವ ಹಂತದಿಂದ ಆಯ್ಕೆಗೊಂಡು ರಾಜಕೀಯ ಅಧಿಕಾರವನ್ನು ಪಡೆಯುವವರರೆಗಿನ ಅಂತಿಮ ಹಂತದವರೆಗಿನ ರಾಜಕೀಯ ಸಹಭಾಗಿತ್ವದ ಹಂತಗಳನ್ನು ಮಾತ್ರ ಪ್ರತಿನಿಧಿಸುತ್ತದೆ. ಆದರೆ ಒಬ್ಬ ನಾಗರೀಕ ಚುನಾವಣೆಗೆ ಸ್ಪರ್ಧಿಸಿ ಜನರಿಂದ ಆಯ್ಕೆಗೊಂಡು ನಿರ್ದಿಷ್ಟ ರಾಜಕೀಯ ಸಂಸ್ಥೆಗಳನ್ನು ಪ್ರವೇಶಿಸಿ ಅಲ್ಲಿನ ಅಧಿಕಾರ ಮತ್ತು ನಿರ್ಣಯ ಪ್ರಕ್ರಿಯೆಗಳಲ್ಲಿ ಹೇಗೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಾನೆ ಎನ್ನುವುದನ್ನು ಮೇಲಿನ ವ್ಯಾಖ್ಯಾನಗಳು ಸ್ಪಷ್ಟಿಕರಿಸುವುದಿಲ್ಲ.

ಪ್ರಸ್ತುತ ಅಧ್ಯಯನವು ದಲಿತ ಸಮುದಾಯದ ಪ್ರತಿನಿಧಿಗಳ ಪಂಚಾಯತ್ ಅಧಿಕಾರ ಮತ್ತು ನಿರ್ಣಯ ಪ್ರಕ್ರಿಯೆಯಲ್ಲಿ ಯಾವ ಯಾವ ಹಂತಗಳಲ್ಲಿ ಹೇಗೆ ಸಕ್ರೀಯವಾಗಿ ಭಾಗವಹಿಸುತ್ತಾನೆ ಎನ್ನುವುದರ ಮೇಲೆ ಬೆಳಕು ಚೆಲ್ಲುವ ಉದ್ದೇಶವನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಅಧ್ಯಕ್ಷರು ಗ್ರಾಮ ಪಂಚಾಯತ್‌ನ ಅಧಿಕಾರ ಮತ್ತು ನಿರ್ಣಯ ಪ್ರಕ್ರಿಯೆಗಳ ವಿವಿಧ ಹಂತಗಳಲ್ಲಿ ಹೇಗೆ ಭಾಗವಹಿಸುತ್ತಾರೆ ಹಾಗೂ ದಲಿತ ಸಮುದಾಯದ ಅಧ್ಯಕ್ಷರು ಹೇಗೆ ಅಧಿಕಾರಿಗಳ

ಚಲಾಯಿಸುತ್ತಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದ್ದು, ಇದರ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೫.೨. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ದಲಿತರ ಸಹಭಾಗಿತ್ವ :

ಪ್ರಜಾಪ್ರಭುತ್ವದ ಯಶಸ್ವಿಗೆ ಎಲ್ಲಾ ಸಮುದಾಯಗಳ ಪಾಲ್ಗೊಳ್ಳುವಿಕೆ ಅತೀ ಮುಖ್ಯವಾದುದು ಈ ಹಿನ್ನೆಲೆಯಲ್ಲಿ ದಲಿತರ ಸಹಭಾಗಿತ್ವದ ಅಧ್ಯಯನಗಳು ಹೆಚ್ಚು ಮಹತ್ವ ಪಡೆದುಕೊಳ್ಳುತ್ತವೆ. ದೇಶದ ವಿವಿಧ ಭಾಗಗಳಲ್ಲಿ ಕೈಗೊಂಡಿರುವ ಪಂಚಾಯತ್ ಸಂಸ್ಥೆಗಳಲ್ಲಿ ದಲಿತ ಸಮುದಾಯದ ಸಹಭಾಗಿತ್ವವನ್ನು ಕುರಿತು ವಿವಿಧ ಆಯಾಮಗಳ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ೧೯೯೩ರ ಸಂವಿಧಾನದ ೭೩ನೇ ತಿದ್ದುಪಡಿಯ ಪೂರ್ವದಲ್ಲಿ ಕೈಗೊಂಡ ಗುರುಮೂರ್ತಿ ಯವರ ಅಧ್ಯಯನ ಹೇಳುವಂತೆ ಪಂಚಾಯತ್ ಸಂಸ್ಥೆಗಳಾದ ಗ್ರಾಮಸಭೆ ಮತ್ತು ಗ್ರಾಮ ಪಂಚಾಯತಿಗಳಲ್ಲಿ ದುರ್ಬಲ ವರ್ಗಗಳ ಪಾಲ್ಗೊಳ್ಳುವಿಕೆ ತೃಪ್ತಿಕರವಾಗಿರಲಿಲ್ಲ. ದಲಿತರು ಪಡೆದುಕೊಂಡಿರುವ ಕನಿಷ್ಠ ಶಿಕ್ಷಣ ಮತ್ತು ದುರ್ಬಲ ಆರ್ಥಿಕತೆಯಿಂದಾಗಿ ಗ್ರಾಮಸಭೆ ಮತ್ತು ಪಂಚಾಯತ್ ಸಭೆ ಹಾಗೂ ನಿರ್ಣಯ ಪ್ರಕ್ರಿಯೆಗಳಲ್ಲಿ ಅವರ ಪಾಲ್ಗೊಳ್ಳುವಿಕೆ ಸಕ್ರಿಯವಾಗಿರಲಿಲ್ಲ.[೧೩] ಇದು ಸಂವಿಧಾನ ತಿದ್ದುಪಡಿಯ ಪೂರ್ವದಲ್ಲಿದ್ದ ದಲಿತ ಸಮುದಾಯಗಳ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಮಾತ್ರ ಪ್ರತಿನಿಧಿಸುತ್ತವೆ. ಆದರೆ ಸಂವಿಧಾನ ತಿದ್ದುಪಡಿಯ ನಂತರ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಬದ್ಧ ಸ್ಥಾನಮಾನವನ್ನು ನೀಡಿದ ನಂತರದ ದಲಿತರ ಪಾಲ್ಗೊಳ್ಳುವಿಕೆಯ ಚಿತ್ರಣವನ್ನು ಪ್ರತಿನಿಧಿಸುವುದಿಲ್ಲ. ಆದರೆ ಈ ಚಿತ್ರಣದ ಬಗ್ಗೆ ಇನ್ನು ಕೆಲವು ಅಧ್ಯಯನಗಳು ಬೆಳಕು ಚೆಲ್ಲುತ್ತವೆ. ಶ್ಯಾಮಲ ಅವರು ಕರ್ನಾಟಕದ ಜಿಲ್ಲಾ ಪಂಚಾಯಿತ್ತಿ ಸದಸ್ಯರ ಅಧ್ಯಯನದಲ್ಲಿ ಕಂಡುಕೊಂಡಿರುವಂತೆ ಕರ್ನಾಟಕದ ಪರಿಶಿಷ್ಟ ಜಾತಿ ಸಮುದಾಯಗಳಲ್ಲಿ ಹೊಸ ನಾಯಕತ್ವ ಉದಯವಾಗುತ್ತದೆ. ಇದು ಅಭಿವೃದ್ಧಿಪರವಾದ ಮತ್ತು ಚಲನಶೀಲತೆಯ ಸಂಕೇತವಾಗಿದೆ. ಈ ನಾಯಕತ್ವವು ಭೂರಹಿತ ವರ್ಗವಾಗಿರುವುದು ಒಂದು ವಿಶೇಷವಾದ ಸಂಗತಿ ಹೊಸ ಪಂಚಾಯತ್ ವ್ಯವಸ್ಥೆಯಿಂದಾಗಿ ಬೇರುಮಟ್ಟದ ಜನತೆಗೆ ಅಧಿಕಾರ ವರ್ಗಾಯಿಸುವ ಪ್ರಕ್ರಿಯೆ ಆರಂಭವಾಯಿತು.

ಗ್ರಾಮೀಣ ಸಂಸ್ಥೆಗಳಿಗೆ ನೀಡಿರುವ ಮೀಸಲಾತಿಯಿಂದಾಗಿ ಅಧಿಕಾರ ಸಂರಚನೆಯ ಸ್ವರೂಪ ಬದಲಾಗುತ್ತಿತ್ತು. ನಿರ್ಲಕ್ಷಿತ ಸಮುದಾಯಗಳಿಗೆ ಅಧಿಕಾರ ಪ್ರಾಪ್ತವಾಗಿರುತ್ತದೆ. ಈ ಬೆಳವಣಿಗೆಯಿಂದಾಗಿ ಹೊಸ ತಲೆಮಾರು ಪಂಚಾಯತ್ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಆರಂಭಿಸಿದ್ದಾರೆ. ಈ ಅಧ್ಯಯನ ಕಂಡುಕೊಂಡಿರುವಂತೆ ದಲಿತ

ಸಮುದಾಯದ ಪಾಲ್ಗೊಳ್ಳುವಿಕೆ ತೃಪ್ತಿಕರವಾಗಿದೆ ಎಂದರ್ಥವಲ್ಲ. ಈ ಸಮುದಾಯ ಪಾಲ್ಗೊಳ್ಳುವಿಕೆಗೆ ಬೇಕಾದ ಜ್ಞಾನ ಮತ್ತು ಕೌಶಲ್ಯಗಳನ್ನು ರೂಢಿಸಿಕೊಂಡಾಗ ಅರ್ಥಪೂರ್ಣ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ. ಕೆಲವು ದಲಿತರು ಮಾತ್ರ ಇಂದಿಗೂ ಬಲಿಷ್ಠ ವರ್ಗಗಳ ಮತ್ತು ಬಲಿಷ್ಠ ಸಮುದಾಯಗಳ ವಕ್ತಾರರಾಗಿದ್ದಾರೆ. ಇವರಲ್ಲಿ ಮಹಿಳೆಯರ ಸಂಖ್ಯೇ ಹೆಚ್ಚು. ಗ್ರಾಮಸಭೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಇನ್ನಷ್ಟು ದೂರ ಕ್ರಮಿಸಬೇಕಾದ ಅಗತ್ಯವಿದೆ. ಈ ಅಧ್ಯಯನದ ಅಂತಿಮ ಫಲಿತ ಹೇಳುವಂತೆ ೭೩ರ ಸಂವಿಧಾನ ತಿದ್ದುಪಡಿಯ ನಂತರ ಪಂಚಾಯತ್‌ಗಳಲ್ಲಿ ವಿಭಿನ್ನ ಚಿತ್ರಣ ಕಂಡು ಬರುತ್ತವೆ.[೧೪] ಸಂವಿಧಾನ ತಿದ್ದುಪಡಿಯ ನಂತರ ಉತ್ತರ ಪ್ರದೇಶದ ಪಂಚಾಯತ್ ಅಧ್ಯಕ್ಷರುಗಳು ಕಾರ್ಯನಿರ್ವಹಣೆಯನ್ನು ವಿಜಯ್‌ಕುಮಾರ್ ಅವರು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಅಧ್ಯಯನದ ಫಲಿತಗಳು ಹೇಳುವಂತೆ ಸರ್ಕಾರಗಳು ದಲಿತರ ಅಭಿವೃದ್ಧಿಗೆ ರೂಪಿಸಿರುವ ಸರ್ಕಾರದ ಕಾರ್ಯಕ್ರಮಗಳನ್ನು ದಲಿತರ ಮನೆ ಬಾಗಲಿಗೆ ಮುಟ್ಟಿಸುವಲ್ಲಿ ದಲಿತ ಸಮುದಾಯದ ಅಧ್ಯಕ್ಷರುಗಳು ಯಶಸ್ವಿಯಾಗಿದ್ದಾರೆ. ಆದರೆ, ದಲಿತರಿಗೆ ಸೌಲಭ್ಯಗಳನ್ನು ಮುಟ್ಟಿಸುವಲ್ಲಿ ಇತರೆ ಸಮುದಾಯದ ಅಧ್ಯಕ್ಷರುಗಳು ಸಫಲವಾಗಿಲ್ಲ, ಆದರೂ, ಜಾತಿ ಆಧಾರಿತ ಸಮಾಜದಲ್ಲಿ ಮೇಲ್ಜಾತಿ ಸಮುದಾಯಗಳು ದಲಿತ ಅಧ್ಯಕ್ಷರಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಂತೆ ಸವಾಲುಗಳನ್ನು ಸೃಷ್ಟಿಸುತ್ತಿದ್ದಾರೆ.[೧೫] ಸಮುತಿ ಎಸ್. ಮತ್ತು ವಿ.ಸುದರ್ಶನ್‌ರವರು ಪಂಚಾಯತ್‌ಗಳಲ್ಲಿರುವ ದಲಿತ ಅಧ್ಯಕ್ಷರುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ತಮಿಳುನಾಡಿನಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಫಲಿತಗಳು ಹೇಳುವ ಪ್ರಕಾರ, ದಲಿತ ಅಧ್ಯಕ್ಷರುಗಳಿಗೆ ಮುಕ್ತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಅಧ್ಯಕ್ಷ ಸ್ಥಾನವನ್ನು ದಲಿತರಿಗೆ ಮೀಸಲಿಟ್ಟಿರುವ ಪಂಚಾಯತ್‌ಗಳಲ್ಲಿ ದಲಿತರು ಮತ್ತು ಮೇಲ್ಜಾತಿಗಳ ನಡುವೆ ಸಂಘರ್ಷ ನಿರ್ಮಾಣವಾಗುತ್ತದೆ. ದಲಿತರನ್ನು ಬೆಂಬಲಿಸುವ ಕೆಲವು ಮೇಲ್ಜಾತಿ ಜನರನ್ನು ಇತರೆ ಮೇಲ್ಜಾತಿ ಜನರು ಅವರನ್ನು ದಲಿತರೆಂದು ಮೂದಲಿಸುತ್ತಾರೆ. ಗುಲಾಮರು ತಮ್ಮನ್ನು ಆಳುವಂತಿಲ್ಲ ಎನ್ನುವ ಮನೋಭಾವನೆ ಕೆಲವು ಮೇಲ್ಜಾತಿಗಳಲ್ಲೂ ಮನೆ ಮಾಡಿದೆ. ಸಂವಿಧಾನ ಮತ್ತು ಸಂಸತ್ತಿನ ಹೆಸರಿನಲ್ಲಿ ದೇವರು ಸೃಷ್ಟಿಸಿದ ಸಂಪ್ರದಾಯ ಮತ್ತು ದೈವವನ್ನು ಪ್ರಶ್ನಿಸುವಂತಿಲ್ಲ ಎನ್ನುವುದು ಮೇಲ್ಜಾತಿಗಳ ವಾದ. ಮೇಲ್ಜಾತಿ ಯುವಕರು ಕೂಡ ದಲಿತರು ಅಧ್ಯಕ್ಷರಾಗುವುದನ್ನು ವಿರೋಧಿಸುತ್ತಿದ್ದಾರೆ. ಈ ಎಲ್ಲಾ ಬೆಳವಣಿಗೆಯಿಂದಾಗಿ ಸಂವಿಧಾನದ ೭೩ನೇ ತಿದ್ದುಪಡಿಯ ಆಶಯಗಳನ್ನು ಮೂಲೆಗುಂಪು ಮಾಡಲಾಗಿದೆ.[೧೬] ಆಂಧ್ರಪ್ರದೇಶದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ದಲಿತರು ಎದುರಿಸುತ್ತಿರುವ ಸಮಸ್ಯೆಗಳನ್ನು ವೆಂಕಟರವಿಯವರು ಅಧ್ಯಯನಕ್ಕೆ

ಒಳಪಡಿಸಿದ್ದಾರೆ. ಅಧ್ಯಯನದ ಫಲಿತಗಳು ಹೇಳುವಂತೆ ಪರಿಶಿಷ್ಟ ಜಾತಿಯ ವ್ಯಕ್ತಿ ಅಧ್ಯಕ್ಷರಾಗಿರುವ ಪಂಚಾಯತ್‌ಗಲಲ್ಲಿ ಮೇಲ್ವರ್ಗದವರು ಸಮಸ್ಯೆ ಸೃಷ್ಠಿಸುತ್ತಿದ್ದಾರೆ. ಇದರ ಮೂಲ ಕಾರಣ ದಲಿತರಿಗೆ ಸಂವಹನ ಸಂಪರ್ಕ ಮತ್ತು ಪಂಚಾಯತ್ ಕಾನೂನುಗಳ ಅರಿವಿನ ಕೊರತೆಯಾಗಿದೆ.

ದಲಿತ ಅಧ್ಯಕ್ಷರುಗಳ ವಯೋಮಾನವನ್ನು ಆಧರಿಸಿ ಅವರುಗಳು ಎದುರಿಸುತ್ತಿರುವ ಸಮಸ್ಯೆ ಪ್ರಮಾಣದಲ್ಲಿ ಭಿನ್ನತೆ ಕಂಡು ಬಂದಿದೆ. ಅಧ್ಯಯನ ಕಂಡುಕೊಂಡಿರುವಂತೆ ೪೦ ವರ್ಷ ಮೇಲ್ಪಟ್ಟ ದಲಿತ ಅಧ್ಯಕ್ಷರು ಕಡಿಮೆ ಸಮಸ್ಯೆಗಳನ್ನು ಎದುರಿಸಿದ್ದು, ೪೦ ವರ್ಷಗಳ ಒಳಗಿನ ದಲಿತ ಅಧ್ಯಕ್ಷರು ಹೆಚ್ಚು ಸಮಸ್ಯೆಗಳನ್ನು ಎದುರಿಸಿದ್ದಾರೆ. ಕಡಿಮೆ ವಯೋಮಾನದ ದಲಿತ ಅಧ್ಯಕ್ಷರು, ಅಧಿಕಾರಿಗಳೊಂದಿಗೆ ವ್ಯಾವಹರಿಸುವಾಗ ಸಂವಹನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಮೇಲ್ಜಾತಿಯ ಹಿರಿಯ ನಾಯಕರು ಪಂಚಾಯ್ತಿಗಳಲ್ಲಿ ಹೆಚ್ಚು ಪ್ರಾಬಲ್ಯ ಹೊಂದಿದ್ದಾರೆ. ಅಧ್ಯಯನದ ಫಲಿತಗಳು ಹೇಳುವ ಪ್ರಕಾರ ಪಂಚಾಯತ್‌ಗಳಲ್ಲಿ ದಲಿತ ಪುರುಷ ಪಾಲ್ಗೊಳ್ಳುವಿಕೆ ಸಕ್ರಿಯವಾಗಿದ್ದು, ದಲಿತ ಮಹಿಳೆಯರ ಪಾಲ್ಗೊಳ್ಳುವಿಕೆ ಕನಿಷ್ಠ ಪ್ರಮಾಣದಲ್ಲಿದೆ. ಸಕಾರಾತ್ಮಕ ಬೆಳವಣಿಗೆ ಎಂದರೆ ಪಂಚಾಯತಿಗಳಿಗೆ ಆಯ್ಕೆಗೊಂಡ ದಲಿತ ಪುರುಷರು ನಿಯತಕಾಲಿಕವಾಗಿ ರಾಜಕೀಯ ಪಕ್ಷಗಳ ಸಭೆಗಳಿಗೆ ಪಾಲ್ಗೊಳ್ಳುತ್ತಿದ್ದಾರೆ.[೧೭] ಒರಿಸ್ಸಾ ರಾಜ್ಯದ ಪಂಚಾಯತ್‌ಗಳಲ್ಲಿ ದಲಿತ ಸಮುದಾಯಗಳು ಭಾಗವಹಿಸುವ ವಿವಿಧ ಆಯಾಮಗಳು ಪಟ್ನಾಯಕ್ ರವರು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆದ್ದರಿಂದ ಫಲಿತಗಳು ಹೇಳುವ ಪ್ರಕಾರ ಪರಿಶಿಷ್ಟ ಜಾತಿಗಳು ಪಂಚಾಯತ್ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವ ಕ್ರಮ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿದೆ. ಕೆಲವು ಪ್ರದೇಶಗಳಲ್ಲಿ ನಿರಶನ ಪಾಲ್ಗೊಳ್ಳುವಿಕೆಯಿಂದ ಸಕ್ರೀಯ ಪಾಲ್ಗೊಳ್ಳುವಿಕೆಗೆ ಪರಿವರ್ತನೆಯಾಗುತ್ತವೆ. ಅಭಿವೃದ್ಧಿ ಪರವಾದ ಹೊಸ ದಲಿತ ನಾಯಕತ್ವ, ಗ್ರಾಮೀಣ ಭಾಗದಲ್ಲಿ ಪ್ರವರ್ಧಮಾನಕ್ಕೆ ಬರುತ್ತದೆ. ಮೀಸಲಾತಿ ನೀತಿಯಿಂದಾಗಿ ಅಧಿಕಾರ ಸಂರಚನೆ ದಲಿತರ ಮತ್ತು ನಿರ್ಲಕ್ಷಿತ ಸಮುದಾಯಗಳ ಪರವಾಗಿ ಪರಿವರ್ತನೆಯಾಗುತ್ತದೆ.

ದಲಿತ ಪ್ರತಿನಿಧಿಗಳು ತಮ್ಮ ಸಂವಿಧಾನಕ್ಕೆ ಮೂಲಭುತ ಅವಶ್ಯಕತೆಗಳನ್ನು ಒದಗಿಸಿಕೊಡಲು ಶ್ರಮಿಸುತ್ತಿದ್ದಾರೆ. ಆದರೆ ಅಧ್ಯಯನ ಕಂಡು ಕೊಂಡಿರುವ ಪ್ರಕಾರ ಈ ಬೆಳವಣಿಗೆ ಎಲ್ಲಾ ಪ್ರದೇಶಗಳಲ್ಲಿ ಸಮಾನವಾಗಿಲ್ಲ. ಅಧ್ಯಯನ ಕಂಡು ಕೊಂಡಿರುವ ಪ್ರಕಾರ ಬಹುತೇಕ ಪ್ರದೇಶಗಳಲ್ಲಿ ದಲಿತ ಪ್ರತಿನಿಧಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದೆ ದಲಿತ ಸಮುದಾಯದ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ವಿಫಲರಾಗಿದ್ದಾರೆ. ಸಮುದಾಯ ಪರವಾದ ನಿರ್ಣಯ, ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಸೋತಿದ್ದಾರೆ. ಈ ಹಿನ್ನೆಲೆಯಲ್ಲಿ

ನಿರ್ಲಕ್ಷಿತ ಸಮುದಾಯಗಳು ಪರಿಣಾಮಕಾರಿಯಾಗಿ ಅಧಿಕಾರ ಚಲಾವಣೆ ಮಾಡುವ ಪ್ರಶ್ನೆ ಎದುರಾಗಿದೆ. ಆದರೂ ನಿರ್ಲಕ್ಷಿತ ಸಮುದಾಯದ ಪ್ರತಿನಿಧಿಗಳು ನಿಧಾನಗತಿಯಲ್ಲಿ ಅರಿವನ್ನು ಪಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ತಮ್ಮ ಸಮುದಾಯವನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವ ಸೂಚನೆ ಕಂಡು ಬರುತ್ತದೆ ಎನ್ನುವ ಆಶಯವನ್ನು ಈ ಅಧ್ಯಯನ ವ್ಯಕ್ತಪಡಿಸಿದೆ.[೧೮] ವಿವಿಧ ಅಧ್ಯಯನಗಳನ್ನು ಪರಾಮರ್ಶಿಸಿದಾಗ ತಿಳಿದು ಬರುವ ಸಂಗತಿ ಎಂದರೆ ಪಂಚಾಯತ್ ಸಂಸ್ಥೆಗಳಲ್ಲಿ ದಲಿತರ ಪಾಲ್ಗೊಳ್ಳುವಿಕೆ ಬಹುತೇಕ ಪ್ರದೇಶಗಳಲ್ಲಿ ತೃಪ್ತಿಕರವಾಗಿಲ್ಲ. ಸಾಮಾಜಿಕ ವ್ಯವಸ್ಥೆಯ ಕಾರಣಕ್ಕಾಗಿ ದಲಿತರು ಮುಕ್ತವಾಗಿ ಅಧಿಕಾರವನ್ನು ಚಲಾಯಿಸಲು ಸಾಧ್ಯವಾಗುತ್ತಿಲ್ಲ. ಈ ಅಧ್ಯಯನಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಪಂಚಾಯತ್ ವ್ಯವಸ್ಥೆಯ ಅಧಿಕಾರ ಸಂರಚನೆಯಲ್ಲಿ ಹೇಗೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ ಎಂಬುದನ್ನು ವಿವಿಧ ಹಂತಗಳಲ್ಲಿ ಹೇಗೆ ಭಾಗವಹಿಸುತ್ತಾರೆ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಅದರ ವಿಶ್ಲೇಷಣೆಯನ್ನು ಮಂಡಿಸಲಾಗಿದೆ.

೫.೩. ವಾರ್ಡ್‌ಸಭೆ/ ಜನವಸತಿ ಸಭೆಗಳ ಅಯೋಜನೆಯಲ್ಲಿ ದಲಿತ ಪ್ರತಿನಿಧಿಗಳು:

೧೯೯೩ ರ ನಿಯಮಾವಳಿಯ ಪ್ರಕಾರ ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳನ್ನು ಗ್ರಾಮಸ್ವರಾಜ್ಯದ ಪ್ರಮುಖ ಘಟಕಗಳೆಂದು ಪರಿಗಣಿಸಲಾಗಿದೆ. ಆಯಾ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಯೋಜನೆಗಳ ಅದ್ಯತೆಗಳನ್ನು ನಿರ್ಧರಿಸುವಲ್ಲಿ ಹಾಗೂ ಸೂಕ್ತ ಫಲಾನುಭವಿಗಳನ್ನು ಗುರುತಿಸುವಲ್ಲಿ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವಲ್ಲಿ ಈ ಸಭೆಗಳು ಪ್ರಮುಖ ಪಾತ್ರವಹಿಸುತ್ತವೆ. ಇಂತಹ ಸಭೆಗಳನ್ನು ಆಯೋಜಿಸುವ ಮೂಲಕ ಸಮುದಾಯದ ಹಿತಾಸಕ್ತಿಯನ್ನು ಕಾಪಾಡಲು ಪಂಚಾಯಿತಿ ಸದಸ್ಯರಿಗೆ ಅವಕಾಶ ಲಭ್ಯವಾಗುತ್ತದೆ.

ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಈ ಸಭೆಗಳನ್ನು ಅಯೋಜಿಸುವಲ್ಲಿ ಎಷ್ಟು ಸಕ್ರೀಯರಾಗಿದ್ದಾರೆ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ. ಬಳ್ಳಾರಿ ತಾಲ್ಲೂಕಿನ ಕೋಷ್ಟಕ ೨೨ರಲ್ಲಿ ಕಂಡು ಬರುವಂತೆ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಕೇವಲ ಶೇಕಡ ೧೫.೮ರಷ್ಟು ಸದಸ್ಯರು ಮಾತ್ರ ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳನ್ನು ಆಯೋಜಿಸಿದ್ದಾರೆ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೩ ರಷ್ಟು ಸದಸ್ಯರು ಮಾತ್ರ ವಾರ್ಡ್‌ಸಭೆ ಮತ್ತು ಜನವಸತಿ ಸಭೆಗಳನ್ನು ಆಯೋಜಿಸಿದ್ದಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೯ರಷ್ಟು ಪ್ರತಿನಿಧಿಗಳು ಮಾತ್ರ ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳನ್ನು ಆಯೋಜಿಸಿದ್ದಾರೆ. ಒಟ್ಟಾರೆ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ

೧೮.೬ರಷ್ಟು ಸದಸ್ಯರು ಮಾತ್ರ ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳು ಆಯೋಜಿಸಿದ್ದು, ಶೇಕಡ ೮೧.ರಷ್ಟು ಸದಸ್ಯರು ವಾರ್ಡ್‌ಸಭೆ ಮತ್ತು ಜನವಸತಿ ಸಭೆಗಳನ್ನು ಆಯೋಜಿಸಿಲ್ಲ.

೫.೪. ಗ್ರಾಮಸಭೆಯಲ್ಲಿ ದಲಿತ ಪ್ರತಿನಿಧಿಗಳ ಸಹಭಾಗಿತ್ವ:

೧೯೯೩ ರ ನಿಯಮಾವಳಿಯ ಪ್ರಕಾರ ಗ್ರಾಮಪಂಚಾಯಿತಿಯಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ರೀತಿಯ ಅರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿಯ ಕಾರ್ಯಕ್ರಮಗಳ ಹಾಗೂ ಕೇಂದ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಸರ್ಕಾರಿ ಯೋಜನೆಗಳನ್ನು ಯೋಜಿಸುವಲ್ಲಿ ಹಾಗೂ ಅನುಷ್ಠಾನಕ್ಕೆ ತರುವಲ್ಲಿ ಮೇಲ್ವಿಚಾರಣೆ ಮಾಡುವಲ್ಲಿ ಮತ್ತು ಮೌಲ್ಯಮಾಪನ ಮಾಡುವಲ್ಲಿ ಗ್ರಾಮದ ಎಲ್ಲ ನಾಗರಿಕರು ನೇರವಾಗಿ ಭಾಗಿಯಾಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಗ್ರಾಮಸಭೆಯು ಗ್ರಾಮ ಮಟ್ಟದಲ್ಲಿ ಸ್ಥಳೀಯ ಸ್ವಯಂ ಆಡಳಿತದ ಮೂಲ ಘಟಕವಾಗಿರತಕ್ಕದ್ದು ಎಂದು ಸ್ಪಷ್ಟಪಡಿಸಿದೆ.[೧೯] ಗ್ರಾಮೀಣ ನಾಗರಿಕ ಅವಶ್ಯಕತೆಗಳನ್ನು ಪೂರೈಸುವಲ್ಲಿ, ನಾಗರಿಕರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು, ಒದಗಿಸಿಕೊಡುವಲ್ಲಿ, ಸಂರಕ್ಷಿತವಲ್ಲದ ಜನರ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ, ಸೂಕ್ತ ಫಲಾನುಭವಿಗಳನ್ನು ಗುರುತಿಸುವಲ್ಲಿ ಹಾಗೂ ಸಂಪನ್ಮೂಲಗಳನ್ನು ಹಂಚಿಕೆ ಮಾಡುವಲ್ಲಿ ಗ್ರಾಮಸಭೆಯು ಪ್ರಮುಖ ಪಾತ್ರವಹಿಸುತ್ತದೆ. ದಲಿತ ಪ್ರತಿನಿಧಿಗಳು ಗ್ರಾಮಸಭೆಯಲ್ಲಿ ಹೇಗೆ ಸಕ್ರಿಯವಾಗಿ ಭಾಗವಹಿಸುತ್ತಾರೆ ಎಂಬುದನ್ನು ಕಂಡುಕೊಳ್ಳಲಾಗುತ್ತದೆ.

ಕೋಷ್ಟಕ ೨೩ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೨.೮ ರಷ್ಟು ಸದಸ್ಯರು ಮಾತ್ರ ಎಲ್ಲಾ ಗ್ರಾಮಸಭೆಗಳಿಗೆ ಭಾಗವಹಿಸಿದ್ದಾರೆ. ಉಳಿದ ಶೇಕಡ ೫೭.೨ ರಷ್ಟು ಸದಸ್ಯರು ಕೇವಲ ಕೆಲವು ಗ್ರಾಮಸಭೆಗಳಿಗೆ ಮಾತ್ರ ಭಾಗವಹಿಸಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೭.೫ ರಷ್ಟು ಸದಸ್ಯರು ಮಾತ್ರ ಎಲ್ಲಾ ಗ್ರಾಮಸಭೆಗಳಿಗೆ ಭಾಗವಹಿಸಿದ್ದು, ಉಳಿದ ಶೇಕಡ ೬೨.೫ ರಷ್ಟು ಪ್ರತಿನಿಧಿಗಳು ಕೇವಲ ಕೆಲವು ಗ್ರಾಮಸಭೆಗಳಿಗೆ ಮಾತ್ರ ಭಾಗವಹಿಸಿದ್ದಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೦ರಷ್ಟು ಸದಸ್ಯರು ಮಾತ್ರ ಎಲ್ಲಾ ಗ್ರಾಮಸಭೆಗಳಿಗೆ ಭಾಗವಹಿಸಿದ್ದು, ಉಳಿದ ಶೇಕಡ ೫೦ರಷ್ಟು ಸದಸ್ಯರು ಕೇವಲ ಕೆಲವು ಗ್ರಾಮಸಭೆಗಳಿಗೆ ಮಾತ್ರ ಭಾಗವಹಿಸಿದ್ದಾರೆ.

ದತ್ತಾಂಶಗಳು ಹೇಳುವ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೪.೧ ರಷ್ಟು ಸದಸ್ಯರು ಎಲ್ಲಾ ಗ್ರಾಮಸಭೆಗಳಿಗೆ ಹಾಜರಾಗಿದ್ದು ಶೇಕಡ ೫೫.೯ ರಷ್ಟು ಸದಸ್ಯರು ಕೇವಲ ಕೆಲವು ಗ್ರಾಮಸಭೆಗಳಿಗೆ ಮಾತ್ರ ಭಾಗವಹಿಸಿದ್ದಾರೆ. ಅಂದರೆ ದಲಿತ ಪ್ರತಿನಿಧಿಗಳಿಗೆ ಗ್ರಾಮಸಭೆಯಲ್ಲಿ ಭಾಗವಹಿಸುವ ಸಾಧ್ಯತೆಗಳ ಅರಿವು ಇಲ್ಲ. ದಲಿತ ಪ್ರತಿನಿಧಿಗಳು ಗ್ರಾಮಸಭೆಯ ಮೂಲಕ ಸಮುದಾಯದ ಸಮಸ್ಯೆಗಳನ್ನು ಪರಿಹರಿಸುವ ಅವಕಾಶವನ್ನು ಸದ್ವಿನಿಯೋಗ ಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಗ್ರಾಮಸಭೆಗಳಲ್ಲಿ ದಲಿತ ಪ್ರತಿನಿಧಿಗಳು ಭಾಗವಹಿಸದೇ ಇರಲಿ ದಲಿತ ಪ್ರತಿನಿಧಿಗಳನ್ನೇ ಹೊಣೆಗಾರರನ್ನಾಗಿ ಮಾಡುವುದು ಕಷ್ಟ ಸಾಧ್ಯ. ದಲಿತ ಪ್ರತಿನಿಧಿಗಳು ಗ್ರಾಮಸಭೆಗಳಿಗೆ ಭಾಗವಹಿಸದೇ ಇರಲು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಾಧ್ಯತೆಗಳನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೫.೫. ಗ್ರಾಮಸಭೆ ಮತ್ತು ದಲಿತ ಪ್ರತಿನಿಧಿಗಳ ಸಮಸ್ಯೆಗಳು:

ಗ್ರಾಮಸಭೆಗಳಿಗೆ ಭಾಗವಹಿಸುವ ಸಂಬಂಧ ದಲಿತ ಪ್ರತಿನಿಧಿಗಳು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೋಷ್ಟಕ ೨೪ರ ದತ್ತಾಂಶಗಳು ಸ್ಪಷ್ಟಪಡಿಸುವಂತೆ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೭.೨ ರಷ್ಟು ಸದಸ್ಯರಿಗೆ ಗ್ರಾಮಸಭೆಯ ಆಯೋಜನೆಯ ಮಾಹಿತಿ ಲಭ್ಯವಾಗುತ್ತಿಲ್ಲ. ಶೇಕಡ ೧೮.೨ರಷ್ಟು ಸದ್ಯರು ಅಭಿಪ್ರಾಯ ಪಡುವ ಪ್ರಕಾರ ಗ್ರಾಮಸಭೆಗಳನ್ನು ನಿಯಮಿತವಾಗಿ ಆಯೋಜಿಸುತ್ತಿಲ್ಲ. ಶೇಕಡ ೧೮.೨ ರಷ್ಟು ಸದಸ್ಯರ ಗ್ರಾಮಸಭೆಯಲ್ಲಿ ಯಾವುದೇ ಚರ್ಚೆ ನಡೆಯುವುದಿಲ್ಲ. ಶೇಕಡ ೧೮.೨ ರಷ್ಟು ಸದಸ್ಯರು ಅಭಿಪ್ರಾಯದ ಪ್ರಕಾರ ಮೇಲ್ಜಾತಿಯವರ ಅಸಹಕಾರದಿಂದ ಗ್ರಾಮಸಭೆಗಳು ಅರ್ಥಪೂರ್ಣವಾಗಿ ನಡೆಯುವುದಿಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೦ರಷ್ಟು ಪ್ರತಿನಿಧಿಗಳಿಗೆ ಗ್ರಾಮಸಭೆಯ ಮಾಹಿತಿ ಲಭ್ಯವಾಗುವುದಿಲ್ಲ. ಶೇಕಡ ೩೦ರಷ್ಟು ಪ್ರತಿನಿಧಿಗಳು ಅಭಿಪ್ರಾಯ ಪಡುವ ಪ್ರಕಾರ ಗ್ರಾಮಸಭೆಗಳಲ್ಲಿ ನಿಯಮಿತವಾಗಿ ಅಯೋಜಿಸುತ್ತಿಲ್ಲ.

ಅತ್ಯಂತ ಕುತೂಹಲಕಾರಿ ಸಂಗತಿ ಎಂದರೆ ಈ ತಾಲ್ಲೂಕಿನ ಬಹುತೇಕ ದಲಿತ ಮಹಿಳಾ ಪ್ರತಿನಿಧಿಗಳು ಅಭಿಪ್ರಾಯಪಡುವ ಪ್ರಕಾರ, ಅವರ ಬದಲಾಗಿ ಅವರ ಪತಿ ಅಥವಾ ಮಕ್ಕಳು ಭಾಗವಹಿಸುತ್ತಿದ್ದಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭.೭ ರಷ್ಟು ಸದಸ್ಯರಿಗೆ ಗ್ರಾಮಸಭೆಯ ಮಾಹಿತಿ ಲಭ್ಯವಾಗುತ್ತಿಲ್ಲ. ಶೇಕಡ ೨೩.೧ ರಷ್ಟು ಸದಸ್ಯರ ಅಭಿಪ್ರಾಯದ ಪ್ರಕಾರ ಸದಸ್ಯರ ಬದಲಾಗಿ ಅವರ ಪತಿ ಅಥವಾ ಮಕ್ಕಳು ಗ್ರಾಮಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಗ್ರಾಮಸಭೆಯಲ್ಲಿ ಪಾಲ್ಗೊಳ್ಳುವ ಬಗ್ಗೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶೇಕಡ ೨೦.೬ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮಸಭೆ ಆಯೋಜನೆಯ ಮಾಹಿತಿ ಲಭ್ಯವಾಗುತ್ತಿಲ್ಲ. ಶೇಕಡ ೨೩.೫ಷ್ಟು ಸದಸ್ಯರ ಅಭಿಪ್ರಾಯದ ಪ್ರಕಾರ ಗ್ರಾಮಸಭೆಯನ್ನು ನಿಯಮಿತವಾಗಿ ಆಯೋಜನೆ ಮಾಡಲಾಗುತ್ತಿಲ್ಲ.

ದಲಿತ ಮಹಿಳಾ ಪ್ರತಿನಿಧಿಗಳ ಸಮಸ್ಯೆ ವಿಶಿಷ್ಟವಾಗಿದ್ದು, ಅವರು ನೇರವಾಗಿ ಗ್ರಾಮಸಭೆಗಳಿಗೆ ಭಾಗವಹಿಸುತ್ತಿಲ್ಲ. ಅವರ ಬದಲಾಗಿ ಅವರ ಪತಿ ಅಥವಾ ಕುಟುಂಬ ಸದಸ್ಯರು ಭಾಗವಹಿಸುತ್ತಿದ್ದಾರೆ. ದಲಿತ ಮಹಿಳಾ ಪ್ರತಿನಿಧಿಗಳ ಸಂಗತಿಯಲ್ಲಿ ಇಂದಿಗೂ ಬೇನಾಮಿ ಪ್ರಾತಿನಿಧ್ಯ ಇಂದಿಗೂ ಬಳ್ಳಾರಿ ಜಿಲ್ಲೆಯಲ್ಲಿ ಮುಂದುವರೆದಿದೆ. ದಲಿತ ಪ್ರತಿನಿಧಿಗಳು ಗ್ರಾಮಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡುವುದು ಸಾಧ್ಯವಿಲ್ಲ. ಏಕೆಂದರೆ ಬಹುತೇಕ ದಲಿತ ಪ್ರತಿನಿಧಿಗಳು ಗ್ರಾಮಸಭೆ ಆಯೋಜನೆಯ ಮಾಹಿತಿಯಿಂದ ವಂಚಿತರಾಗುತ್ತಿದ್ದಾರೆ ಮತ್ತು ನಿಯಮಾವಳಿಗಳ ಪ್ರಕಾರ ಗ್ರಾಮಸಭೆಗಳನ್ನು ನಿಯಮಿತವಾಗಿ ಆಯೋಜನೆ ಮಾಡಲಾಗುತ್ತಿಲ್ಲ. ವಿಶೇಷವಾಗಿ ದಲಿತ ಮಹಿಳಾ ಪ್ರತಿನಿಧಿಗಳು ಬೇನಾಮಿ ಪ್ರಾತಿನಿಧ್ಯದ ಮುಂದುವರಿಕೆಯಿಂದಾಗಿ ಗ್ರಾಮಸಭೆಯಲ್ಲಿ ಸಕ್ರೀಯ ಪಾಲ್ಗೊಳ್ಳುವಿಕೆಯಿಂದ ವಂಚಿತರಾಗಿದ್ದಾರೆ.

೫.೬ ಗ್ರಾಮ ಪಂಚಾಯಿತಿ ಸಭೆ ಮತ್ತು ದಲಿತ ಪ್ರತಿನಿಧಿಗಳ ಸಹಭಾಗಿತ್ವ

೧೯೯೩ರ ನಿಯಮಾವಳಿ ಪ್ರಕಾರ ಗ್ರಾಮ ಪಂಚಾಯಿತಿಯ ಕಾರ್ಯಕಲಾಪವನ್ನು ನಡೆಸುವುದಾಗಿ ಗ್ರಾಮಪಂಚಾಯಿತಿಯ ಕಚೇರಿಯಲ್ಲಿ ಕನಿಷ್ಠ ಪಕ್ಷ ಒಂದು ತಿಂಗಳಿಗೊಮ್ಮೆ ಅಥವಾ ಅಧ್ಯಕ್ಷನು ನಿರ್ಧರಿಸಬಹುದಾದಂತಹ ಕಾಲದಲ್ಲಿ ಸಭೆ ನಡೆಸತಕ್ಕದ್ದು, ೧೯೯೩ರ ನಿಯಮಾವಳಿಯ ಪ್ರಕಾರ ಗ್ರಾಮ ಪಂಚಾಯಿತಿಗೆ ವಿಶೇಷ ಅಧಿಕಾರಗಳನ್ನು ನೀಡಲಾಗಿದೆ. ಪ್ರತಿವರ್ಷ ಕನಿಷ್ಠ ಶೇಕಡ ೧೦ ರಷ್ಟು ಮನೆಗಳಿಗೆ ಶೌಚಾಲಯ ನಿರ್ಮಿಸುವುದು, ಶಾಲೆಗಳಲ್ಲಿ ಮಕ್ಕಳ ದಾಖಲೆಗಳನ್ನು ಖಚಿತಪಡಿಸುವಿಕೆ ಎನ್ನುವುದು, ನಾಗರಿಕರು ಆರೋಗ್ಯ ಸೇವೆಗಳನ್ನು ನೀಡುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸಮುದಾಯದ ಆಸ್ತಿಗಳನ್ನು ನಿರ್ವಹಿಸುವುದು ಮತ್ತು ಜೈವಿಕೆ ವೈವಿಧ್ಯತೆಗಳನ್ನು ಕಾಪಾಡುವುದು. ಗ್ರಾಮಪಂಚಾಯಿತಿಯ ಪ್ರಮುಖ ಅಧಿಕಾರಗಳಾಗಿವೆ.ಈ ಸಭೆಗಳಲ್ಲಿ ದಲಿತ ಪ್ರತಿನಿಧಿಗಳು ಭಾಗವಹಿಸುವ ಮೂಲಕ ಕ್ಷೇತ್ರದ ಜನರ ಮತ್ತು ದಲಿತ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವ ಅವಕಾಶ ದಲಿತ ಸಮುದಾಯದ ಪ್ರತಿನಿಧಿಗಳಿಗೆ ಲಭ್ಯವಾಗುತ್ತದೆ. ಇಂತಹ ಸಭೆಗಳಲ್ಲಿ ದಲಿತ ಪ್ರತಿನಿಧಿಗಳು ಹೇಗೆ ಸಕ್ರೀಯವಾಗಿ ಭಾಗವಹಿಸುತ್ತಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ

ಕಂಡುಕೊಳ್ಳಲಾಗಿದ್ದು, ಅದರ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಕೋಷ್ಟಕ ೨೫ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ, ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭೦.೫ ರಷ್ಟು ಸದಸ್ಯರು ಗ್ರಾಮ ಪಂಚಾಯಿತಿ ಸಭೆಗೆ ನಿಯಮಿತವಾಗಿ ಸ್ಪಂದಿಸುತ್ತಾರೆ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭೬.೯ರಷ್ಟು ಹಾಗೂ ಕೂಡ್ಲಿಗಿ ತಾಲ್ಲೂಕಿನ ಒಟ್ಟು ಶೇಕಡ ೮೧.೧ರಷ್ಟು ದಲಿತ ಪ್ರತಿನಿಧಿಗಳು ನಿಯಮಿತವಾಗಿ ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಭಾಗವಹಿಸುತ್ತಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಶೇಕಡ ೭೯.೪ ರಷ್ಟು ಪ್ರತಿನಿಧಿಗಳು ನಿಯಮಿತವಾಗಿ ಗ್ರಾಮ ಪಂಚಾಯಿತಿ ಸಭೆಗೆ ಸಕ್ರೀಯವಾಗಿ ಭಾಗವಹಿಸುತ್ತಾರೆ. ಆದರೆ ಗ್ರಾಮ ಪಂಚಾಯಿತಿ ಸಭೆಗೆ ನಿಯಮಿತವಾಗಿ ಭಾಗವಹಿಸುವುದರ ಸಂಖ್ಯೆ ಶೇಕಡ ೨೦.೬ರಷ್ಟು ಕಂಡು ಬರುತ್ತದೆ. ಸಮಾಧಾನಕರ ಸಂಗತಿ ಏನೆಂದರೆ ಬಹುಸಂಖ್ಯಾತ ದಲಿತ ಪ್ರತಿನಿಧಿಗಳು ನಿಯಮಿತವಾಗಿ ಗ್ರಾಮಸಭೆಗೆ ಸಕ್ರೀಯವಾಗಿ ಭಾಗವಹಿಸುತ್ತಾರೆ. ಗ್ರಾಮ ಪಂಚಾಯಿತಿ ಸಭೆಗಳಿಗೆ ಕೇವಲ ಸಕ್ರಿಯವಾಗಿ ಭಾಗವಹಿಸುವುದು ಸಮುದಾಯದ ಹಿತಾಸಕ್ತಿಗಳನ್ನು ಕಾಪಾಡಿದಂತೆ ಆಗುವುದಿಲ್ಲ. ಸಭೆಗಳಲ್ಲಿ ಭಾಗವಹಿಸುವ ಸದಸ್ಯರು ವಿವಿಧ ವಿಷಯಗಳ ಚರ್ಚೆಯಲ್ಲಿ ಸಕ್ರೀಯವಾಗಿ ಭಾಗವಹಿಸುವುದು ಅಗತ್ಯವೆಂದು ಭಾವಿಸಲಾಗಿದೆ.

ದಲಿತ ಸಮುದಾಯದ ಪ್ರತಿನಿಧಿಗಳು ಗ್ರಾಮ ಪಂಚಾಯಿತಿ ಸಭೆಯಲ್ಲಿ ಯಾವ ವಿಷಯಗಳ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಮುಂದಿನ ಭಾಗದಲ್ಲಿ ಅದರ ವಿಶ್ಲೇಷಣೆಯನ್ನು ಮಂಡಿಸಲಾಗಿದೆ.

೫.೭ ದಲಿತ ಸಮುದಾಯದ ಪ್ರತಿನಿಧಿಗಳು ಮತ್ತು ಚರ್ಚೆಯ ವಿಷಯಗಳು :

ಪಂಚಾಯತ್ ನೀತಿ ನಿರ್ದೇಶಕ ತತ್ವಗಳ ಪ್ರಕಾರ ಗ್ರಾಮ ಪಂಚಾಯಿತಿಗಳು ನಾಗರಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು, ಗ್ರಾಮೀಣ ನಿವಾಸಿಗಳ ಆರ್ಥಿಕ, ಸಾಮಾಜಿಕ, ಮತ್ತು ಪರಿಸರಾತ್ಮಕ ಗುಣಮಟ್ಟವನ್ನು ವೃದ್ಧಿಸಲು ಅರಣ್ಯ ಪ್ರದೇಶ ಮತ್ತು ಸುಸ್ಥಿರ ಅಭಿವೃದ್ಧಿಗೆ ಶ್ರಮಿಸುವುದು, ಸಮುದಾಯದ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ರಕ್ಷಿಸುವುದು ಕೃಷಿ ಕೈಗಾರಿಕಾ ಕೇಂದ್ರಗಳು ಮತ್ತು ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸುವುದು ಬೇರು ಮಟ್ಟದಲ್ಲಿ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ಮತ್ತು ಗ್ರಾಮೀಣ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು. ಇದರ ಜೊತೆಗೆ ಶಾಂತಿಯುತ ಸಮಾಜ ಮತ್ತು ಕೋಮುಸೌಹಾರ್ದವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಶ್ರಮಿಸಕ್ಕದ್ದು ಎಂದು ಹೇಳಲಾಗಿದೆ.[೨೦] ಈ

ಎಲ್ಲ ನಿರ್ದೇಶನಗಳ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಪ್ರತಿನಿಧಿಗಳು ಯಾವ ವಿಷಯಗಳಲ್ಲಿ ಚರ್ಚಿಸುತ್ತಾರೆ ಎನ್ನುವುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ ೨೬ರ ಪ್ರಕಾರ ದತ್ತಾಂಶಗಳು ಹೇಳುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೮೩.೮ರಷ್ಟು ಪ್ರತಿನಿಧಿಗಳು ಪಂಚಾಯತ್ ಸಭೆಯಲ್ಲಿ ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸುತ್ತಾರೆ. ಶೇಕಡ ೬.೫ರಷ್ಟು ಸದಸ್ಯರು ಸುರಕ್ಷಿತವಲ್ಲದ ಸಮುದಾಯಗಳ ಹಿತಾಸಕ್ತಿಯ ಬಗ್ಗೆ ಚರ್ಚಿಸುತ್ತಾರೆ ಮತ್ತು ಶೇಕಡ ೯.೭ರಷ್ಟು ಸದಸ್ಯರು ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ಚರ್ಚಿಸುತ್ತಾರೆ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೮೦ರಷ್ಟು ಸದಸ್ಯರ ಪೈಕಿ ೫.ರಷ್ಟು ಸದಸ್ಯರು ಸುರಕ್ಷಿತವಲ್ಲದ ಸಮುದಾಯಗಳ ಬಗ್ಗೆ ಮತ್ತು ಶೇಕಡ ೧೫ರಷ್ಟು ಸದಸ್ಯರು ಸಂಪನ್ಮೂಲ ಹಂಚಿಕೆಗಳ ಬಗ್ಗೆ ಚರ್ಚಿಸುತ್ತಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೮೦ ರಷ್ಟು ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಶೇಕಡ ೩.೩ ರಷ್ಟು ಸುರಕ್ಷಿತವಲ್ಲದ ಸಮುದಾಯಗಳ ಹಿತಾಸಕ್ತಿಗಳ ಬಗ್ಗೆ ಮತ್ತು ಶೇಕಡ ೧೬.೭ ರಷ್ಟು ಸದಸ್ಯರು ಸಂಪನ್ಮೂಲಗಳ ಹಂಚಿಕೆಗಳ ಬಗ್ಗೆ ಚರ್ಚಿಸುತ್ತಾರೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೮೧.೫ರಷ್ಟು ಸದಸ್ಯರು ಮೂಲಭೂತ ಸೌಕರ್ಯಗಳ ಬಗ್ಗೆ ಶೇಕಡ ೪.೯ ರಷ್ಟು ಸದಸ್ಯರು ಸುರಕ್ಷಿತವಲ್ಲದ ಸಮುದಾಯಗಳ ಬಗ್ಗೆ ಮತ್ತು ಶೇಕಡ ೧೮.೬ ರಷ್ಟು ಸದಸ್ಯರು ಸಂಪನ್ಮೂಲಗಳ ಹಂಚಿಕೆಗಳ ಬಗ್ಗೆ ಚರ್ಚಿಸುತ್ತಾರೆ. ಈ ದತ್ತಾಂಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡು ಬರುವ ಸಂಗತಿ. ಎಂದರೆ ದಲಿತ ಸಮುದಾಯದ ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳಿಗೆ ಪ್ರಥಮ ಆದ್ಯತೆ ನೀಡಿ ಚರ್ಚಿಸುತ್ತಿದ್ದು, ನಂತರದ ಅವರ ಆದ್ಯತೆ ಸಂಪನ್ಮೂಲಗಳ ಹಂಚಿಕೆಯಾಗಿದೆ. ಆದರೆ ಸುರಕ್ಷಿತವಲ್ಲದ ಸಮುದಾಯದ ಮಹಿಳೆಯರು, ಮಕ್ಕಳು, ವೃದ್ಧರು, ಅನಾಥರು, ರೋಗಗ್ರಸ್ಥರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿತಾಸಕ್ತಿಗಳ ಬಗ್ಗೆ ದಲಿತ ಸಮುದಾಯದ ಪ್ರತಿನಿಧಿಗಳು ಚರ್ಚೆ ಮಾಡುವುದು ಕಂಡು ಬರುವುದಿಲ್ಲ. ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಗ್ರಾಮ ಪಂಚಾಯಿತಿಯ ನಿರ್ಣಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡಾಗ ಮಾತ್ರ ಜನರ ಮತ್ತು ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವುದು ಸಾಧ್ಯವಾಗುತ್ತದೆ. ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ನಿರ್ಣಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಸಂಗತಿಗಳನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೫.೮ ನಿರ್ಣಯ ಪ್ರಕ್ರಿಯೆ ಮತ್ತು ದಲಿತ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ:

ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳು ಕಾನೂನಿನ ಪ್ರಕಾರ ದತ್ತವಾದ ಜವಾಬ್ದಾರಿಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ ಜನರಿಂದ ಆಯ್ಕೆಗೊಂಡ ಪ್ರತಿನಿಧಿಯು ಕಾನೂನಿನ ಪ್ರಕಾರ ಕರೆಯಲ್ಪಟ್ಟ ಸಭೆಗಳಿಗೆ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಈ ಸಭೆಗಳಲ್ಲಿ ಬಹುಮತದ ಮೂಲಕ ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ. ನಾಗರಿಕರಿಗೆ ಒದಗಿಸಲಾಗುವ ಮೂಲಭೂತ ಸೌಕರ್ಯಗಳ ರಕ್ಷಣೆ ಹಾಗೂ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ಸಭೆಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ.

ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆಯೇ ಎಂಬುದನ್ನು ಕ್ಷೇತ್ರ ಅಧ್ಯಯನ ಮೂಲಕ ಕಂಡು ಕೊಳ್ಳಲಾಗಿದೆ. ೨೭ನೇ ಕೋಷ್ಟಕದ ದತ್ತಾಂಶಗಳು ಸ್ಪಷ್ಟಪಡಿಸುವಂತೆ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೫ ರಷ್ಟು ಪ್ರತಿನಿಧಿಗಳು ಮಾತ್ರ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೭.೭ ರಷ್ಟು ಪ್ರತಿನಿಧಿಗಳು ನಿರ್ಣಯ ಪ್ರಕ್ರಿಯೆಗಳಲ್ಲಿ ಭಾಗವಹಿಸಿದ್ದಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೪೩.೨ ರಷ್ಟು ದಲಿತ ಪ್ರತಿನಿಧಿಗಳು ನಿರ್ಣಯ ಪ್ರಕ್ರಿಯೆಗಳಲ್ಲಿ ಭಾಗವಹಿಸಿದ್ದಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೫.೧ ರಷ್ಟು ದಲಿತ ಪ್ರತಿನಿಧಿಗಳು ಮಾತ್ರ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ಬಹುಸಂಖ್ಯಾತ ಅಂದರೆ ಶೇಕಡ ೫೪.೯ ರಷ್ಟು ಪ್ರತಿನಿಧಿಗಳು ಗ್ರಾಮಪಂಚಾಯಿಗಳ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಕಂಡು ಬರುವುದಿಲ್ಲ. ನಿರ್ಣಯ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಪ್ರತಿನಿಧಿಗಳು ಯಾವ ವಿಷಯಗಳ ಬಗ್ಗೆ ಆಸಕ್ತಿವಹಿಸುತ್ತಾರೆ ಎಂಬುದು ಅತ್ಯಂತ ಆಸಕ್ತಿಕರ ಸಂಗತಿಯಾಗಿದೆ. ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ನಿರ್ಣಯ ಪ್ರಕ್ರಿಯೆಯಲ್ಲಿ ಯಾವ ಸಂಗತಿಗಳ ಬಗ್ಗೆ ಆಸಕ್ತಿವಹಿಸುತ್ತಾರೆ ಎನ್ನುವುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೫.೯ ದಲಿತ ಪ್ರತಿನಿಧಿಗಳು ಮತ್ತು ಆಸಕ್ತಿ ವಿಷಯಗಳು:

ಕ್ಷೇತ್ರ ಕಾರ್ಯದ ಮೂಲಕ ದಲಿತ ಸಮುದಾಯದ ಪ್ರತಿನಿಧಿಗಳು ವಿವಿಧ ವಿಷಯಗಳ ಬಗ್ಗೆ ಆಸಕ್ತಿ ವಹಿಸಿ, ಚರ್ಚೆ ಮಾಡಿರುವುದನ್ನು ಕಂಡುಕೊಳ್ಳಲಾಗಿದೆ. ದಲಿತ ಪ್ರತಿನಿಧಿಗಳು

ಮೂಲಭೂತ ಸೌಕರ್ಯಗಳ ಬಗ್ಗೆ ಕಾರ್ಯಕ್ರಮ ಮತ್ತು ಸಂಪನ್ಮೂಲಗಳ ಹಂಚಿಕೆ ಬಗ್ಗೆ ದಲಿತ ಸಮುದಾಯದ ಅಭಿವೃದ್ಧಿಯ ಬಗ್ಗೆ ಗುತ್ತಿಗೆಯ ಹಂಚಿಕೆಯ ಮಾಡುವ ಬಗ್ಗೆ ಮತ್ತು ಸುರಕ್ಷಿತವಲ್ಲದ ಜನರ ಅಭಿವೃದ್ಧಿಯ ಬಗ್ಗೆ ಹೀಗೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ದಲಿತ ಪ್ರತಿನಿಧಿಗಳು ಯಾವ ವಿಷಯದ ಬಗ್ಗೆ ಹೆಚ್ಚು ಚರ್ಚಿಸುತ್ತಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ. ಬಳ್ಳಾರಿ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೫೩.೩ ರಷ್ಟು ಪ್ರತಿನಿಧಿಗಳು ನಿರ್ಣಯ ಪ್ರಕ್ರಿಯೆಯಲ್ಲಿ ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಶೇಕಡ ೨೦ರಷ್ಟು ಪ್ರತಿನಿಧಿಗಳು ಕಾರ್ಯಕ್ರಮ ಮತ್ತು ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ಚರ್ಚಿಸಿದ್ದಾರೆ. ಶೇಕಡ ೨೬.೭ ರಷ್ಟು ಸದಸ್ಯರು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ ಚರ್ಚಿಸಿದ್ದಾರೆ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೬೦ ರಷ್ಟು ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಶೇಕಡ ೧೩.೩ ರಷ್ಟು ಸದಸ್ಯರು ಕಾರ್ಯಕ್ರಮ ಮತ್ತು ಸಂಪನ್ಮೂಲಗಳ ಹಂಚಿಕೆ ಬಗ್ಗೆ ಚರ್ಚಿಸಿದ್ದಾರೆ. ಶೇಕಡ ೨೬.೭ ರಷ್ಟಯ ಸದಸ್ಯರು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ ಚರ್ಚಿಸಿದ್ದಾರೆ. ಇದೇ ಪ್ರಕಾರ ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೦ರಷ್ಟು ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಉಳಿದ ಶೇಕಡ ೨೫ ರಷ್ಟು ಪ್ರತಿನಿಧಿಗಳು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ ಚರ್ಚಿಸಿದ್ದಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೪.೩ ರಷ್ಟು ಸದಸ್ಯರು ಮೂಲಭೂತ ಸೌಕರ್ಯಗಳ ಬಗ್ಗೆ ಶೇಕಡ ೧೯.೬ರಷ್ಟು ಕಾರ್ಯಕ್ರಮ ಮತ್ತು ಸಂಪನ್ಮೂಲಗಳ ಹಂಚಿಕೆ ಬಗ್ಗೆ ಶೇಕಡ ೨೬.೧ ರಷ್ಟು ಪ್ರತಿನಿಧಿಗಳು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ ಚರ್ಚಿಸಿದ್ದಾರೆ. ಆಶ್ಚರ್ಯಕರ ಸಂಗತಿ ಎಂದರೆ ಬಳ್ಳಾರಿ ಜಿಲ್ಲೆಯ ಯಾವ ದಲಿತ ಪ್ರತಿನಿಧಿಗಳು ಕೂಡ ದಲಿತ ಸಮುದಾಯದ ಅಭಿವೃದ್ಧಿಯ ಬಗ್ಗೆಯಾಗಲಿ ಅಥವಾ ಸುರಕ್ಷಿತವಲ್ಲದ ಜನರ ಅಭಿವೃದ್ಧಿಯ ಬಗ್ಗೆಯಾಗಲಿ ಚರ್ಚೆಗಳನ್ನು ಮಾಡಿಲ್ಲ. ಇದು ದಲಿತ ಸಮುದಾಯದ ಅಭಿವೃದ್ಧಿಯ ದೃಷ್ಟಿಯಿಂದ ನಕಾರಾತ್ಮಕ ಪ್ರಕ್ರಿಯೆಯಾಗಿದೆ. ಜನರಿಂದ ಆಯ್ಕೆಗೊಂಡ ಪ್ರತಿನಿಧಿಯು ವಿವಿಧ ವಿಷಯಗಳ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸುವ ಹಕ್ಕು ಮತ್ತು ಜವಾಬ್ದಾರಿಯನ್ನು ಹೊರಡಿಸುತ್ತಾನೆ. ಬಳ್ಳಾರಿ ಜಿಲ್ಲೆಯ ಎಷ್ಟು ದಲಿತ ಪ್ರತಿನಿಧಿಗಳು ವಿವಿಧ ವಿಷಯಗಳ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸಿದ್ದಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೫.೧೦ ದಲಿತ ಪ್ರತಿನಿಧಿಗಳು ಮತ್ತು ಪ್ರಸ್ತಾವನೆ ಮಂಡನೆ:

ಗ್ರಾಮ ಪಂಚಾಯಿತಿ ಸಭೆಯ ಆರಂಭಿಕ ಹಂತದಲ್ಲಿ ಮಡಿಸುವ ಪ್ರಸ್ತಾವನೆಗಳು ಚರ್ಚೆಯನ್ನು ಹುಟ್ಟು ಹಾಕುತ್ತವೆ. ನಿಯಮಾವಳಿಯ ಪ್ರಕಾರ ಗ್ರಾಮ ಪಂಚಾಯಿತಿ ಸದಸ್ಯರಿಗೆ ನಾಗರೀಕರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ವಿಷಯಗಳ ಬಗ್ಗೆ ಗ್ರಾಮ ಪಂಚಾಯಿತಿಯ ಗಮನ ಸೆಳೆಯಲು ಮತ್ತು ದಲಿತ ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸದಸ್ಯರ ಪ್ರಸ್ತಾವನೆಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು ಗ್ರಹಿಸಲಾಗಿದೆ. ಆದರೆ ಕೇವಲ ಕೆಲವು ಸದಸ್ಯರು ಮಾತ್ರ ಪ್ರಸ್ತಾವನೆಗಳನ್ನು ಮಂಡಿಸುತ್ತಾರೆ. ಸಾಮಾನ್ಯವಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷನೆ ಬಹುತೇಕ ಸಂದರ್ಭಗಳಲ್ಲಿ ಪ್ರಸ್ತಾವನೆಗಳನ್ನು ಮತ್ತು ಗೊತ್ತುವಳಿಗಳನ್ನು ಮಂಡಿಸುತ್ತಾನೆ. ಪ್ರಸ್ತಾವನೆಗಳನ್ನು ಮತ್ತು ಗೊತ್ತುವಳಿಗಳಲ್ಲಿ ಅಧ್ಯಯನಗಳ ಮೂಲಕ ಋಜುವಾತು ಪಟ್ಟಿರುವ ಪ್ರಕಾರ ಮಹಿಳೆಯರು ಅಧ್ಯಕ್ಷರಾಗಿರುವ ಪಂಚಾಯಿತಿಗಳಲ್ಲಿ ಅವರ ಪತಿಯೇ ಸಭೆಗಳಲ್ಲಿ ಅಧಿಕೃತ ಚುನಾಯಿತ ಅಭ್ಯರ್ಥಿಯಂತೆ ಸಭೆಗಳಲ್ಲಿ ಪಾಲ್ಗೊಳ್ಳುತ್ತಾರೆ.

ಇತರೆ ಸದಸ್ಯರಿಂದ ಆತನ ಬಗ್ಗೆ ಆಕ್ಷೇಪಗಳು ಎದುರಾದಾಗ, ಪಕ್ಕದ ರೂಮಿನಲ್ಲಿ ಕುಳಿತುಕೊಳ್ಳುತ್ತಾನೆ. ಸಭೆ ನಡೆಯುವ ಸಂದರ್ಭದಲ್ಲಿ ಗಂಭೀರ ಆರೋಪಗಳು ಮತ್ತು ಪ್ರತ್ಯಾರೋಪಗಳು ಕೇಳಿ ಬಂದಾಗ ಪತಿಯು ಅಧ್ಯಕ್ಷೆಯಾಗಿರುವ ತನ್ನ ಪತ್ನಿಗೆ ಬೆಂಬಲವಾಗಿ ನಿಲ್ಲುತ್ತಾನೆ. ಇಂತಹ ಘಟನೆಗಳು ಆಕಸ್ಮಿಕವಾಗಿಲ್ಲ. ಈ ಪ್ರಕರಣಗಳು ಎಲ್ಲಾ ಪ್ರದೇಶಗಳಲ್ಲೂ ಕಂಡು ಬರುತ್ತಿದ್ದು, ಭಾರತೀಯ ರಾಜಕಾರಣದ ಸಾಮಾನ್ಯ ಲಕ್ಷಣಗಳಾಗಿವೆ.[೨೧] ಗೊತ್ತುವಳಿಗಳನ್ನು ಮತ್ತು ಪ್ರಸ್ತಾವನೆಗಳನ್ನು ಸದಸ್ಯರು ಮಂಡಿಸುವ ಮೂಲಕ ತಮ್ಮ ವಾರ್ಡಿನ ಸಮಸ್ಯೆಗಳನ್ನು ಪರಿಹರಿಸುವುದರ ಜೊತೆಗೆ ದಲಿತ ಸಮುದಾಯದ ಅಭಿವೃದ್ಧಿಗೆ ಕಾರಣವಾಗಬಹುದೆಂದು ಗ್ರಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಎಷ್ಟು ದಲಿತ ಪ್ರತಿನಿಧಿಗಳು ಗ್ರಾಮ ಸಭೆಯಲ್ಲಿ ಗೊತ್ತುವಳಿಗಳನ್ನು ಮತ್ತು ಪ್ರಸ್ತಾವನೆಗಳನ್ನು ಮಂಡಿಸಿದ್ದಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡು ಕೊಳ್ಳಲಾಗಿದೆ.

ಕೋಷ್ಠಕ ೨೯ರಲ್ಲಿ ಕಂಡು ಬರುವಂತೆ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೭.೬ ರಷ್ಟು ಪ್ರತಿನಿಧಿಗಳು ಮಾತ್ರ ಗೊತ್ತುವಳಿಗಳನ್ನು ಮತ್ತು ಪ್ರಸ್ತಾವನೆಗಳನ್ನು ಮಂಡಿಸಿದ್ದು, ಬಹುತೇಕ ದಲಿತ ಪ್ರತಿನಿಧಿಗಳು ಅಂದರೆ ಶೇಕಡ ೮೨.೨ ರಷ್ಟು ದಲಿತ ಪ್ರತಿನಿಧಿಗಳು ತಮ್ಮ ಅಧಿಕಾರಾವಧಿಯಲ್ಲಿ ಯಾವುದೇ ಗೊತ್ತುವಳಿಯನ್ನಾಗಲಿ ಅಥವಾ ಪ್ರಸ್ತಾವನೆಗಳಾಗಲಿ ಮಂಡಿಸಿಲ್ಲ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೫.೪ ರಷ್ಟು ಸದಸ್ಯರು ಮಾತ್ರ ಗೊತ್ತುವಳಿಗಳನ್ನು ಮತ್ತು ಪ್ರಸ್ತಾವನೆಗಳನ್ನು ಮಂಡಿಸಿದ್ದು, ಉಳಿದ ಶೇಕಡ ೮೪.೬ರಷ್ಟು ಸದಸ್ಯರು ಯಾವುದೇ ಗೊತ್ತುವಳಿ ಮತ್ತು ಪ್ರಸ್ತಾವನೆಯನ್ನು ಮಂಡಿಸಿಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೪.೩ ರಷ್ಟು ಸದಸ್ಯರು ಮಾತ್ರ ಗೊತ್ತುವಳಿ ಮತ್ತು ಪ್ರಸ್ತಾವನೆಯನ್ನು ಮಂಡಿಸಿದ್ದು, ಉಳಿದ ಶೇಕಡ ೭೫.೭ ರಷ್ಟು ಸದಸ್ಯರು ಯಾವುದೇ ಗೊತ್ತುವಳಿ ಅಥವಾ ಪ್ರಸ್ತಾವನೆಯನ್ನು ಮಂಡಿಸಿಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೯.೬ ರಷ್ಟು ಸದಸ್ಯರು ಮಾತ್ರ ವಿವಿಧ ವಿಷಯಗಳ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸಿದ್ದು, ಬಹುತೇಕ ಅಂದರೆ ಶೇಕಡ ೮೯.೪ ರಷ್ಟು ದಲಿತ ಪ್ರತಿನಿಧಿಗಳು ಗ್ರಾಮ ಪಂಚಾಯಿತಿ ಸಭೆಯಲ್ಲಿ ಸಾಮಾನ್ಯ ವಿಷಯಗಳಾಗಲಿ ಅಥವಾ ದಲಿತರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆಯಾಗಲಿ ಯಾವುದೇ ಗೊತ್ತುವಳಿ ಅಥವಾ ಪ್ರಸ್ತಾವನೆಗಳನ್ನು ಮಂಡಿಸಿಲ್ಲ. ಜಿಲ್ಲೆಯ ೩ ತಾಲ್ಲೂಕುಗಳಲ್ಲಿ ಅವಲೋಕಿಸಿ ಹೇಳುವುದಾದರೆ ದಲಿತ ಪುರುಷ ಪ್ರತಿನಿಧಿಗಳಿಗೆ ಹೋಲಿಸಿದರೆ ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ಗೊತ್ತುವಳಿಯನ್ನು ಅಥವಾ ಪ್ರಸ್ತಾವನೆಯನ್ನು ಮಂಡಿಸುವವರ ಸಂಖ್ಯೆ ಅತ್ಯಂತ ಕನಿಷ್ಠ ಪ್ರಮಾನದಲ್ಲಿದೆ. ಕೋಷ್ಟಕದ ದತ್ತಾಂಶಗಳು ಹೇಳುವಂತೆ ದಲಿತ ಪ್ರತಿನಿಧಿಗಳು ಗೊತ್ತುವಳಿಗಳನ್ನು ಮತ್ತು ಪ್ರಸ್ತಾವನೆಗಳನ್ನು ಮಂಡಿಸುವ ಸಂಗತಿಗಳಲ್ಲಿ ಅತ್ಯಂತ ಹಿಂದುಳಿದಿದ್ದಾರೆ.

೫.೧೧. ದಲಿತ ಪ್ರತಿನಿಧಿಗಳ ಗೊತ್ತುವಳಿ ಮಂಡನೆ ಮತ್ತು ಆಸಕ್ತಿ ವಿಷಯಗಳು:

ದಲಿತ ಪ್ರತಿನಿಧಿಗಳು ಯಾವ ಸಂಗತಿಗಳ ಬಗ್ಗೆ ಗೊತ್ತುವಳಿ ಮತ್ತು ಪ್ರಸ್ತಾವನೆಯನ್ನು ಮಂಡಿಸುತ್ತಾರೆ ಎನ್ನುವುದನ್ನು ಆಧರಿಸಿ ಪ್ರತಿನಿಧಿಗಳಿಗೆ ಇರುವ ಸಾಮಾನ್ಯ ಆಸಕ್ತಿ ಮತ್ತು ದಲಿತ ಸಮುದಾಯದ ಆಸಕ್ತಿಗಳನ್ನು ಹೊಂದಿರಬಹುದೆಂದು ಗ್ರಹಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಯಾವ ವಿಷಯಗಳನ್ನು ಚರ್ಚಿಸಿದ್ದಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ. ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೨.೮ ರಷ್ಟು ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಪ್ರಸ್ತಾವನೆ ಮಂಡಿಸಿದ್ದಾರೆ. ಶೇಕಡ ೧೪.೩ ರಷ್ಟು ಪ್ರತಿನಿಧಿಗಳು ಕಾರ್ಯಕ್ರಮಗಳು ಮತ್ತು ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ಪ್ರಸ್ತಾವನೆ ಮಂಡಿಸಿದ್ದಾರೆ. ಶೇ.೧೪.೩ ರಷ್ಟು ಪ್ರತಿನಿಧಿಗಳು ದಲಿತ ಸಮುದಾಯದ ಅಭಿವೃದ್ಧಿಯ ಬಗ್ಗೆ ಶೇಕಡ ೧೪.೩ ರಷ್ಟು ಪ್ರತಿನಿಧಿಗಳು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ, ಉಳಿದ ಶೇಕಡ

೧೪.೩ ರಷ್ಟು ಪ್ರತಿನಿಧಿಗಳು ಸುರಕ್ಷಿವಲ್ಲದ ಜನರ ಅಭಿವೃದ್ಧಿಯ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭೫ ರಷ್ಟು ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸಿದ್ದಾರೆ. ಉಳಿದ ೨೫ರಷ್ಟು ಪ್ರತಿನಿಧಿಗಳು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ ಗೊತ್ತುವಳಿಯನ್ನು ಮಂಡಿಸಿದ್ದಾರೆ. ಆದರೆ ಯಾವ ಪ್ರತಿನಿಧಿಗಳು ಕೂಡಾ ಕಾರ್ಯಕ್ರಮಗಳು ಮತ್ತು ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ದಲಿತ ಸಮುದಾಯದ ಅಭಿಪ್ರಾಯದ ಬಗ್ಗೆ ಹಾಗೂ ಸುರಕ್ಷಿತವಲ್ಲದ ಜನರ ಅಭಿವೃದ್ಧಿಯ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸಿಲ್ಲ. ಈ ತಾಲ್ಲೂಕಿನ ದಲಿತ ಪ್ರತಿನಿಧಿಗಳು ಪ್ರಸ್ತಾವನೆಗಳು ಕೇವಲ ಮೂಲಭೂತ ಸೌಕರ್ಯಗಳು ಮತ್ತು ಗುತ್ತಿಗೆಯನ್ನು ಹಂಚಿಕೆ ಮಾಡುವುದಕ್ಕೆ ಸೀಮಿತಗೊಂಡಿವೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೪.೫ ರಷ್ಟು ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಶೇಕಡ ೩೩.೩.ರಷ್ಟು ಕಾರ್ಯಗಳು ಮತ್ತು ಸಂಪನ್ಮೂಲಗಳ ಬಗ್ಗೆ, ಶೇಕಡ ೧೧.೧ ರಷ್ಟು ದಲಿತ ಸಮುದಾಯದ ಅಭಿವೃದ್ಧಿಯ ಬಗ್ಗೆ ಹಾಗೂ ಶೇಕಡ ೧೧.೧ ರಷ್ಟು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸಲಾಗಿದ್ದು, ಈ ತಾಲ್ಲೂಕಿನ ಯಾವ ದಲಿತ ಪ್ರತಿನಿಧಿಗಳು ಕೂಡ ಸುರಕ್ಷಿತವಲ್ಲದ ಜನರ ಅಭಿವೃದ್ಧಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಮಂಡಿಸಿರುವುದು ಕಂಡು ಬರುವುದಿಲ್ಲ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೦ರಷ್ಟು ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಹಾಗೂ ಶೇ. ೫೦ರಷ್ಟು ಪ್ರತಿನಿಧಿಗಳು ಕಾರ್ಯಕ್ರಮಗಳ ಮತ್ತು ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ಶೇಕಡ ೧೦ರಷ್ಟು ಪ್ರತಿನಿಧಿಗಳು ದಲಿತ ಸಮುದಾಯದ ಅಭಿವೃದ್ಧಿಯ ಬಗ್ಗೆ ಶೇ.೧೫ರಷ್ಟು ಪ್ರತಿನಿಧಿಗಳು ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ ಮತ್ತು ಉಳಿದ ಶೇಕಡ ೫ ರಷ್ಟು ಪ್ರತಿನಿಧಿಗಳು ಸುರಕ್ಷಿತವಲ್ಲದ ಜನರ ಅಭಿವೃದ್ಧಿಯ ಬಗ್ಗೆ ಪ್ರಸ್ತಾವನೆಗಳನ್ನು ಮಂಡಿಸಿದ್ದಾರೆ. ಒಟ್ಟಾರೆ ಕ್ಷೇತ್ರ ಕಾರ್ಯದ ದತ್ತಾಂಶಗಳನ್ನು ಅವಲೋಕಿಸಿದರೆ, ಬಹುತೇಕ ದಲಿತ ಪ್ರತಿನಿಧಿಗಳ ಪ್ರಸ್ತಾವನೆಗಳು ಕೇವಲ ಮೂಲಭೂತ ಸೌಕರ್ಯಗಳಿಗೆ ಸೀಮಿತಗೊಂಡವು. ದಲಿತ ಪ್ರತಿನಿಧಿಗಳ ಎರಡನೆಯ ಆದ್ಯತೆಯ ಸಂಗತಿ ಎಂದರೆ ಕಾರ್ಯಕ್ರಮಗಳು ಮತ್ತು ಸಂಪನ್ಮೂಲಗಳ ಹಂಚಿಕೆಯಾಗಿದೆ. ದಲಿತ ಪ್ರತಿನಿಧಿಗಳ ಮೂರನೆಯ ಆದ್ಯತಾ ಕ್ಷೇತ್ರವೆಂದರೆ ಗುತ್ತಿಗೆಯನ್ನು ಹಂಚಿಕೆ ಮಾಡುವುದು ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ದಲಿತ ಪ್ರತಿನಿಧಿಗಳಿಗೆ ದಲಿತ ಸಮುದಾಯದ ಅಭಿವೃದ್ಧಿಯ ಸಂಗತಿ ಮತ್ತು ಸುರಕ್ಷಿತವಲ್ಲದ ಜನರ ಅಭಿವೃದ್ಧಿಯ ಸಂಗತಿಗಳು ಕೊನೆಯ ಅದ್ಯತೆಗಳಾಗಿವೆ. ೧೯೯೩ರ

ಪಂಚಾಯಿತಿ ಅಧಿನಿಯಮದ ನಿಯಮಾವಳಿಯ ಪ್ರಕಾರ ಗ್ರಾಮ ಪಂಚಾಯಿತಿಗಳಿಗೆ ಜನರಿಗೆ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸೌಕರ್ಯಗಳ ಜೊತೆಗೆ, ಗ್ರಾಮ ಪಂಚಾಯಿತಿಗಳು ಜೀತಪದ್ಧತಿಯನ್ನು ನಿರ್ಮೂಲನೆ ಮಾಡುವ ಸಂಬಂಧ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುವ ಅಥವಾ ಸಂಬಂಧಿಸಿದ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿ ಜೀತಪದ್ಧತಿಯನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಅಧಿಕಾರ ಪ್ರಾಪ್ತವಾಗಿದೆ. ಇದರ ಜೊತೆಗೆ ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ, ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಭಟಿಸಲು ಗ್ರಾಮ ಪಂಚಾಯಿತಿಯು ಕ್ರಮ ಕೈಗೊಳ್ಳತಕ್ಕದ್ದು, ಹಾಗೂ ಮಹಿಳೆಯರಿಗೆ ಲೈಂಗಿಕ ಕಿರುಕುಳವಾಗದಂತೆ ತಡೆಗಟ್ಟುವುದು. ಗ್ರಾಮ ಪಂಚಾಯಿತಿಯ ಆದ್ಯ ಕರ್ತವ್ಯವಾಗಿದೆ.[೨೨]

ಈ ಎಲ್ಲಾ ಸಂಗತಿಗಳು ದಲಿತರ ಬದುಕನ್ನು ಕಾಡುತ್ತಿವೆ. ಆದರೆ ದಲಿತ ಪ್ರತಿನಿಧಿಗಳು ದಲಿತ ಸಮುದಾಯ ಎದುರಿಸುತ್ತಿರುವ ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ದಲಿತ ಪ್ರತಿನಿಧಿಗಳು ಯಾವುದೇ ಪ್ರಸ್ತಾವನೆ ಅಥವಾ ಗೊತ್ತುವಳಿಯನ್ನು ಮಂಡಿಸಿರುವ ದಾಖಲೆಗಳು ಕಂಡು ಬರುತ್ತಿಲ್ಲ. ಪಂಚಾಯಿತಿಯ ಅಧಿನಿಯಮದ ಪ್ರಕಾರ ದಲಿತ ಸಮಸ್ಯೆಗಳನ್ನು ಪರಿಹರಿಸಲು ದಲಿತರ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡಲಾಗಿದೆ. ದಲಿತರ ಮತಗಳಿಂದ ಆಯ್ಕೆಗೊಳ್ಳುವ ಎಷ್ಟು ಪ್ರತಿನಿಧಿಗಳು ದಲಿತ ಸಮುದಾಯಕ್ಕೆ ಸಹಾಯ ಮಾಡಿದ್ದಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೫.೧೨. ದಲಿತ ಪ್ರತಿನಿಧಿಗಳು ಮತ್ತು ದಲಿತ ಸಮುದಾಯಕ್ಕೆ ಸ್ಪಂದನೆ :

೧೯೯೩ರ ಗ್ರಾಮ ಪಂಚಾಯಿತಿಯ ಅಧಿನಿಯಮ ಪ್ರಕಾರ ಪಂಚಾಯಿತಿ ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೇ ಹಾಗೇ ಮೀಸಲಿಡುವ ಸ್ಥಾನಗಳ ಸಂಖ್ಯೆಯು ಗ್ರಾಮ ಪಂಚಾಯಿತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿ ಸುಮಾರು ಅದೇ ಅನುಪಾತದಲ್ಲಿರತಕ್ಕದ್ದು, ಗ್ರಾಮ ಪಂಚಾಯಿತಿ ಸ್ಥಾನಗಳ ಒಟ್ಟು ಜನಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದರಷ್ಟು ಸ್ಥಾನಗಳನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ನಿಗದಿಪಡಿಸತಕ್ಕದ್ದು, ಗ್ರಾಮ ಪಂಚಾಯಿತಿಯ ಒಟ್ಟು ಸ್ಥಾನಗಳಲ್ಲಿ ಶೇಕಡ ೫೦ಕ್ಕೆ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸತಕ್ಕದ್ದು ಎಂದು ಸ್ಪಷ್ಟಪಡಿಸಿದೆ.[೨೩] ಹೀಗೆ ಸಮುದಾಯವಾರು ಮೀಸಲಾತಿಯನ್ನು ನಿಗದಿಪಡಿಸುವುದರ ಉದ್ದೇಶ ಆಯಾ

ಸಮುದಾಯದವರ ಪ್ರತಿನಿಧಿಗಳು ತಮ್ಮ ಸಮುದಾಯಗಳ ಸಮಸ್ಯೆಗೆ ಸ್ಪಂದಿಸಿ, ಅವರ ಅಭಿವೃದ್ಧಿಗೆ ಶ್ರಮಿಸಬೇಕೆನ್ನುವ ಆಶಯವಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಎಷ್ಟಡು ದಲಿತ ಪ್ರತಿನಿಧಿಗಳು ತಮ್ಮ ಸಮುದಾಯಗಳಿಗೆ ಸಹಾಯ ನೀಡಿದ್ದಾರೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಅದರ ವಿಶ್ಲೇಷಣೆಯನ್ನು ಮಂಡಿಸಲಾಗಿದೆ.

ಕೋಷ್ಟಕ –೩೧ ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ ೧೫.೪ರಷ್ಟಡು ದಲಿತ ಪ್ರತಿನಿಧಿಗಳು ಮಾತ್ರ ತಮ್ಮ ಸಮುದಾಯಕ್ಕೆ ಸಹಾಯ ಮಾಡಿದ್ದು, ಶೇ. ೮೪.೬ರಷ್ಟು ದಲಿತ ಪ್ರತಿನಿಧಿಗಳು ಒಪ್ಪಿಕೊಳ್ಳುವ ಪ್ರಕಾರ ತಮ್ಮ ಸಮುದಾಯಕ್ಕೆ ಯಾವುದೇ ಸಹಾಯ ಮಾಡಲು ಸಾಧ್ಯವಿಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ. ೨೬.೯ರಷ್ಟು ಪ್ರತಿನಿಧಿಗಳು ಮಾತ್ರ ತಮ್ಮ ಸಮುದಾಯಕ್ಕೆ ಸಹಾಯ ಮಾಡಿದ್ದು, ಉಳಿದ ಶೇ. ೭೩.೯ ರಷ್ಟು ದಲಿತ ಪ್ರತಿನಿಧಿಗಳ ತಮ್ಮ ಸಮುದಾಯಕ್ಕೆ ಯಾವುದೇ ಸಹಾಯ ಮಾಡಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೧.೬ರಷ್ಟು ಸದಸ್ಯರು ಮಾತ್ರ ತಮ್ಮ ಸಮುದಾಯಗಳಿಗೆ ಸಹಾಯ ಮಾಡಿದ್ದು, ಉಳಿದ ಶೇ. ೬೮.೪ರಷ್ಟು ದಲಿತ ಪ್ರತಿನಿಧಿಗಳು ತಮ್ಮ ಸಮುದಾಯಕ್ಕೆ ಯಾವುದೇ ಸಹಾಯ ಮಾಡಿಲ್ಲ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ. ಒಟ್ಟಾರೆ. ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೦.೬ ರಷ್ಟು ದಲಿತ ಪ್ರತಿನಿಧಿಗಳು ಮಾತ್ರ ತಮ್ಮ ಸಮುದಾಯಗಳಿಗೆ ಸಹಾಯ ಮಾಡಿದ್ದಾರೆ. ಆದರೆ ಶೇ. ೭೯.೪ ರಷ್ಟು ದಲಿತ ಪ್ರತಿನಿಧಿಗಳು ತಮ್ಮ ಅಧಿಕಾರದಲ್ಲಿ ದಲಿತ ಸಮುದಾಯಕ್ಕೆ ಯಾವುದೇ ಸಹಾಯ ಮಾಡಲು ಸಾಧ್ಯವಾಗಿಲ್ಲ ಎನ್ನುವುದು ಇಂದಿಗೂ ದಲಿತ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ದಲಿತ ಪ್ರತಿನಿಧಿಗಳು ತಮ್ಮ ಸಮುದಾಯಕ್ಕೆ ಯಾವುದೇ ಸಹಾಯ ಮಾಡಲು ಸಾಧ್ಯವಾಗದಿರುವ ಪಟ್ಟಭದ್ರ ಹಿತಾಸಕ್ತಿಯು ಸಮಾಜದಲ್ಲಿ ಮೂಂದುವರಿದಂತೆ ಕಂಡು ಬರುತ್ತದೆ.

ಬಳ್ಳಾರಿ ಜಿಲ್ಲೆಯ ಶೇ.೨೦.೬ ರಷ್ಟು ಸದಸ್ಯರು ಮಾತ್ರ ತಮ್ಮ ಸಮುದಾಯಕ್ಕೆ ಸಹಾಯ ಮಾಡಿದ್ದಾರೆ. ಜನಪ್ರತಿನಿಧಿಗಳಿಂದ ದಲಿತ ಸಮುದಾಯ ಪಡೆದುಕೊಂಡಿರುವ ಸಹಾಯಗಳ ಸ್ವರೂಪ ಎಂತಹದು ಎನ್ನುವುದು ಅಧ್ಯಯನ ದೃಷ್ಟಿಯಿಂದ ಮುಖ್ಯವಾಗುತ್ತದೆ. ಈ ಸಂಗತಿಗಳನ್ನು ಮುಂದಿನ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

೫.೧೩. ದಲಿತ ಪ್ರತಿನಿಧಿಗಳು ಮತ್ತು ದಲಿತ ಸಮುದಾಯ ಪಡೆದುಕೊಂಡು ಸಹಾಯಗಳು:

ಈ ರೀತಿಯ ಚರ್ಚಿಸುವಂತೆ ಗ್ರಾಮ ಪಂಚಾಯಿತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳವುದರ ಜೊತೆಗೆ ಜೀತಪದ್ಧತಿ ನಿರ್ಮೂಲನೆ ಮಾಡುವುದು, ಮಹಿಳಾ ದೌರ್ಜನವನ್ನು ತಡೆಹಿಡಿಯುವುದು, ಶೋಷಣೆಯನ್ನು ನಿವಾರಿಸುವುದು ಮುಂತಾದ ಗುರುತರವಾದ ಜವಾಬ್ದಾರಿಗಳನ್ನು ನಿಯಾಮವಳಿಯ ಮೂಲಕ ನೀಡಲಾಗಿದೆ. ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ದಲಿತ ಸಮುದಾಯಕ್ಕೆ ಯಾವ ಸಮಸ್ಯೆಗಳ ಪರಿಹಾರಕ್ಕೆ ಸ್ಪಂದಿಸಿದ್ದಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ –೩೨ ರ ದತ್ತಾಂಶಗಳು ಸ್ಪಷ್ಟಪಡಿಸುವಂತೆ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೮೩.೩ ರಷ್ಟು ದಲಿತ ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಶೇ. ೧೬.೭ ರಷ್ಟು ಪ್ರತಿನಿಧಿಗಳು ಸರ್ಕಾರದ ಕಾರ್ಯಕ್ರಮಗಳಲ್ಲಿ ದಲಿತರನ್ನು ಹೆಚ್ಚಾಗಿ ಫಲಾನುಭವಿಗಳನ್ನಾಗಿ ಗುರುತಿಸಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೮೫.೭ ರಷ್ಟು ಪ್ರತಿನಿಧಿಗಳು ದಲಿತ ಸಮುದಾಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಶೇ. ೧೪.೩ ರಷ್ಟು ಪ್ರತಿನಿಧಿಗಳು ಕಾರ್ಯಕ್ರಮಗಳಲ್ಲಿ ದಲಿತರನ್ನು ಹೆಚ್ಚಾಗಿ ಫಲಾನುಭವಿಗಳನ್ನಾಗಿ ಗುರುತಿಸಿದ್ದಾರೆ.

ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಕಾರ್ಯಕ್ರಮಗಳಲ್ಲಿ ಶೇ. ೭೫ ರಷ್ಟು ಪ್ರತಿನಿಧಿಗಳು ದಲಿತರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಶೇ. ೧೨.೫ರಷ್ಟು ಪ್ರತಿನಿಧಿಗಳು ದಲಿತರು ಅನುಭವಿಸುತ್ತಿದ್ದ ಅಸಮಾನತೆಯನ್ನು ನಿವಾರಿಸಿದ್ದಾರೆ. ಉಳಿದ ಶೇ.೧೨.೫ ರಷ್ಟು ಸದಸ್ಯರು ಹೆಚ್ಚು ದಲಿತರನ್ನು ಫಲಾನುಭವಿಗಳಾಗಿ ಗುರುತಿಸಿದ್ದಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತರಲ್ಲಿ ಶೇ. ೮೦.೯ ರಷ್ಟು ದಲಿತ ಪ್ರತಿನಿಧಿಗಳು ಸಮುದಾಯಕ್ಕೆ ಮೂಲಭೂತ ಅವಶ್ಯಕತೆಗಳನ್ನು ಒದಗಿಸಿದ್ದಾರೆ. ಇದೇ ಜಿಲ್ಲೆಯಲ್ಲಿ ಶೇ. ೪.೮ ರಷ್ಟು ಪ್ರತಿನಿಧಿಗಳು ಮಾತ್ರ ಗ್ರಾಮದಲ್ಲಿ ದಲಿತರು ಅನುಭವಿಸುತ್ತಿರುವ ತಾರತಮ್ಯಗಳನ್ನು ನಿವಾರಿಸುವ ಪ್ರಯತ್ನಗಳನ್ನು ಮಾಡಿದ್ದಾರೆ. ಶೇ. ೧೪.೩ ರಷ್ಟು ಪ್ರತಿನಿಧಿಗಳು ಮಾತ್ರ ಹೆಚ್ಚು ದಲಿತರನ್ನು ಫಲಾನುಭವಿಗಳಾಗಿ ಗುರುತಿಸಲು ಶ್ರಮಿಸಿದ್ದಾರೆ.

ಕ್ಷೇತ್ರ ಕಾರ್ಯದ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಕೂಡ್ಲಿಗಿ ತಾಲ್ಲೂಕನ್ನು ಹೊರತುಪಡಿಸಿ ಉಳಿದ ತಾಲ್ಲೂಕಿನ ದಲಿತ ಪ್ರತಿನಿಧಿಗಳು ಸಮುದಾಯ ಎದುರಿಸುತ್ತಿರುವ ತಾರತಮ್ಯಗಳ ನಿವಾರಣೆಗೆ ಪ್ರಯತ್ನಿಸಿಲ್ಲ. ಇಂದಿಗೂ ದಲಿತರಿಗೆ ಸಮಾನವಾಗಿ ಸಂಪನ್ಮೂಲಗಳ ಹಂಚಿಕೆಯಾಗುತ್ತಿಲ್ಲ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಪ್ರಮುಖವಾದುವಗಳನ್ನು ಅವರಿಗೆ

ನೀಡಲಾಗುತ್ತಿಲ್ಲ. ಇದರ ಜೊತೆಗೆ ಸಾಮಾನ್ಯ ಜನರಿಗೆ ಲಭ್ಯವಿರುವ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನಾಗಿ ಗುರುತಿಸಲಾಗುತ್ತಿಲ್ಲ. ಈ ಸಂಗತಿಗಳಿಗೆ ಸಂಬಂಧಿಸಿದಂತೆ, ದಲಿತ ಪ್ರತಿನಿಧಿಗಳು ಯಾವುದೇ ಪ್ರಯತ್ನಗಳನ್ನು ಕೈಗೊಳ್ಳದೇ ಇರುವುದು ಅತ್ಯಂತ ವಿಷಾದಕರ ಸಂಗತಿಯಾಗಿದೆ. ದಲಿತ ಸಮುದಾಯವನ್ನು ಪ್ರತಿನಿಧಿಸುವ ಮೂಲಕ ದಲಿತರ ಸಮಸ್ಯೆಗಳಿಗೆ ಸ್ಪಂದಿಸುವ ಕಾರಣಕ್ಕಾಗಿ ದಲಿತರಿಗೆ ಮೀಸಲಾತಿ ನೀಡಿದ್ದು, ಈ ನಿಟ್ಟಿನಲ್ಲಿ ದಲಿತ ಪ್ರತಿನಿಧಿಗಳು ದಲಿತ ಸಮುದಾಯಕ್ಕೆ ಯಾವುದೇ ಅಗತ್ಯಗಳನ್ನು ಪೂರೈಸದೇ ಇರುವುದು ಮೀಸಲಾತಿಯ ಆಶಯಕ್ಕೆ ದಕ್ಕೆಯುಂಟಾಗುತ್ತದೆ.

ಒಟ್ಟಾರೆ ಕ್ಷೇತ್ರ ಅಧ್ಯಯನದ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಪಂಚಾಯಿತಿ ಅಧಿನಿಯಮದ ಆಶಯಗಳಿಗೆ ಅನುಗುಣವಾಗಿ ದಲಿತ ಪ್ರತಿನಿಧಿಗಳು ಪರಿಣಾಮಕಾರಿಯಾಗಿ ಪಂಚಾಯತ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿಲ್ಲ. ಹಾಗಾಗಿ ದಲಿತ ಪ್ರತಿನಿಧಿಗಳು ದಲಿತ ಸಮುಧಯದ ಅಭಿವೃದ್ಧಿಗೆ ಸಹಕಾರಿಯಾಗಲು ಸಾಧ್ಯವಾಗುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ.

೫.೧೪. ದಲಿತ ಅಧ್ಯಕ್ಷರುಗಳ ಅಧಿಕಾರ ನಿರ್ವಹಣೆ : ಒಂದು ಅವಲೋಕನ :

ಈ ಭಾಗದಲ್ಲಿ ೭೩ನೇ ಸಂವಿಧಾನ ತಿದ್ದುಪಡಿಯ ನಂತರ ಪಂಚಾಯತ್ ರಾಜ್ಯ ವ್ಯವಸ್ಥೆಯ ಮೂರು ಹಂತಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಸಾಮಾನ್ಯ ಸದಸ್ಯ ಸ್ಥಾನಗಳಿಗೆ ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಶೇ. ೩೩ ರಷ್ಟು ಮೀಸಲಾತಿ ನೀಡಲಾಗಿದೆ. ಇದರ ಜೊತೆಗೆ ದಲಿತ ಸಮುದಾಯದ ಜನಸಂಖ್ಯೆ ಮತ್ತು ಸ್ಥಾನಗಳಿಗೆ ಅನುಗುಣವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ದಲಿತರು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಅಲಂಕರಿಸಿ ಅಧಿಕಾರವನ್ನು ನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಅಧ್ಯಕ್ಷರು, ತಮಗೆ ನಿಯಮದ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಹೇಗೆ ಚಲಾಯಿಸುತ್ತಿದ್ದಾರೆ ಎನ್ನುವದನ್ನು ಮೌಲ್ಯಮಾಪನ ಮಾಡುವುದು ಈ ಅಧ್ಯಯನದ ಮತ್ತೊಂದು ಪ್ರಮುಖ ಉದ್ದೇಶವಾಗಿದೆ. ೧೯೯೩ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮದ ಪ್ರಕಾರ ಗ್ರಾಮ ಪಂಚಾಯತ್ ಅಧ್ಯಕ್ಷರು ಅಧಿನಿಯಮದ ಯಾವುದೇ ಇತರೇ ಉಪಬಂಧದ ಅಥವಾ ಅದರಡಿಯಲ್ಲಿ ರಚಿಸಿರುವ ನಿಯಮಗಳ ಅಡಿಯಲ್ಲಿ ಚಲಾಯಿಸ ಬಹುದಾದಂತಹ ಪ್ರಕಾರ್ಯಗಳನ್ನು ಮತ್ತು ಅಧಿಕಾರಗಳನ್ನು ವಿವರಿಸಲಾಗಿದೆ. ಇದರ ಪ್ರಕಾರ ಅಧ್ಯಕ್ಷರಿಗೆ ಗ್ರಾಮ ಪಂಚಾಯಿತಿ ಸಭೆಗಳನ್ನು ಕರೆಯುವ ಪಂಚಾಯ್ತಿ ದಾಖಲೆಯನ್ನು ನೋಡುವ ಮತ್ತು ಕಡತಗಳನ್ನು ತರಿಸುವ ಪಂಚಾಯತ್

ಅಧಿಕಾರಿಗಳು ಮತ್ತು ನೌಕರರ ಮೇಲೆ ಮೇಲ್ವಿಚಾರಣೆಗೆ ಮತ್ತು ನಿಯಂತ್ರಣ ಮಾಡುವ ಪ್ರಕರಣ ನಡೆಯುತ್ತಿರುವ ಅಧಿಕಾರಗಳನ್ನು ಅಮಾನತ್ತಿನಲ್ಲಿಡುವ, ಮುಂದೂಡುವ ಕಾಲಾವಕಾಶವನ್ನು ತಕ್ಷಣವೇ ನಿರ್ವಹಿಸುವ ಅಧಿಕಾರವನ್ನು ಹೊಂದಿರುತ್ತಾರೆ.[೨೪] ಇದರ ಜೊತೆಗೆ ಜೀತಗಾರಿಕೆ ಪದ್ಧತಿಯನ್ನು ನಿರ್ವಹಣೆ ಮಾಡಲು ಸಂಬಂಧಿಸಿದ ಪ್ರಾಧಿಕಾರಕ್ಕೆ ವರದಿ ಕಳುಹಿಸುವ ಕ್ರಮ ಕೈಗೊಳ್ಳುವುದು, ಮಾನವ ಘನತೆಗೆ ಕಳಂಕ ತರುವ, ಪಾರಂಪರಿಕ, ಸಾಮಾಜಿಕ ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸಲು ಕ್ರಮಕೈಗೊಳ್ಳುವುದು, ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು, ಕಂದಾಯ ಭೂಮಿಯನ್ನು ಹೊರತುಪಡಿಸಿ ಒತ್ತುವರಿ ಮಾಡಿಕೊಂಡಿರುವ ಗ್ರಾಮಪಂಚಾಯ್ತಿಯ ಸ್ವತ್ತನ್ನು ಪುನಃ ಸ್ವಾಧೀನಪಡಿಸಿಕೊಳ್ಳುವುದು, ಗುತ್ತಿಗೆಗಳನ್ನು ಮಾಡಿಕೊಳ್ಳುವುದು, ಸಮುದಾಯಿಕ ಗುತ್ತಿಗೆಗಳನ್ನು ಮಾಡುವುದು ಹಾಗೂ ಗ್ರಾಮ ಪಂಚಾಯಿತಿಯ ಸುಗುಮ ಕಾರ್ಯನಿರ್ವಹಣೆಗಾಗಿ ವಿವಿಧ ಸಮಿತಿಗಳನ್ನು ರಚಿಸಿ, ಅದರ ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರುಗಳನ್ನು ನೇಮಕ ಮಾಡಿ ಅವುಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರವನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷನಿಗೆ ನೀಡಲಾಗಿದೆ.[೨೫] ಪಂಚಾಯತ್ ಅಧಿನಿಯಮದ ಪ್ರಕಾರ ಮೇಲೆ ಚರ್ಚಿಸಿದ ಅಧಿಕಾರಗಳನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷನಿಗೆ ನೀಡಲಾಗಿದೆ. ಈ ಎಲ್ಲಾ ಅಧಿಕಾರಗಳನ್ನು ದಲಿತ ಸಮುದಾಯದ ಅಧ್ಯಕ್ಷ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದಾನೆಯೆ? ಎನ್ನುವುದು ಚರ್ಚೆಯ ಪ್ರಮುಖ ಪ್ರಶ್ನೆ. ಬಳ್ಳಾರಿ ಜಿಲ್ಲೆಯ ವಿವಿಧ ಪಂಚಾಯತ್‌ಗಳಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ದಲಿತ ಸಮುದಾಯದ ಪ್ರತಿನಿಧಿಗಳು ತಮಗೆ ಪ್ರದತ್ತವಾದ ಅಧಿಕಾರಗಳನ್ನು ವಿವಿಧ ಹಂತಗಳಲ್ಲಿ ಹೇಗೆ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೧. ಗ್ರಾಮ ಪಂಚಾಯಿತಿ ಸಭೆ ಕರೆಯುವ ಅಧಿಕಾರ:

೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಕನಿಷ್ಠ ತಿಂಗಳಿಗೊಮ್ಮ ಮತ್ತು ಅಧ್ಯಕ್ಷರು ನಿರ್ಧರಿಸಬಹುದಾದ ಕಾಲದಲ್ಲಿ ಸಭೆ ಕರೆಯತಕ್ಕದ್ದು ಹಾಗೂ ಅಧ್ಯಕ್ಷನು ಸೂಕ್ತವೆಂದು ಭಾವಿಸುವ ಸಂದರ್ಭಗಳಲ್ಲಿ ಅಥವಾ ಸದಸ್ಯರ ಒಟ್ಟು ಸಂಖ್ಯೆ ಮೂರನೇ ಒಂದು ಭಾಗಕ್ಕೆ ಕಡಿಮೆ ಇಲ್ಲದಷ್ಟು ಸದಸ್ಯರು ಸಭೆ ಕರೆಯುವಂತೆ ಕೋರಿದಾಗ ಕೋರಿಕೆ ತಲುಪಿದ ಹದಿನೈದು ದಿನಗಳ ಒಳಗಾಗಿ ವಿಶೇಷ ಸಭೆಯನ್ನು ಕರೆಯುವ ಅಧಿಕಾರವನ್ನು ಅಧ್ಯಕ್ಷನಿಗೆ ನೀಡಲಾಗಿದೆ.

ಒಟ್ಟಾರೆ ಗ್ರಾಮ ಪಂಚಾಯಿಯು ಸಭೆಯನ್ನು ಕರೆಯುವ ವಿಶೇಷ ಅಧಿಕಾರವನ್ನು ಅಧ್ಯಕ್ಷನಿಗೆ ನೀಡಲಾಗಿದೆ.[೨೬] ಈ ಅಧಿಕಾರವನ್ನು ಬಳ್ಳಾರಿ ಜಿಲ್ಲೆಯ ದಲಿತ ಅಧ್ಯಕ್ಷರು ಎಷ್ಟು ಪರಿಣಾಮಕಾರಿಯಾಗಿ ಚಲಾಯಿಸುತ್ತಿದ್ದಾರೆ ಹಾಗೂ ಈ ಅಧಿಕಾರವನ್ನು ದಲಿತ ಅಧ್ಯಕ್ಷರುಗಳು ಸ್ವಾತಂತ್ರ್ಯವಾಗಿ ನಿರ್ವಹಿಸುತ್ತಿದ್ದಾರೆಯೇ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಕೋಷ್ಟಕ ೩೩ರ ದತ್ತಾಂಶಗಳ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೨೦ರಷ್ಟು ಅಧ್ಯಕ್ಷರು ಮಾತ್ರ ಗ್ರಾಮ ಪಂಚಾಯಿತಿ ಸಭೆಯನ್ನು ಸ್ವಾತಂತ್ರ್ಯವಾಗಿ ಕರೆಯುತ್ತಿದ್ದಾರೆ. ಆದರೆ ಶೇ. ೮೦ರಷ್ಟು ಪ್ರತಿನಿಧಿಗಳು ಸ್ವತಂತ್ರವಾಗಿ ಸಭೆಯನ್ನು ಕರೆದಿಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ. ೨೮.೬ ರಷ್ಟು ಅಧ್ಯಕ್ಷರು ಮಾತ್ರ ಸ್ವತಂತ್ರವಾಗಿ ಗ್ರಾಮ ಪಂಚಾಯಿತಿಯ ಸಭೆಗಳನ್ನು ಕರೆದಿದ್ದು, ಶೇ. ೭೧.೪ರಷ್ಟು ಅಧ್ಯಕ್ಷರು ಸ್ವಾತಂತ್ರ್ಯವಾಗಿ ಸಭೆಗಳನ್ನು ಕರೆಯಲು ಸಾಧ್ಯವಾಗಿಲ್ಲ. ಕೂಡ್ಲಿಗಿ ತಾಲ್ಲೂಕಿನಲ್ಲಿ ಇದೇ ಚಿತ್ರಣ ಮುಂದುವರೆದಿದ್ದು, ಶೇ. ೨೦ ರಷ್ಟು ಅಧ್ಯಕ್ಷರು ಮಾತ್ರ ಸ್ವತಂತ್ರವಾಗಿ ಗ್ರಾಮ ಪಂಚಾಯಿತಿ ಸಭೆಯನ್ನು ಕರೆದಿದ್ದು, ಉಳಿದ ಶೇ. ೮೦ ರಷ್ಟು ಅಧ್ಯಕ್ಷರು ಗ್ರಾಮ ಪಂಚಾಯಿತಿಯ ಸಭೆಯನ್ನು ಸ್ವತಂತ್ರವಾಗಿ ಕರೆಯಲು ಸಾಧ್ಯವಾಗಿಲ್ಲ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೨೨.೨ ರಷ್ಟು ಸದಸ್ಯರು ಮಾತ್ರ ಸ್ವತಂತ್ರವಾಗಿ ಗ್ರಾಮಪಂಚಾಯಿತಿ ಸಭೆಯನ್ನು ಕರೆದಿದ್ದು ಉಳಿದ ಶೇ. ೭೭.೮ ರಷ್ಟು ಅಧ್ಯಕ್ಷರುಗಳಿಗೆ ಸ್ವತಂತ್ರವಾಗಿ ಗ್ರಾಮ ಪಂಚಾಯಿತಿ ಸಭೆಯನ್ನು ಕರೆಯಲು ಸಾಧ್ಯವಾಗಿಲ್ಲ.

ಸಿರುಗುಪ್ಪ ತಾಲ್ಲೂಕಿನ ಕನಿಷ್ಠ ಸಂಖ್ಯೆಯ ದಲಿತ ಮಹಿಳಾ ಅಧ್ಯಕ್ಷರುಗಳನ್ನು ಹೊರತುಪಡಿಸಿದರೆ ಬಳ್ಳಾರಿ ತಾಲ್ಲೂಕು ಮತ್ತು ಕೂಡ್ಲಿಗಿ ತಾಲ್ಲೂಕಿನ ಯಾವ ಮಹಿಳಾ ದಲಿತ ಅಧ್ಯಕ್ಷರುಗಳಿಗೆ ಸ್ವತಂತ್ರವಾಗಿ ಪಂಚಾಯತ್ ಸಭೆಗಳನ್ನು ಕರೆಯುವುದು ಸಾಧ್ಯವಾಗಿಲ್ಲ. ಇಡೀ ಜಿಲ್ಲೆಯಲ್ಲಿ ಶೇ. ೭.೧ ರಷ್ಟು ದಲಿತ ಮಹಿಳಾ ಅಧ್ಯಕ್ಷರುಗಳಿಗೆ ಮಾತ್ರ ಸ್ವತಂತ್ರವಾಗಿ ಸಭೆಯನ್ನು ಕರೆಯಲು ಸಾಧ್ಯವಾಗಿದ್ದು, ಉಳಿದ ಶೇ. ೯೨.೯ ರಷ್ಟು ದಲಿತ ಮಹಿಳಾ ಅಧ್ಯಕ್ಷರುಗಳಿಗೆ ಸ್ವತಂತ್ರವಾಗಿ ಗ್ರಾಮಪಂಚಾಯಿತಿಯ ಸಭೆಗಳನ್ನು ಕರೆಯುವುದು ಸಾಧ್ಯವಾಗಿಲ್ಲ. ಅಂದರೆ ಒಟ್ಟಾರೆ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಜನರಿಂದ ನೇರವಾಗಿ ಅಂತಿಮವಾಗಿ, ಸಂವಿಧಾನ ಬದ್ಧವಾಗಿ, ಅಧ್ಯಕ್ಷ ಸ್ಥಾನ ಪ್ರಾಪ್ತವಾಗಿದ್ದರೂ ಇಂದಿಗೂ ದಲಿತ ಸಮುದಾಯದ ಅಧ್ಯಕ್ಷರುಗಳು ಸ್ವತಂತ್ರವಾಗಿ ಗ್ರಾಮಸಭೆಗಳನ್ನು ಕರೆಯುವುದು ಸಬಲೀಕರಣಗೊಳ್ಳದಿರುವುದು ಸ್ಪಷ್ಟಗೊಳ್ಳುತ್ತದೆ. ಸ್ವತಂತ್ರವಾಗಿ ಗ್ರಾಮಸಭೆಯನ್ನು ಕರೆಯಲು ಸಾಧ್ಯವಾಗಾದಾಗ ದಲಿತ ಅಧ್ಯಕ್ಷರುಗಳು ಯಾರ ಸಲಹೆ ಮೇರೆಗೆ ಅಥವಾ ಯಾರ ನಿರ್ದೇಶನದ ಮೇರೆಗೆ ಗ್ರಾಮ ಪಂಚಾಯಿತಿ ಸಭೆಯನ್ನು

ಕರೆಯುತ್ತಾರೆ ಎನ್ನುವುದು ಮತ್ತೊಂದು ವಸ್ತುನಿಷ್ಠವಾದ ಪ್ರಶ್ನೆ. ಈ ಪ್ರಶ್ನೆಗೆ ಕ್ಷೇತ್ರ ಕಾರ್ಯದ ಮೂಲಕ ಉತ್ತರಗಳನ್ನು ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

೨) ಅಧ್ಯಕ್ಷರಿಗೆ ಪಂಚಾಯಿತಿ ಸಭೆ ಕರೆಯಲು ನಿರ್ದೇಶನದ ಮೂಲಗಳು:

ಹಿಂದಿನ ಭಾಗದಲ್ಲಿ ಚರ್ಚಿಸಿದಂತೆ ಕ್ಷೇತ್ರ ಕಾರ್ಯ ದತ್ತಾಂಶಗಳ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೭೭.೮ ರಷ್ಟು ದಲಿತ ಅಧ್ಯಕ್ಷರುಗಳಿಗೆ ಸ್ವತಂತ್ರವಾಗಿ ಗ್ರಾಮ ಪಂಚಾಯಿತಿ ಸಭೆಗಳನ್ನು ಕರೆಯುವುದು ಸಾಧ್ಯವಾಗಿಲ್ಲ. ಹಾಗಾದರೆ ಅಧ್ಯಕ್ಷರುಗಳಿಗೆ ಸಭೆ ಕರೆಯಲು ನಿರ್ದೇಶನ ನೀಡುವ ಅಥವಾ ಸಲಹೆ ನೀಡುವ ಮೂಲಗಳು ಯಾವುವು? ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.,

ಕೋಷ್ಟಕ ೩೪ ರ ದತ್ತಾಂಶಗಳ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೭೫ರಷ್ಟು ಅಧ್ಯಕ್ಷರುಗಳು ಪಂಚಾಯತ್ ಅಧಿಕಾರಿಗಳ ನಿರ್ದೇಶನದ ಮೇರೆಗೆ ಸಭೆ ಕರೆಯುತ್ತಿದ್ದಾರೆ. ಉಳಿದ ಶೇ. ೨೫ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಸಭೆಗಳನ್ನು ಕರೆಯುತ್ತಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ.೮೦ ರಷ್ಟು ಅಧ್ಯಕ್ಷರುಗಳು ಪಂಚಾಯತ್ ಅಧಿಕಾರಿಗಳ ನಿರ್ದೇಶನದ ಮೇರೆಗೆ ಸಭೆಗನ್ನು ಕರೆದಿದ್ದು, ಉಳಿದ ಶೇ. ೨೦ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಗ್ರಾಮ ಪಂಚಾಯಿತಿ ಸಭೆಗಳನ್ನು ಕರೆದಿದ್ದಾರೆ.

ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೬೨.೫ ರಷ್ಟು ಅಧ್ಯಕ್ಷರು ಅಧಿಕಾರಿಗಳ ನಿರ್ದೇಶನದ ಮೇರೆಗೆ ಮತ್ತು ಶೇ. ೩೭.೫ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಸಭೆಗಳನ್ನು ಆಯೋಜಿಸಿದ್ದಾರೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಸ್ವತಂತ್ರವಾಗಿ ಸಭೆ ಕರೆಯದ ಒಟ್ಟು ಅಧ್ಯಕ್ಷರುಗಳಲ್ಲಿ ಶೇ. ೫೭.೧ ರಷ್ಟು ಅಧ್ಯಕ್ಷರುಗಳು ಅಧಿಕಾರಿಗಳ ನಿರ್ದೇರ್ಶನದ ಮೇರೆಗೆ ಗ್ರಾಮ ಪಂಚಾಯಿತಿಯ ಸಭೆಗಳನ್ನು ಆಯೋಜಿಸಿದ್ದಾರೆ. ಉಳಿದ ಶೇ. ೪೨.೯ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಗ್ರಾಮ ಪಂಚಾಯಿತಿ ಸಭೆಗಳನ್ನು ಆಯೋಜಿಸಿದ್ದಾರೆ. ಅಂದರೆ ಬಳ್ಳಾರಿ ಜಿಲ್ಲೆಯ ಕನಿಷ್ಠ ಸಂಖ್ಯೆಯ ಅಧ್ಯಕ್ಷರಿಗೆ ಮಾತ್ರ ಸ್ವತಂತ್ರವಾಗಿ ಗ್ರಾಮ ಪಂಚಾಯಿತಿಯ ಸಭೆಯನ್ನು ಆಯೋಜಿಸಲು ಸಾಧ್ಯವಾಗಿದ್ದು, ಬಹುಸಂಖ್ಯಾತ ದಲಿತ ಅಧ್ಯಕ್ಷರುಗಳಿಗೆ ಸ್ವತಂತ್ರವಾಗಿ ಗ್ರಾಮ

ಪಂಚಾಯಿತಿ ಸಭೆಗಳನ್ನು ಸ್ವತಂತ್ರವಾಗಿ ಆಯೋಜಿಸಲು ಸಾಧ್ಯವಗಿಲ್ಲ. ಈ ಸಂಗತಿಯಲ್ಲಿ ಬಹುಸಂಖ್ಯಾತ ಅಧ್ಯಕ್ಷರುಗಳು ಪಂಚಾಯಿತಿ ಅಧಿಕಾರಿ ವರ್ಗವನ್ನು ಅವಲಂಬಿಸಿದ್ದಾರೆ.

ಎರಡನೆಯದಾಗಿ ದಲಿತ ಅಧ್ಯಕ್ಷರುಗಳು ಮೇಲ್ಜಾತಿ ಸಮುದಾಯಗಳನ್ನು ಅವಲಂಬಿಸಿದ್ದಾರೆ. ದತ್ತಾಂಶಗಳು ಸ್ಪಷ್ಪಪಡಿಸುವ ಪ್ರಕಾರ ದಲಿತ ಅಧ್ಯಕ್ಷರುಗಳ ಹೆಸರಿನಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಶಾಹಿ ವರ್ಗ ಮತ್ತು ಮೇಲ್ಜಾತಿ ಸಮುದಾಯಗಳು ಬೇನಾಮಿ ಪ್ರಾತಿನಿಧ್ಯವನ್ನು ಅನುಭವಿಸುತ್ತಿದ್ದಾರೆ.

೩) ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸುವುದು:

೧೯೯೩ ರ ಪಂಚಾಯತ್ ರಾಜ್ಯ ಅಧಿನಿಯಮದ ಪ್ರಕಾರ ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷತೆವಹಿಸತಕ್ಕದ್ದು, ಗ್ರಾಮ ಪಂಚಾಯಿತಿ ಸಭೆಯಲ್ಲಿ ಅರ್ಧದಷ್ಟು ಸದಸ್ಯರ ಕೋರಂ ಇರತಕ್ಕದ್ದು, ಕೋರಂ ಇರದಿದ್ದಲ್ಲಿ ಅಧ್ಯಕ್ಷನು ಮೂವತ್ತು ನಿಮಿಷಗಳವರೆಗೆ ಕಾಯತಕ್ಕದ್ದು, ನಂತರದ ಅವಧಿಯಲ್ಲಿ ಕೋರಂ ಇಲ್ಲದಿದ್ದರೆ ಅಧ್ಯಕ್ಷನು ಸಭೆಯನ್ನು ಮೂರನೇ ದಿನದಂದು ಅಥವಾ ತರುವಾಯದ ದಿನದಂದು ಅವರು ನಿರ್ಧರಿಸುವ ಕಾಲಕ್ಕೆ ಮುಂದೂಡುವ ಅಧಿಕಾರವನ್ನು ಅಧ್ಯಕ್ಷನಿಗೆ ನೀಡಲಾಗಿದೆ.[೨೭] ಅಧಿನಿಯಮದ ಪ್ರಕಾರ ದಲಿತ ಅಧ್ಯಕ್ಷರುಗಳಿಗೆ ಪ್ರಾಪ್ತವಾದ ಈ ಅಧಿಕಾರವನ್ನು ದಲಿತ ಅಧ್ಯಕ್ಷರುಗಳು ಹೇಗೆ ಚಲಾಯಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿ ಸಭೆಯಲ್ಲಿ ಅವರೇ ಅಧ್ಯಕ್ಷತೆ ವಹಿಸುತ್ತಾರೆಯೇ? ಅಥವಾ ಇವರ ಹೆಸರಿನಲ್ಲಿ ಬೇನಾಮಿಯಾಗಿ ಅಧಿಕಾರವನ್ನು ಚಲಾಯಿಸುತ್ತಿದ್ದಾರೆಯೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು, ಮುಖ್ಯವಾದ ಸಂಗತಿ. ಈ ಪ್ರಶ್ನೆಗೆ ಕ್ಷೇತ್ರ ಕಾರ್ಯಗಳ ಮೂಲಕ ಉತ್ತರಗಳನ್ನು ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಇದರ ವಿಶ್ಲೇಷಣೆಯನ್ನು ಮಂಡಿಸಲಾಗಿದೆ.

ಕೋಷ್ಠಕ ೩೫ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೫೦ರಷ್ಟು ಅಧ್ಯಕ್ಷರುಗಳು ಮಾತ್ರ ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಾರೆ. ಇನ್ನುಳಿದ ೫೦ ರಷ್ಟು ಅಧ್ಯಕ್ಷರುಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವುದಿಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೫೭.೧ ರಷ್ಟು ಅಧ್ಯಕ್ಷರುಗಳು ಮಾತ್ರ ಗ್ರಾಮ ಪಂಚಾಯಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಾರೆ. ಉಳಿದ ೪೨.೯ರಷ್ಟು ಅಧ್ಯಕ್ಷರುಗಳು ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವುದಿಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ.

೫೦ರಷ್ಟು ಅಧ್ಯಕ್ಷರುಗಳು ಮಾತ್ರ ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದು, ಉಳಿದ ಶೇ. ೫೦ರಷ್ಟು ಅಧ್ಯಕ್ಷರುಗಳು ಸಭೆಯ ಅಧ್ಯಕ್ಷತೆ ವಹಿಸುತ್ತಿಲ್ಲ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಅಧ್ಯಕ್ಷರುಗಳಲ್ಲಿ ಶೇ. ೫೧.೯ರಷ್ಟು ಅಧ್ಯಕ್ಷರು ಮಾತ್ರ ಗ್ರಾಮ ಪಂಚಾಯಿತಿಯ ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದು, ಹೆಚ್ಚು ಕಡಿಮೆ ಅಷ್ಟೇ ಪ್ರಮಾಣದ ಅಂದರೆ ಶೇ. ೪೮.೧ ರಷ್ಟು ದಲಿತ ಅಧ್ಯಕ್ಷರುಗಳು ಗ್ರಾಮ ಪಂಚಾಯಿತಿಯ ಸಭೆಯ ಅಧ್ಯಕ್ಷತೆ ವಹಿಸದೇ ಇರುವುದು ಆತಂಕಕಾರಿ ಸಂಗತಿಯಾಗಿದೆ. ದಲಿತ ಪುರುಷ ಅಧ್ಯಕ್ಷರುಗಳಿಗೆ ಹೋಲಿಸಿದರೆ ದಲಿತ ಮಹಿಳಾ ಅಧ್ಯಕ್ಷರುಗಳು ಸಭೆಯ ಅಧ್ಯಕ್ಷತೆ ವಹಿಸದಿರುವ ಪ್ರಮಾಣ ಹೆಚ್ಚಾಗಿ ಕಂಡು ಬರುತ್ತದೆ.

ದತ್ತಾಂಶಗಳಿಂದ ಸೃಷ್ಟಿಗೊಳ್ಳುವ ಸಂಗತಿ ಎಂದರೆ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ದಲಿತ ಸಮುದಾಯದ ಅಧ್ಯಕ್ಷರುಗಳಿಗೆ ಅಧ್ಯಕ್ಷ ಪದವಿಯನ್ನು ಹೊಂದುವ ಅಧಿಕಾರವನ್ನು ಸಂವಿಧಾನ ಬದ್ಧಗೊಳಿಸಲಾಗಿದೆ. ಆದರೆ ಇಂದಿಗೂ ದಲಿತ ಸಮುದಾಯದ ಅಧ್ಯಕ್ಷರುಗಳು ಸ್ವತಂತ್ರವಾಗಿ ಗ್ರಾಮ ಪಂಚಾಯಿತಿ ಸಭೆಯನ್ನು ಕರೆಯುವ ಹಾಗೂ ಆ ಸಭೆಯ ಅಧ್ಯಕ್ಷತೆ ವಹಿಸುವ ಅವಕಾಶ ದೊರೆಯದೇ ಇರುವುದು ರಾಜಕೀಯ ಸಂಸ್ಥೆಗಳಲ್ಲಿ ದಲಿತ ಸಮುದಾಯವನ್ನು ನಡೆಸಿಕೊಳ್ಳುವ ರೀತಿಗೆ ಸಾಕ್ಷಿಯಾಗಿದೆ.

ಬಳ್ಳಾರಿ ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷತೆ ವಹಿಸಿಕೊಳ್ಳದೇ ಇರುವ ಶೇ. ೪೮.೧ ರಷ್ಟು ದಲಿತ ಅಧ್ಯಕ್ಷರುಗಳ ಬದಲಾಗಿ ಯಾರು ಗ್ರಾಮ ಪಂಚಾಯಿತಿ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ ಎನ್ನುವುದು ಮುಖ್ಯವಾದ ಪ್ರಶ್ನೆ. ದಲಿತ ಅಧ್ಯಕ್ಷರುಗಳ ಬದಲಾಗಿ ಯಾರು ಅಧ್ಯಕ್ಷತೆ ವಹಿಸುತ್ತಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಈ ಸಂಗತಿಗಳನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ದಲಿತ ಅಧ್ಯಕ್ಷರು ಮತ್ತು ಬೇನಾಮಿ ಅಧ್ಯಕ್ಷತೆ:

ಹಿಂದಿನ ಭಾಗದಲ್ಲಿ ಚರ್ಚಿಸಿದಂತೆ ನಿಯಮಾವಳಿಯ ಪ್ರಕಾರ ಗ್ರಾಮ ಸಭೆಯ ಅಧ್ಯಕ್ಷನೇ ಗ್ರಾಮ ಪಂಚಾಯಿತಿಯ ಸಭೆಗಳನ್ನು ಕರೆದು ಸಭೆಯ ಕಾರ್ಯಕಲಾಪಗಳ ಅಧ್ಯಕ್ಷತೆ ವಹಿಸತಕ್ಕದ್ದು. ಆದರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೪೮.೧ ರಷ್ಟು ದಲಿತ ಅಧ್ಯಕ್ಷರುಗಳ ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಿಲ್ಲ. ಇವರ ಬದಲಾಗಿ ಯಾರು ಅಧ್ಯಕ್ಷತೆ ವಹಿಸುತ್ತಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ. ಕೋಷ್ಟಕ ೩೬ರಲ್ಲಿ ಕಂಡು ಬರುವಂತೆ ಬಳ್ಳಾರಿ ತಾಲ್ಲೂಕಿನ ಶೇ. ೪೦ ರಷ್ಟು ಅಧ್ಯಕ್ಷರುಗಳು

ಅಭಿಪ್ರಾಯಪಡುವ ಪ್ರಕಾರ ಅಧಿಕಾರಿಗಳೇ ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಶೇ. ೬೦ರಷ್ಟು ದಲಿತ ಅಧ್ಯಕ್ಷರುಗಳು ಅಭಿಪ್ರಾಯ ಪಡುವ ಪ್ರಕಾರ ಅಧ್ಯಕ್ಷರ ಪತಿ ಅಥವಾ ಮಗ ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸುತ್ತಾನೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೩೩.೩ ರಷ್ಟು ಅಧ್ಯಕ್ಷರು ಅಭಿಪ್ರಾಯಪಡುವ ಪ್ರಕಾರ ಅಧಿಕಾರಿಗಳೇ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಶೇ. ೩೩.೩ ರಷ್ಟು ಅಧ್ಯಕ್ಷರುಗಳು ಅಭಿಪ್ರಾಯ ಪಡುವ ಪ್ರಕಾರ ಮೇಲ್ಜಾತಿಯವರೇ ಅಧ್ಯಕ್ಷತೆ ವಹಿಸುತ್ತಾರೆ. ಉಳಿದ ಶೇ. ೩೩.೩ರಷ್ಟು ಅಧ್ಯಕ್ಷರುಗಳು ಅಭಿಪ್ರಾಯ ಪಡುವ ಪ್ರಕಾರ ಅಧ್ಯಕ್ಷರುಗಳ ಬದಲಾಗಿ ಅವರ ಪತಿ ಅಥವಾ ಮಗ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೪೦ ರಷ್ಟು ಅಧ್ಯಕ್ಷರು ಅಭಿಪ್ರಾಯದ ಪ್ರಕಾರ ಅಧಿಕಾರಿಗಳೇ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಉಳಿದ ಶೇ. ೬೦ ರಷ್ಟು ಅಧ್ಯಕ್ಷರುಗಳು ಅಭಿಪ್ರಾಯ ಪಡುವ ಪ್ರಕಾರ ಅಧ್ಯಕ್ಷರುಗಳ ಬದಲಾಗಿ ಅವರ ಪತಿ ಅಥವಾ ಮಗ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ.

ಒಟ್ಟಾರೆ ಬಳ್ಳಾರಿ ಜಿಲ್ಲೆಯ ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸಿದ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು ಶೆ. ೩೮,೫ ರಷ್ಟು ಅಧ್ಯಕ್ಷರ ಅಭಿಪ್ರಾಯದ ಪ್ರಕಾರ ಅಧಿಕಾರಿಗಳು ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಶೇ. ೭.೭ ರಷ್ಟು ಅಧ್ಯಕ್ಷರುಗಳು ಅಭಿಪ್ರಾಯದ ಪ್ರಕಾರ ಮೇಲ್ಜಾತಿಯವರೇ ಗ್ರಾಮ ಪಂಚಾಯಿತಿಯ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಅವರ ಪತಿ ಅಥವಾ ಮಗನೇ ಅಧ್ಯಕ್ಷತೆ ವಹಿಸುತ್ತಾರೆ. ಜಿಲ್ಲೆಯ ಮೂರು ತಾಲ್ಲೂಕುಗಳ ದತ್ತಾಂಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ದಲಿತ ಪುರುಷ ಅಧ್ಯಕ್ಷರುಗಳಿಗೆ ಹೋಲಿಸಿದರೆ ಮಹಿಳಾ ಅಧ್ಯಕ್ಷರುಗಳು ಗ್ರಾಮ ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸುತ್ತಿರುವುದು ಅತ್ಯಂತ ಕಡಿಮೆ. ದಲಿತ ಮಹಿಳಾ ಅಧ್ಯಕ್ಷರುಗಳ ಬದಲಾಗಿ ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷರ ಪತಿ ಅಥವಾ ಅವರ ಮಕ್ಕಳು ಅಧ್ಯಕ್ಷತೆ ವಹಿಸುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ.

ಅಂತಿಮವಾಗಿ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಶೇ. ಅರ್ಧದಷ್ಟು ಗ್ರಾಮ ಪಂಚಾಯಿತಿಗಳಲ್ಲಿ ದಲಿತ ಪುರುಷ ಅಧ್ಯಕ್ಷರ ಹೆಸರಿನಲ್ಲಿ ಪಂಚಾಯಿತಿ ಅಧಿಕಾರಿಗಳು ಮತ್ತು ಮೇಲ್ಜಾತಿಯ ಜನರೇ ಬೇನಾಮಿಯಾಗಿ ಅಧಿಕಾರ ನಿರ್ವಹಿಸುತ್ತಿದ್ದಾರೆ. ದಲಿತ ಮಹಿಳಾ ಅಧ್ಯಕ್ಷರುಗಳ ಹೆಸರಿನಲ್ಲಿ ಬೇನಾಮಿಯಾಗಿ ಅವರ ಪತಿ ಅಥವಾ ಮಕ್ಕಳು ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ಕ್ಷೇತ್ರ ಅಧ್ಯಯನ ಕಂಡು ಕೊಂಡಿರುವ ಅತೀ ಮುಖ್ಯ ಸಂಗತಿಯೆಂದರೆ ದಲಿತರ ಹೆಸರಿನಲ್ಲಿ ಮತ್ತು ದಲಿತ ಮಹಿಳೆಯರ ಹೆಸರಿನಲ್ಲಿ ಇಂದಿಗೂ ಬೇನಾಮಿ ಪ್ರಾತಿನಿಧ್ಯ ಮತ್ತು ಬೇನಾಮಿ ಅಧಿಕಾರ ನಿರ್ವಹಣೆಗಳು ಇಂದಿಗೂ ಮುಂದುವರೆಯುತ್ತಿರುವುದು

ಶೋಚನೀಯ ಸಂಗತಿಯಾಗಿದೆ. ಗ್ರಾಮ ಪಂಚಾಯಿತಿ ಸಭೆಯಲ್ಲಿ ಚರ್ಚೆಯಾದ ಮತ್ತು ನಿರ್ಣಯಗಳನ್ನು ಕೈಗೊಂಡ ನಡಾವಳಿಗಳಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳೇ ಖುದ್ದಾಗಿ ಸಹಿ ಮಾಡಬೇಕಾಗುತ್ತದೆ. ನಡಾವಳಿಗಳು ಗ್ರಾಮ ಪಂಚಾಯಿತಿಯ ಅತೀ ಮುಖ್ಯ ದಾಖಲಾಯಾಗಿದ್ದು, ಈ ದಾಖಲೆಗಳಲ್ಲಿ ಅಧ್ಯಕ್ಷರುಗಳೇ ಯಾರ ನಿರ್ದೇಶನವಿಲ್ಲದೇ ಸ್ವತಂತ್ರವಾಗಿ ಸಹಿ ಮಾಡುತ್ತಾರೆಯೇ ಎನ್ನುವುದು ಮುಖ್ಯವಾದ ಪ್ರಶ್ನೆ. ಈ ಸಂಗತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

೧೯೯೩ ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಗ್ರಾಮ ಪಂಚಾಯಿತಿಯ ಪ್ರತಿಯೊಂದು ಸಭೆಯಲ್ಲಿ ಹಾಜರಿರುವ ಸದಸ್ಯರು ಮತ್ತು ಹಾಜರಿರುವ ಅಧಿಕಾರಿಗಳು ಅವರ ಹೆಸರುಗಳನ್ನು ಮತ್ತು ವ್ಯವಹಾರಗಳನ್ನು ಅನುಕ್ರಮವಾಗಿ ಯಾವುದೇ ನಿರ್ಣಯದ ಪರ ಅಥವಾ ವಿರುದ್ಧ ಮತ ಕೊಡುವ ಸದಸ್ಯರ ಹೆಸರುಗಳನ್ನು ಬರೆದಿರಬೇಕೆಂದು ಹಾಜರಿರುವ ಯಾವುದೇ ಸದಸ್ಯರು ಇಚ್ಛಿಸಿದರೆ ಅವರ ಹೆಸರುಗಳನ್ನು ಮತ್ತು ನಡಾವಳಿಗಳನ್ನು ೬ ಉದ್ದೇಶಕ್ಕಾಗಿ ಒದಗಿಸಿದ ಪುಸ್ತಕದಲ್ಲಿ ಬರೆದಿಡತಕ್ಕದ್ದು. ಈ ದಾಖಲೆಯಲ್ಲಿ ಬರೆದ ವಿಷಯಗಳನ್ನು ಓದಿ ಹೇಳಿದ ನಂತರ ಮತ್ತು ಎಲ್ಲರೂ ಒಪ್ಪಿಕೊಂಡ ನಂತರ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ನಡಾವಳಿ ಪುಸ್ತಕದಲ್ಲಿ ಸಹಿ ಹಾಕತಕ್ಕದ್ದು. ಈ ದಾಖಲೆಯು ಸದಾ ಕಾಲ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು. ಇದರ ವಿವರಣೆಗಳನ್ನು ಒಳಗೊಂಡ ಪ್ರತಿಯನ್ನು ಸಭೆ ನಡೆದ ಮೂರು ದಿನಗಳ ಒಳಗಾಗಿ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು.[೨೮] ನಡವಳಿಯು ಪ್ರಮುಖ ದಾಖಲೆಯಾಗಿದ್ದು, ಇದು ನಿರ್ಣಯಗಳ ಪರ ಮತ್ತು ವಿರೋಧದ ಹಾಗೂ ಚಿತ್ರಣಗಳ ದಾಖಲೆಯಾಗಿರುತ್ತದೆ. ಈ ದಾಖಲೆಗೆ ಅಧ್ಯಕ್ಷರು ಸ್ವಂತ ವಿವೇಚನೆಯಿಂದ ಪರಿಶೀಲಿಸಿ ಯಾರ ಪ್ರಭಾವಕ್ಕೂ ಒಳಗಾಗದೇ ಸ್ವತಂತ್ರವಾಗಿ ಸಹಿ ಮಾಡತಕ್ಕದ್ದು. ಇಂತಹ ನಡಾವಳಿಗಳಲ್ಲಿ ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಸಹಿ ಮಾಡಿದ್ದಾರೆಯೇ? ಎನ್ನುವುದು ಅಧ್ಯಕ್ಷರುಗಳ ಆಡಳಿತಾತ್ಮಕ ಕಾರ್ಯಗಳ ದೃಷ್ಟಿಯಿಂದ ಅತೀ ಮುಖ್ಯವಾದುದು. ನಡಾವಳಿಗಳಲ್ಲಿ ಸ್ವತಂತ್ರವಾಗಿ ಸಹಿ ಮಾಡುವ ಅಧ್ಯಕ್ಷರುಗಳ ಹಾಗೂ ಸ್ವತಂತ್ರವಾಗಿ ಸಹಿ ಮಾಡದಿರುವ ಅಧ್ಯಕ್ಷರುಗಳ ಮಾಹಿತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಪಡೆದುಕೊಂಡು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಕೋಷ್ಟಕ ೩.೭ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೨೦ರಷ್ಟು ಅಧ್ಯಕ್ಷರುಗಳು ಮಾತ್ರ ನಡಾವಳಿಗಳಿಗೆ ಸ್ವತಂತ್ರವಾಗಿ ಸಹಿ ಮಾಡಿದ್ದು, ಉಳಿದ ೮೦ ರಷ್ಟು ಅಧ್ಯಕ್ಷರುಗಳು ಇತರರ ಸಲಹೆ ಮೇರೆಗೆ ನಡಾವಳಿಗಳಿಗೆ ಸಹಿ

ಮಾಡಿದ್ದಾರೆ. ಸಿರುಗುಪ್ಪ ತಾಲ್ಲೂಕಿನ ಶೇಕಡ ೧೪.೩ ರಷ್ಟು ಅಧ್ಯಕ್ಷರುಗಳು ಮಾತ್ರ ನಡಾವಳಿಗಳಿಗೆ ಸ್ವತಂತ್ರವಾಗಿ ಸಹಿ ಮಾಡಿದ್ದು, ಉಳಿದ ಶೇಕಡ ೮೫.೭ ರಷ್ಟು ಅಧ್ಯಕ್ಷರುಗಳು ಇತರರ ಸಲಹೆ ಮೇರೆಗೆ ನಡಾವಳಿಗಳಿಗೆ ಸಹಿ ಹಾಕಿದ್ದಾರೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೩೦ ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ನಡವಳಿಗಳಿಗೆ ಸಹಿ ಮಾಡಿದ್ದು, ಶೇ. ೭೦ ರಷ್ಟು ದಲಿತ ಅಧ್ಯಕ್ಷರುಗಳು ಇತರರ ಸಲಹೆ ಮೇರೆಗೆ ಮಾತ್ರ ಸಹಿ ಮಾಡಿದ್ದಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ೨೨.೨ ರಷ್ಟು ಅಧ್ಯಕ್ಷರುಗಳು ಮಾತ್ರ ಸ್ವತಂತ್ರವಾಗಿ ನಡವಳಿಗಳಿಗೆ ಸಹಿ ಮಾಡಿದ್ದು, ಬಹುತೇಕ ದಲಿತ ಅಧ್ಯಕ್ಷರುಗಳು ಅಂದರೆ ಶೇಕಡ ೭೭.೮ ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ನಡವಳಿಗಳಿಗೆ ಸಹಿ ಮಾಡಿಲ್ಲ.

ಬಳ್ಳಾರಿ ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ಯಾವ ಮಹಿಳಾ ಅಧ್ಯಕ್ಷರುಗಳು ಕೂಡಾ ಸ್ವತಂತ್ರವಾಗಿ ನಡವಳಿಗಳಿಗೆ ಸಹಿ ಮಾಡಿರುವುದು ಕಂಡು ಬರುವುದಿಲ್ಲ. ಕೂಡ್ಲಿಗಿ ತಾಲ್ಲೂಕಿನ ಕೆಲವು ಮಹಿಳಾ ಅಧ್ಯಕ್ಷರುಗಳು ಮಾತ್ರ ಸ್ವತಂತ್ರವಾಗಿ ನಡವಳಿಗಳಿಗೆ ಸಹಿ ಮಾಡಿದ್ದಾರೆ. ಜಿಲ್ಲೆಯ ದಲಿತ ಪುರುಷ ಅಧ್ಯಕ್ಷರುಗಳಿಗೆ ಹೋಲಿಸಿದರೆ ಬಹುತೇಕ ಮಹಿಳೆಯರು ಸ್ವತಂತ್ರವಾಗಿ ನಡವಳಿಗಳಿಗೆ ಸಹಿ ಮಾಡದಿರುವುದು ಸ್ಪಷ್ಟವಾಗುತ್ತದೆ. ಈ ಚರ್ಚೆಯಿಂದ ಉದ್ಭವಿಸುವ ಮುಖ್ಯವಾದ ಪ್ರಶ್ನೆಯೆಂದರೆ ಅಧ್ಯಕ್ಷರುಗಳ ನಡಾವಳಿಗಳನ್ನು ಸಹಿ ಮಾಡುವಲ್ಲಿ ಯಾರು ಪ್ರಭಾವಿಸುತ್ತಾರೆ ಎನ್ನುವುದು ಮುಖ್ಯವಾಗುತ್ತದೆ. ದಲಿತ ಅಧ್ಯಕ್ಷರುಗಳು ಯಾರ ಸಲಹೆಗಳ ಮೇರೆಗೆ ನಡಾವಳಿಗಳಿಗೆ ಸಹಿ ಮಾಡುತ್ತಾರೆ ಎನ್ನುವುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಅದರ ವಿಶ್ಲೇಷಣೆಯನ್ನು ಮಂಡಿಸಲಾಗಿದೆ.

ಕೋಷ್ಟಕ –೩೮ ರ ದತ್ತಾಂಶಗಳ ಪ್ರಕಾರ ಬಳ್ಳಾರಿ ತಾಲ್ಲೂಕಿನ ಶೇ. ೬೨.,೫ ರಷ್ಟು ಅಧ್ಯಕ್ಷರುಗಳು ಅಧಿಕಾರಿಗಳ ಸಲಹೆ ಮೇರೆಗೆ ನಡಾವಳಿಗೆ ಸಹಿ ಹಾಕುತ್ತಾರೆ. ಶೇ. ೨೫ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿ ಜನರ ಸಲಹೆ ಮೇರೆಗೆ ಶೇಕಡ ೧೨.೫ ರಷ್ಟು ಅಧ್ಯಕ್ಷರುಗಳು ಪತಿ ಅಥವಾ ಮಗನ ನಿರ್ದೇಶನದ ಮೇರೆಗೆ ನಡಾವಳಿಗೆ ಸಹಿ ಮಾಡುತ್ತಾರೆ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೆ. ೬೬.೭ ರಷ್ಟು ಅಧ್ಯಕ್ಷರುಗಳು ಅಧಿಕಾರಿಗಳ ನಿರ್ಣಯದ ಮೇರೆಗೆ ಸಹಿ ಮಾಡುತ್ತಾರೆ. ಉಳಿದ ಶೇಕಡ ೩೩.೩ ರಷ್ಟು ಅಧ್ಯಕ್ಷರುಗಳು ಪತಿ ಅಥವಾ ಮಗನ ನಿರ್ದೇಶನದ ಸಹಿ ಮಾಡುತ್ತಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಸ್ವತಂತ್ರವಾಗಿ ನಡಾವಳಿಗಳಿಗೆ ಸಹಿ ಆಡಿದ ಒಟ್ಟು ಅಧ್ಯಕ್ಷರುಗಳಲ್ಲಿ ಶೇಕಡ ೫೭.೧ ರಷ್ಟು ಅಧ್ಯಕ್ಷರುಗಳು ಅಧಿಕಾರಿಗಳ ನಿರ್ದೇಶನದ ಮೇರೆಗೆ ಶೇ.ಕಡಾ ೧೯.೧ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿ ಜನರ ನಿರ್ದೇಶನದ ಮೇರೆಗೆ ಮತ್ತು

ಉಳಿದ ೨೩.೮ ರಷ್ಟು ಅಧ್ಯಕ್ಷರುಗಳು ಪತಿ ಅಥವಾ ಮಗನ ನಿರ್ದೇಶನದ ಮೇರೆಗೆ ನಡಾವಳಿಗಳಿಗೆ ಸಹಿ ಹಾಕುತ್ತಾರೆ.

ಜಿಲ್ಲೆಯ ಒಟ್ಟು ಸ್ವತಂತ್ರವಾಗಿ ನಡಾವಳಗಳಿಗೆ ಸಹಿ ಮಾಡದ ದಲಿತ ಮಹಿಳಾ ಅಧ್ಯಕ್ಷರುಗಳು ನಡಾವಳಿಗಳಿಗೆ ಸಹಿ ಆಡಲು ಅಧಿಕಾರಿಗಳು ಮತ್ತು ಪತಿ ಅಥವಾ ಮಗನನ್ನು ಆಶ್ರಯಿಸಿದ್ದಾರೆ. ದಲಿತ ಪುರುಷ ಅಧ್ಯಕ್ಷರುಗಳು ಬಹುತೇಕ ಅಧಿಕಾರಿಗಳ ಮೇಲೆ ಅವಲಂಬನೆ ಆಗಿದ್ದು, ಎರಡನೆಯದಾಗಿ ಮೇಲ್ಜಾತಿ ಜನರ ಮೇಲೆ ಅವಲಂಬನೆಯಾಗಿದ್ದಾರೆ. ದಲಿತ ಪುರುಷ ಅಧ್ಯಕ್ಷರುಗಳ ಹೆಸರಿನಲ್ಲಿ ಅಧಿಕಾರಿಗಳು ಹಾಗೂ ಮೇಲ್ಜಾತಿ ಜನರು ಬೆನಾಮಿಯಾಗಿ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ದಲಿತ ಮಹಿಳಾ ಅಧ್ಯಕ್ಷರುಗಳ ಹೆಸರಿನಲ್ಲಿ ಅಧಿಕಾರಿಗಳು ಮತ್ತು ಅವರ ಪತಿ ಹಾಗೂ ಮಕ್ಕಳು ಬೆನಾಮಿಯಾಗಿ ಅಧಿಕಾರ ಚಲಾಯಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

೧೯೯೩ರ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಗ್ರಾಮ ಪಂಚಾಯಿತಿಗೆ ಸಾಮಾನ್ಯ ಅಧಿಕಾರಗಳನ್ನು ನೀಡಲಾಯಿತು. ಅವುಗಳಲ್ಲಿ ಗುತ್ತಿಗೆ ಮಾಡಿಕೊಳ್ಳುವ ವಿಧಾನವು ಪ್ರಮುಖವಾದದು. ಈ ಅಧಿಕಾರದ ಪ್ರಕಾರ ಕಾಮಗಾರಿ ನಿರ್ವಹಣೆಗೆ ಅಥವಾ ಸರಕುಗಳ ಅಥವಾ ಸೇವೆಗಳನ್ನು ಒದಗಿಸುವುದಕ್ಕಾಗಿ ಗ್ರಾಮ ಪಂಚಾಯಿತಿ ಪರವಾಗಿ ಮಾಡಿಕೊಳ್ಳುವ ಪ್ರತಿಯೊಂದು ಗುತ್ತಿಗೆ ಅಥವಾ ಒಪ್ಪಂದವು ೧೯೯೯ರ ಪಾರದರ್ಶಕ ಅಧಿನಿಯಮಕ್ಕೆ ಅನುಗುಣವಾಗಿರತಕ್ಕದ್ದು. ಗ್ರಾಮ ಪಂಚಾಯಿತಿಯ ಗ್ರಾಮ ಪಂಚಾಯಿತಿಯ ಶಿಫಾರಸ್ಸಿನ ಮೇರೆಗೆ ಪ್ರಥಮ ಆಯ್ಕೆಯಾಗಿ ಸರ್ಕಾರವು ನಿಗದಿಪಡಿಸಿದ ದರಗಳಲ್ಲಿ ೨೦ ಲಕ್ಷ ರೂ. ವರೆಗಿನ ಕಾಮಕಾಗರಿಗಳನ್ನು ಕೈಗೊಳ್ಳಲು ಮತ್ತು ಕಾರ್ಯಗತಗೊಳಿಸಲು ಸಮುದಾಯಕ್ಕೆ ಯಾವುದೇ ಸರಕು ಅಥವಾ ಸೇವೆಗಳನ್ನು ಒದಗಿಸುವುದಕ್ಕಾಗಿ ಗುತ್ತಿಗೆಗಳನ್ನು ನೀಡುವ ಅಧಿಕಾರ ಗ್ರಾಮ ಪಂಚಾಯತ್ ಅಧ್ಯಕ್ಷನಿಗೆ ನೀಡಲಾಯಿತು. ಈ ಅಧಿಕಾರದ ಮೂಲಕ ಗ್ರಾಮ ಪಂಚಾಯಿತಿ ಅಧ್ಯಕ್ಷನು ಸಮುದಾಯಕ್ಕೆ ಪ್ರಾಮಾಣಿಕ ಸೇವೆ ಒದಗಿಸಿಕೊಡುವ ಅವಕಾಶ ಲಭ್ಯವಾಗುತ್ತದೆಂದು ಗ್ರಹಿಸಲಾಗಿದೆ.[೨೯] ಇಂತಹ ಅಧಿಕಾರವನ್ನು ಬೇರೆಯವರ ಹಸ್ತಕ್ಷೇಪವಿಲ್ಲದೇ ದಲಿತ ಅಧ್ಯಕ್ಷರುಗಳು ಗುತ್ತಿಗೆ ನೀಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡಿದ್ದಾರೆಯೇ ಎನ್ನುವುದು ಮುಖ್ಯವಾದ ಸಂಗತಿ. ಈ ಸಂಗತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಕೋಷ್ಟಕ ೩೯ರ ದತ್ತಾಂಶಗಳ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇಕಡ ೪೦ ರಷ್ಟು ಅಧ್ಯಕ್ಷರುಗಳು ಸ್ವತಂತ್ರವಾಗಿ ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ

ನೀಡಿದ್ದಾರೆ. ಉಳಿದ ಶೇ. ೬೦ ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಗುತ್ತಿಗೆಗಳಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೨೮.೬ ರಷ್ಟು ಅಧ್ಯಕ್ಷರುಗಳ ಮಾತ್ರ ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸ್ವಾತಂತ್ರ್ಯವಾಗಿ ಅನುಮೋದನೆ ನೀಡಿದ್ದು, ಶೇ.೭೧.೪ ರಷಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಗುತ್ತಿಗೆ ಮತ್ತು ಅಭಿವೃದ್ಧಿ ಕಆರ್ಯಗಳಿಗೆ ಅನುಮೋದನೆ ನೀಡಿಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟ ದಲಿತ ಅಧ್ಯಕ್ಷರುಗಳಲ್ಲಿ ಶೆ. ೨೦ ರಷ್ಟಡು ಅಧ್ಯಕ್ಷರುಗಳು ಮಾತ್ರ ಗುತ್ತಿಗೆ ಈ ಅಭಿವೃದ್ಧಿ ಕಾರ್ಯಗಳಿಗೆ ಸ್ವತಂತ್ರವಾಗಿ ಅನುಮೋದನೆ ನೀಡಿದ್ದು, ಉಳಿದ ಶೇ. ೮೦ ರಷ್ಟು ಅಧ್ಯಕ್ಷರುಗಳು ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸ್ವತಂತ್ರವಾಗಿ ಅನುಮೋದನೆ ನೀಡಿಲ್ಲ.

ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಕೇವಲ ಶೆ. ೨೯.೬ ರಷ್ಟು ದಲಿತ ಅಧ್ಯಕ್ಷರುಗಳು ಮಾತ್ರ ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಅನುಮೋದನೆ ನೀಡಿದ್ದು, ಶೇ. ೭೦.೪ ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಂಒದನೆ ನೀಡಿಲ್ಲ. ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಜಿಲ್ಲೆಯ ಬಹುತೇಕ ದಲಿತ ಅಧ್ಯಕ್ಷರುಗಳು ನಿಯಮಾವಳಿಯ ಪ್ರಕಾರ ತಮಗೆ ಪ್ರದತ್ತವಾದ ಗುತ್ತಿಗೆ ನೀಡುವ ಮತ್ತು ಅಭಿವೃದ್ಧಿ ಕಾರ್ಯಳಿಮದ ವಂಚಿತರಾದಂತೆ ಕಂಡು ಬರುತ್ತದೆ.

ದಲಿತ ಅಧ್ಯಕ್ಷರುಗಳು ಸಮುದಾಯದ ಅಭಿವೃದ್ಧಿಗೆ ಪೂರಕವಾಗಬಹುದಾದ ಈ ಅಧಿಕಾರವನ್ನು ಚಲಾಯಿಸಲು ಬೇರೆಯವರನ್ನು ಅವಲಂಬಿಸಿದಂತೆ ಕಂಡು ಬರುತ್ತದೆ.

ಬಹುತೇಕ ದಲಿತ ಅಧ್ಯಕ್ಷರುಗಳು ಗುತ್ತಿಗೆ ನೀಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವಾಗ ಯಾರ ನಿರ್ದೇಶನಗಳನ್ನು ಅವಲಂಬಿಸುತ್ತಾರೆ ಎನ್ನುವುದು ಮುಖ್ಯವಾದ ಪ್ರಶ್ನೆ ಈ ಸಂಗತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡು ಕೊಳ್ಳುವುದು ಮುಂತಾದ ಭಾಗದಲ್ಲಿ ಮಂಡಿಸಲಾಗಿದೆ.

ಗುತ್ತಿಗೆ ಅಭಿವೃದ್ಧಿ ಕಾರ್ಯಗಳ ಅನುಮೋದನೆ ಮತ್ತು ದಲಿತ ಅಧ್ಯಕ್ಷರುಗಳು:

ಹಿಂದಿನ ಭಾಗದಲ್ಲಿ ಚರ್ಚಿಸಿದಂತೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೆ. ೭೦.೪ ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಗುತ್ತಿಗೆ ನೀಡುವ ಈ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿದ್ದಲ್ಲಿ ಅಂದರೆ ಬಹುಸಂಖ್ಯಾತ ದಲಿತ ಅಧ್ಯಕ್ಷರು ಯಾರ ನಿರ್ದೇಶನದ ಮೇರೆಗೆ ಈ ಅಧಿಕಾರವನ್ನು ಚಲಾಯಿಸುತ್ತಾರೆ ಎಂಬುದನ್ನು

ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಅದರ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ಕೋಷ್ಟಕ ೪೦ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಸ್ವತಂತ್ರವಾಗಿ ಅನುಮೋದನೆ ನೀಡಿದ ದಲಿತ ಅಧ್ಯಕ್ಷರುಗಳಲ್ಲಿ ಶೆ. ೩೩.೩ ರಷ್ಟು ಅಧಿಕಾರಿಗಳ ನಿರ್ದೇಶನದ ಮೇರೆಗೆ ಶೇ. ೬೬.೭ ರಷ್ಟು ಅಧ್ಯಕ್ಷರುಗಳು ತಮ್ಮ ಪತಿ ಅಥವಾ ಮಕ್ಕಳ ನಿರ್ದೇಶನದ ಮೇರೆಗೆ ಗುತ್ತಿಗೆ ಅಥವಾ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುತ್ತಾರೆ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೪೦ ರಷ್ಟು ಅಧ್ಯಕ್ಷರುಗಳು ಅಧಿಕಾರಿಗಳ ನಿರ್ದೇಶನದ ಮೇರೆಗೆ ಶೇ. ೨೦ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಅಥವಾ ಉಳಿದ ಶೇ. ೪೦ ರಷ್ಟು ಅಧ್ಯಕ್ಷರುಗಳು ತಮ್ಮ ಪತಿ ಹಾಗೂ ಮಕ್ಕಳ ನಿರ್ದೇಶನದ ಮೇರೆಗೆ ಗುತ್ತಿಗೆ ಅಥವಾ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನಿಡುತ್ತರೆ.

ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ.೫೦ ರಷ್ಟು ದಲಿತ ಅಧ್ಯಕ್ಷರುಗಳು ಅಧಿಕಾರಿಗಳ ನಿರ್ದೇಶನದ ಮೇರೆಗೆ, ಅಥವಾ ೧೨.೫ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಹಾಗೂ ೩೭.೫ ರಷ್ಟು ಅಧ್ಯಕ್ಷರುಗಳು ತಮ್ಮ ಪತಿ ಅಥವಾ ಮಕ್ಕಳ ನಿರ್ದೇಶನದ ಮೇರೆಗೆ ಗುತ್ತಿಗೆ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುತ್ತಾರೆ. ಒಟ್ಟಾರೆ ಸ್ವತಂತ್ರವಾಗಿ ಗುತ್ತಿಗೆ ಅಥವಾ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡದ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ.೪೨.೧ ರಷ್ಟು ಅಧ್ಯಕ್ಷರುಗಳು ಅಧಿಕಾರಿಗಳ ನಿರ್ದೇಶನದ ಮೇರೆಗೆ ಶೇ.೧೦.೫ ರಷ್ಟು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಅಥವಾ ಉಳಿದ ಶೇಕಡ ೪೭.೪ ರಷ್ಟು ಅಧ್ಯಕ್ಷರುಗಳು ಅವರ ಪತಿ ಅಥವಾ ಮಕ್ಕಳ ನಿರ್ದೇಶನದ ಮೇರೆಗೆ ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುತ್ತಿದ್ದಾರೆ.

ಒಟ್ಟಾರೆ ಕ್ಷೇತ್ರ ಕಾರ್ಯದ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ದಲಿತ ಪುರುಷ ಅಧ್ಯಕ್ಷರುಗಳ ಹೆಸರಿನಲ್ಲಿ ಬೇನಾಮಿಯಾಗಿ ಅಧಿಕಾರ ವರ್ಗ ಅಥವಾ ಮೇಲ್ಜಾತಿಯ ಜನ ಗುತ್ತಿಗೆ ನೀಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ.

ದತ್ತಾಂಶಗಳು ಸ್ಪಷ್ಟಪಡಿಸುವ ಅತ್ಯಂತ ಆಸಕ್ತಿಕರ ಸಂಗತಿ ಎಂದರೆ, ಬಹುತೇಕ ದಲಿತ ಮಹಿಳಾ ಅಧಿಕಾರಿಗಳ ಹೆಸರಿನಲ್ಲಿ ಅವರ ಪತಿ ಅಥವಾ ಮಕ್ಕಳು ಬೇನಾಮಿಯಾಗಿ ಗುತ್ತಿಗೆ ನೀಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿಯ ವಿವಿಧ ಮೂಲಗಳಿಂದ ಅನುದಾನಗಳನ್ನು

ಪಡೆಯುತ್ತವೆ. ಮತ್ತು ವಿವಿಧ ತೆರಿಗೆಗಳ ಮೂಲಕ ನಿಧಿಯನ್ನು ಸಂಗ್ರಹಿಸುತ್ತವೆ. ಈ ಅನುದಾನಗಳನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳು ಹೇಗೆ ಬಿಡುಗಡೆ ಮಾಡುತ್ತಾರೆ. ಇವರು ಸ್ವತಂತ್ರವಾಗಿ ಅನುದಾನಗಳನ್ನು ಬಿಡುಗಡೆ ಮಾಡುತ್ತಿದ್ದಾರೆಯೇ ಎನ್ನುವುದು ಮುಖ್ಯವಾದ ಸಂಗತಿಯಾಗಿದೆ. ಈ ಸಂಗತಿಗಳನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ದಲಿತ ಅಧ್ಯಕ್ಷರುಗಳು ಮತ್ತು ಸ್ವತಂತ್ರ ಅನುದಾನ ಬಿಡುಗಡೆ :

ಗ್ರಾಮ ಪಂಚಾಯಿತಿಯ ಸರ್ಕಾರ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಂದ ಅನುದಾನವನ್ನು ಪಡೆಯುತ್ತಿದೆ. ತೆರಿಗೆ ಹಾಗೂ ವಿವಿಧ ಹಂತದ ಶುಲ್ಕಗಳನ್ನು ಸಂಹಿಗ್ರಹಿಸುತ್ತಾರೆ. ಸರ್ಕಾರ ಪ್ರಾಧಿಕಾರದಿಂದ ಹಾಗೂ ವ್ಯಕ್ತಿಗಳಿಂದ ಸಂಪತ್ತು ಕೊಡುಗೆಗಳನ್ನು ಸ್ವೀಕರಿಸಿ ನಿಧಿಯನ್ನು ಸಂಗ್ರಹಿಸುತ್ತದೆ. ಗ್ರಾಮ ಪಂಚಾಯಿತಿಯ ಮಾಲೀಕತ್ವದ ಸ್ಥಿರ ಮತ್ತು ಚರಾಸ್ತಿಗಳಿಂದ ಹಾಗೂ ಮಾರಾಟದ ಮೂಲಕ ನಿಧಿಯನ್ನು ಸಂಗ್ರಹಿಸುತ್ತದೆ.[೩೦]

೧೯೯೩ರ ಅಧಿನಿಯಮ ಸ್ಪಷ್ಟಪಡಿಸುವ ಅಧಿಕಾರಿಗಳ ವ್ಯಾಪ್ತಿಯಲ್ಲಿ ಅದರ ನಿರ್ದಿಷ್ಟ ಉದ್ದೇಶಗಳಿಗೆ ಅನುಗುಣವಾಗಿ ಅನುದಾನ ಬಳಸತಕ್ಕದ್ದು. ಕಲ್ಯಾಣ ಚಟುವಟಿಕೆಗಳ ಉದ್ದೇಶದ ನಿಧಿಗಳಲ್ಲಿ ಶೇ.೨೫ ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಉಪಯೋಗಿಸತಕ್ಕದ್ದು ಎಂದು ಸ್ಪಷ್ಟಪಡಿಸಿದೆ.[೩೧]

೧೯೯೩ರ ಅಧಿನಿಯಮ ಸ್ಪಷ್ಟಪಡಿಸುವ ಪ್ರಕಾರ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಿಗೆ ನಿರ್ದಿಷ್ಟಪಡಿಸಲಾದ ಅಧಿಕಾರಿಗಳ ವ್ಯಾಪ್ತಿಯಲ್ಲಿ ಅದರ ನಿರ್ದಿಷ್ಟ ಉದ್ದೇಶಗಳಿಗೆ ಅನುಗುಣವಾಗಿ ಅನುದಾನಗಳನ್ನು ಬಳಸತಕ್ಕದ್ದು. ಕಲ್ಯಾಣ ಚಟುವಟಿಕೆಗಳ ಉದ್ದೇಶದ ನಿಧಿಗಳಲ್ಲಿ ಶೇ.೨೫ ಕ್ಕಿಂತ ಕಡಿಮೆ ಇರತಕ್ಕದ್ದು. ಮೊತ್ತವನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಉಪಯೋಗಿಸತಕ್ಕದ್ದು ಎಂದು ಸ್ಪಷ್ಟಪಡಿಸಿದೆ.[೩೨]

ನಿಯಮಾವಳಿ ಸ್ಪಷ್ಟಪಡಿಸುವ ಪ್ರಕಾರ ಅಧ್ಯಕ್ಷ–ಉಪಾಧ್ಯಕ್ಷ, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಾಗಿ ಅನುದಾನವನ್ನು ಬಿಡುಗಡೆ ಮಾಡುವುದು. ಸಾಲದ ಮೇಲಿನ ಬಡ್ಡಿಗಾಗಿ ಅನುದಾನವನ್ನು ಬಿಡುಗಡೆ ಮಾಡಬಹುದು. ಇದರ ಜೊತೆಗೆ ಸಾರ್ವಜನಿಕ ಹಿತಾಸಕ್ತಿಗಾಗಿ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ನಿಯಮಾವಳಿಯ ಪ್ರಕಾರ ಅಧ್ಯಕ್ಷರಿಗೆ ನೀಡಲಾಗಿದೆ.[೩೩] ಪಂಚಾಯತ್ ಅಧಿನಿಯಮವು ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳಿಗೆ ಮಹತ್ತರವಾದ ಹಣಕಾಸಿನ ಅಧಿಕಾರವನ್ನು ನೀಡಲಾಗಿದೆ. ಈ ಅಧಿಕಾರಗಳನ್ನು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ನಿರ್ವಹಿಸುತ್ತಿದ್ದಾರೆಯೇ ಎನ್ನುವುದು ಅಧ್ಯಯನದ ಪ್ರಶ್ನೆ. ಈ ಸಂಗತಿಗಳನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ –೪೧ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ.೪೦ ರಷ್ಟು ಅಧ್ಯಕ್ಷರುಗಳು ಮಾತ್ರ ಸ್ವತಂತ್ರವಾಗಿ ಅನುದಾನಗಳನ್ನು ಬಿಡುಗಡೆ ಮಾಡಿದ್ದು, ಉಳಿದ ಶೇಕಡ ೬೦ ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಅನುದಾನಗಳನ್ನು ಬಿಡುಗಡೆ ಮಾಡಿಲ್ಲ. ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇಕಡ ೨೮.೬ ರಷ್ಟು ಅಧ್ಯಕ್ಷರುಗಳು ಮಾತ್ರ ಸ್ವತಂತ್ರವಾಗಿ ಅನುದಾನ ಬಿಡುಗಡೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುತ್ತಿದ್ದು, ಉಳಿದ ಶೇ.೭೧.೪ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಅನುದಾನ ಬಿಡುಗಡೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುತ್ತಿಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೨೦ ರಷ್ಟು ಅಧ್ಯಕ್ಷರುಗಳು ಸ್ವತಂತ್ರವಾಗಿ ಅನುದಾನ ಬಿಡುಗಡೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ಆದರೆ ಶೇ.೮೦ರಷ್ಟು ಅಧ್ಯಕ್ಷರುಗಳು ಸ್ವತಂತ್ರವಾಗಿ ಅನುದಾನ ಬಿಡುಗಡೆ ಮಾಡುವ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇಕಡ ೨೯.೬ರಷ್ಟು ಅಧ್ಯಕ್ಷರುಗಳು ಮಾತ್ರ ಸ್ವತಂತ್ರವಾಗಿ ಅನುದಾನ ಬಿಡುಗಡೆ ಅಥವಾ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ನಿರ್ವಹಿಸುತ್ತಿದ್ದು, ಶೇ. ೭೦.೪ ರಷ್ಟು ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಅನುದಾನ ಬಿಡುಗಡೆ ಮಾಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಚಲಾಯಿಸುತ್ತಿಲ್ಲ.

ಒಟ್ಟಾರೆ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ನಿಯಮಾವಳಿಯ ಪ್ರಕಾರ ಅಧ್ಯಕ್ಷರುಗಳಿಗೆ ಪ್ರಾಪ್ತವಾದ ಪ್ರಮುಖ ಹಣಕಾಸಿನ ಅಧಿಕಾರಗಳನ್ನು ಸ್ವತಂತ್ರವಾಗಿ ಚಲಾಯಿಸುವಲ್ಲಿ ವಿಫಲರಾಗುತ್ತಿದ್ದಾರೆ. ಈ ಚರ್ಚೆಯಿಂದ ಉದ್ಭವಿಸುವ ಮೂಲ ಪ್ರಶ್ನೆಯೆಂದರೆ ಬಹುತೇಕ ದಲಿತ ಅಧ್ಯಕ್ಷರುಗಳು ಯಾರ ನಿರ್ದೇಶನದ ಮೇರೆಗೆ ಅನುದಾನಗಳನ್ನು ಬಿಡುಗಡೆ ಮಾಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಕಾರ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವುದು ಈ ಪ್ರಶ್ನೆಗೆ ಕ್ಷೇತ್ರಕಾರ್ಯದ ಮೂಲಕ ಉತ್ತರಗಳನ್ನು ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಅದರ ಚರ್ಚೆಯನ್ನು ಮಂಡಿಸಲಾಗಿದೆ.

ದಲಿತ ಅಧ್ಯಕ್ಷರು ಮತ್ತು ಅನುದಾನ ಬಿಡುಗಡೆ ಅಧಿಕಾರದ ಪರಾವಲಂಬನೆ:

ಹಿಂದಿನ ಚರ್ಚೆಯಲ್ಲಿ ಕಂಡುಕೊಂಡಿರುವಂತೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಕಂಡುಕೊಂಡಿರುವಂತೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ

ಶೇ.೭೦.೪ರಷ್ಟು ಅಧ್ಯಕ್ಷರುಗಳು ಸ್ವತಂತ್ರವಾಗಿ ಅನುದಾನ ಬಿಡುಗಡೆ ಮಾಡುವ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಕಾರ್ಯಗಳನ್ನು ನಿರ್ವಹಿಸುತ್ತಿಲ್ಲ. ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೩೩.೩ ರಷ್ಟು ದಲಿತ ಅಧ್ಯಕ್ಷರುಗಳು ಅಧಿಕಾರಿಗಳ ನಿರ್ದೇಶನದ ಮೇರೆಗೆ ೬೬.೭ರಷ್ಟು ದಲಿತ ಅಧ್ಯಕ್ಷರುಗಳು ತಮ್ಮ ಪತಿ ಅಥವಾ ಮಕ್ಕಳ ನಿರ್ದೇಶನದ ಮೇರೆಗೆ ಅನುದಾನ ಬಿಡುಗಡೆ ಮಾಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಸಿರುಗುಪ್ಪ ತಾಲ್ಲೂಕಿನ ದಲಿತ ಅಧ್ಯಕ್ಷರುಗಳಲ್ಲಿ ಶೇ. ೪೦ ರಷ್ಟು ಅಧ್ಯಕ್ಷರುಗಳ ಅಧಿಕಾರಿಗಳ ನಿರ್ದೇಶನದ ಮೇರೆಗೆ ಶೇ. ೨೦ ರಷ್ಟು ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಉಳಿದ ಶೇ. ೪೦ ರಷ್ಟು ಅಧ್ಯಕ್ಷರುಗಳು ಪತಿ ಅಥವಾ ಮಕ್ಕಳ ನಿರ್ದೇಶನದ ಮೇರೆಗೆ ಅನುದಾನ ಬಿಡುಗಡೆ ಮಾಡುವ ಅಥವಾ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ನಿರ್ವಹಿಸುತ್ತಿದ್ದಾರೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಅಧ್ಯಕ್ಷರುಗಳಲ್ಲಿ ಶೇ. ೪೨.೧ ರಷ್ಟು ದಲಿತ ಅಧ್ಯಕ್ಷರುಗಳು ಅಧಿಕಾರಿಗಳ ನಿರ್ದೇಶನದ ಮೇರೆಗೆ ಶೆ. ೧೦.೫ ರಷ್ಟು ದಲಿತ ಅಧ್ಯಕ್ಷರುಗಳು ಮೇಲ್ಜಾತಿಯವರ ನಿರ್ದೇಶನದ ಮೇರೆಗೆ ಹಾಗೂ ಉಳಿದ ಶೇ. ೪೭.೪ ರಷ್ಟು ದಲಿತ ಅಧ್ಯಕ್ಷರುಗಳು ತಮ್ಮ ಪತಿ ಅಥವಾ ಮಕ್ಕಳ ನಿರ್ದೇಶನದ ಮೇರೆಗೆ ಅನುದಾನಗಳನ್ನು ಬಿಡುಗಡೆ ಮಾಡುವ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ನಿರ್ವಹಿಸುತ್ತಿದ್ದಾರೆ.

ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಅನುದಾನಗಳನ್ನು ಬಿಡುಗಡೆ ಮಾಡುವ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಅಧಿಕಾರದ ಸಂಗತಿಗಳಲ್ಲಿ ದಲಿತ ಪುರುಷ ಅಧ್ಯಕ್ಷರ ಹೆಸರಿನಲ್ಲಿ ಅಧಿಕಾರಿಶಾಹಿ ವರ್ಗ ಮತ್ತು ಮೇಲ್ಜಾತಿ ಸಮುದಾಯಗಳು ಬೆನಾಮಿಯಾಗಿ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ದಲಿತ ಮಹಿಳಾ ಅಧ್ಯಕ್ಷರುಗಳ ಹೆರಿನಲ್ಲಿ ಅವರ ಪತಿ ಹಾಗೂ ಅವರ ಮಕ್ಕಳು ಬೆನಾಮಿಯಾಗಿ ಅನುದಾನವನ್ನು ಬಿಡುಗಡೆ ಮಾಡುವ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡುವ ಮಹತ್ತರವಾದ ಹಣಕಾಸಿನ ಅಧಿಕಾರಗಳನ್ನು ನಿರ್ವಹಿಸುತ್ತಿದ್ದಾರೆ. ಒಟ್ಟಾರೆ ದಲಿತರ ಹೆಸರಿನಲ್ಲಿ ಅಧಿಕಾರಿಶಾಹಿ ವರ್ಗ ಮೇಲ್ಜಾತಿ ಸಮುದಾಯಗಳು ಮತ್ತು ಸಂಬಂಧಿಕರ ಬೆನಾಮಿ/ ಪ್ರಾತಿನಿಧ್ಯ ಇಂದಿಗೂ ಮುಂದುವರೆದಿದೆ. ಒಂದು ಸಮುದಾಯದಿಂದ ಆಯ್ಕೆಯಾದ ಪ್ರತಿನಿಧಿಗಳು ಹಾಗೂ ನಿಯಮಾವಳಿಗಳ ಪ್ರಕಾರ ಮೀಸಲಾತಿಯನ್ನು ಆಧರಿಸಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಗಳಿಗೆ ನೇಮಕಗೊಂಡ ಪ್ರತಿನಿಧಿಗಳು ಆಯಾ ಸಮುದಾಯದ ಹಿತಾಸಕ್ತಿ ಕಾಪಾಡಲು ಅಥವಾ ಆ ಸಮುದಾಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕೆಂದು ನಿರೀಕ್ಷಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ದಲಿತ

ಸಮುದಾಯದಿಂದ ಆಯ್ಕೆಗೊಂಡು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿರುವ ದಲಿತರು ಆ ಸಮುದಾಯದ ಅಭಿವೃದ್ಧಿಗೆ ಸ್ಪಂದಿಸುತ್ತಿದ್ದಾರೆಯೇ ಎನ್ನುವುದು ಮುಖ್ಯವಾದ ಪ್ರಶ್ನೆ. ಈ ಚರ್ಚೆಯನ್ನು ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

ದಲಿತ ಅಧ್ಯಕ್ಷರು ಮತ್ತು ದಲಿತ ಸಮುದಾಯದ ಅಭಿವೃದ್ಧಿ :

ಭಾರತೀಯ ಸಮಾಜ ವಾಸ್ತವಿಕವಾಗಿ ಜಾತಿ ವ್ಯವಸ್ಥೆ ಅವಲಂಬಿಸಿದೆ. ಮೇಲ್ಜಾತಿಗಳು, ಹಿಂದುಳಿದ ವರ್ಗಗಳು ಹಾಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿರ್ಲಕ್ಷ್ಯಕ್ಕೆ ಒಳಪಟ್ಟ ಸಮುದಾಯಗಳನ್ನು ಸಮಾಜ ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಭಾರತದ ಸಂವಿಧಾನ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಂಚಿಗೆ ತಳ್ಳಲ್ಪಟ್ಟ ದಲಿತರಿಗೆ ಶಿಕ್ಷಣ, ಉದ್ಯೋಗ, ಮತ್ತು ರಾಜಕೀಯ ಸ್ಥಾನಗಳಲ್ಲಿ ಮೀಸಲಾತಿಯನ್ನು ನೀಡಿದೆ. ಸಂವಿಧಾನದ ೭೩ನೇ ತಿದ್ದುಪಡಿಯ ಪ್ರಕಾರ ಸ್ಥಳೀಯ ಸರ್ಕಾರಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಲ್ಲಿ ಶೇ. ೩೩ರಷ್ಟು ಮೀಸಲಾತಿಯನ್ನು ನಿಗದಿಪಡಿಸುವುದರ ಜೊತೆಗೆ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನಗಳಿಗೂ ದಲಿತರಿಗೆ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. ಮೀಸಲಾತಿ ಆಧಾರದ ಮೇಲೆ ತಮ್ಮ ಸಮುದಾಯದ ಮತಗಳಿಂದ ಆಯ್ಕೆಗೊಂಡ ಪಂಚಾಯತ್ ಸದಸ್ಯರು ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷರುಗಳು ದಲಿತ ಸಮುದಾಯದ ಹಿತಾಸಕ್ತಿಗಳನ್ನು ಕಾಪಾಡುವ ಹಾಗೂ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವ ಆಶಯ, ಮೀಸಲಾತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಅಧ್ಯಕ್ಷರುಗಳು ತಮ್ಮ ಸಮುದಾಯದ ಹಿತಾಸಕ್ತಿಯನ್ನು ಯಾವ ಕ್ರಮಗಳ ಮೂಲಕ ಕೈಗೆತ್ತಿಕೊಂಡಿದ್ದಾರೆ ಎಂಬುದನ್ನು ಕ್ಷೇತ್ರ ಅಧ್ಯಯನಗಳ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಅದರ ವಿಶ್ಲೇಷಣೆಯನ್ನು ಮಂಡಿಸಲಾಗಿದೆ.

ಕೋಷ್ಟಕ – ೪೩ರ ದತ್ತಾಂಶಗಳ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೬೦ ರಷ್ಟು ಅಧ್ಯಕ್ಷರು ದಲಿತ ಸಮುದಾಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದಾರೆ. ಶೇ. ೨೦ರಷ್ಟು ಅಧ್ಯಕ್ಷರುಗಳು ದಲಿತ ಸಮುದಾಯಕ್ಕೆ ಸಂಪನ್ಮೂಲಗಳ ಹಂಚಿಕೆ ಮಾಡಿದಾರೆ. ಶೇ. ೨೦ ರಷ್ಟು ಅಧ್ಯಕ್ಷರುಗಳು ಸರ್ಕಾರಿ ಕಾರ್ಯಕ್ರಮಗಳಲ್ಲಿ ದಲಿತರನ್ನು ಮುಖ್ಯ ಪಾಲುದಾರರನ್ನಾಗಿ ಮಾಡಿದಾರೆ. ಉಳಿದ ಶೇ. ೧೦ ರಷ್ಟು ಅಧ್ಯಕ್ಷರುಗಳು ಹೆಚ್ಚು ದಲಿತರನ್ನು ಕಾರ್ಯಕ್ರಮಗಳ ಫಲಾನುಭವಿಗಳನ್ನಾಗಿ ಮಾಡುವಲ್ಲಿ ಶ್ರಮಿಸಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೮೫.೭ ರಷ್ಟು ಅಧ್ಯಕ್ಷರುಗಳು ದಲಿತ ಸಮುದಾಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಶೇ. ೧೪.೩ ರಷ್ಟು ದಲಿತ ಅಧ್ಯಕ್ಷರುಗಳು ಸಮುದಾಯದ ಹೆಚ್ಚು ಜನರನ್ನು ಸರ್ಕಾರಿ ಕಾರ್ಯಕ್ರಮ ಫಲಾನುಭವಿಗಳಾಗಿ ಗುರುತಿಸಲು ಶ್ರಮಿಸಿದ್ದಾರೆ.

ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೮೦ ರಷ್ಟು ದಲಿತ ಅಧ್ಯಕ್ಷರು ಸಮುದಾಯಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಶೇ. ೧೦ ರಷ್ಟು ಅಧ್ಯಕ್ಷರುಗಳು ದಲಿತ ಸಮುದಾಯ ಎದುರಿಸುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯಗಳನ್ನು ನಿವಾರಿಸಲು ಶ್ರಮಿಸಿದ್ದಾರೆ. ಉಳಿದ ಶೇ. ೧೦ ರಷ್ಟು ಅಧ್ಯಕ್ಷರುಗಳು ಸಮುದಾಯದ ಹೆಚ್ಚು ಜನರನ್ನು ಸರ್ಕಾರಿ ಕಾರ್ಯಕ್ರಮಗಳ ಫಲಾನುಭವಿಗಳನ್ನಾಗಿ ಆಯ್ಕೆ ಮಾಡುವಲ್ಲಿ ಶ್ರಮಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಬಹುತೇಕ ಅಧ್ಯಕ್ಷರುಗಳು ದಲಿತ ಸಮುದಾಯಕ್ಕೆ ಕೇವಲ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಕೆಲಸಕ್ಕೆ ಸೀಮಿತರಾಗಿದ್ದಾರೆ. ಶೇ. ೭.೪ರಷ್ಟು ಅಧ್ಯಕ್ಷರುಗಳು ದಲಿತ ಸಮುದಾಯಕ್ಕೆ ಸಂಪನ್ಮೂಲಗಳನ್ನು ಹಂಚಿಕೆ ಮಾಡುವ ಕೆಲಸಕ್ಕೆ ಸೀಮಿತವಾಗಿದ್ದಾರೆ. ಶೇ. ೭.೪ ರಷ್ಟು ಅಧ್ಯಕ್ಷರುಗಳು ದಲಿತರಿಗೆ ಸರ್ಕಾರಿ ಕಾರ್ಯಕ್ರಮಗಳನ್ನು ಮುಖ್ಯ ಪಾಲುದಾರರಾಗುವಂತೆ ಶ್ರಮಿಸಿದ್ದಾರೆ.

ಒಟ್ಟಾರೆ ದಲಿತ ಅಧ್ಯಕ್ಷರುಗಳು ದಲಿತ ಸಮುದಾಯಕ್ಕೆ ಕೇವಲ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ತಕ್ಕಮಟ್ಟಿಗೆ ಸಂಪನ್ಮೂಲಗಳನ್ನು ವಿತರಣೆ ಮಾಡುವ ಹಾಗೂ ಸರ್ಕಾರಿ ಕಾರ್ಯಕ್ರಮಗಳಲ್ಲಿ ದಲಿತರನ್ನು ಫಲಾನುಭವಿಗಳಾಗಿ ಗುರುತಿಸುವ ಕೆಲಸಕ್ಕೆ ಮಾತ್ರ ಸೀಮಿತಗೊಂಡಿದ್ದಾರೆ. ದಲಿತ ಸಮುದಾಯದ ಸಮಸ್ಯೆಗಳು ಇಷ್ಟಕ್ಕೆ ಮಾತ್ರ ಸೀಮಿತಗೊಂಡಿಲ್ಲ. ದಲಿತರು ಇಂದು ಅಸ್ಪೃಶ್ಯತೆ, ಜಾತಿ ತಾರತಮ್ಯ, ಕನಿಷ್ಠ ಆದಾಯದ ಮೂಲಗಳು, ಮುಂತಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ದಲಿತ ಅಧ್ಯಕ್ಷರುಗಳಲ್ಲಿ ಕೇವಲ ಶೇ. ೩.೭ ರಷ್ಟು ಅಧ್ಯಕ್ಷರುಗಳು ಮಾತ್ರ ದಲಿತ ಸಮುದಾಯ ಎದುರಿಸುತ್ತಿರುವ ತಾರತಮ್ಯಗಳನ್ನು ನಿವಾರಿಸುವ ಪ್ರಯತ್ನಗಳನ್ನು ಕೈಗೊಂಡಿದ್ದಾರೆ. ಆದರೆ ಬಹುಸಂಖ್ಯಾತ ದಲಿತ ಅಧ್ಯಕ್ಷರುಗಳು ದಲಿತ ಸಮುದಾಯ ಎದುರಿಸುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ತಾರತಮ್ಯಗಳನ್ನು ನಿವಾರಣೆ ಮಾಡಲು ಕ್ರಮಕೈಗೊಳ್ಳದಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ದಲಿತ ಅಧ್ಯಕ್ಷರುಗಳು ಅಧಿಕಾರ ಚಲಾವಣೆಗಳಾಗಿ,

ಅಧಿಕಾರಿಶಾಹಿ ವರ್ಗ ಮತ್ತು ಮೇಲ್ಜಾತಿಗಳನ್ನು ಅವಲಂಬಿಸಿರುವುದು ದಲಿತರ ಇಂದಿನ ನಿಕೃಷ್ಟ ಸ್ಥಿತಿಗೆ ಮೂಲ ಕಾರಣ ಎನ್ನುವಂತೆ ಭಾಸವಾಗುತ್ತಿದೆ.

೭೩ನೇ ಸಂವಿಧಾನ ತಿದ್ದುಪಡಿಯ ಆಶಯದಂತೆ ದಲಿತ ಸಮುದಾಯಕ್ಕೆ ಗ್ರಾಮ ಪಂಚಾಯತಿ ಸದಸ್ಯತ್ವ ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಲ್ಲಿ ಮೀಸಲಾಗುತ್ತಿದೆ. ಸಂವಿಧಾನದತ್ತವಾಗಿ ಬಂದಿರುವ ಈ ಅಧಿಕಾರಗಳನ್ನು ದಲಿತರು ಹೀಗೆ ಅನುಭವಿಸುತ್ತಿದ್ದಾರೆ ಎನ್ನುವುದನ್ನು ಕಂಡುಕೊಳ್ಳಲಾಗಿದೆ. ವಿವಿಧ ಹಂತಗಳಲ್ಲಿ ಕ್ಷೇತ್ರ ಕಾರ್ಯದ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ದಲಿತ ಪುರುಷರ ಹೆಸರಿನಲ್ಲಿ ಅಧಿಕಾರಶಾಹಿ ವರ್ಗ ಅಥವಾ ಮೇಲ್ಜಾತಿ ವರ್ಗಗಳು ಬೇನಾಮಿಯಾಗಿ ಅಧಿಕಾರವನ್ನು ಚಲಾಯಿಸುತ್ತಿವೆ. ದಲಿತ ಮಹಿಳೆಯರ ಹೆಸರಿನಲ್ಲಿ ಅವರ ಕುಟುಂಬದ ಸದಸ್ಯರು ಬೇನಾಮಿಯಾಗಿ ಅಧಿಕಾರವನ್ನು ನಿರ್ವಹಿಸುತ್ತಿದ್ದಾರೆ. ಇಂತಹ ವಿಷಮ ಸನ್ನಿವೇಶದಲ್ಲಿ ದಲಿತ ಅಧ್ಯಕ್ಷರುಗಳು ತಮ್ಮ ಆಡಳಿತ ನಿರ್ವಹಣೆಯ ಬಗ್ಗೆ ತೃಪ್ತಿ ಹೊಂದಿದ್ದಾರೆಯೇ ಎನ್ನುವುದು ಅಧ್ಯಯನದ ಪ್ರಶ್ನೆ. ಈ ಪ್ರಶ್ನೆಗೆ ಕ್ಷೇತ್ರ ಕಾರ್ಯದ ಮೂಲಕ ಉತ್ತರಗಳನ್ನು ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಈ ಚರ್ಚೆಯನ್ನು ಮಂಡಿಸಲಾಗಿದೆ.

ಕೋಷ್ಟಕ –೪೪ ರ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೫೦ ರಷ್ಟು ದಲಿತ ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿದೆ. ಉಳಿದ ಶೇ. ೫೦ ರಷ್ಟು ಅಧ್ಯಕ್ಷರುಗಳಿಗೆ ತಮ್ಮ ಆಡಳಿತದ ನಿರ್ವಹಣೆ ತೃಪ್ತಿ ತಂದಿಲ್ಲ. ಸಿರುಗುಪ್ಪ ತಾಲ್ಲೂಕಿನ ಜಿಲ್ಲಾಡಳಿತ ಅಧ್ಯಕ್ಷರುಗಳಲ್ಲಿ ಶೆ. ೪೭.೯ ರಷ್ಟು ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿದ್ದು, ಶೇ. ೫೭.೧ ರಷ್ಟು ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿಲ್ಲ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೆ. ೫೦ ರಷ್ಟು ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿದ್ದು, ಉಳಿದ ಶೇ. ೫೦ ರಷ್ಟು ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಅಧ್ಯಕ್ಷರುಗಳಲ್ಲಿ ಶೇ. ೪೮.೧ ರಷ್ಟು ಅಧ್ಯಕ್ಷರುಗಳಿಗೆ ಮಾತ್ರ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿದ್ದು, ಬಹುಸಂಖ್ಯಾತ ಅಂದರೆ ಶೇ. ೫೧.೯ರಷ್ಟು ದಲಿತ ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ತೃಪ್ತಿ ತಂದಿಲ್ಲ.

ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಬಳ್ಳಾರಿ ಜಿಲ್ಲೆಯ ಅರ್ಧಕ್ಕಿಂತ ಹೆಚ್ಚು ದಲಿತ ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿಲ್ಲ. ದಲಿತ ಪುರುಷ ಅಧ್ಯಕ್ಷರುಗಳಿಗೆ ಹೋಲಿಸಿದರೆ ಬಹುಸಂಖ್ಯಾತ ದಲಿತ ಮಹಿಳಾ ಅಧ್ಯಕ್ಷರುಗಳಿಗೆ ತಮ್ಮ ಆಡಳಿತ ನಿರ್ವಹಣೆ ತೃಪ್ತಿ ತಂದಿಲ್ಲ. ಅಂದರೆ ದಲಿತ ಸಮುದಾಯದ ಅಧ್ಯಕ್ಷರುಗಳಲ್ಲಿ ತಮ್ಮ ಆಡಳಿತ ನಿರ್ವಹಣೆಯ ಬಗ್ಗೆ

ತೃಪ್ತಿ ಹೊಂದಿಲ್ಲದವರೆ ಹೆಚ್ಚಾಗಿ ಕಂಡು ಬರುತ್ತಾರೆ. ಈ ಚರ್ಚೆಯ ಮೂಲಕ ಉದ್ಭವಿಸುವ ಪ್ರಮುಖವಾದ ಪ್ರಶ್ನೆಯೆಂದರೆ ದಲಿತ ಅಧ್ಯಕ್ಷರುಗಳು ತಮ್ಮ ಆಡಳಿತ ನಿರ್ವಹಣೆಯ ಬಗ್ಗೆ ಏಕೆ ತೃಪ್ತಿರಾಗಿಲ್ಲ ಮತ್ತು ಆಡಳಿತ ನಿರ್ವಹಣೆಯಲ್ಲಿ ಅವರು ಎದಿರುಸುತ್ತಿರುವ ಸಮಸ್ಯೆಗಳು ಯಾವುವು ಎನ್ನುವುದು ? ಮುಖ್ಯವಾಗುತ್ತದೆ. ಈ ಪ್ರಶ್ನೆಗಳ ಬಗ್ಗೆ ಕ್ಷೇತ್ರ ಅಧ್ಯಯನದ ಮೂಲಕ ಉತ್ತರಗಳನ್ನು ಕಂಡು ಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಅದರ ಚರ್ಚೆಗಳನ್ನು ಮಂಡಿಸಲಾಗಿದೆ.

ದಲಿತ ಅಧ್ಯಕ್ಷರುಗಳು ಮತ್ತು ಆಡಳಿತ ನಿರ್ವಹಣೆಯಲ್ಲಿ ಎದುರಿಸುತ್ತಿರುವ ಸವಾಲುಗಳು:

ಹಿಂದಿನ ಚರ್ಚೆಯಲ್ಲಿ ಕಂಡುಕೊಂಡಿರುವಂತೆ ಶೇ. ೫೦ಕ್ಕಿಂತ ಹೆಚ್ಚು ದಲಿತ ಅಧ್ಯಕ್ಷರುಗಳು ತಮ್ಮ ಆಡಳಿತ ನಿರ್ವಹಣೆಯ ಬಗ್ಗೆ ತೃಪ್ತಿಯನ್ನು ಹೊಂದಿಲ್ಲ. ಇದಕ್ಕೆ ಮೂಲ ಕಾರಣ ದಲಿತ ಅಧ್ಯಕ್ಷರುಗಳು ತಮ್ಮ ಆಡಳಿತ ನಿರ್ವಹಣೆಯಲ್ಲಿ ವಿವಿಧ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಎದುರಿಸುತ್ತಿದ್ದಾರೆ. ೪೫ನೇ ಕೋಷ್ಠದ ದತ್ತಾಂಶಗಳು ಸ್ಪಷ್ಟಪಡಿಸುವಂತೆ ಬಳ್ಳಾರಿ ತಾಲ್ಲೂಕಿನ ಆಡಳಿತ ನಿರ್ವಹಣೆಯ ತೃಪ್ತಿ ಹೊಂದಿದ ಒಟ್ಟು ಅಧ್ಯಕ್ಷರುಗಳಲ್ಲಿ ಶೇ. ೨೦ ರಷ್ಟು ಅಧ್ಯಕ್ಷರುಗಳು ಅಧಿಕಾರಶಾಹಿಯ ಅಸಹಕಾರದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಶೇ. ೨೦ ರಷ್ಟು ದಲಿತ ಅಧ್ಯಕ್ಷರುಗಳು ತಮ್ಮ ಆಡಳಿತ ನಿರ್ವಹಣೆಯಲ್ಲಿ ಮೇಲ್ಜಾತಿಯ ಅಡ್ಡಿ ಆತಂಕಗಳನ್ನು ಎದುರಿಸುತ್ತಿದ್ದಾರೆ. ಆಡಳಿತ ನಿರ್ವಹಣೆಯ ಸಂಕೀರ್ಣತೆಯಿಂದಾಗಿ ಆಡಳಿತ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಅತ್ಯಂತ ಕುತೂಹಲಕಾರಿ ಸಂಗತಿ ಎಂದರೆ ಶೇ. ೨೦ ರಷ್ಟು ಮಹಿಳಾ ಅಧ್ಯಕ್ಷರುಗಳು ಅಭಿಪ್ರಾಯಪಡುವ ಪ್ರಕಾರ ಸ್ತ್ರೀಯರಿಗೆ ಆಡಳಿತ ನಿರ್ವಹಣೆಯಲ್ಲಿ ಮುಕ್ತ ಅವಕಾಶ ಮತ್ತು ಸ್ವತಂತ್ರ್ಯ ಲಭ್ಯವಾಗುತ್ತಿಲ್ಲ. ಉಳಿದ ಶೇ. ೨೦ ರಷ್ಟು ಅಧ್ಯಕ್ಷರುಗಳು ಅಭಿಪ್ರಾಯಪಡುವ ಪ್ರಕಾರ ಕಡಿಮೆ ಶಿಕ್ಷಣ ಮತ್ತು ಆಡಳಿತದ ಜ್ಞಾನ ಇಲ್ಲದೇ ಇರುವುದರಿಂದ ಸುಗಮವಾಗಿ ಆಡಳಿತ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಇವರಿಗೆ ಆಡಳಿತ ನಿರ್ವಹಣೆ ತೃಪ್ತಿ ನೀಡುತ್ತಿಲ್ಲ.

ಸಿರುಗುಪ್ಪ ತಾಲ್ಲೂಕಿನ ಆಡಳಿತ ನಿರ್ವಹಣೆ ತೃಪ್ತಿ ಇಲ್ಲದ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೫೦ ರಷ್ಟು ಅಧ್ಯಕ್ಷರುಗಳು ಆಡಳಿತ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಶೇ. ೨೫ ರಷ್ಟು ಮಹಿಳಾ ಅಧ್ಯಕ್ಷರುಗಳು ಅಭಿಪ್ರಾಯಪಡುವ ಪ್ರಕಾರ ಆಡಳಿತದಲ್ಲಿ ಸ್ತ್ರೀಯರಿಗೆ ಮುಕ್ತ ಅವಕಾಶ ಮತ್ತು ಸ್ವತಂತ್ರ್ಯ ಲಭ್ಯವಾಗದೇ ಇರುವುದರಿಂದ ಆಡಳಿತ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಆಡಳಿತ ನಿರ್ವಹಣೆಯ ತೃಪ್ತಿ ಭಾಸವಾಗುತ್ತಿಲ್ಲ. ಶೇ. ೨೫ ರಷ್ಟು ಅಧ್ಯಕ್ಷರುಗಳಿಗೆ

ಸಾಮಾನ್ಯ ಶಿಕ್ಷಣ ಮತ್ತು ಆಡಳಿತಾತ್ಮಕ ಶಿಕ್ಷಣದ ಕೊರತೆಯಿಂದಾಗಿ ಸುಗಮವಾಗಿ ಆಡಳಿತವನ್ನು ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ.

ಕೂಡ್ಲಿಗಿ ತಾಲ್ಲೂಕಿನ ಆಡಳಿತ ನಿರ್ವಹಣೆಯ ತೃಪ್ತಿ ಇಲ್ಲದ ಒಟ್ಟು ಅಧ್ಯಕ್ಷರುಗಳಲ್ಲಿ ಶೇ. ೨೦ ರಷ್ಟು ಅಧ್ಯಕ್ಷರುಗಳು ಅಧಿಕಾರಗಳ ಅಸಹಾಯಕತೆ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಶೇ. ೨೦ ರಷ್ಟು ಅಧ್ಯಕ್ಷರುಗಳು ತಮ್ಮ ಆಡಳಿತ ನಿರ್ವಹಣೆಯಲ್ಲಿ ಮೇಲ್ಜಾತಿ ಸಮುದಾಯಗಳ ಅಡ್ಡಿ-ಆತಂಕವನ್ನು ಎದುರಿಸುತ್ತಿದ್ದಾರೆ. ಶೇ. ೨೦ ರಷ್ಟು ಅಧ್ಯಕ್ಷರುಗಳು ಆಡಳಿತ ನಿರ್ವಹಣೆ ಸಂಕೀರ್ಣ ವಿಷಯವಾಗಿದ್ದು, ಆಡಳಿತ ನಿರ್ವಹಣೆ ಅರ್ಥವಾಗದೇ ಇರುವುದರಿಂದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶೇ. ೨೦ ರಷ್ಟು ವಿಶೇಷವಾಗಿ ಮಹಿಳಾ ಅಧ್ಯಕ್ಷರುಗಳು ಅಭಿಪ್ರಾಯಪಡುವ ಪ್ರಕಾರ ಮಹಿಳೆಗೆ ಆಡಳಿತ ನಿರ್ವಹಣೆಯಲ್ಲಿ ಅಗತ್ಯವಾಗಿ ಬೇಕಾಗಿರುವ ಮುಕ್ತತೆ ಮತ್ತು ಸ್ವತಂತ್ರ ಇಲ್ಲದಿರುವುದರಿಂದ ಆಡಳಿತ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ಅವರಿಗೆ ಆಡಳಿತ ನಿರ್ವಹಣೆಯ ತೃಪ್ತಿಯ ಭಾಸವಾಗುತ್ತಿಲ್ಲ. ಉಳಿದ ಶೇ. ೨೦ ರಷ್ಟು ಅಧ್ಯಕ್ಷರುಗಳಿಗೆ ಸಾಮಾನ್ಯ ಶಿಕ್ಷಣ ಮತ್ತು ಆಡಳಿತದ ತಾಂತ್ರಿಕತೆಯ ಜ್ಞಾನ ಇಲ್ಲದಿರುವುದರಿಂದ ಆಡಳಿತ ನಿರ್ವಹಣೆಯ ತೃಪ್ತಿ ಲಭ್ಯವಾಗುತ್ತಿಲ್ಲ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಅಧ್ಯಕ್ಷರುಗಳಲ್ಲಿ ಶೇ. ೪.೩ ರಷ್ಟು ಅಧ್ಯಕ್ಷರುಗಳು ಅಧಿಕಾರಿಶಾಹಿಯ ಅಸಹಕಾರವನ್ನು ಎದುರಿಸುತ್ತಿದ್ದಾರೆ. ಶೇ. ೧೪.೩ರಷ್ಟು ಅಧ್ಯಕ್ಷರುಗಳು ಆಡಳಿತ ನಿರ್ವಹಣೆಯಲ್ಲಿ ಮೇಲ್ಜಾತಿ ಸಮುದಾಯಗಳ ಅಡ್ಡಿ ಆತಂಕಗಳನ್ನು ಎದುರಿಸುತ್ತಿದ್ದಾರೆ.

ಅತೀ ಹೆಚ್ಚು ಅಂದರೆ ಶೇ. ೨೮.೬ ರಷ್ಟು ಅಧ್ಯಕ್ಷರುಗಳಿಗೆ ಆಡಳಿತ ನಿರ್ವಹಣೆ ಸಂಕೀರ್ಣ ಸಂಗತಿಯಾಗಿದ್ದು, ಆಡಳಿತ ನಿರ್ವಹಣೆಯ ಕೌಶಲ್ಯಗಳು ಇಲ್ಲದೇ ಇರುವುದರಿಂದ ಆಡಳಿತ ನಿರ್ವಹನೆ ಸಾಧ್ಯವಾಗುತ್ತಿಲ್ಲ. ಶೇ. ೨೧.೪ ರಷ್ಟು ವಿಶೇಷವಾಗಿ ಮಹಿಳಾ ಅಧ್ಯಕ್ಷರುಗಳಿಗೆ ಆಡಳಿತ ನಿರ್ವಹಣೆಯನ್ನು ಕಲಿಯುವ ಕ್ರಮ ಆಡಳಿತ ನಿರ್ವಹಿಸುವ ಮುಕ್ತ ವಾತಾವರಣವನ್ನು ಕಲ್ಪಿಸಿಕೊಡಲಾಗುತ್ತಿಲ್ಲ. ಹಾಗಾಗಿ ಮಹಿಳಾ ಅಧ್ಯಕ್ಷರುಗಳು ಆಡಳಿತ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಪಂಚಾಯಿತಿಯ ಇಡೀ ವ್ಯವಸ್ಥೆ ಮತ್ತು ಮಹಿಳಾ ಸ್ವತಂತ್ರ್ಯದ ಅಡ್ಡಿಗಳು ಆಡಳಿತ ನಿರ್ವಹಿಸಲು ಅವಕಾಶ ಮಾಡಿಕೊಡುತ್ತಿಲ್ಲ. ಹಾಗಾಗಿ ಮಹಿಳೆಯರು ಆಡಳಿತ ನಿರ್ವಹಣೆ ಬಗ್ಗೆ ತೃಪ್ತಿ ಹೊಂದಿಲ್ಲ.

ಶೇ. ೨೧.೪ರಷ್ಟು ಅಧ್ಯಕ್ಷರುಗಳಿಗೆ ಸಾಮಾನ್ಯ ಶಿಕ್ಷಣ ಮತ್ತು ಆಡಳಿತಾತ್ಮಕ ಶಿಕ್ಷಣದ ಕೊರತೆ ಇರುವುದರಿಂದ ಅವರಿಗೆ ಆಡಳಿತ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಕ್ಷೇತ್ರ ಕಾರ್ಯದ

ಒಟ್ಟಾರೆ ದತ್ತಾಂಶಗಳು ಸ್ಪಷ್ಟಪಡಿಸುವ ಪ್ರಕಾರ ಅತೀ ಹೆಚ್ಚು ದಲಿತ ಅಧ್ಯಕ್ಷರುಗಳಿಗೆ ಆಡಳಿತ ನಿರ್ವಹಣೆಯ ಸಂಕೀರ್ಣತೆ ಅರ್ಥವಾಗುತ್ತಿಲ್ಲ.

ಎರಡನೆಯದಾಗಿ ಮಹಿಳಾ ಅಧ್ಯಕ್ಷರುಗಳಿಗೆ ಆಡಳಿತ ನಿರ್ವಹಣೆಗೆ ಬೇಕಾದ ಮುಕ್ತ ವಾತಾವರಣ ಮತ್ತು ಸ್ವತಂತ್ರ ನೀಡುತ್ತಿಲ್ಲ.

ಮೂರನೆಯದಾಗಿ ಮೂಲತಃ ದಲಿತರಿಗೆ ಶಿಕ್ಷಣದ ಕೊರತೆ ಇರುವುದರಿಂದ ಇದರ ಜೊತೆಗೆ ಆಡಳಿತಾತ್ಮಕ ಜ್ಞಾನ ಇಲ್ಲದೆ ಇರುವುದರಿಂದ ಆಡಳಿತ ನಿರ್ವಹಣೆಯಲ್ಲಿ ದೊಡ್ಡ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ನಾಲ್ಕನೆಯದಾಗಿ ಗ್ರಾಮೀಣ ಭಾಗದಲ್ಲಿ ಇಂದಿಗೂ ಜೀವಂತವಾಗಿರುವ ಪಟ್ಟಭದ್ರ ಹಿತಾಸಕ್ತಿಗಳು, ಮೇಲ್ಜಾತಿ ಸಮುದಾಯಗಳು ಮೀಸಲಾತಿ ನೀತಿಯನ್ನು ಅರಗಿಸಿಕೊಳ್ಳಲಾಗದೇ ದಲಿತ ಅಧ್ಯಕ್ಷರುಗಳಿಗೆ ಆಡಳಿತ ನಿರ್ವಹಣೆಯಲ್ಲಿ ಬಹುದೊಡ್ಡ ಸವಾಲಾಗಿ ಮುಂದುವರೆದಿದ್ದಾರೆ. ಅಂತಿಮವಾಗಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರಗಳನ್ನು ಅರಗಿಸಿಕೊಳ್ಳಲಾಗದ ಅಧಿಕಾರಿಶಾಹಿ ವರ್ಗದವರು ಕೂಡ ದಲಿತ ಅಧ್ಯಕ್ಷರುಗಳ ಆಡಳಿತ ನಿರ್ವಹಣೆಯಲ್ಲಿ ಬಹುದೊಡ್ಡ ಸವಾಲಾಗಿ ಪರಿಣಮಿಸಿದ್ದಾರೆ.

೭೩ ರ ಸಂವಿಧಾನ ತಿದ್ದುಪಡಿ ಜಾರಿಯಾಗಿ ೨೫ ವರ್ಷಗಳೇ ಕಳೆದಿದ್ದು ದಲಿತರಿಗೆ ಸಂವಿಧಾನ ಬದ್ಧವಾಗಿ ಸದಸ್ಯತ್ವ ಮತ್ತು ಅಧ್ಯಕ್ಷ ಸ್ಥಾನಗಳು ಲಭ್ಯವಾಗದಿದ್ದರೂ ದಲಿತರು ಆಡಳಿತ ನಿರ್ವಹಣೆಯಲ್ಲಿ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವುದು ಪಟ್ಟ ಭದ್ರ ಸಮಾಜದ ಜೀವಂತಿಕೆಗೆ ಸ್ಪಷ್ಟ ಸಾಕ್ಷಿಯಾಗಿದೆ.

ಕೋಷ್ಟಕ ೫.೧.

ವಾರ್ಡ್ ಸಭೆ/ ಜನವಸತಿ ಆಯೋಜಿಸಿದ ಸದಸ್ಯರ ವಿವರ

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಹೌದು	೦೪ (೨೨.೨)	೦೨ (೯.೫)	೦೬ (೧೫.೪)	೦೩ (೨೫)	೦೩ (೨೧.೪)	೦೬ (೨೩)	೦೪ (೨೩.೫)	೦೩ (೧೫)	೦೭ (೧೯)	೧೧ (೨೩.೪)	೦೮ (೧೪.೫)	೧೯ (೧೮.೬)
ಇಲ್ಲ	೧೪ (೭೭.೮)	೧೯ (೯೦.೫)	೩೩ (೮೪.೬)	೦೯ (೭೫)	೧೧ (೭೮.೬)	೨೦ (೭೭)	೧೩ (೭೬.೫)	೧೭ (೮೫)	೩೦ (೮೧)	೩೬ (೭೬.೬)	೪೭ (೮೫.೫)	೮೩ (೮೧.೪)
--	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ – ೫.೨.

ಎಲ್ಲಾ ಸಭೆಗಳು ಅಥವಾ ಕೆಲವು ಗ್ರಾಮಗಳಿಗೆ ಭಾಗವಹಿಸುವವರ ವಿವರ

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಎಲ್ಲಾ ಸಭೆಗಳಿಗೆ ಭಾಗಿ	೧೦ (೫೮.೮)	೦೨ (೧೮.೨)	೧೨ (೪೨.೮)	೦೫ (೫೦)	೦೧ (೧೬.೭)	೦೬ (೩೭.೫)	೧೦ (೬೬.೭)	೦೨ (೨೨.೨)	೧೨ (೫೦)	೨೫ (೫೯.೫)	೦೫ (೧೯.೨)	೩೦ (೪೪.೧)
ಕೆಲವು ಸಭೆಗೆ ಮಾತ್ರ	೦೭ (೪೧.೨)	೦೯ (೮೧.೮)	೧೬ (೫೭.೨)	೦೫ (೫೦)	೦೫ (೮೩.೩)	೧೦ (೬೨.೫)	೦೫ (೩೩.೩)	೦೭ (೭೭.೮)	೧೨ (೫೦)	೧೭ (೪೦.೫)	೨೧ (೮೦.೮)	೩೮ (೫೫.೯)
ಒಟ್ಟು	೧೭ (೧೦೦)	೧೧ (೧೦೦)	೨೮ (೧೦೦)	೧೦ (೧೦೦)	೦೬ (೧೦೦)	೧೬ (೧೦೦)	೧೫ (೧೦೦)	೦೯ (೧೦೦)	೨೪ (೧೦೦)	೪೨ (೧೦೦)	೨೬ (೧೦೦)	೬೮ (೧೦೦)

ಕೋಷ್ಟಕ –೫.೩.
ಗ್ರಾಮಸಭೆ ಮತ್ತು ದಲಿತ ಪ್ರತಿನಿಧಿಗಳ ಸಮಸ್ಯೆಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೦೧	ಮಾಹಿತಿ ಸಿಗುವುದಿಲ್ಲ	೦೧ (೧೦೦)	೦೨ (೨೦)	೦೩ (೨೭.೨)	೦೧ (೫೦)	೦೨ (೨೫)	೦೩ (೩೦)	೦೧ (೫೦)	೦೦ (೦೦)	೦೧ (೭.೭)	೦೩ (೬೦)	೦೪ (೧೩.೮)	೦೭ (೨೦.೬)
೦೨	ನಿಯಮಿತವಾಗಿ ಸಭೆ ಕರೆಯುವುದಿಲ್ಲ	೦೦ (೦೦)	೦೨ (೨೦)	೦೨ (೧೮.೨)	೦೧ (೫೦)	೦೨ (೨೫)	೦೩ (೩೦)	೦೧ (೫೦)	೦೨ (೧೮.೨)	೦೩ (೨೩.೧)	೦೨ (೪೦)	೦೬ (೨೦.೭)	೦೮ (೨೩.೫)
೦೩	ಚರ್ಚೆ ನಡೆದಿರುವುದಿಲ್ಲ	೦೦ (೦೦)	೦೨ (೨೦)	೦೨ (೧೮.೨)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೨ (೬.೯)	೦೨ (೫.೯)
೦೪	ಅಧಿಕಾರಿಗಳ ಸಹಕಾರವಿಲ್ಲ	೦೦ (೦೦)	೦೧ (೧೦)	೦೧ (೯.೧)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೩.೪)	೦೧ (೨.೯)
೦೫	ಜನರ ನಿರಾಸಕ್ತಿ	೦೦ (೦೦)	೦೧ (೧೦)	೦೧ (೯.೧)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೯.೧)	೦೧ (೭.೭)	೦೦ (೦೦)	೦೨ (೬.೯)	೦೨ (೫.೯)
೦೬	ಮೇಲ್ಜಾತಿಯ ಅಸಹಕಾರ	೦೦ (೦೦)	೦೨ (೨೦)	೦೨ (೧೮.೨)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೨ (೬.೯)	೦೨ (೫.೯)
೦೭	ನಮ್ಮ ಕುಟುಂಬದವರು ಭಾಗವಹಿಸುತ್ತಾರೆ.	೦೦ (೦೦)	೦೧ (೦೦)	೦೦ (೦೦)	೦೦ (೦೦)	೦೪ (೫೦)	೦೪ (೪೦)	೦೦ (೦೦)	೦೮ (೭೨.೭)	೦೮ (೬೧.೫)	೦೦ (೦೦)	೧೨ (೪೧.೪)	೧೨ (೩೫.೩)
	ಒಟ್ಟು	೦೧ (೧೦೦)	೧೦ (೧೦೦)	೧೧ (೧೦೦)	೦೨ (೧೦೦)	೦೮ (೧೦೦)	೧೦ (೧೦೦)	೦೨ (೧೦೦)	೧೧ (೧೦೦)	೧೩ (೧೦೦)	೦೫ (೧೦೦)	೨೯ (೧೦೦)	೩೪ (೧೦೦)

ಕೋಷ್ಟಕ – ೫.೪

ನಿಯಮಿತವಾಗಿ ಗ್ರಾಮ ಪಂಚಾಯಿತಿ ಸಭೆಗೆ ಭಾಗವಹಿಸುವವರ ವಿವರ

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ನಿಯಮಿತವಾಗಿ ಭಾಗವಹಿಸುವವರ	೧೬ (೮೮.೯)	೧೫ (೭೧.೪)	೩೧ (೭೯.೫)	೧೦ (೮೩.೩)	೧೦ (೭೧.೪)	೨೦ (೭೬.೯)	೧೫ (೮೮.೨)	೧೫ (೭೫)	೩೦ (೮೧.೧)	೪೧ (೮೭.೨)	೪೦ (೭೨.೭)	೮೧ (೭೯.೪)
ನಿಯಮಿತವಾಗಿ ಭಾಗವಹಿಸುವವರು	೦೨ (೧೧.೧)	೦೬ (೨೮.೬)	೦೮ (೨೦.೫)	೦೨ (೧೬.೭)	೦೪ (೨೮.೬)	೦೬ (೨೩.೧)	೦೨ (೧೧.೮)	೦೫ (೨೫)	೦೭ (೧೮.೯)	೬ (೧೨.೮)	೧೫ (೨೭.೩)	೨೧ (೨೦.೬)
----	--	--	--	--	--	--	--	--	--	--	--	--
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ-೫.೫.

ಗ್ರಾಮ ಪಂಚಾಯತಿ ಸಭೆಯಲ್ಲಿ ವಿವಿಧ ವಿಷಯಗಳನ್ನು ಚರ್ಚಿಸುವ ಸದಸ್ಯರ ವಿವರ

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಮೂಲಭೂತ ಸೌಕರ್ಯಗಳ ಬಗ್ಗೆ	೧೩ (೮೧.೩)	೧೩ (೮೬.೭)	೨೬ (೮೩.೯)	೦೭ (೭೦)	೦೯ (೯೦)	೧೬ (೮೦)	೧೧ (೭೩.೩)	೧೩ (೮೬.೭)	೨೪ (೮೦)	೩೧ (೭೫.೬)	೩೫ (೮೭.೫)	೬೬ (೮೧.೫)
ಸುರಕ್ಷಿತವಲ್ಲದ ಸಮುದಾಯಗಳ ಹಿತಾಸಕ್ತಿಯ ಬಗ್ಗೆ	೦೧ (೬.೩)	೦೧ (೬.೭)	೦೨ (೬.೫)	೦೧ (೧೦)	೦೦ (೦೦)	೦೧ (೦೫)	೦೧ (೬.೭)	೦೦ (೦೦)	೦೧ (೩.೩)	೦೩ (೭.೩)	೦೧ (೨.೫)	೦೪ (೪.೯)
ಸಂಪನ್ಮೂಲಗಳ ಹಂಚಿಕೆಯ ಬಗ್ಗೆ	೦೨ (೧೨.೫)	೦೧ (೬.೭)	೦೩ (೯.೭)	೦೨ (೨೦)	೦೧ (೧೦)	೦೩ (೧೫)	೦೩ (೨೦)	೦೨ (೧೩.೩)	೦೫ (೧೬.೭)	೦೭ (೧೭.೧)	೦೪ (೧೦)	೧೧ (೧೩.೬)
ಒಟ್ಟು	೧೬ (೧೦೦)	೧೫ (೧೦೦)	೩೧ (೧೦೦)	೧೦ (೧೦೦)	೧೦ (೧೦೦)	೨೦ (೧೦೦)	೧೫ (೧೦೦)	೧೫ (೧೦೦)	೩೦ (೧೦೦)	೪೧ (೧೦೦)	೪೦ (೧೦೦)	೮೧ (೧೦೦)

ಕೋಷ್ಟಕ- ೫.೬

ಗ್ರಾಮ ಪಂಚಾಯತಿಯ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳ ವಿವರ

ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಭಾಗವಹಿಸಿದ್ದೇನೆ.	೧೨ (೬೬.೭)	೦೩ (೧೪.೩)	೧೫ (೩೮.೫)	೧೦ (೫೩.೩)	೦೫ (೩೫.೭)	೧೫ (೫೭.೭)	೧೩ (೭೬.೫)	೦೩ (೧೫.)	೧೬ (೪೩.೨)	೩೫ (೭೪.೫)	೧೧ (೨೦)	೪೬ (೪೫.೧)
ಭಾಗವಹಿಸಿಲ್ಲ.	೦೬ (೩೩.೩)	೧೮ (೮೫.೭)	೨೪ (೬೧.೫)	೦೨ (೧೬.೭)	೦೯ (೬೪.೩)	೧೧ (೪೨.೩)	೦೪ (೨೩.೫)	೧೭ (೮೫)	೨೧ (೫೬.೮)	೧೨ (೨೫.೫)	೪೪ (೮೦)	೫೬ (೫೪.೯)
ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ- ೫.೭

ಗ್ರಾಮ ಪಂಚಾಯತಿಯ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳ ವಿವರ

ವಿಷಯ		ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಮೂಲಭೂತ ಸೌಕರ್ಯಗಳ ಬಗ್ಗೆ	೦೫ (೪೧.೭)	೦೩ (೧೦೦)	೦೮ (೧೦೦)	೦೫ (೫೦)	೦೪ (೮೦)	೦೯ (೬೦)	೦೬ (೪೬.೨)	೦೨ (೬೬.೭)	೦೮ (೫೦)	೧೬ (೪೫.೭)	೦೯ (೮೧.೮)	೨೫ (೫೪.೩)
೨	ಕಾರ್ಯಕ್ರಮ ಮತ್ತು ಸಂಪನ್ಮೂಲಗಳ ಹಂಚಿಕೆಯ ಬಗ್ಗೆ	೦೩ (೨೫)	೦೦ (೦೦)	೦೩ (೨೦)	೦೨ (೨೦)	೦೦ (೦೦)	೦೨ (೧೩.೩)	೦೪ (೩೦.೮)	೦೦ (೦೦)	೦೪ (೨೫)	೦೯ (೨೫.೭)	೦೦ (೦೦)	೦೯ (೧೯.೬)
೩	ದಲಿತ ಪಂಚಾಯತ್ ಅಬಿಪ್ರಾಯ ಬಗ್ಗೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೪	ಗುತ್ತಿಗೆಯನ್ನಿ ಹಂಚಿಕೆ ಮಾಡುವ ಬಗ್ಗೆ	೦೪ (೩೩.೩)	೦೦ (೦೦)	೦೪ (೨೬.೭)	೦೩ (೩೦)	೦೧ (೨೦)	೦೪ (೨೬.೭)	೦೩ (೨೩)	೦೧ (೩೩.೩)	೦೪ (೨೫)	೧೦ (೨೮.೬)	೦೨ (೧೮.೨)	೧೨ (೨೬.೧)
೫	ಸುರಕ್ಷಿತವಲ್ಲದ ಜನರ ಅಭಿವೃದ್ಧಿಯ ಬಗ್ಗೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
	ಒಟ್ಟು	೧೨ (೧೦೦)	೦೩ (೧೦೦)	೧೫ (೧೦೦)	೧೦ (೧೦೦)	೦೫ (೧೦೦)	೧೫ (೧೦೦)	೧೩ (೧೦೦)	೦೩ (೧೦೦)	೧೬ (೧೦೦)	೩೫ (೧೦೦)	೧೧ (೧೦೦)	೪೬ (೧೦೦)

ಕೋಷ್ಟಕ-೫.೮

ಗ್ರಾಮ ಪಂಚಾಯತಿಯಲ್ಲಿ ಪ್ರಸ್ತಾವನೆಯನ್ನು ಮಂಡಿಸಿದ ಸದಸ್ಯರ ವಿವರ

ಕ್ರ.ಸಂ.	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಪ್ರಸ್ತಾವನೆ ಮಂಡಿಸಿದ್ದೇನೆ	೦೫ (೨೭.೮)	೦೨ (೯.೫)	೦೭ (೧೭.೯)	೦೨ (೧೬.೭)	೦೨ (೧೪.೩)	೦೪ (೧೫.೪)	೦೬ (೩೫.೩)	೦೩ (೧೫)	೦೯ (೨೪.೩)	೧೩ (೨೭.೭)	೦೭ (೧೨.೭)	೨೦ (೧೯.೬)
೨	ಪ್ರಸ್ತಾವನೆ ಮಂಡಿಸಿಲ್ಲ	೧೩ (೭೨.೨)	೧೯ (೯೦.೫)	೩೨ (೮೨.೧)	೧೦ (೮೩.೩)	೧೨ (೮೫.೭)	೨೨ (೮೪.೬)	೧೧ (೬೪.೭)	೧೭ ((೮೫)	೨೮ (೭೫.೭)	೩೪ (೭೨.೩)	೪೮ (೮೭.೩)	೮೨ (೮೦.೪)
	ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ-೫.೯

ಗ್ರಾಮ ಪಂಚಾಯತಿಯಲ್ಲಿ ವಿವಿಧ ಪ್ರಸ್ತಾವನೆಗಳನ್ನು ಮಂಡಿಸಿದ ಸದಸ್ಯರ ವಿವರ

ಕ್ರ.ಸಂ.	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಮೂಲಭೂತ ಸೌಕರ್ಯಗಳ ಬಗ್ಗೆ	೦೧ (೨೦)	೦೨ (೧೦೦)	೦೩ (೪೨.೮)	೦೧ (೫೦)	೦೨ (೧೦೦)	೦೩ (೭೫)	೦೨ (೩೩.೩)	೦೨ (೬೬.೭)	೦೪ (೪೪.೫)	೦೪ (೩೦.೭)	೦೬ (೮೫.೭)	೧೦ (೫೦)
೨	ಕಾರ್ಯಕ್ರಮಗಳ ಮತ್ತು ಸಂಪನ್ಮೂಲಗಳ ಹಂಚಿಕೆ ಬಗ್ಗೆ	೦೧ (೨೦)	೦೦ (೦೦)	೦೧ (೧೪.೩)	೦೦ (೦೦)	೦೦ (೦೦)	೦೦ (೦೦)	೦೨ (೩೩.೩)	೦೧ (೩೩.೩)	೦೩ (೩೩.೩)	೦೩ (೨೩.೧)	೦೧ (೧೪.೩)	೦೪ (೨೦)
೩	ದಲಿತ ಸಮುದಾಯದ ಅಭಿವೃದ್ಧಿಯ ಬಗ್ಗೆ	೦೧ (೨೦)	೦೦ (೦೦)	೦೧ (೧೪.೩)	೦೦ (೦೦)	೦೦ (೦೦)	೦೦ (೦೦)	೦೧ (೧೬.೭)	೦೦ (೦೦)	೦೧ (೧೧.೧)	೦೨ (೧೫.೪)	೦೦ (೦೦)	೦೨ (೧೦)
೪	ಗುತ್ತಿಗೆಯನ್ನು ಹಂಚಿಕೆ ಮಾಡುವ ಬಗ್ಗೆ	೦೧ (೨೦)	೦೦ (೦೦)	೦೧ (೧೪.೩)	೦೧ (೫೦)	೦೦ (೦೦)	೦೧ (೨೫)	೦೧ (೧೬.೭)	೦೦ (೦೦)	೦೧ (೧೧.೧)	೦೩ (೨೩.೧)	೦೦ (೦೦)	೦೩ (೧೫)
೫	ಸುರಕ್ಷಿತವಲ್ಲದ ಜನರ ಅಭಿವೃದ್ಧಿ ಬಗ್ಗೆ	೦೧ (೨೦)	೦೦ (೦೦)	೦೧ (೧೪.೩)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೭.೭)	೦೦ (೦೦)	೦೧ (೦೫)
	ಒಟ್ಟು	೦೫ (೧೦೦)	೦೨ (೧೦೦)	೦೭ (೧೦೦)	೦೨ (೧೦೦)	೦೨ (೧೦೦)	೦೪ (೧೦೦)	೦೬ (೧೦೦)	೦೩ (೧೦೦)	೦೯ (೧೦೦)	೧೩ (೧೦೦)	೦೭ (೧೦೦)	೨೦ (೧೦೦)

ಕೋಷ್ಟಕ– ೫.೧೦

ದಲಿತ ಪ್ರತಿನಿಧಿಗಳು ದಲಿತ ಸಮುದಾಯಕ್ಕೆ ಸ್ಪಂದನೆ

ಕ್ರಸಂ.	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಸಹಾಯ ಮಾಡಲಾಗಿದೆ.	೦೪ (೨೨.೨)	೦೨ (೯.೫)	೦೬ (೧೫.೪)	೦೪ (೩೩.೩)	೦೩ (೨೧.೪)	೦೭ (೨೬.೯)	೦೫ (೨೯.೪)	೦೩ (೧೫)	೦೮ (೨೧.೬)	೧೩ (೨೭.೭)	೦೮ (೧೪.೫)	೨೧ (೨೦.೬)
೨	ಸಹಾಯ ಮಾಡಲಾಗಿಲ್ಲ	೧೪ (೭೭.೮)	೧೯ (೯೦.೫)	೩೩ (೮೪.೬)	೦೮ (೬೬.೭)	೧೧ (೭೮.೬)	೧೯ (೭೩.೧)	೧೨ (೭೦.೬)	೧೭ ೮೫)	೨೯ (೭೮.೪)	೩೪ (೭೨.೩)	೪೭ (೮೫.೫)	೮೧ (೭೯.೪)
	ಒಟ್ಟು	೧೮ (೧೦೦)	೨೧ (೧೦೦)	೩೯ (೧೦೦)	೧೨ (೧೦೦)	೧೪ (೧೦೦)	೨೬ (೧೦೦)	೧೭ (೧೦೦)	೨೦ (೧೦೦)	೩೭ (೧೦೦)	೪೭ (೧೦೦)	೫೫ (೧೦೦)	೧೦೨ (೧೦೦)

ಕೋಷ್ಟಕ –೫.೧೧

ದಲಿತ ಸಮುದಾಯಕ್ಕೆ ವಿವಿಧ ರೀತಿಯಲ್ಲಿ ಸಹಾಯ ಮಾಡಿದ ಪ್ರತಿನಿಧಿಗಳ ವಿವರ

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಮೂಲಭೂತ ಸೌಕರ್ಯ ಒದಗಿಸಲಾಗಿದೆ.	೦೩ (೭೫)	೦೨ (೧೦೦)	೦೫ (೮೩.೩)	೦೩ (೭೫)	೦೩ (೧೦೦)	೦೬ (೮೫.೭)	೦೩ (೬೦)	೦೩ (೧೦೦)	೦೬ (೭೫)	೦೯ (೬೯.೨)	೦೮ (೧೦೦)	೧೭ (೮೦.೯)
೨	ಗ್ರಾಮದಲ್ಲಿ ತಾರತಮ್ಯ ನಿವಾರಣೆ ಮಾಡಲಾಗಿದೆ. ಸಹಾಯ ಮಾಡಲಾಗಿಲ್ಲ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೨೦)	೦೦ (೦೦)	೦೧ ((೧೨.೫)	೦೧ (೭.೭)	೦೦ (೦೦)	೦೧ (೪.೮)
೩	ದಲಿತರಿಗೆ ಸಂಪನ್ಮೂಲಗಳ ಹಂಚಿಕೆ ಮಾಡಲಾಗಿದೆ.	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೪	ಸರ್ಕಾರಿ ಕಾರ್ಯಕ್ರಮಗಳ ಮುಖ್ಯವಾದುದು ನೀಡಲಾಗಿದೆ.	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೫	ಹೆಚ್ಚು ದಲಿತರನ್ನು ಫಲಾನುಭವಿಯಾಗಿ ಗುರುತಿಸಲಾಗಿದೆ.	೦೧ (೨೫)	೦೦ (೦೦)	೦೧ (೧೬.೭)	೦೧ (೨೫)	೦೦ (೦೦)	೯೧ (೧೪.೩)	೦೧ (೨೦)	೦೦ (೦೦)	೦೧ (೧೨.೫)	೦೩ (೨೩.೧)	೦೦ (೦೦)	೦೩ (೧೪.೩)
	ಒಟ್ಟು	೦೪ (೧೦೦)	೦೨ (೧೦೦)	೦೬ (೧೦೦)	೦೪ (೧೦೦)	೦೩ (೧೦೦)	೦೭ (೧೦೦)	೦೫ (೧೦೦)	೦೩ (೧೦೦)	೦೮ (೧೦೦)	೧೩ (೧೦೦)	೦೮ (೧೦೦)	೨೧ (೧೦೦)

ಕೋಷ್ಟಕ -೫.೧೨

ದಲಿತ ಪುರುಷ ಮತ್ತು ಮಹಿಳಾ ಅಧ್ಯಕ್ಷರು ಸ್ವತಂತ್ರವಾಗಿ ಸಭೆ ಕರೆಯುವ ಬಗ್ಗೆ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಸ್ವತಂತ್ರವಾಗಿ ಸಭೆ ಕರೆಯಲಾಗಿದೆ.	೦೨ (೪೦)	೦೦ (೦೦)	೦೨ (೨೦)	೦೧ (೩೩.೧)	೦೧ (೨೫)	೦೨ (೨೮.೬)	೦೨ (೪೦)	೦೦ (೦೦)	೦೨(೨೦)	೦೫ (೩೮.೫)	೦೧ (೭.೧)	೦೬ (೨೨.೨)
೨	ಸ್ವತಂತ್ರವಾಗಿ ಸಭೆ ಕರೆಯಲಾಗಿಲ್ಲ.	೦೩ (೬೦)	೦೫ (೧೦೦)	೦೫ (೮೦)	೦೨ (೬೬.೭)	೦೩ (೭೫)	೦೫ (೭೧.೪)	೦೩ (೬೦)	೦೫ (೧೦೦)	೦೮ (೮೦)	೦೮ (೬೧.೫)	೧೩ (೯೨.೯)	೨೧ (೭೭.೮)
	ಒಟ್ಟು	೦೫ (೧೦೦)	೦೫ (೧೦೦)	೧೦ (೧೦೦)	೦೩ (೦೦)	೦೪ (೧೦೦)	೦೭ (೧೦೦)	೦೫ (೧೦೦)	೦೫ (೧೦೦)	೦೫ (೧೦೦)	೧೩ (೧೦೦)	೧೪ (೧೦೦)	೨೭ (೧೦೦)

ಕೋಷ್ಟಕ – ೫.೧೩

ಇತರರು ಸಲಹೆ ಸಭೆ ಕರೆಯುವ ಬಗ್ಗೆ ದಲಿತ ಪುರುಷ ಮತ್ತು ಮಹಿಳಾ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಅಧಿಕಾರಿಗಳ ನಿರ್ದೇಶನದ ಮೇರೆಗೆ	೦೨ (೦೬.೭)	೦೪ (೮೦)	೦೬ (೭೫)	೦೨ (೧೦೦)	೦೨ (೬೬.೭)	೦೪ (೮೦)	೦೨ (೬೬.೭)	೦೩ (೬೦)	೦೫ (೬೨.೫)	೦೪ (೫೦)	೦೮ (೬೧.೫)	೧೨ (೫೭.೧)
೨	ಮೇಲ್ಜಾತಿಯವರ ನಿರ್ದೇಶನದ ಮೇರೆಗೆ	೦೧ (೩೩.೩)	೦೧ (೨೦)	೦೨ (೨೫)	೦೦ (೦೦)	೦೧ (೩೩.೩)	೦೧ (೨೦)	೦೧ (೩೩.೩)	೦೨ (೪೦)	೦೩ (೩೭.೫)	೦೪ (೫೦)	೦೫ (೩೮.೫)	೦೯ (೪೨.೯)
೩	ಶ್ರೀಮಂತ ವರ್ಗದವರ ನಿರ್ದೇಶನದ ಮೇರೆಗೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೪	ನಮ್ಮ ಸಮುದಾಯದ ನಿರ್ದೇಶನದ ಮೇರೆಗೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೫	ಒಟ್ಟು	೦೩ (೧೦೦)	೦೫ (೧೦೦)	೦೮ (೧೦೦)	೦೨ (೦೦)	೦೩ (೧೦೦)	೦೫ (೧೦೦)	೦೩ (೧೦೦)	೦೫ (೧೦೦)	೦೮ (೧೦೦)	೦೮ (೧೦೦)	೧೩ (೧೦೦)	೨೧ (೧೦೦)

ಕೋಷ್ಟಕ-೫.೧೪

ಗ್ರಾಮ ಸಭೆಯಲ್ಲಿ ಅಧ್ಯಕ್ಷರಿಗೆ ವಹಿಸುವ ಬಗ್ಗೆ ಪುರುಷ ಮತ್ತು ಮಹಿಳಾ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ ಸೂಚಿ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ನಾವೇ ಅಧ್ಯಕ್ಷತೆ ವಹಿಸುತ್ತೇವೆ.	೦೪ (೮೦)	೦೧ (೨೦)	೦೫ (೫೦)	೦೩ (೧೦೦)	೦೧ (೨೫)	೦೪ (೫೭.೧)	೦೪ (೮೦)	೦೧ (೨೦)	೦೫ (೫೦)	೧೧ (೮೪.೬)	೦೩ (೨೧.೪)	೧೪ (೫೧.೯)
೨	ನಾವು ಅಧ್ಯಕ್ಷತೆ ವಹಿಸುವುದಿಲ್ಲ	೦೧ (೦೦)	೦೪ (೮೦)	೦೫ (೫೦)	೦೦ (೦೦)	೦೩ ((೭೫)	೦೩ (೪೨.೯)	೦೧ (೨೦)	೦೪ (೮೦)	೦೫ (೫೦)	೦೨ (೧೫.೪)	೧೧ (೭೮.೬)	೧೩ (೪೮.೧)
	ಒಟ್ಟು	೦೫ (೧೦೦)	೦೫ (೧೦೦)	೧೦ (೧೦೦)	೦೩ (೧೦೦)	೦೪ (೧೦೦)	೦೭ (೧೦೦)	೦೫ (೧೦೦)	೦೫ (೧೦೦)	೧೦ (೧೦೦)	೧೩ (೧೦೦)	೧೪ (೧೦೦)	೨೭ (೧೦೦)

ಕೋಷ್ಟಕ -೫.೧೫

ಬೇರೆಯವರು ಅಧ್ಯಕ್ಷತೆ ವಹಿಸುವ ಬಗ್ಗೆ ದಲಿತ ಪುರುಷ ಮತ್ತು ಮಹಿಳಾ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಅಧಿಕಾರಿಗಳ ಅಧ್ಯಕ್ಷತೆ ವಹಿಸುತ್ತಾರೆ.	೦೧ (೧೦೦)	೦೧ (೨೫)	೦೨ (೪೦)	೦೦ (೦೦)	೦೧ (೩೩.೮)	೦೧ (೩೩.೩)	೦೧ (೧೦೦)	೦೧ (೨೫)	೦೨ (೪೦)	೦೨ (೧೦೦)	೦೩ (೨೭.೩)	೦೫ (೩೮.೫)
೨	ಮೇಲ್ಜಾತಿಯವರೇ ಅಧ್ಯಕ್ಷತೆ ವಹಿಸುತ್ತಾರೆ.	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೩೩,೩)	೦೧ (೩೩.೩)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೯.೧)	೦೧ (೭.೭)
೩	ಶ್ರೀಮಂತ ವರ್ಗದವರೇ ಅಧ್ಯಕ್ಷತೆ ವಹಿಸುತ್ತಾರೆ.	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೪	ಪತಿ ಅಥವಾ ಮಗ	೦೦ (೦೦)	೦೩ (೭೫)	೦೩ (೬೦)	೦೦ (೦೦)	೦೧ (೩೩.೩)	೦೧ (೩೩.೩)	೦೦ (೦೦)	೦೩ (೭೫)	೦೩ (೬೦)	೦೦ (೦೦)	೦೭ (೬೩.೬)	೦೭ (೫೩.೮)
	ಒಟ್ಟು	೦೧ (೧೦೦)	೦೪ (೧೦೦)	೦೫ (೧೦೦)	೦೦ (೦೦)	೦೩ (೧೦೦)	೦೩ (೧೦೦)	೦೧ (೧೦೦)	೦೪ (೧೦೦)	೦೫ (೧೦೦)	೦೨ (೧೦೦)	೧೧ (೧೦೦)	೧೩ (೧೦೦)

ಕೋಷ್ಟಕ -೫.೧೬

ನಡವಳಿಗಳ ಬಗ್ಗೆ ಸ್ವತಂತ್ರವಾಗಿ ಸಹಿ ಹಾಕುವ ಬಗ್ಗೆ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಸ್ವತಂತ್ರವಾಗಿ ಸಹಿ	೦೨ (೪೦)	೦೦ (೦೦)	೦೨ (೨೦)	೦೧ (೩೩.೩)	೦೦ (೦೦)	೦೧ (೧೪.೩)	೦೨ (೪೦)	೦೧ (೨೦)	೦೩ (೩೦)	೦೫ (೩೮.೫)	೦೧ (೭.೧)	೦೬ (೨೨.೨)
೨	ಇತರರ ಸಲಹೆ ಮೇರೆಗೆ ಸಹಿ	೦೩ (೬೦)	೦೫ (೧೦೦)	೦೮ (೮೦)	೦೨ (೮೦)	೦೪ (೧೦೦)	೦೬ (೮೫.೭)	೦೩ (೬೦)	೦೪ (೮೦)	೦೭ (೭೦)	೦೮ (೬೧.೫)	೧೩ (೯೨.೯)	೨೧ (೭೭.೮)
	ಒಟ್ಟು	೦೫ (೧೦೦)	೦೫ (೧೦೦)	೧೦ (೧೦೦)	೦೩ (೦೦)	೦೪ (೧೦೦)	೦೭ (೧೦೦)	೦೫ (೧೦೦)	೦೫ (೧೦೦)	೧೦ (೧೦೦)	೧೩ (೧೦೦)	೧೪ (೧೦೦)	೨೭ (೧೦೦)

ಕೋಷ್ಟಕ–೫.೧೭

ಇತರರ ಸಲಹೆಯ ಮೇರೆಗೆ ನಡವಳಿಗೆ ಸಹಿ ಹಾಕುವ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಸ್ವತಂತ್ರವಾಗಿ ಸಹಿ	೦೨ (೬೬.೭)	೦೩ (೬೦)	೦೬ (೭೫)	೦೨ (೧೦೦)	೦೨ (೫೦)	೦೪ (೬೬.೭)	೦೨ (೬೬;೭)	೦೧ (೨೫)	೦೩ (೪೨.೮)	೦೬ (೭೫)	೦೬ (೪೬.೨)	೧೨ (೫೭.೧)
೨	ಇತರರ ಸಲಹೆ ಮೇರೆಗೆ ಸಹಿ	೦೧ (೩೩.೩)	೦೧ (೨೦)	೦೨ (೨೫)	೦೦ (೦೦)	೦೦ (೦೦)	೦೦ (೦೦)	೦೧ (೩೩.೩)	೦೧ (೨೫.)	೦೨ (೨೮.೬)	೦೨ (೨೫)	೦೨ (೧೫.೪)	೦೪ (೧೯.೧)
೩	ಶ್ರೀಮಂತ ವರ್ಗದವರ ನಿರ್ದೇಶನದ ಮೇರೆಗೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೪	ಪತಿ ಅಥವಾ ಮಗನ ನಿರ್ದೇಶನದ ಮೇರೆಗೆ	೦೦ (೦೦)	೦೧ (೨೦)	೦೦ (೦೦)	೦೦ (೦೦)	೦೨ (೫೦)	೦೨ (೩೩.೩)	೦೦ (೦೦)	೦೨ (೫೦)	೦೨ (೨೮.೬)	೦೦ (೦೦)	೦೫ (೩೮.೪)	೦೫ (೨೩.೮)
	ಒಟ್ಟು	೦೩ (೧೦೦)	೦೫ (೧೦೦)	೦೮ (೧೦೦)	೦೨ (೦೦)	೦೪ (೧೦೦)	೦೬ (೧೦೦)	೦೩ (೧೦೦)	೦೪ (೧೦೦)	೦೭ (೧೦೦)	೦೮ (೧೦೦)	೧೩ (೧೦೦)	೨೧ (೧೦೦)

ಕೋಷ್ಟಕ-೫.೧೮

ಸ್ವತಂತ್ರವಾಗಿ ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡಿದ ಬಗ್ಗೆ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಸ್ವತಂತ್ರವಾಗಿ ಅನುಮೋದನೆ	೦೪ (೮೦)	೦೦ (೦೦)	೦೪ (೪೦)	೦೧ (೩೩.೩)	೦೧ (೨೫)	೦೨ (೨೮.೬)	೦೧ (೨೦)	೦೧ (೨೦)	೦೨ (೨೦)	೦೬ (೪೬.೨)	೦೨ (೧೪.೩)	೦೮ (೨೯.೬)
೨	ಸ್ವತಂತ್ರವಾಗಿ ಅನುಮೋದನೆ ನೀಡಿಲ್ಲ.	೦೧ (೨೦)	೦೫ (೦೦)	೦೬ (೬೦)	೦೨ (೬೬.೭)	೦೩ (೭೫)	೦೫ (೭೧.೪)	೦೪ (೮೦)	೦೪ (೮೦)	೦೮ (೮೦)	೦೭ (೫೩.೮)	೧೨ (೮೫.೭)	೧೯ (೭೦.೪)
	ಒಟ್ಟು	೦೫ (೧೦೦)	೦೫ (೧೦೦)	೧೦ (೧೦೦)	೦೩ (೦೦)	೦೪ (೧೦೦)	೦೭ (೧೦೦)	೦೫ (೧೦೦)	೦೫ (೧೦೦)	೧೦ (೧೦೦)	೧೩ (೧೦೦)	೧೪ (೧೦೦)	೨೭ (೧೦೦)

ಕೋಷ್ಟಕ-೫.೧೯

ಇತರರ ಸಲಹೆ ಮೇರೆಗೆ ಗುತ್ತಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುಮೋದನೆ ನೀಡಿದ ಬಗ್ಗೆ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಅಧಿಕಾರಿಗಳ ನಿರ್ದೇಶನದ ಮೇರೆಗೆ	೦೧ (೧೦೦)	೦೧ (೨೦)	೦೨ (೩೩.೩)	೦೧ (೫೦)	೦೧ (೩೩.೩)	೦೨ (೪೦)	೦೩ (೭೫)	೦೧ (೨೫)	೦೪ (೫೦)	೦೫ (೭೧.೪)	೦೩ (೨೫)	೦೮ (೪೨.೧)
೨	ಮೇಲ್ಜಾತಿಯವರ ನಿರ್ದೇಶನದ ಮೇರೆಗೆ	೦೦ (೦೦)	೦೦ (೦೦)	೦೦ (೦೦)	೦೧ (೫೦)	೦೦ (೦೦)	೦೧ (೨೦)	೦೧ (೨೫)	೦೦ (೦೦)	೦೧ (೧೨.೫)	೦೨ (೨೮.೬)	೦೦ (೦೦)	೦೨ (೧೦.೫)
೩	ಶ್ರೀಮಂತ ವರ್ಗದವರ ನಿರ್ದೇಶನದ ಮೇರೆಗೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೪	ಪತಿ/ ಮಗನ ನಿರ್ದೇಶನದ ಮೇರೆಗೆ	೦೦ (೦೦)	೦೪ (೮೦)	೦೪ (೬೬.೭)	೦೦ (೦೦)	೦೨ (೬೬.೭)	೦೨ (೪೦)	೦೦ (೦೦)	೦೩ (೭೫)	೦೩ (೩೭.೫)	೦೦ (೦೦)	೦೯ (೭೫)	೦೯ (೪೭.೪)
	ಒಟ್ಟು	೦೧ (೧೦೦)	೦೫ (೧೦೦)	೦೬ (೧೦೦)	೦೨ (೦೦)	೦೩ (೧೦೦)	೦೫ (೧೦೦)	೦೪ (೧೦೦)	೦೪ (೧೦೦)	೦೮ (೧೦೦)	೦೭ (೧೦೦)	೧೨ (೧೦೦)	೧೯ (೧೦೦)

ಕೋಷ್ಟಕ-೫.೨೦

ಸ್ವತಂತ್ರವಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಸ್ವತಂತ್ರವಾಗಿ ಅನುದಾನ ಬಿಡುಗಡೆ ಮಾಡಿದವರು.	೦೪ (೮೦)	೦೦ (೦೦)	೦೪ (೪೦)	೦೧ (೩೩.೩)	೦೧ (೨೫)	೦೨ (೨೮.೬)	೦೧ (೨೦)	೦೧ (೨೦)	೦೨ (೨೦)	೦೬ (೪೬.೨)	೦೨ (೧೪.೩)	೦೮ (೨೯.೬)
೨	ಸ್ವತಂತ್ರವಾಗಿ ಅನುದಾನ ಬಿಡುಗಡೆ ಮಾಡದವರು	೦೧ (೨೦)	೦೫ (೦೦)	೦೬ (೬೦)	೦೨ (೬೬.೭)	೦೩ (೭೫)	೦೫ (೭೧.೪)	೦೪ (೮೦)	೦೪ (೮೦)	೦೮ (೮೦)	೦೭ (೫೩.೮)	೧೨ (೮೫.೭)	೦೯ (೭೦.೪)
	ಒಟ್ಟು	೦೫ (೧೦೦)	೦೫ (೧೦೦)	೧೦ (೧೦೦)	೦೩ (೦೦)	೦೪ (೧೦೦)	೦೭ (೧೦೦)	೦೫ (೧೦೦)	೦೫ (೧೦೦)	೧೦ (೧೦೦)	೧೩ (೧೦೦)	೧೪ (೧೦೦)	೨೭ (೧೦೦)

ಕೋಷ್ಟಕ-೫.೨೧

ಸ್ವತಂತ್ರವಾಗಿ ಅನುದಾನ ಬಿಡುಗಡೆ ಮಾಡದ ಬಗ್ಗೆ ಅಧ್ಯಕ್ಷರ ಅಭಿಪ್ರಾಯಗಳು

	ವಿಷಯ	ಬಳ್ಳಾರಿ			ಶಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಅಧಿಕಾರಿಗಳ ನಿರ್ದೇಶನದ ಮೇರೆಗೆ	೦೧ (೧೦೦)	೦೧ (೨೦)	೦೨ (೩೩.೩)	೦೧ (೫೦)	೦೧ (೩೩.೩)	೦೨ (೪೦)	೦೩ (೭೫)	೦೧ (೨೫)	೦೪ (೫೦)	೦೫ (೭೧.೪)	೦೩ (೨೫)	೦೮ (೪೨.೧)
೨	ಮೇಲ್ಜಾತಿಯವರ ನಿರ್ದೇಶನದ ಮೇರೆಗೆ	೦೦ (೦೦)	೦೦ (೦೦)	೦೦ (೦೦)	೦೧ (೫೦)	೦೦ (೦೦)	೦೧ (೨೦)	೦೧ (೨೫)	೦೦ (೦೦)	೦೧ (೧೨.೫)	೦೨ (೨೮.೬)	೦೦ (೦೦)	೦೨ (೧೦.೫)
೩	ಶ್ರೀಮಂತ ವರ್ಗದವರ ನಿರ್ದೇಶನದ ಮೇರೆಗೆ	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)
೪	ಪತಿ / ಮಗನ ನಿರ್ದೇಶನದ ಮೇರೆಗೆ	೦೦ (೦೦)	೦೪ (೮೦)	೦೪ (೬೬.೭)	೦೦ (೦೦)	೦೨ (೬೬.೭)	೦೨ (೪೦)	೦೦ (೦೦)	೦೩ (೭೫)	೦೩ (೩೭.೫)	೦೦ (೦೦)	೦೯ (೭೫)	೦೯ (೪೭.೪)
	ಒಟ್ಟು	೦೧ (೧೦೦)	೦೫ (೧೦೦)	೦೬ (೧೦೦)	೦೨ (೦೦)	೦೩ (೧೦೦)	೦೫ (೧೦೦)	೦೪ (೧೦೦)	೦೪ (೧೦೦)	೦೮ (೧೦೦)	೦೭ (೧೦೦)	೧೨ (೧೦೦)	೧೯ (೧೦೦)

ಕೋಷ್ಟಕ-೫.೨೨

ದಲಿತ ಸಮುದಾಯದ ಅಭಿವೃದ್ಧಿಗೆ ದಲಿತ ಅಧ್ಯಕ್ಷರು ಕೈಗೊಂಡ ಕ್ರಮಗಳ ವಿವರ

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.	೦೩ (೬೦)	೦೩ (೬೦)	೦೬ (೬೦)	೦೨ (೬೬.೭)	೦೪ (೧೦೦)	೦೬ (೮೫.೭)	೦೪ (೮೦)	೦೪ (೮೦)	೦೮ (೮೦)	೦೯ (೬೯.೨)	೧೧ (೭೮.೭)	೨೦ (೭೪.೧)
೨	ದಲಿತರ ತಾರತಮ್ಯಗಳನ್ನು ನಿವಾರಣೆ ಮಾಡಲಾಗಿದೆ.	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೨೦)	೦೧ (೧೦)	೦೦ (೦೦)	೦೧ (೭.೧)	೦೧ (೩.೭)
೩	ದಲಿತ ಸಮುದಾಯಕ್ಕೆ ಸಂಪನ್ಮೂಲ ಹಂಚಿಕೆ ಮಾಡಲಾಗಿದೆ.	೦೧ (೨೦)	೦೧ (೨೦)	೦೨ (೨೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೦ (೦೦)	೦೧ (೭.೭)	೦೧ (೭.೧)	೦೨ (೭.೪)
೪	ಸರ್ಕಾರಿ ಕಾರ್ಯಕ್ರಮಗಳ ಮುಖ್ಯ ಪಾಲು ನೀಡಲಾಗಿದೆ.	೦೦ (೦೦)	೦೧ (೨೦)	೦೧ (೨೦)	೦೧ (೧೦)	೦೧ (೩೩.೩)	೦೦ (೦೦)	೦೧ (೧೪.೩)	೦೦ (೦೦)	೦೦ (೦೦)	೦೧ (೭.೭)	೦೧ (೭.೧)	೦೨ (೭.೪)
೫	ಹೆಚ್ಚು ದಲಿತರನ್ನು ಫಲಾನುಭವಿಗಳನ್ನಾಗಿ ಗುರುತಿಸಲಾಗಿದೆ.	೦೧ (೨೦)	೦೦ (೦೦)	೦೧ (೧೦)	೦೦ (೦೦)	೦೦ (೦೦)	೦೦ (೦೦)	೦೧ (೨೦)	೦೦ (೦೦)	೦೧ (೧೦)	೦೨ (೧೫.೪)	೦೦ (೦೦)	೦೨ (೭.೪)
	ಒಟ್ಟು	೦೫ (೧೦೦)	೦೫ (೧೦೦)	೧೦ (೧೦೦)	೦೩ (೦೦)	೦೪ (೧೦೦)	೦೭ (೧೦೦)	೦೫ (೧೦೦)	೦೫ (೧೦೦)	೧೦ (೧೦೦)	೧೩ (೧೦೦)	೧೪ (೧೦೦)	೨೭ (೧೦೦)

ಕೋಷ್ಟಕ-೫.೨೩
ಆಡಳಿತ ನಿರ್ವಹಣೆಯ ತೃಪ್ತಿಯ ಬಗ್ಗೆ ಅಧ್ಯಕ್ಷರ ಅಭಿಪ್ರಾಯ

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ತೃಪ್ತಿಯಾಗಿದೆ	೦೩ (೬೦)	೦೨ (೪೦)	೦೫ (೫೦)	೦೨ (೬೬.೭)	೦೧ (೨೫)	೦೩ (೪೨.೯)	೦೩ (೬೦)	೦೨ (೪೦)	೦೫ (೫೦)	೦೮ (೬೧.೫)	೦೫ (೩೫.೭)	೧೩ (೪೮.೧)
೨	ತೃಪ್ತಿಯಾಗಿಲ್ಲ	೦೨ (೪೦)	೦೩ (೬೦)	೦೫ (೫೦)	೦೧ (೩೩.೩)	೦೩ (೭೫)	೦೪ (೫೭.೧)	೦೨ (೪೦)	೦೩ (೬೦)	೦೫ (೫೦)	೦೫ (೩೮.೫)	೦೯ (೬೪.೩)	೧೪ (೫೧.೯)
	ಒಟ್ಟು	೦೫ (೧೦೦)	೦೫ (೧೦೦)	೧೦ (೧೦೦)	೦೩ (೦೦)	೦೪ (೧೦೦)	೦೭ (೧೦೦)	೦೫ (೧೦೦)	೦೫ (೧೦೦)	೧೦ (೧೦೦)	೧೩ (೧೦೦)	೧೪ (೧೦೦)	೨೭ (೧೦೦)

ಕೋಷ್ಟಕ-೫.೨೪

ಆಡಳಿತ ನಿರ್ವಹಣೆಯಲ್ಲಿ ಅಧ್ಯಕ್ಷರು ಎದುರಿಸುತ್ತಿರುವ ಸಮಸ್ಯೆಗಳ ವಿವರ

	ವಿಷಯ	ಬಳ್ಳಾರಿ			ಸಿರುಗುಪ್ಪ			ಕೂಡ್ಲಿಗಿ			ಒಟ್ಟು		
		ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	ಅಧಿಕಾರಿಗಳ ಅಸಹಕಾರ	೦೧ (೫೦)	೦೦ (೦೦)	೦೧ (೨೦)	೦೦ (೦೦)	೦೦ (೦೦)	೦೦ (೦೦)	೦೧ (೫೦)	೦೦ (೦೦)	೦೧ (೨೦)	೦೨ (೪೦)	೦೦ (೦೦)	೦೨ (೪.೩)
೨	ಮೇಲ್ಜಾತಿಯಗಳ ಅಡ್ಡಿಗಳು	೦೧ (೫೦)	೦೦ (೦೦)	೦೧ (೨೦)	೦೦ (೦೦)	೦೦ (೦೦)	೦೦ (೦೦)	೦೧ (೫೦)	೦೦ (೦೦)	೦೧ (೨೦)	೦೨ (೪೦)	೦೦ (೦೦)	೦೨ (೧೪.೩)
೩	ಆಡಳಿತ ನಿರ್ವಹಣೆ ಅರ್ಥವಾಗುವುದಿಲ್ಲ	೦೦ (೦೦)	೦೧ (೩೩.೩)	೦೧ (೨೦)	೦೧ (೧೦೦)	೦೧ (೩೩.೩)	೦೨ (೫೦)	೦೦ (೦೦)	೦೧ (೩೩.೩)	೦೧ (೨೦)	೦೧ (೨೦)	೦೩ (೩೩.೩)	೦೪ (೨೮.೬)
೪	ಸ್ತ್ರೀಯರಿಗೆ ಆಡಳಿತದಲ್ಲಿ ಸ್ವಾತಂತ್ರ್ಯವಿಲ್ಲ	೦೦ (೦೦)	೦೧ (೩೩.೩)	೦೧ (೨೦)	೦೦ (೦೦)	೦೧ (೩೩.೩)	೦೧ (೨೫)	೦೦ (೦೦)	೦೧ (೩೩.೩)	೦೧ (೨೦)	೦೦ (೦೦)	೦೩ (೩೩.೩)	೦೩ (೨೧.೪)
೫	ಶಿಕ್ಷಣದ ಅಡ್ಡಿ	೦೦ (೦೦)	೦೧ (೩೩.೩)	೦೧ (೨೦)	೦೦ (೦೦)	೦೧ (೩೩.೩)	೦೧ (೨೫)	೦೦ (೦೦)	೦೧ (೩೩.೩)	೦೧ (೨೦)	೦೦ (೦೦)	೦೩ (೩೩.೩)	೦೩ (೨೧.೪)
	ಒಟ್ಟು	೦೨ (೧೦೦)	೦೩ (೧೦೦)	೦೫ (೧೦೦)	೦೧ (೦೦)	೦೩ (೧೦೦)	೦೪ (೧೦೦)	೦೨ (೧೦೦)	೦೩ (೧೦೦)	೦೫ (೧೦೦)	೦೫ (೧೦೦)	೦೯ (೧೦೦)	೧೪ (೧೦೦)

ಕೊನೆಟಿಪ್ಪಣಿ

೧. ರಜನ ಕೊಠಾರಿ, ಕ್ಯಾಸ್ಟ್ ಇನ್ ಇಂಡಿಯನ್ ಪಾಲಿಟಿಕ್ಸ್, ದೆಹಲಿ, ಓರಿಯನ್ ಲಾಂಗಮ್ಯಾನ್ ಪಬ್ಲಿಕೇಷನ್, ೧೯೫೪, ಪು.೬೮

೨ ಸಿ.ಎಸ್. ಅರಸಚನ್, ಕ್ಯಾಸ್ಟ್, ಕ್ಲಾಸ್ ಆಂಡ್ ಪೊಲಿಟಿಕ್ಸ್ , ನ್ಯೂಡೆಲ್ಲಿ, ಗ್ಯಾನ್ ಪಬ್ಲಿಕೆಷನ್ ಹೌಸ್, ೧೯೯೫, ಪು. ೮೬

೩ ಬಸಿರುದ್ದೀನ್ ಅಹಮ್ಮದ್ ಓಟಿಂಗ್ ಇನ್ ಇಂಡಿಯಾ– ಪೊಲಿಟಿಕಲ್ ಸರ್ಟಿಫಿಕೇಷನ್ ಆಫ್ ಇಂಡಿಯಾ' ಎಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾರ್ಷಿಕ ಸಂಖ್ಯೆ: ಜನೇವರಿ ೧೯೭೧ ಪು.೨೫೧

೪ ವೆಸ್ಟರ್ ಮಿಲ್‌ಬ್ರಾತ್, ಪೊಲಿಟಿಕಲ್ ಪಾರ್ಟಿ ಹೌ ಆಂಡ್ ವೈ ಡು ಫಿಷರ್ ಗೇಟ್ ಇನ್‌ವಾಲ್ವಾಡ್, ಚಿಕಾಗೋ, ರ್‍ಯಾಂಡ್ ಮ್ಯಾಕ್ ಪಬ್ಲಿಷಿಂಗ್, ೧೯೭೭,

೫ ಎಸ್.ಆರೇನ್‌ತನ್, ಪೂರ್ವೋಕ್ತ, ಪು.೮೬

೬ ಟಿ.ಆರ್.ಜಂಗಮ್ ಟೆಕ್ಸ್‌ಬುಕ್ ಆಫ್ ಪೊಲಿಟಿಕಲ್ ಸೋಷಿಯಾಲಜಿ, ನ್ಯೂಡೆಲ್ಲಿ, ಆಕ್ಸ್‌ಫಡ್ಸ್ ಯೂನಿವರ್ಸಿಟಿ ಪ್ರೆಸ್, ೧೯೮೨, ಪು.೧೮೧

೭ ಎ.ಕೆ.ಮುಖ್ಯೋಪಾಧ್ಯಾಯ, ಪೊಲಿಟಿಕಲ್ ಸೋಷಿಯಾಲಜಿ, ಕಲತ್ಕತ್ತಾ. ಕೆ.ವಿ. ಕೆ.ವಿ.ಭಾಗ್ವಿ ಆಂಡ್ ಕಂಪನಿ, ೧೯೮೦, ಪು.೧೨

೮ ಸಂಪ ಗುಹಾ, ಪೊಲಿಟಿಕಲ್ ಪಾರ್ಟಿಸಿಪೇಷನ್ ಆಫ್ ವುಮೆನ್ ಇನ ಚೇಂಜಿಂಗ್ ಸೊಸೈಟಿ, ಇಂಟರ್ ಇಂಡಿಯಾ ಪಬ್ಲಿಕೇಷನ್, ೧೯೯೬, ಪು.೨೪

೯. ಸಿಡ್ನಿವೆರ್ಬ ಮತ್ತು ಇತರರು, ಪಾರ್ಟಿಸಿಪೇಷನ್ ಆಂಡ್ ಇಕ್ವಾಲಿಟಿ, ಎ ಸೆವೆನ್ ನೇಷನ್, ಕಂಪ್ಯಾರಿಜನ್, ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ಪು.೪೬

೧೦. ವೆಸ್ಟರ್ ಮಿಲ್‌ಬ್ರಾತ್ ಆಂಡ್ ಎಂ.ಎಲ್.ಗೊಯೆಲ್, ಪು.೨

೧೧. ಮ್ಯಾಕ್‌ಕ್ಲೋಸ್ಕಿ, ಹೆಚ್. ಪೊಲಿಟಿಕಲ್ ಪಾರ್ಟಿಸಿಪೇಷನ್ ಎನ್ ಸೈಕ್ಲೋಪಿಡಿಯಾ, ಆಫ್ ಸೋಷಿಯಲ್ ಸೈನ್ಸಸ್, ನ್ಯೂಯಾರ್ಕ್, ಕ್ಯಾಲಿಯರ್, ಮ್ಯಾಕ್‌ಮಿಲನ್, ೧೯೬೮, ಪು.೨೫

೧೨. ಮಿಕಾಯಿಲ್ ರುಷ್ ಆಂಡ್ ಫಿಲಿಪ್ಸ್ ಆತೋಷ್, ಇಂಟ್ರಡಕ್ಷನ್ ಟು ಪೊಲಿಟಿಕಲ್ ಸೊಷಿಯಾಲಜಿ, ವೆಸಟರ್ನ್ ಪ್ರಿಂಟಿಂಗ್, ೧೯೭೧, ಪು.೭೫–೭೮

೧೩. ಯು.ಗುರುಮೂರ್ತಿ, ಪಂಚಾಯತ್ ರಾಜ್ ಆಂಡ್ ವೀಕರ್ ಸೆಕ್ಷನ್, ನ್ಯೂಡೆಲ್ಲಿ, ಆಸಿಸ್ ಪಬ್ಲಿಕೇಷನ್, ೧೯೮೭, ಪು.೫೬-೬೧

೧೪. ಸಿ.ಕೆ.ಶ್ಯಾಮಲಾ "ಎಲೆಕ್ಟೆಡ್ ರೆಪ್ರೆಂಜಂಟೇಷನ್ ಇನ್ ರೂರಲ್ ಡಿಸೆಂಟ್ರಲೈಜ್ಡ್ ಗವರ್‌ನೆನ್ಸ್; ಸೋಷಿಯೋ ಎಕನಾಮಿಕ್ ಅನಾಲಿಸಿಸ್ ಆಫ್ ಜಿಲ್ಲಾ ಪಂಚಾಯತ್ ಮೆಂಬರ್ಸ್ ಆಫ್ ಕರ್ನಾಟಕ, ಮ್ಯಾನ್ ಆಂಡ್ ಡೆವಲಪ್‌ಮೆಂಟ್ ಸಂಪುಟ. ಸಂ.೨೩-೨, ಜೂನ್. ೨೦೦೧, ಪು. ೮-೧೮

೧೫. ವಿಜಯಕುಮಾರ್, ಸೆಡ್ಯೂಲ್ಡ್ ಕ್ಯಾಸ್ಟ್ ಪಂಚಾಯತ್ ಪ್ರಧಾನ್ ಇನ್ ಇಂಡಿಯಾ ಎ ಸ್ಟಡೀ ಆಫ್ ವೆಸಟರ್ನ್, ಉತ್ತರ ಪ್ರದೇಶ, ಅಜಂತಾ ಪಬ್ಲಿಕೇಷನ್, ೧೯೮೯, ಪು.೬೬

೧೬. ಎಸ್.ಸುಮತಿ ಆಂಡ್ ವಿ ಸುದರ್ಶನ್, ವಾಟ್ ಡಸ್ ದ ನ್ಯೂ ಪಂಚಾಯತ್ ಸಿಸ್ಟಮ್ ಗ್ಯಾರಂಟೀ, ಎ ಕೇಸ್ ಸ್ಟಡೀ ಆಫ್ ಪ್ರಾಪರ್ಲಿ, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಆಗಸ್ಟ್ ೨೦, ೨೦೧೫, ಪು.೩೭೫೧-೩೭೫೭.

೧೭. ಆರ್.ವೆಂಕಟರವಿ, ಎ ಸ್ಟಡೀ ಆನ್ ಸೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ಸ್ ಇನ್ ಪಂಚಾಯತ್ ರಾಜ್ ಇನ್ಸಿಟಿಟ್ಯೂಷನ್ ಇನ್ ನೆಲ್ಲೂರು ಡಿಸ್ಟ್ರಿಕ್ ಆಫ್ ಆಂಧ್ರಪ್ರದೇಶ, ಸ್ಟಡೀ ರಿಪೋರ್ಟ್, ಕೌನ್ಸಿಲ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್, ಹೈದರಾಬಾದ್, ೨೦೦೨, ಪು.೮೩-೮೫

೧೮. ಪ್ರತ್ಯುಷ್ಣ ಪಟ್ನಾಯಕ್, ಅಫಿರ್‌ಮೇಟಿವ್ ಯಾಕ್ಷನ್ ಆಂಡ್ ರೆಪ್ರೆಂಜಂಟೇಷನ್ ಆಫ್ ವೀಕರ್ ಸೆಕ್ಷನ್, ಪಾರ್ಟಿಸಿಪೇಷನ್ ಆಂಡ್ ಅಕೌಂಟಬಿಲಿಟಿ ಇನ್ ಓರಿಸ್ಸಾ ಪಂಚಾಯತ್, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಅಕ್ಟೋಬರ್ ೨೯, ೨೦೦೫. ಪು. ೪೭೫೩-೪೭೬೧

೧೯. ಪುಲಿಯಾನಿ, ಪು.ಸಂ.೪೦

೨೦. ಪುಲಿಯಾನಿ:ಪು.ಸಂ.೨೯.೩೦

೨೧. ನಾಗೇಶ್ವರರಾವ್, ಎ, ಡೆಮಾಕ್ರೆಟಿಕ್ ಡಿಸೆಂಟ್ರಲೈಜೇಷನ್ ಆಂಡ್ ಎಂಪವರ್‌ಮೆಂಟ್ ಆಫ್ ದಲಿತ್ಸ್: ಎ. ಡಯಾಕ್ರಾನಿಕ್ ಸ್ಟಡೀ ಆಫ್ ಟು ವಿಲೇಜ್ ಇನ್ ಆಂಧ್ರಪ್ರದೇಶ ಡಿಪಾಟ್‌ಮೆಂಟ್ ಆಫ್ ಪೊಲಿಟಿಕಲ್ ಸೈನ್ಸ್, ಸ್ಕೂಲ್ ಆಫ್ ಸೋಷಿಯಲ್ ಸೈನ್ಸ್, ಯೂನಿವರ್ಸಿಟಿ ಆಫ್ ಹೈದರಾಬಾದ್‌ಗೆ, ಪಿಎಚ್.ಡಿ ಪದವಿಗಾಗಿ ಸಲ್ಲಿಸಲಾದ ಅಪ್ರಕಟಿತ ಪಿಹೆಚ್.ಡಿ ಮಹಾ ಪ್ರಬಂಧ,

೨೦೧೧, ಪು.ಸಂ.೧೨೪

೨೨. ಪುಲಿಯಾನಿ, ಪು. ೯೫

೨೩. ಅದೇ ಪು. ೫೨-೫೩

೨೪. ಅದೇ ಪು.೧೦೦-೧೦೧

೨೫. ಅದೇ ಪು. ೯೫-೯೮

೨೬. ಅದೇ ಪು.ಪು.೮೬

೨೭. ಅದೇ ಪು. ೮೬-೮೭

೨೮. ಅದೇ ಪು. ೮೮

೨೯. ಅದೇ ಪು.೯೭

೩೦. ಅದೇ ಪು.೨೧೫

೩೧. ಅದೇ ಪು.೨೧೫

೩೨. ಅದೇ ಪು.೨೧೫

೩೩. ಅದೇ ಪು.೨೧೬

ಅಧ್ಯಾಯ–೬
ಅಧ್ಯಯನದ ಫಲಿತಗಳು ಸಲಹೆಗಳು

ಅಧ್ಯಾಯ – ೬

ಅಧ್ಯಯನದ ಫಲಿತಗಳು:

ಅಧ್ಯಯನದ ಫಲಿತಗಳು: ಕರ್ನಾಟಕದ ಗ್ರಾಮ ಪಂಚಾಯಿತಿ ವ್ಯವಸ್ಥೆಯ ಅತ್ಯಂತ ಕೆಳಸ್ತರದ ಸಂಸ್ಥೆಗಳಾದ ಗ್ರಾಮ ಪಂಚಾಯಿತಿಗಳಲ್ಲಿ ದಲಿತ ಪ್ರತಿನಿಧಿಗಳು ಹೇಗೆ ಪಾಲ್ಗೊಳ್ಳುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿತ್ತು. ಈ ಉದ್ದೇಶದ ಅನುಗುಣವಾಗಿ ನಾಲ್ಕನೇ ಅಧ್ಯಾಯದಲ್ಲಿ ದಲಿತ ಪ್ರತಿನಿಧಿಗಳಿಗೆ ಇರುವ ದಲಿತ ಅಸ್ಮಿತೆಯ ಅರಿವು ಮತ್ತು ಪಂಚಾಯತ್ ಕಾನೂನುಗಳ ಬಗ್ಗೆ ಇರುವ ಗ್ರಹಿಕೆಯನ್ನು ವಿವಿಧ ಅಧ್ಯಾಯಗಳ ಚರ್ಚೆ ಹಾಗೂ ಕ್ಷೇತ್ರ ಅಧ್ಯಯನವನ್ನು ಆಧರಿಸಿದ ದತ್ತಾಂಶಗಳ ಮೂಲಕ ಕಂಡುಕೊಳ್ಳಲಾಗಿದೆ.

ಅದೇ ಪ್ರಕಾರ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಪಂಚಾಯತ್ ಅಧಿಕಾರ ಪ್ರಕ್ರಿಯೆಯಲ್ಲಿ ಹೇಳಿ ಭಾಗವಹಿಸುತ್ತಾರೆ ಮತ್ತು ಅಧಿನಿಯಮದ ಮೂಲಕ ಅಧ್ಯಕ್ಷ ಸ್ಥಾನವನ್ನು ದಲಿತ ಪ್ರತಿನಿಧಿಗಳು ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ವಿವಿಧ ಅಧ್ಯಯನಗಳ ಚರ್ಚೆ, ಕ್ಷೇತ್ರಕಾರ್ಯ ಮತ್ತು ಅವಲೋಕನಗಳ ಮೂಲಕ, ಅವರ ಪಾಲ್ಗೊಳ್ಳುವಿಕೆಯ ವಿವಿಧ ಆಯಾಮಗಳನ್ನು ಕಂಡುಕೊಳ್ಳಲಾಗಿದೆ.

ಭಾರತ ಸ್ವಾತಂತ್ರ್ಯದ ೭೦ ದಶಕಗಳ ನಂತರವೂ ದಲಿತರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಯಾವುದೇ ಗಂಭೀರ ಪರಿಣಾಮಗಳು ಕಂಡು ಬಂದಿಲ್ಲ. ಈ ಹಿನ್ನಲೆಯಲ್ಲಿ ದಲಿತರಿಗೆ ತಮ್ಮದೇಯಾದ ಅಸ್ಮಿತೆಗಳು ರೂಪುಗೊಂಡಿದೆ. ಅನಕ್ಷರತೆ, ಬಡತನ, ಅಸ್ಪೃಶ್ಯತೆ ಮತ್ತು ಸಾಮಾಜಿಕ ತಾರತಮ್ಯವನ್ನು ಎದುರಿಸುತ್ತಿದ್ದಾರೆ. ದಲಿತರಿಗೆ ಯಾವುದೇ ಅರ್ಹತೆ ಇಲ್ಲದಿದ್ದರೂ ಶಿಕ್ಷಣ, ಉದ್ಯೋಗ ಮತ್ತು ರಾಜಕಾರಣದಲ್ಲಿ ಪುಕ್ಕಟೆಯಾಗಿ ವಿಶೇಷ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ ಎನ್ನುವ ಆರೋಪವನ್ನು ಮೇಲ್ಜಾತಿಗಳಿಂದ ಕೇಳಿ ಬರುತ್ತಿದೆ. ಇವೆಲ್ಲವೂ ದಲಿತ ಅಸ್ಮಿತೆಗಳಾಗಿ ಇಂದಿಗೂ ಮುಂದುವರೆದಿವೆ. ಈ ಅಸ್ಮಿತೆಗಳ ಫಲಿತಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

೧) ಮೀಸಲಾತಿ:

ಮೀಸಲಾತಿಯು ದಲಿತ ಸಮುದಾಯಗಳ ವಿಶೇಷ ಅಸ್ಮಿತೆಗಳಾಗಿ ಮುಂದುವರೆದಿದೆ. ಮೀಸಲಾತಿಯನ್ನು ಭಾರತದ ಅಸಮಾನ ಮತ್ತು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಸರಿಪಡಿಸುವ ಉತ್ತಮ ವಿಧಾನವೆಂದು ಗ್ರಹಿಸಲಾಗಿದೆ. ಮೀಸಲಾತಿಯನ್ನು ಸಕಾರಾತ್ಮಕ ತಾರತಮ್ಯ, ವಿರುದ್ಧ ಗತಿಯ ತಾರತಮ್ಯ ಅಥವಾ ಪರಿಹಾರಾತ್ಮಕ ತಾರತಮ್ಯವೆಂದು ಗ್ರಹಿಸಲಾಗುತ್ತದೆ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಮೊದಲುಗೊಂಡು ಲೋಕಸಭೆಯ ಸ್ಥಾನಗಳವರೆಗೆ, ದಲಿತರಿಗೆ ಮೀಸಲಾತಿಯು ನೀಡಲಾಗಿದೆ. ಇಂತಹ ಮೀಸಲಾತಿಯ ಉಪಯೋಗದ ಬಗ್ಗೆ, ದಲಿತ ಪ್ರತಿನಿಧಿಗಳ ಗ್ರಹಿಕೆಗಳು ಅತ್ಯಂತ ಕುತೂಹಲಕರವಾಗಿವೆ.

ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ.೩೫.೩ ರಷ್ಟು ದಲಿತ ಪ್ರತಿನಿಧಿಗಳಿಗ ಮಾತ್ರ ಮೀಸಲಾತಿಯ ಉಪಯೋಗದ ಅರಿವು ಇದ್ದು, ಶೇಕಡ ೫೦ ರಷ್ಟು ದಲಿತ ಪ್ರತಿನಿಧಿಗಳಿಗೆ ಮೀಸಲಾತಿಯ ಉಪಯೋಗದ ಅರಿವು ಇಲ್ಲ. ಫಲಿತಗಳು ಹೇಳುವ ಪ್ರಕಾರ ದಲಿತರಿಗೆ ನೀಡಿದ ಮೀಸಲಾತಿಯು ಹೊಸ ರಾಜಕೀಯ ಸಂಸ್ಕೃತಿಯನ್ನು ಕಟ್ಟಿ ಹಾಕುವಲ್ಲಿ ವಿಫಲವಾಗಿದೆ.

ಮೀಸಲಾತಿ ಪ್ರಮಾಣ: ಮೀಸಲಾತಿಯು ಶೋಷಿತ ಸಮುದಾಯಗಳಿಗೆ ನೀಡಿರುವ ಪ್ರಮುಖ ಅಸ್ತ್ರವಾಗಿದ್ದು, ಇದರ ಮೂಲಕ ನಿರ್ಲಕ್ಷಿತ ಸಮುದಾಯಗಳು ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಳ್ಳುತ್ತಾರೆ ಎಂದು ಗ್ರಹಿಸಲಾಗಿದೆ. ಇದೇ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೨೫ರಷ್ಟು ದಲಿತ ಸಮುದಾಯಗಳಿಗೆ ಇಂದು ಅಂದಾಜಿಸಲಾಗಿದೆ. ಈ ಸಮುದಾಯಗಳಿಗೆ ಕೇವಲ ಶೇಕಡ ೧೮% ರಷ್ಟು ಮೀಸಲಾತಿಯನ್ನು ಒದಗಿಸಲಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಶೇಕಡ ೩೩ ರಷ್ಟು ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ದಲಿತ ಸಮುದಾಯಗಳಿಗೆ ನಿಗದಿಪಡಿಸಿದ ಮೀಸಲಾತಿಯು ಆ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ನೀಡಲಾಗಿಲ್ಲ ಎಂದು ವಾದಗಳು ಕೇಳಿ ಬರುತ್ತಿವೆ.

ಕ್ಷೇತ್ರ ಕಾರ್ಯ ಫಲಿತಗಳು ಹೇಳುವ ಪ್ರಕಾರ ಶೇಕಡ ೩೫.೧ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಪಂಚಾಯತ್‌ಗಳಲ್ಲಿ ನಿಗದಿಪಡಿಸಿರುವ ಮೀಸಲಾತಿ ಪ್ರಮಾಣದ ಬಗ್ಗೆ

ತೃಪ್ತಿ ಇದ್ದು, ಶೇಕಡ ೪೧.೨ ರಷ್ಟು ದಲಿತ ಪ್ರತಿನಿಧಿಗಳಿಗೆ ಮೀಸಲಾತಿ ಪ್ರಮಾಣ ತೃಪ್ತಿ ತಂದಿಲ್ಲ. ಖೇದಕರ ಸಂಗತಿ ಎಂದರೆ ಶೇಕಡ ೫೧.೪ ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮ ಪಂಚಾಯತ್‌ಗಳಲ್ಲಿ ದಲಿತರಿಗೆ ನಿಗದಿಪಡಿಸಿದ ಮೀಸಲಾತಿಯ ಪ್ರಮಾಣದ ಅರಿವು ಇಲ್ಲ.

ದಲಿತ ಅಭಿವೃದ್ಧಿ ಮತ್ತು ದಲಿತ ಸಂಘಟನೆಗಳು:

ಅಭಿವೃದ್ಧಿ ವಂಚಿತರಾದ ಸಮಾಜದ ಅಂಚಿಗೆ ತಳ್ಳಲ್ಪಟ್ಟ ದಲಿತ ಸಮುದಾಯಗಳಿಗೆ ದಲಿತ ಸಂಘಟನೆಗಳ ಅಗತ್ಯವಿದೆ. ಸಂಘಟನೆಗಳು ರೂಪಿಸುವ ಚಳುವಳಿ ಮತ್ತು ಹೋರಾಟಗಳಿಂದ ಸಮುದಾಯದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಗ್ರಹಿಸಲಾಗಿದೆ. ದಲಿತ ಸಮಸ್ಯೆಗಳಿಗಾಗಿ ಹೋರಾಡುವ ಸಂಘಟನೆಗಳೊಂದಿಗೆ ಗುರುತಿಸಿಕೊಳ್ಳುವುದು ದಲಿತ ಸಮುದಾಯದ ಪ್ರಮುಖ ಅಸ್ಮಿತೆ ಎಂದು ಗ್ರಹಿಸಲಾಗುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ದಲಿತ ಸಂಘರ್ಷ ಸಮಿತಿ ಅಥವಾ ಸಂಘ, ಬಾಬುಜಗಜೀವನ್‌ರಾಂ ಸಂಘ ಮತ್ತು ರೈತ ಸಂಘಗಳು ಕ್ರಿಯಾಶೀಲವಾಗಿವೆ. ದಲಿತ ಸಮುದಾಯದ ವಿವಿಧ ಸಮಸ್ಯೆಗಳಿಗೆ ಹೋರಾಟಗಳು ಮತ್ತು ಚಳುವಳಿಯ ಮೂಲಕ ಉತ್ತರಗಳನ್ನು ಕಂಡುಕೊಳ್ಳುತ್ತಿದೆ. ಈ ಸಂಘಟನೆಗಳು ದಲಿತ ಸಮುದಾಯದ ಅಭಿವೃದ್ಧಿಗೆ ಅಗತ್ಯ ಎನ್ನುವುದನ್ನು ದಲಿತ ಪ್ರತಿನಿಧಿಗಳು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೫೭.೮ ರಷ್ಟು ಪ್ರತಿನಿಧಿಗಳು ಸಂಘಟನೆಗಳು ಅಗತ್ಯವೆಂದು ಭಾವಿಸುತ್ತಾರೆ. ಆದರೆ ಶೇಕಡ ೩೪.೪ ರಷ್ಟು ದಲಿತ ಪ್ರತಿನಿಧಿಗಳಿಗೆ ದಲಿತ ಸಮುದಾಯದ ಅಭಿವೃದ್ಧಿಯಲ್ಲಿ ದಲಿತ ಸಂಘಟನೆಗಳ ಪಾತ್ರದ ಅರಿವು ಇಲ್ಲ. ಸಮಾಧಾನಕರ ಸಂಗತಿ ಎಂದರೆ ಬಹುತೇಕ ದಲಿತ ಪ್ರತಿನಿಧಿಗಳಿಗೆ ದಲಿತ ಸಂಘಟನೆಗಳ ಮಹತ್ವದ ಅರಿವು ಇದೆ. ಆದರೆ ವಿಷಾದಕರ ಸಂಗಾತಿ ಎಂದರೆ ಬಹುತೇಕ ದಲಿತ ಮಹಿಳಾ ಪ್ರತಿನಿಧಿಗಳಿಗೆ ದಲಿತ ಸಂಘಟನೆಗಳ ಮಹತ್ವದ ಅರಿವು ಇಲ್ಲ.

ದಲಿತರು ಮತ್ತು ದಲಿತ ಸಂಘರ್ಷ ಸಮಿತಿ, ಕರ್ನಾಟಕದಲ್ಲಿ ೮೦ರ ದಶಕದಲ್ಲಿ ದಲಿತರ ಸ್ವಾಭಿಮಾನದ ಮತ್ತು ಹೋರಾಟದ ಪ್ರತೀಕವಾಗಿ ದಲಿತ ಸಂಘರ್ಷ ಸಮಿತಿ ಹುಟ್ಟಿಕೊಂಡಿದೆ. ಈ ಸಂಘಟನೆಯು ಅನಕ್ಷರಸ್ಥರು, ಕೂಲಿ ಕಾರ್ಮಿಕರು ಮತ್ತು ಬಡವರನ್ನು ಒಳಗೊಂಡು ಎಲ್ಲರ ಮನಮುಟ್ಟವಲ್ಲಿ ಯಶಸ್ವಿಯಾಯಿತು. ಅಂತರ್ಜಾತಿ ವಿವಾಹ, ಮತಾಂತರ, ಅಸ್ಪೃಶ್ಯತೆ ನಿವಾರಣೆ, ಜಾತಿ ನಿರ್ಮೂಲನಾ ಚಳುವಳಿ, ಮುಂತಾದ ಕ್ಷೇತ್ರಗಳಲ್ಲಿ ದಲಿತರಿಗೆ ಸಾಮಾಜಿಕ ನ್ಯಾಯ, ಒದಗಿಸಿಕೊಡುವಲ್ಲಿ ಯಶಸ್ವಿಯಾಯಿತು. ಹಾಗಾಗಿ ದಲಿತ ಸಂಘರ್ಷ ಸಮಿತಿಯು

ಇಂದಿಗೂ ದಲಿತ ಸಮುದಾಯದ ಅಸ್ಮಿತೆಯಾಗಿ ಮುಂದುವರೆದಿದೆ. ಈ ಅಸ್ಮಿತೆಯ ಬಗ್ಗೆ ದಲಿತ ಪ್ರತಿನಿಧಿಗಳ ಗ್ರಹಿಕೆ ಕುತೂಹಲಕಾರಿಯಾಗಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೨೭.೫ ರಷ್ಟು ಪ್ರತಿನಿಧಿಗಳಿಗೆ ಮಾತ್ರ ದಲಿತ ಸಂಘರ್ಷ ಸಮಿತಿಯ ಹೋರಾಟದ ಗ್ರಹಿಕೆಯಿದೆ. ಶೇಕಡ ೩೯.೨ ರಷ್ಟು ದಲಿತ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ಹೋರಾಟದ ಪರಿಣಾಮಗಳ ಗ್ರಹಿಕೆ ಇಲ್ಲ. ದುರದೃಷ್ಟಕರ ಸಂಗತಿ ಎಂದರೆ ಶೇಕಡ ೬೦% ರಷ್ಟು ದಲಿತ ಮಹಿಳಾ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ಹೋರಾಟಗಳ ಗ್ರಹಿಕೆ ಇಲ್ಲ.

ದಲಿತ ಸಂಘರ್ಷ ಸಮಿತಿ ಮತ್ತು ದಲಿತರ ಜೀವನ ಪರಿವರ್ತನೆಗಳು:

ಹಿಂದಿನ ಚರ್ಚೆಯಲ್ಲಿ ಗುರುತಿಸಿರುವಂತೆ ಬಹುಸಂಖ್ಯಾತ ದಲಿತ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ಹೋರಾಟಗಳ ಗ್ರಹಿಕೆ ಇಲ್ಲ. ಆದರೆ ತಕ್ಕಮಟ್ಟಿಗೆ ದಲಿತ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ಹೋರಾಟದಿಂದಾದ ಜೀವನ ಸಂವರ್ತನೆಗಳನ್ನು ಗುರುತಿಸುತ್ತಾರೆ. ಶೇಕಡ ೨೧.೪ ರಷ್ಟು ದಲಿತ ಪ್ರತಿನಿಧಿಗಳ ಅಭಿಪ್ರಾಯದ ಪ್ರಕಾರ ಇತರೆ ಸಮುದಾಯದಿಂದ ದಲಿತರಿಗೆ ಕಿರುಕುಳವಾದಾಗ ದಲಿತ ಸಂಘರ್ಷ ಸಮಿತಿಯಿಂದ ರಕ್ಷಣೆ ಸಿರುತ್ತದೆ. ಶೇ.೨೧.೪ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ದಲಿತರ ಹೊಲಗದ್ದೆಗಳಿಗೆ ಸಂಬಂಧಿಸಿದಂತೆ ಸಮಿತಿಯು ದಲಿತರಿಗೆ ರಕ್ಷಣೆ ನೀಡುತ್ತದೆ. ಶೇಕಡ ೧೮.೩ರಷ್ಟು ದಲಿತ ಪ್ರತಿನಿಧಿಗಳ ಅಭಿಪ್ರಾಯಗಳ ಪ್ರಕಾರ ಸರ್ಕಾರಿ ಇಲಾಖೆಗಳು ಮತ್ತು ಬ್ಯಾಂಕುಗಳಿಂದ ಸಾಲ ಕೊಡಿಸಲು ಸಮಿತಿ ಸಹಾಯ ನೀಡುತ್ತವೆ. ಶೇಕಡ ೪೨.೯ ರಷ್ಟು ದಲಿತ ಪ್ರತಿನಿಧಿಗಳ ಅಭಿಪ್ರಾಯದ ಪ್ರಕಾರ ಸರ್ಕಾರಿ ಕಛೇರಿಗಳಲ್ಲಿ ದಲಿತರ ಕೆಲಸಗಳು ವಿಳಂಬವಾದಾಗ ದಲಿತ ಸಂಘರ್ಷ ಸಮಿತಿಯುವರು ಸಹಾಯಕ್ಕೆ ನಿಲ್ಲುತ್ತಾರೆ.

ದಲಿತರು ಮತ್ತು ದಲಿತ ಸಂಘರ್ಷ ಸಮಿತಿಯ ವಿರೋಧಭಾಸಗಳು

ಹಿಂದಿನ ಚರ್ಚೆಯಲ್ಲಿ ಕಂಡುಕೊಂಡಿರುವಂತೆ ದಲಿತ ಸಂಘರ್ಷ ಸಮಿತಿಯು ಹೋರಾಟಗಳ ಮೂಲಕ ಸಾಧಿಸಿಕೊಂಡ ಅಂತರ್‌ಜಾತಿಯ ವಿವಾಹಗಳು, ಮತಾಂತರಕ್ಕೆ ಉತ್ತೇಜನ, ಅಸ್ಪೃಶ್ಯತೆ ನಿವಾರಣೆ, ಜಾತಿ ನಿರ್ಮೂಲನಾ ಚಳುವಳಿ ಮತ್ತು ಭೂ ಹೋರಾಟಗಳು ಇಂದಿನ ತಲೆಮಾರಿನ ದಲಿತರ ಗ್ರಹಿಕೆಯ ಭಾಗವಾಗಿ ಉಳಿದಿಲ್ಲ. ದಲಿತ ಸಂಘರ್ಷ ಸಮಿತಿಯಲ್ಲಿ ವಿವಿಧ ಬಣಗಳು ಬಲಿಷ್ಠಗೊಂಡು ಸೈದ್ಧಾಂತಿಕ ಚಳುವಳಿ

ವಿಫುಲವಾಗಿ ನಾಯಕರಲ್ಲಿ ಸ್ಪರ್ಧೆಗಳು, ಹೆಚ್ಚಿದವು. ಹಾಗಾಗಿ ದಲಿತ ಸಂಘರ್ಷ ಸಮಿತಿಯ ಸದಸ್ಯರು ದಲಿತ ಸಮುದಾಯಕ್ಕೆ ಸಹಾಯದ ಬದಲಾಗಿ ವಂಚನೆ ಮಾಡುವ, ಕೃತ್ಯಕ್ಕೆ ಇಳಿದಿದ್ದು, ಒಂದು ದುರಂತದ ಸಂಗತಿ. ಈಲ್ಲೆಯ ದತ್ತಾಂಶಗಳು ಹೇಳುವ ಪ್ರಕಾರ ಶೇ.೭.೫ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ಸಮಿತಿಯಲ್ಲಿ ವಿವಿಧ ಒಳಗಾಗಿರುವುದರಿಂದ ದಲಿತರಿಗೆ ಸ್ಪಂದಿಸುತ್ತಿಲ್ಲ. ಶೇಕಡ ೪೦ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯ ನಾಯಕರು ದಲಿತ ಸಮುದಾಯಕ್ಕೆ ಸುಳ್ಳು ಆಶ್ವಾಸನೆ ನೀಡುತ್ತಿದ್ದಾರೆ. ಶೇ. ೨೨.೫ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ಸಮಿತಿಯ ಸದಸ್ಯರು ದಲಿತರಿಂದ ಹಣ ಪಡೆದು ವಂಚಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಶೇಕಡ ೭.೫ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯ ನಾಯಕರು ದಲಿತರಿಗಿಂತ ಇತರೆ ಸಮುದಾಯಕ್ಕೆ ಹೆಚ್ಚು ಪ್ರತಿನಿಧಿಸುತ್ತಿದ್ದಾರೆ.

ಒಟ್ಟಾರೆ ಕ್ಷೇತ್ರ ಅಧ್ಯಯನದ ಫಲಿತಗಳ ಪ್ರಕಾರ ದಲಿತ ಸಂಘರ್ಷ ಸಮಿತಿಯ ಬಗ್ಗೆ ದಲಿತರಿಗೆ ವಿಶ್ವಾಸ ಉಳಿದಿಲ್ಲ. ಹಾಗಾಗಿ ದಲಿತ ಸಂಘರ್ಷ ಸಮಿತಿಯು ಬಹುಸಂಖ್ಯಾತ ದಲಿತರ ಅಸ್ಮಿತೆಯಾಗಿ ಉಳಿದುಕೊಂಡಿಲ್ಲ.

ಅಸ್ಪೃಶ್ಯತೆ ಆಚರಣೆಯ ಗ್ರಹಿಕೆ : ಕ್ಷೇತ್ರ ಅಧ್ಯಯನದ ಫಲಿತಗಳು ಹೇಳುವ ಪ್ರಕಾರ ಗ್ರಾಮಗಳಲ್ಲಿ ಇಂದಿಗೂ ಅಸ್ಪೃಶ್ಯತೆ ಆಚರಣೆ ಜೀವಂತವಾಗಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೮ ರಷ್ಟು ದಲಿತ ಪ್ರತಿನಿಧಿಗಳು ಗ್ರಾಮೀಣ ಭಾಗದಲ್ಲಿ ಅಸ್ಪೃಶ್ಯತೆ ಜೀವಂತವಾಗಿರುವುದನ್ನು ಗ್ರಹಿಸುತ್ತಾರೆ. ಅಸ್ಪೃಶ್ಯತೆ ಆಚರಣೆ ದಲಿತ ಸಮುದಾಯದ ಪ್ರಮುಖ ಅಸ್ಮಿತೆ, ಈ ಅಸ್ಮಿತೆಯನ್ನು ಕಳೆದುಕೊಳ್ಳುವುದು ದಲಿತ ಸಮುದಾಯಕ್ಕೆ ಸಾಧ್ಯವಾಗದೇ ಇರುವುದು ಅನಾರೋಗ್ಯಕರ ಸಮಾಜದ ಮತ್ತೊಂದು ಮುಖವಾಗಿದೆ.

ಅಸ್ಪೃಶ್ಯತೆ ಆಚರಣೆ ಸ್ಥಳಗಳು: ಹಿಂದಿನ ಚರ್ಚೆಯಲ್ಲಿ ಉಲ್ಲೇಖಿಸಿರುವಂತೆ ಗ್ರಾಮೀಣ ಭಾಗದಲ್ಲಿ ಇಂದಿಗೂ ಅಸ್ಪೃಶ್ಯತೆ ಜಾರಿಯಲ್ಲಿದೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೭೧.೪ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ಊರಿನ ದೇವಸ್ಥಾನಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಶೇಕಡ ೧೬.೩ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ಹೋರಾಟಗಳಲ್ಲಿ ಅಸ್ಪೃಶ್ಯತೆ ಜೀವಂತವಾಗಿದೆ. ಶೇಕಡ ೧೦.೩ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ಗ್ರಾಮ ಪಂಚಾಯತ್‌ಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಸಂವಿಧಾನಬದ್ಧವಾಗಿ ಈ ಕಾನೂನು ಬದ್ಧವಾಗಿ ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳು

ಕೂಡ ಅಸ್ಪೃಶ್ಯತೆಯಿಂದ ಮುಕ್ತರಾಗಿಲ್ಲ. ಈ ಹಿನ್ನೆಲೆಯಲ್ಲಿ ದಲಿತ ಪ್ರತಿನಿಧಿಗಳು ಈ ದಲಿತ ಸಮುದಾಯ ಒಳಗೊಳ್ಳುವ ಅಭಿವೃದ್ಧಿಯಿಂದ ವಂಚಿತರಾಗಿದ್ದು, ಇದು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ವೈಫಲ್ಯವಾಗಿದೆ.

ದಲಿತರ ಅಭಿವೃದ್ಧಿ ಮತ್ತು ರಾಜಕೀಯ ಪಕ್ಷಗಳು :

ಚುನಾವಣೆಗಳಲ್ಲಿ ಸ್ಪರ್ಧಿಸುವ ಪಕ್ಷಗಳು ವಿವಿಧ ಸಮುದಾಯಗಳ ಅಭಿವೃದ್ಧಿಗಾಗಿ ಪ್ರಣಾಳಿಕೆಗಳನ್ನು ರೂಪಿಸುತ್ತಿವೆ. ಈ ಪ್ರಣಾಳಿಕೆಗಳಲ್ಲಿ ದಲಿತರ ಅಭಿವೃದ್ಧಿಗಾಗಿ ಕೈಗೊಳ್ಳುವ ಕಾರ್ಯಗಳ ಬಗ್ಗೆ ಚರ್ಚೆಗಳು ಲಭ್ಯವಾಗುತ್ತವೆ. ದೇಶದಲ್ಲಿ ಬಹುಜನ ಸಮಾಜ ಪಕ್ಷ, ಹಾಗೂ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ದಲಿತ ಪ್ಯಾಂಥರ್ಸ್ ಮತ್ತು ಲೋಕಶಕ್ತಿ ಪಕ್ಷಗಳು ದಲಿತ ಅಸ್ಮಿತೆ ಇರುವ ಮತ್ತು ದಲಿತರ ಅಭಿವೃದ್ಧಿಗಾಗಿ ರೂಪಿಸಲ್ಪಟ್ಟ ಪಕ್ಷಗಳೆಂದು ಹೇಳಲಾಗುತ್ತದೆ. ಈ ಪಕ್ಷಗಳ ಅಧ್ಯಕ್ಷರುಗಳು ಬಹುತೇಕ ದಲಿತರೇ ಆಗಿರುವುದು ಈ ಅಸ್ಮಿತೆಯ ಪ್ರಮುಖ ಕಾರಣ. ಇವುಗಳೊಂದಿಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಭಾರತೀಯ ಜನತಾ ಪಕ್ಷ, ಶಿವಸೇನಾ, ಮುಂತಾದ ಪಕ್ಷಗಳನ್ನು ಸಾರ್ವತ್ರಿಕ ಪಕ್ಷಗಳೆಂದು ಗುರುತಿಸಿದರೂ, ಈ ಪಕ್ಷಗಳೂ ಕೂಡ ನಾವು ದಲಿತರ ಅಭಿವೃದ್ಧಿಗಾಗಿ ಶ್ರಮಿಸುತ್ತೇವೆ ಎಂದು ಹೇಳಿಕೊಳ್ಳುತ್ತಿವೆ. ಆದರೆ ಕ್ಷೇತ್ರ ಅಧ್ಯಯನದ ಫಲಿತಗಳು ಹೇಳುವಂತೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೬೩.೭ ರಷ್ಟು ದಲಿತ ಪ್ರತಿನಿಧಿಗಳು ಕಾಂಗ್ರೆಸ್ ಪಕ್ಷವನ್ನು ಶೇಕಡ ೨೧.೬ ರಷ್ಟು ಬಿಜೆಪಿ ಪಕ್ಷವನ್ನು ಮತ್ತು ಶೇ.೧೦.೮ ರಷ್ಟು ದಲಿತ ಪ್ರತಿನಿಧಿಗಳು ಜನತಾದಳ ಪಕ್ಷವನ್ನು ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳೆಂದು ಗುರುತಿಸುತ್ತಾರೆ. ಫಲಿತಗಳು ಹೇಳುವ ಪ್ರಕಾರ ದಲಿತ ಮುಖ್ಯ ಮಂತ್ರಿಯನ್ನು ಹೊಂದಿರುವ ಬಿ.ಎಸ್.ಪಿ ದಲಿತ ನಾಯಕರುಗಳನ್ನು ಒಳಗೊಂಡಿರುವ ಆರ್.ಪಿ.ಐ ದಲಿತ ಪ್ಯಾಂಥರ್ಸ್ ಮತ್ತು ಲೋಕಶಕ್ತಿ ಪಕ್ಷಗಳನ್ನು ದಲಿತರ ಅಭಿವೃದ್ಧಿಗಾಗಿ ಶ್ರಮಿಸುವ ಪಕ್ಷಗಳೆಂದು ಗುರುತಿಸುವ, ದಲಿತ ಪ್ರತಿನಿಧಿಗಳ ಪ್ರಮಾಣ ಅತ್ಯಂತ ಕಡಿಮೆಯಾಗಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಬಿ.ಎಸ್.ಪಿ, ಆರ್.ಪಿ.ಐ, ದಲಿತ ಪ್ಯಾಂಥರ್ಸ್ ಮತ್ತು ಲೋಕಶಕ್ತಿ ಪಕ್ಷಗಳು ದಲಿತರ ಅಸ್ಮಿತೆಯ ಭಾಗವಾಗಿ ಉಳಿದುಕೊಂಡಿಲ್ಲ.

ದಲಿತ ವಿಮೋಚನಾಗಾರರ ಗ್ರಹಿಕೆ:

ಭಾರತದಲ್ಲಿ ಜ್ಯೋತಿ ಬಾಪುಲೆ, ಸಾವಿತ್ರಿಪುಲೆ, ಡಾ.ಬಿ.ಆರ್.ಅಂಬೇಡ್ಕರ್, ಸಾಹುಮಹಾರಾಜ ಮತ್ತು ಡಾ.ಬಾಬು ಜಗಜೀವನರಾಂ ಮುಂತಾದವರು ದಲಿತರ ವಿಮೋಚನೆಗಾಗಿ ಹೋರಾಡಿದ್ದಾರೆ. ಈ ವಿಮೋಚನಾಗಾರರು ದಲಿತ ಸಮುದಾಯದ ಪ್ರಮುಖ ಅಸ್ಮಿತೆಯೆಂದು ಗುರುತಿಸಲಾಗುತ್ತಿದೆ. ವಿಮೋಚನೆಗಾರರ ಬಗ್ಗೆ ದಲಿತ ಪ್ರತಿನಿಧಿಗಳ ಗ್ರಹಿಕೆ ಏನು ಎಂಬುದನ್ನು ಫಲಿತಗಳು ಸ್ಪಷ್ಟಪಡಿಸುತ್ತವೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೯.೬ ರಷ್ಟು ಪ್ರತಿನಿಧಿಗಳು ಮಾತ್ರ ೩ಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರನ್ನು ಗುರುತಿಸುತ್ತಾರೆ. ಅಂದರೆ ಬಹುಸಂಖ್ಯಾತ ದಲಿತ ಪ್ರತಿನಿಧಿಗಳಿಗೆ ಎಲ್ಲ ದಲಿತ ವಿಮೋಚನಾಗಾರರ ಗ್ರಹಿಕೆ ಇಲ್ಲ. ಅತ್ಯಂತ ಖೇದಕರ ಸಂಗತಿ ಎಂದರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಮಹಿಳಾ ಪ್ರತಿನಿಧಿಗಳಲ್ಲಿ ೩ ಕ್ಕಿಂತ ಹೆಚ್ಚು ದಲಿತ ವಿಮೋಚನಾಗಾರರನ್ನು ಗುರುತಿಸುವವರ ಸಂಖ್ಯೆ ಶೂನ್ಯವಾಗಿದೆ.

ಭಾಗ–೨

ದಲಿತ ಪ್ರತಿನಿಧಿಗಳ ಪಂಚಾಯತ್ ಕಾನೂನು ಪ್ರಕ್ರಿಯೆಯ ಗ್ರಹಿಕೆ :

೧೯೯೩ರ ಅಧಿನಿಯಮದ ಪ್ರಕಾರ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸರಕಾರಗಳಿಗೆ ಸಂವಿಧಾನಾತ್ಮಕ ಸ್ಥಾನ, ಲಭ್ಯವಾಗಿ ಭಾರತವು ನಾಲ್ಕು ಹಂತಗಳ ಫೆಡರಲ್ ವ್ಯವಸ್ಥೆಯಾಗಿ ಮಾರ್ಪಟ್ಟಿದೆ. ದಲಿತರಿಗೆ ಶೇಕಡ ೩೩ ರಷ್ಟು ಸ್ಥಾನಗಳು ಮೀಸಲಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ನೇಮಕಗೊಳ್ಳುವ ಅವಕಾಶವನ್ನು ರೂಪಿಸಲಾಗಿದೆ.

೧. ದಲಿತ ಪ್ರತಿನಿಧಿಗಳು ಮತ್ತು ಸಂವಿಧಾನಾತ್ಮಕ ತಿದ್ದುಪಡಿಯ ಅರಿವು

೭೩ನೇ ತಿದ್ದುಪಡಿಯ ಆಶಯವೆಂದರೆ ಗ್ರಾಮೀಣ ಭಾಗದ ಹೆಚ್ಚಿನ ಜನರು ಗ್ರಾಮಸ್ವರಾಜ್ಯ ಮತ್ತು ಸ್ಥಳೀಯ ಸ್ವಯಂ ಆಡಳಿತ ಘಟಕಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದಾಗಿದೆ. ಈ ತಿದ್ದುಪಡಿಯ ಬಗೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳ ಗ್ರಹಿಕೆ ಕುತೂಹಲಕಾರಿಯಾಗಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಕೇವಲ ಶೇಕಡ ೯.೮ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಸಂವಿಧಾನ ತಿದ್ದುಪಡಿಯ ಆಶಯದ ಅರಿವು ಇದೆ. ಆದರೆ ಶೇಕಡ ೬೮.೬ ರಷ್ಟು ದಲಿತ

ಪ್ರತಿನಿಧಿಗಳಿಗೆ ಸಂವಿಧಾನ ಮಾತ್ರ ಸಂವಿಧಾನ ತಿದ್ದುಪಡಿಯ ಆಶಯದ ಅರಿವು ಇದೆ. ಆದರೆ ಶೇಕಡ ೬೮.೬ ರಷ್ವಡು ದಲಿತ ಪ್ರತಿನಿಧಿಗಳಿಗೆ ಸಂವಿಧಾನ ತಿದ್ದುಪಡಿಯ ಆಶಯಗಳ ಅರಿವು ಇಲ್ಲ. ಖೇದಕರ ಸಂಗತಿ ಎಂದರೆ ಗಣನೀಯ ಪ್ರಮಾಣದ ಮಹಿಳಾ ಪ್ರತಿನಿಧಿಗಳಿಗೆ ಸಂವಿಧಾನ ತಿದ್ದುಪಡಿಯ ಆಶದಯಗಳ ಅರಿವು ಇಲ್ಲ.

೨. **ಗ್ರಾಮ ಸ್ವರಾಜ್ಯದ ಅರಿವು:**

೧೯೯೩ ಅಧಿನಿಯಮದ ಪ್ರಕಾರ ಜನವಸತಿ ಸಭೆ, ವಾರ್ಡ್ ಸಭೆ, ಮತ್ತು ಗ್ರಾಮ ಸಭೆಗಳು ಗ್ರಾಮಸ್ವರಾಜ್ಯದ ಭಾಗವಾಗಿರತಕ್ಕದ್ದು. ಈ ಘಟಕಗಳು ಗ್ರಾಮೀಣ ಜನ ಮತ್ತು ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸುತ್ತವೆ. ದತ್ತಾಂಶಗಳು ಹೇಳುವ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟಾರೆ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೧೧.೮ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಸ್ವರಾಜ್ಯ ಘಟಕಗಳ ಅರಿವು ಇದೆ. ಆದರೆ ಶೇಕಡ ೮೮.೨ ರಷ್ಟು ಪ್ರತಿನಿಧಿಗಳಿಗೆ ಗ್ರಾಮ ಸ್ವರಾಜ್ಯ ಘಟಕಗಳ ಅರಿವು ಇಲ್ಲ. ಗ್ರಾಮ ಸ್ವರಾಜ್ಯ ಘಟಕಗಳ ಬಗ್ಗೆ ದಲಿತ ಮಹಿಳಾ ಪ್ರತಿನಿಧಿಗಳ ಅರಿವಿನ ಪ್ರಮಾಣ ಕನಿಷ್ಠ ಮಟ್ಟದಲ್ಲಿದೆ.

ವಾರ್ಡ್‌ಸಭೆ ಮತ್ತು ಜನವಸತಿ ಸಭೆಗಳ ಅರಿವು:

ಗ್ರಾಮ ಪಂಚಾಯಿತಿಯ ಯೋಜನೆಯ ಅನುಷ್ಠಾನ, ಫಲಾನುಭವಿಗಳ ಗುರುತಿಸುವಿಕೆ ಮತ್ತು ಸೌಕರ್ಯ ಪೂರೈಕೆಯ ಜವಾಬ್ದಾರಿಯನ್ನು ವಾರ್ಡ್‌ಸಭೆ ಈ ಜನವಸತಿ ಸಭೆಗಳು ನಿರ್ವಹಿಸುತ್ತವೆ. ಆದರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರಮಾಣಗಳಲ್ಲಿ ಶೇಕ ೪೪.೧ ರಷ್ಟು ಪ್ರತಿನಿಧಿಗಳಿಗೆ ಮಾತ್ರ ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳ ಅರಿವು ಉತ್ತಮವಾಗಿದ್ದು, ಶೇಕಡ ೫೫.೯ ರಷ್ಟು ದಲಿತ ಪ್ರತಿನಿಧಿಗಳಿಗೆ ವಾರ್ಡ್‌ಸಭೆ ಮತ್ತು ಜನವಸತಿ ಸಭೆಗಳ ಮಹತ್ವದ ಅರಿವು ಇಲ್ಲ. ವಾರ್ಡ್‌ಸಭೆ ಮತ್ತು ಜನವಸತಿ ಸಭೆಗಳ ಬಗ್ಗೆ, ದಲಿತ ಮಹಿಳಾ ಪ್ರತಿನಿಧಿಗಳ ಅರಿವಿನ ಮಟ್ಟ ಕನಿಷ್ಠ ಪ್ರಮಾಣದಲ್ಲಿದೆ.

೩. **ಗ್ರಾಮಸಭೆಯ ಅರಿವು:** ಕೇಂದ್ರ ರಾಜ್ಯ ಮತ್ತು ಜಿಲ್ಲಾ ವಲಯದ ಎಲ್ಲ ಸರ್ಕಾರಿ ಕಾರ್ಯಕ್ರಮಗಳನ್ನು ನೆರವೇರಿಸುವಲ್ಲಿ, ಅನುಷ್ಠಾನಕ್ಕೆ ತರುವಲ್ಲಿ, ಮೇಲ್ವಿಚಾರಣೆ ಮಾಡುವಲ್ಲಿ ಮೇಲ್ವಿಚಾರಣೆ ಮಾಡುವಲ್ಲಿ, ಮೌಲ್ಯಮಾಪನ ಮಾಡುವುದರಲ್ಲಿ, ಗ್ರಾಮದ ಎಲ್ಲ ನಾಗರಿಕರು, ನೇರವಾಗಿ ಭಾಗಿಯಾಗುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಗ್ರಾಮಸಭೆ, ಗ್ರಾಮಮಟ್ಟದಲ್ಲಿ ಸ್ಥಳೀಯ ಸ್ವಯಂ ಆಡಳಿತ ಘಟಕವಾಗಿದೆ. ಆದರೆ ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೮.೨ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಸಭೆಯ ಮಹತ್ವ ಮತ್ತು ಅದರ ಪ್ರಕಾರ್ಯಗಳ ಬಗ್ಗೆ ಅರಿವು ಇದೆ.

ಆದರೆ ಶೇಕಡ ೬೧.೮ ರಷ್ಟು ದಲಿತ ಪ್ರತಿನಿಧಿಗಳಿಗೆ ಗ್ರಾಮಸಭೆಯ ಅರಿವು ಇಲ್ಲ. ದಲಿತ ಮಹಿಳಾ ಪ್ರತಿನಿಧಿಗಳಿಗೆ ಇದರ ಅರಿವಿನ ಮಟ್ಟ ಕನಿಷ್ಠ ಪ್ರಮಾಣದಲ್ಲಿದೆ.

ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಗ್ರಾಮಸಭೆಯ ಮಹತ್ವವನ್ನು ಅರಿಯದೆ ಇರುವುದರಿಂದ ನೇರ ಪ್ರಜಾಪ್ರಭುತ್ವದ ಪಾತ್ರವಹಿಸುವ ಗ್ರಾಮಸಭೆಯಲ್ಲಿ ತಮ್ಮ ಮತ್ತು ಸಮುದಾಯದ ಹಿತಾಸಕ್ತಿಗಳನ್ನು ರಚಿಸಿಕೊಳ್ಳುವ ಅವಕಾಶದಿಂದ ವಂಚಿತರಾಗಿದ್ದಾರೆ.

೪. ಗ್ರಾಮ ಪಂಚಾಯಿತಿ ಕೋರಂ ಅರಿವು:

ಪಂಚಾಯತ್ ಕಾರ್ಯನಿರ್ವಹಣೆಯಲ್ಲಿ ದಲಿತ ಪ್ರತಿನಿಧಿಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಕೋರಂ ಕ್ರಮವನ್ನು ಪಾತ್ರವಹಸುತ್ತಿದೆ ಎಂದು ಗ್ರಹಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೪೫.೧ ರಷ್ಟು ದಲಿತರಿಗೆ ಮಾತ್ರ ಕೋರಂ ಅರಿವು ಇದ್ದು, ಶೇಕಡ ೫೪.೯ ರಷ್ಟು ದಲಿತ ಪ್ರತಿನಿಧಿಗಳಿಗೆ ಪಂಚಾಯತ್ ಕೋರಂ ಅರಿವು ಇಲ್ಲ. ದಲಿತ ಮಹಿಳಾ ಪ್ರತಿನಿಧಿಗಳಿಗೆ ಕೋರಂ ಅರಿವು ಶೂನ್ಯವಾಗಿದೆ.

೫. ಸ್ಥಾಯಿ ಸಮಿತಿಗಳ ಅರಿವು: ಕೃಷಿ ಉತ್ಪಾದನೆ, ಪಶುಸಂಗೋಪನೆ, ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣೆಗಾಗಿ ಉತ್ಪಾದನಾ ಸಮಿತಿ ಶ್ರಮಿಸುತ್ತದೆ. ಸಾಮಾಜಿಕ ನ್ಯಾಯ ಸಮಿತಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಇತರೆ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಿತಾಸಕ್ತಿಗಾಗಿ ಶ್ರಮಿಸುತ್ತಿದೆ. ಸಾರ್ವಜನಿಕ ಶಿಕ್ಷಣ, ಆರೋಗ್ಯ ಲೋಕೋಪಯೋಗಿ ಕಾಮಗಾರಿಗಳನ್ನು ಕೈಗೊಳ್ಳಲು ಸೌಕರ್ಯ ಸಮಿತಿ ಶ್ರಮಿಸುತ್ತಿದೆ. ಈ ಸಮಿತಿಗಳ ಬಗ್ಗೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇಕಡ ೩೪.೩ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಗಳ ಜವಾಬ್ದಾರಿ ಈ ಪ್ರಕಾರ್ಯಗಳ ಬಗ್ಗೆ ಅರಿವು ಇದ್ದು, ಶೇಕ ೬೫.೭ ರಷ್ಟು ದಲಿತ ಪ್ರತಿನಿಧಿಗಳಿಗೆ ಸ್ಥಾಯಿಸಮಿತಿಗಳ ಅರಿವು ಇಲ್ಲ. ದಲಿತ ಮಹಿಳಾ ಪ್ರತಿನಿಧಿಗಳ ಸ್ಥಾಯಿಸಮಿತಿಗಳ ಅರಿವು ಶೂನ್ಯವಾಗಿದೆ.

೬. ಸಾಮಾಜಿಕ ನ್ಯಾಯ ಸಮಿತಿಯ ಅರಿವು: ಸಾಮಾಜಿಕ ನ್ಯಾಯ ಸಮಿತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಿತಾಸಕ್ತಿಗಳಿಗೆ ಉತ್ತೇಜನ ನೀಡಲು ಸಹಾಯಕವಾಗುತ್ತದೆ. ಒಟ್ಟಾರೆ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವಲ್ಲಿ ಈ ಸಮಿತಿ ಪ್ರಮುಖ ಪಾತ್ರವಹಿಸುತ್ತದೆ.

ಆದರೆ, ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ.೩೪.೩ ರಷ್ಟು ದಲಿತ ಪ್ರತಿನಿಧಿಗಳಿಗೆ ಮಾತ್ರ ಸಾಮಾಜಿಕ ನ್ಯಾಯ ಸಮಿತಿಯ ಅರಿವು ಇದ್ದು, ಶೇ. ೬೫.೪ ರಷ್ಟು ದಲಿತ ಪ್ರತಿನಿಧಿಗಳಿಗೆ ಸಾಮಾಜಿಕ ನ್ಯಾಯ ಸಮಿತಿಯ ಅರಿವು ಇಲ್ಲ. ಹಾಗಾಗಿ ದಲಿತ ಪ್ರತಿನಿಧಿಗಳು, ದಲಿತ ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ವಿಫಲರಾಗಿದ್ದಾರೆ.

೨. ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಅರಿವು:

ಪ್ರತಿನಿಧಿಗಳು ತಮ್ಮ ಕ್ಷೇತ್ರದ ಹಿತಾಸಕ್ತಿಯನ್ನು ಕಾಪಾಡಬೇಕು. ನಾಗರಿಕರ ಮನವಿಗಳಿಗೆ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಪ್ರತಿಕ್ರಿಯಿಸುವುದು. ಸಮುದಾಯದ ಅಭಿಪ್ರಾಯಗಳನ್ನು ಪ್ರತಿನಿಧಿಸುವುದು. ನೈತಿಕತೆಯ ಗರಿಷ್ಠ ಗುಣಮಟ್ಟವನ್ನು ನಿರ್ವಹಿಸುವುದು ಎಲ್ಲರನ್ನು ಸಮಾನವಾಗಿ ಗೌರವಿಸುವುದು ಪಂಚಾಯತ್ ನಿರ್ಣಯಗಳಲ್ಲಿ ನಾಗರಿಕ ಸಕ್ರೀಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವ ಮುಂತಾದ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಆದರೆ ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ.೩೩.೩ ರಷ್ಟು ಪ್ರತಿನಿಧಿಗಳಿಗೆ ಮಾತ್ರ ಜವಾಬ್ದಾರಿ ಈ ಕರ್ತವ್ಯಗಳ ಅರಿವು ಇದ್ದು, ಶೇಕಡ ೬೧.೨ ರಷ್ಟು ದಲಿತ ಪ್ರತಿನಿಧಿಗಳಿಗೆ ತಮ್ಮ ಜಾಣ್ಮೆ ಮತ್ತು ಕರ್ತವ್ಯಗಳ ಅರಿವು ಪ್ರತಿನಿಧಿಗಳಿಗೆ ಇಲ್ಲದಿರುವುದರಿಂದ ಸಮುದಾಯದ ಹಿತಾಸಕ್ತಿಯನ್ನು ಕಾಪಾಡಿ ಅವರನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿರುವುದು ಸಾಧ್ಯವಾಗಿಲ್ಲ.

ಅಧ್ಯಯನದ ಫಲಿತಗಳು:

ಪಂಚಾಯತ್ ಅಧಿಕಾರ ಪ್ರಕ್ರಿಯೆಯಲ್ಲಿ ದಲಿತ ಪ್ರತಿನಿಧಿಗಳ ಸಹಭಾಗಿತ್ವ :

ಇಂದಿನ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳ ಸ್ಥಾಪನೆಗೆ ಪ್ರಜ್ಞಾಪೂರ್ವಕವಾದ ಹಾಗೂ ಸದೃಢವಾದ ರಾಜಕೀಯ ಸಹಭಾಗಿತ್ವದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದೆ. ರಾಜಕೀಯ ಸಹಭಾಗಿತ್ವವು ನಾಗರಿಕರ ಹಿತಾಸಕ್ತಿಗಳನ್ನು ಸ್ಪಷ್ಟಪಡಿಸಿಕೊಳ್ಳುವ ಪ್ರಜ್ಞೆ ಮೂಡಿಸುತ್ತದೆ. ರಾಜಕೀಯ ಪ್ರಜ್ಞೆಯಿಂದ ಸೃಷ್ಟಿಕೊಂಡ ಹಿತಾಸಕ್ತಿಗಳು ಕ್ರೋಢೀಕೃತವಾಗಿ ಜನಶಕ್ತಿ ಸಂಘಟನೆ,ಯಾಗಿ ಪರಿವರ್ತಿತವಾಗುತ್ತಿದೆ. ರಾಜಕೀಯ ಸಹಭಾಗಿತ್ವವು ಗುಂಪು ಚಟುವಟಿಕೆಯಾಗಿದ್ದು, ಚಳುವಳಿ, ಪಕ್ಷಗಳು ಮತ್ತು ಒತ್ತಡ ಗುಂಪುಗಳಲ್ಲಿ ಭಾಗವಹಿಸುವ ಕ್ರಿಯೆಗೆ ಸಂಬಂಧಿಸಿದೆ. ರಾಜಕೀಯ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನವನ್ನು ಹೊಂದುವ, ಅನೌಪಚಾರಿಕ

ಚಟುವಟಿಕೆಗಳಾದ ರಾಜಕೀಯ ಚರ್ಚೆ, ರಾಜಕೀಯ ಸಭೆಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ಅಧಿಕಾರಿ ವರ್ಗವನ್ನು ರಾಜಕೀಯವಾಗಿ ಒಪ್ಪಿಕೊಳ್ಳುವ ಸಂಗತಿಗಳನ್ನು ಒಳಗೊಂಡಿದೆ. ಈ ಚರ್ಚೆಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ ಸಾಮಾನ್ಯ ಪ್ರತಿನಿಧಿಗಳ ಭಾಗವಹಿಸುವಿಕೆ ಮತ್ತು ಅಧ್ಯಕ್ಷ ಸ್ಥಾನಕ್ಕೆ ನೇಮಿಸಲಾದ ದಲಿತರು ಹೇಗೆ ಪಂಚಾಯತ್ ಅಧಿಕಾರ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದ್ದು, ಮುಂದಿನ ಭಾಗದಲ್ಲಿ ಮಂಡಿಸಲಾಗಿದೆ.

- ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳ ಆಯೋಜನೆ: ವಾರ್ಡ್‌ಸಭೆ ಮತ್ತು ಜನವಸತಿ ಸಭೆಗಳು ಗ್ರಾಮಸ್ವರಾಜ್ಯ ಪ್ರಮುಖ ಘಟಕಗಳೆಂದು ಪರಿಗಣಿಸಲಾಗಿದೆ. ಇವುಗಳು ದಲಿತ ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ ಎಂದು ಗ್ರಹಿಸಲಾಗಿದೆ.
- ಗ್ರಾಮಸಭೆಗಳ ಆಯೋಜನೆ : ಬಳ್ಳಾರಿ ಜಿಲ್ಲೆಯ ಒಟ್ಟು ದಲಿತ ಪ್ರತಿನಿಧಿಗಳಲ್ಲಿ ಶೇ.೪೪.೧ ರಷ್ಟು ಪ್ರತಿನಿಧಿಗಳು ಮಾತ್ರ ನಿಯತಕಾಲಿಕವಾಗಿ ಗ್ರಾಮಸಭೆಗಳಿಗೆ ಹಾಜರಾಗುತ್ತಿದ್ದಾರೆ. ಉಳಿದ ಶೇ. ೫೫.೯ ರಷ್ಟು ಪ್ರತಿನಿಧಿಗಳು ಸಭೆಗಳಿಗೆ ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ಇದಕ್ಕೆ ಕಾರಣ ಪ್ರತಿನಿಧಿಗಳು ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.
- ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ಗ್ರಾಮ ಸಭೆಗಳಲ್ಲಿ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶೇ. ೨೦.೬ ರಷ್ಟು ದಲಿತ ಪ್ರನಿಧಿಗಳಿಗೆ ಗ್ರಾಮ ಸಭೆ ಆಯೋಜನೆಯ ಮಾಹಿತಿ ಲಭ್ಯವಾಗುತ್ತಿಲ್ಲ. ಶೆ. ೨೩.೫ ರಷ್ಟು ದಲಿತ ಪ್ರತಿನಿಧಿಗಳ ಪ್ರಕಾರ ನಿಯಮಿತವಾಗಿ ಗ್ರಾಮಸಭೆಯನ್ನು ಆಯೋಜನೆ ಮಾಡಲಾಗುತ್ತಿಲ್ಲ. ದಲಿತ ಮಹಿಳಾ ಪ್ರತಿನಿಧಗಳಿಗೆ ಸಂಬಂಧಿಸಿದಜಂತೆ ಬೇನಾಮಿ ಪ್ರಾತಿನಿಧ್ಯ ಮುಂದುವರರೆದಿದ್ದು, ಮಹಿಳಾ ಪ್ರತಿನಿಧಿಗಳ ಬದಲಾಗಿ ಅವರ ಪತಿ ಅಥವಾ ಕುಟುಂಬದ ಸದಸ್ಯರು ಭಾಗವಹಿಸುತ್ತಿದ್ದಾರೆ.
- ದಲಿತ ಪ್ರತಿನಿಧಿಗಳ ಚರ್ಚೆಯ ವಿಷಯಗಳು: ಒಟ್ಟು ಶೇ. ದಲಿತ ಪ್ರತಿನಿಧಿಗಳಲ್ಲಿ ಶೇ.೮೧.೫ ರಷ್ಟು ದಲಿತ ಪ್ರತಿನಿಧಿಗಳು ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸುತ್ತಿದದಾರೆ. ಶೆ. ೪.೯ ರಷ್ಟು ಸದಸ್ಯರು ಸುರಕ್ಷಿತವಲ್ಲದ ಸಮುದಾಯಗಳ ಬಗ್ಗೆ ಹಾಗೂ ಶೇ.೧೮.೬ ರಷ್ಟು ದಲಿತ ಪ್ರತಿನಿಧಿಗಳು ಸಂಪನ್ಮೂಲ ಹಂಚಿಕೆಗಳ ಬಗ್ಗೆ ಚರ್ಚಿಸುತ್ತಿದ್ದಾರೆ.

- ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳು ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ. ದಲಿತ ಹಿತಾಸಕ್ತಿಗಳನ್ನ ಕಾಪಾಡಲು ಸಾಧ್ಯವಾಗುತ್ತಿಲ್ಲ.
- ಗ್ರಾಮ ಪಂಚಾಯಿತಿ ಸಭೆಯಲ್ಲಿ ದಲಿತ ಪ್ರತಿನಿಧಿಗಳು ಪ್ರಸ್ತಾವನೆ ಮಂಡಿಸುವ ಹಕ್ಕನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ. ಅಲ್ಲದೆ ದಲಿತರ ಸಮಸ್ಯೆಗಳ ಬಗ್ಗೆ ಪಂಚಾಯಿತಿ ಗಮನ ಸೆಳೆಯಲು ಯತ್ನಿಸುತ್ತಿಲ್ಲ.
- ದಲಿತ ಪ್ರತಿನಿಧಿಗಳು ಮತ್ತು ಗೊತ್ತುವಳಿಗಳ ಸರಿಯಾಗಿ ಮಂಡಿಸುತ್ತಿಲ್ಲ
- ದಲಿತ ಪ್ರತಿನಿಧಿಗಳು ಮತ್ತು ದಲಿತ ಸಮಸ್ಯೆಗಳಿಗೆ ಸ್ಪಂದಿಸಿ ಸಹಾಯ ಮಾಡುತ್ತಿರುವ ಪ್ರಮಾಣ ಅತಿ ಕಡಿಮೆ ಇದೆ. ಆದರೆ ಕೆಲವು ಪ್ರತಿನಿಧಿಗಳು ತಮ್ಮ ಸಮುದಾಯಕ್ಕೆ ಸಹಾಯ ಮಾಡುವಲ್ಲಿ ವಿಫಲರಾಗಿದ್ದಾರೆ.
- ದಲಿತ ಅಧ್ಯಕ್ಷರುಗಳು ಅಧಿಕಾರ ನಿರ್ವಹಿಸುವಲ್ಲಿ ತುಂಬಾ ಹಿಂದುಳಿದಿದ್ದಾರೆ. ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ, ಸಭೆಗಳನ್ನು ಕರೆಯುವಲ್ಲಿ, ಹಿಂದುಳಿದಿದ್ದಾರೆ.
- ದಲಿತ ಅಧ್ಯಕ್ಷರುಗಳು ಇರುವ ಗ್ರಾಮ ಪಂಚಾಯಿತಿಗಳಲ್ಲಿ ಮೇಲ್ಜಾತಿಯವರನ್ನು ಅವಲಂಬಿಸಿದ್ದಾರೆ. ಒಟ್ಟಾರೆ ದಲಿತ ಅಧ್ಯಕ್ಷರುಗಳ ಹೆಸರಿನಲ್ಲಿ ಅಧಿಕಾರಿಶಾಹಿ ವರ್ಗ ಮತ್ತು ಮೇಲ್ಜಾತಿಯ ಬೇನಾಮಿ ಹೆಸರಿನಲ್ಲಿ ಅಧಿಕಾರವನ್ನು ಅನುಭವಿಸುತ್ತಿದ್ದಾರೆ.
- ದಲಿತ ಅಧ್ಯಕ್ಷ ಪಂಚಾಯತ್ ಸಭೆಯ ಅಧ್ಯಕ್ಷತೆ ವಹಿಸುವುದು ಬಹುತೇಕ ಅಧಿಕಾರಿಗಳೇ ವಹಿಸುತ್ತಿದ್ದಾರೆ.
- ನಡಾವಳಿ ನಿರ್ವಹಣೆಯನ್ನು ಮಾಡುವಲ್ಲಿ ದಲಿತ ಅಧ್ಯಕ್ಷರುಗಳು ವಿಫಲರಾಗಿದ್ದಾರೆ.
- ದಲಿತ ಅಧ್ಯಕ್ಷರುಗಳ ಗುತ್ತಿಗೆ ಮತ್ತು ಕಾರ್ಯಕ್ರಮ ಅನುಮೋದನೆ ಅಧಿಕಾರ ಚಲಾಯಿಸುವ ಪ್ರಕ್ರಿಯೆಯಲ್ಲಿ ಸ್ವತಂತ್ರವಾಗಿ ಅನುಮೋದನೆ ನೀಡುತ್ತಿಲ್ಲ.
- ದಲಿತ ಅಧ್ಯಕ್ಷರು ಗುತ್ತಿಗೆ ಅಧಿಕಾರವನ್ನು ನಿರ್ವಹಿಸುವಾಗ ಮೇಲ್ಜಾತಿಯವರ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ.
- ಗ್ರಾಮ ಪಂಚಾಯಿತಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಜಿಲ್ಲಾ ಪಂಚಾಯಿತಿ ನೀಡುವ ಅನುದಾನಗಳನ್ನು, ತೆರಿಗೆಗಳ ಮೂಲಕ ಸಂಪತ್ತನ್ನು ಸಂಗ್ರಹಿಸಲಾಗುತ್ತಿದೆ. ಆದರೆ ಅನುದಾನ ಬಿಡುಗಡೆ ಮಾಡುವಲ್ಲಿ ಬೇರೆಯವರ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಮಹಿಳಾ ಅಧ್ಯಕ್ಷರು ಅನುದಾನ ಬಿಡುಗಡೆ ಮಾಡುವಲ್ಲಿ, ಅಧಿಕಾರ ಚಲಾಯಿಸುವಲ್ಲಿ

ತಮ್ಮ ಪತಿ ಅಥವಾ ಮಕ್ಕಳ ಸಂಬಂಧಿಕರ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಪರಿಣಾಮವಾಗಿ ಹಣಕಾಸಿನ ಅಧಿಕಾರ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

- ದಲಿತ ಅಧ್ಯಕ್ಷರುಗಳು ಕೇವಲ ದಲಿತ ಸಮುದಾಯದ ಅಭಿವೃದ್ಧಿಗೆ, ಮೂಲಭೂತ ಸೌಕರ್ಯಗಳನ್ನು ಒತ್ತು ಕೊಡುವ ಕಾರ್ಯಕ್ಕೆ ಒತ್ತು ನೀಡಿದ್ದಾರೆ.
- ದಲಿತ ಅಧ್ಯಕ್ಷರುಗಳು ದಲಿತ ಸಮುದಾಯದ ಅಭಿವೃದ್ಧಿಯ ಸಂಗತಿಯಲ್ಲಿ ವಿವಿಧ ಸವಾಲುಗಳನ್ನು ಎದುರಿಸುತ್ತಿದ್ದಾರೆ. ೨೧.೪ ರಷ್ಟು ಅಧ್ಯಕ್ಷರುಗಳಿಗೆ ಸಮಾನ್ಯ ಶಿಕ್ಷಣ ಸಾಕ್ಷರತೆ, ಆಡಳಿತಾತ್ಮಕ ಶಿಕ್ಷಣದ ಕೊರತೆಯಾಗಿದೆ. ಜಿಲ್ಲೆಯ ಒಟ್ಟು ದಲಿತ ಅಧ್ಯಕ್ಷರುಗಳಲ್ಲಿ ಶೇ. ೪.೩. ರಷ್ಟು ದಲಿತ ಅಧ್ಯಕ್ಷರುಗಳಿಗೆ ಸಹಕಾರ ನೀಡುತ್ತಿಲ್ಲ.
- ಮೇಲ್ಜಾತಿಯ ಸಮುದಾಯಗಳು ಯಾವುದೇ ಸಹಕಾರ ನೀಡುತ್ತಿಲ್ಲ. ದಲಿತ ಅಧ್ಯಕ್ಷರುಗಳ ಶಿಕ್ಷಣ ಮತ್ತು ಆಡಳಿತ ಜ್ಞಾನದ ಕೊರತೆಯಿಂದ ಮಹಿಳೆಯರಿಗೆ ಮುಕ್ತವಾದ ಅವಕಾಶ ದೊರೆಯುತ್ತಿಲ್ಲ. ಆದ್ದರಿಂದ ಮೇಲ್ಜಾತಿಗಳು ಸವಾಲುಗಳನ್ನು ಒಡ್ಡುತ್ತಿರುವುದರಿಂದ ಆಡಳಿತ ನಿರ್ವಹಿಸುತ್ತಿರುವುದು ಸಾಧ್ಯವಾಗುತ್ತಿಲ್ಲ. ಹಾಗೂ ದಲಿತ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವ ಮುಕ್ತ ವಾತಾವರಣ ಲಭ್ಯವಾಗುತ್ತಿಲ್ಲ.

ಸಲಹೆಗಳು:

- ವಾರ್ಡ್ ಸಭೆಗಳು ಮತ್ತು ಜನವಸತಿ ಸಭೆಗಳು ತಳಮಟ್ಟದ ಯೋಜನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ದಲಿತರು ಅನುಭವಿಸುತ್ತಿರುವ ಮೂಲಸೌಕರ್ಯಗಳ ಕೊರತೆಯನ್ನು ನಿವಾರಿಸಲು ದಲಿತ ಪ್ರತಿನಿಧಿಗಳಿಗೆ ಈ ಸಭೆಗಳ ಅರಿವು ಮೂಡಿಸಲು ಸರ್ಕಾರ ಕ್ರಮಕೈಗೊಳ್ಳಬೇಕಿದೆ.

- ದಲಿತ ಪ್ರತಿನಿಧಿಗಳು ಮತ್ತು ದಲಿತ ಸಮುದಾಯಕ್ಕೆ ಗ್ರಾಮಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸಲು ಸೂಕ್ತ ಕಾನೂನು ರೂಪಿಸುವ ಅಗತ್ಯವಿದೆ.

- ಗ್ರಾಮಸಭೆಗಳನ್ನು ಕೇವಲ ಗ್ರಾಮ ಪಂಚಾಯಿತಿಯ ನಡವಳಿಗಳಲ್ಲಿ ಆಯೋಜಿಸಲಾಗುತ್ತಿದೆ. ಗ್ರಾಮಸಭೆಗಳನ್ನು ಕಡ್ಡಾಯವಾಗಿ ವೀಡಿಯೋ ಮಾಡುವ ಕೇರಳ ಮಾದರಿಯನ್ನು ಅನುಸರಿಸಲು ಕ್ರಮಕೈಗೊಳ್ಳಬೇಕಿದೆ. ಗ್ರಾಮಸಭೆಯ ಮಾಹಿತಿಯನ್ನು ದಲಿತ ಪ್ರತಿನಿಧಿಗಳಿಗೆ ಅಧಿಕಾರಿಗಳು ನೀಡುತ್ತಿಲ್ಲ. ಇಂತಹ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಬೇಕಿದೆ.

- ದಲಿತ ಪ್ರತಿನಿಧಿಗಳು ಮತ್ತು ದಲಿತ ಮಹಿಳೆಯರ ಹೆಸರಿನಲ್ಲಿ ಅಧಿಕಾರಿಗಳು ಮತ್ತು ಮೇಲ್ಜಾತಿಯ ಜನ ಹಾಗೂ ಕುಟುಂಬದ ಸದಸ್ಯರು ಬೇನಾಮಿಯಾಗಿ ಅಧಿಕಾರ ಚಲಾಯಿಸುತ್ತಿದ್ದು, ದಲಿತ ಹಿತಾಸಕ್ತಿ ಈ ದಲಿತರ ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ಬೇನಾಮಿ ಅಧಿಕಾರ ನಿರ್ವಹಣೆ ತಡೆಯುವ ಅಗತ್ಯವಿದೆ.

- ದಲಿತ ಪ್ರತಿನಿಧಿಗಳು ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಪರಿಣಾಮಕಾರಿಯಾಗಿರುವ ಗೊತ್ತುವಳಿ ಮತ್ತು ಪ್ರಸ್ತಾವನೆಗಳನ್ನು ವಹಿಸಲು ಸೂಕ್ತ ತರಬೇತಿ ನಿಡುವ ಅಗತ್ಯವಿದೆ.

- ದಲಿತ ಅಧ್ಯಕ್ಷರುಗಳ ಹೆಸರಿನಲ್ಲಿ ಮೇಲ್ಜಾತಿಯ ಜನ ಮತ್ತು ಅಧಿಕಾರಿಗಳು ಬೇನಾಮಿಯಾಗಿ ಅಧಿಕಾರ ನಿರ್ವಹಿಸುತ್ತಿದ್ದಾರೆ. ಇದು ದಲಿತ ಸಮುದಾಯ ಅಭಿವೃದ್ಧಿಗೆ ಮಾರಕವಾಗಿದೆ. ಇಂತಹ ವ್ಯವಸ್ಥೆಯನ್ನು ಸರಿಪಡಿಸಲು ದಲಿತ ಸಮುದಾಯದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಅಧಿಕಾರ ನಿರ್ವಹಣೆಯ ಬಗ್ಗೆ ಸೂಕ್ತ ತರಬೇತಿ ನೀಡಬೇಕಿದೆ.

- ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಲಿತರ ಪ್ರಮುಖ ಅಸ್ಮಿತೆಯಾಗಿದೆ. ದಲಿತ ಸಂಘರ್ಷ ಸಮಿತಿಯು ದಲಿತರ ಸ್ವಾಭಿಮಾನವನ್ನು ಎತ್ತಿಹಿಡಿಯುವಲ್ಲಿ ಪ್ರಮುಖ ಪಾತ್ರವಹಿಸಿದೆ. ಶೋಷಣೆ ನಿರ್ಮೂಲನೆ, ಅಂತರ್ಜಾತಿಯ ವಿವಾಹಗಳ ಪ್ರೋತ್ಸಾಹ ಮತ್ತು ಮೇಲ್ಜಾತಿಗಳಿಂದಾಗುವ ಕಿರುಕುಳವನ್ನು ತಡೆಯುವಲ್ಲಿ ದಲಿತ ಸಂಘರ್ಷ ಸಮಿತಿಯು ಪ್ರಮುಖ ಪಾತ್ರವಹಿಸಿದೆ. ಆದರೆ ಈ ಸನ್ನಿವೇಶ ಬದಲಾವಣೆಯಾಗಿ ಇಂದು ದಲಿತ ಸಮುದಾಯ ಮತ್ತು ದಲಿತ ಪ್ರತಿನಿಧಿಗಳಿಗೆ ದಲಿತ ಸಂಘರ್ಷ ಸಮಿತಿಯ ವಿಶ್ವಾಸ ಉಳಿದುಕೊಂಡಿಲ್ಲ.

- ದಲಿತ ಸಂಘರ್ಷ ಸಮಿತಿಯು ದಲಿತ ಪ್ರತಿನಿಧಿಗಳ, ದಲಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಪರಿಣಾಮಕಾರಿ ಕಾರ್ಯಗಳಿಗೆ ಅವರಲ್ಲಿ ವಿಶ್ವಾಸ ತುಂಬುವ, ಮತ್ತು ಪರಿಣಾಮಕಾರಿಯಾಗಿ ಅಧಿಕಾರ ನಿರ್ವಹಿಸಲು ಬೆಂಬಲವಾಗಿ ನಿಲ್ಲುವ ಅಗತ್ಯವಿದೆ.

ಅಧ್ಯಾಯ–೭
ಸಮಾರೋಪ

ಅಧ್ಯಾಯ-೭

ಸಮಾರೋಪ

ಬಳ್ಳಾರಿ ಜಿಲ್ಲೆಯ ಕೆಳಸ್ತರದ ಪಂಚಾಯತ್ ಸಂಸ್ಥೆಗಳಾದ ಗ್ರಾಮ ಪಂಚಾಯತಿಗಳಲ್ಲಿ ದಲಿತರ ಸಹಭಾಗಿತ್ವವನ್ನು ಅರ್ಥ ಮಾಡಿಕೊಳ್ಳುವ ಉದ್ದೇಶವನ್ನು ಇಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದ್ದು, ಪಂಚಾಯತ್ ಸಂಸ್ಥೆಗಳಲ್ಲಿ ದಲಿತ ಪ್ರತಿನಿಧಿಗಳು ನೇರವಾದ ಪಾಲ್ಗೊಳ್ಳುವಿಕೆ ಮಾನವ ಹಕ್ಕುಗಳ ಪ್ರಶ್ನೆಯಾಗಿದೆ. ಮೂಲಭೂತ ಸೇವೆಗಳು ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಸಂಗತಿಗಳಿಗೆ ಸಂಬಂಧಿಸಿದ ರಾಜಕೀಯ ಧ್ವನಿ ಮತ್ತು ನಿರ್ಣಯ ಕೈಗೊಳ್ಳುವ ಅಧಿಕಾರವು ಜಾತಿ ಆಧಾರಿತ, ವರ್ಗ ಆಧಾರಿತ, ಸಾಮಾಜಿಕ ಸಂರಚನೆಯಲ್ಲಿ ಸೂರಿನ ಪ್ರಶ್ನೆಯಾಗಿದೆ. ಭಾರತದ ಮತ್ತು ಕರ್ನಾಟಕದಲ್ಲಿ ನಿರ್ಲಕ್ಷಿತ ಸಾಮಾಜಿಕ ಗುಂಪುಗಳು ಮಹಿಳೆಯ ಮತ್ತು ದಲಿತರಿಗೆ ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯವನ್ನು ಖಾತ್ರಿಗೊಳಿಸುವ ಉದ್ದೇಶದಿಂದ ಕಾನೂನು ಮತ್ತು ನೀತಿಯ ಮೂಲಕ ಮೀಸಲಾತಿಯನ್ನು ಸಂವಿಧಾನದ ಬದ್ಧಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ದಲಿತರಿಗೆ ಸಂಬಂಧಿಸಿದ ಗಂಭೀರ ಚರ್ಚೆಗಳನ್ನು ಎತ್ತಲಾಗಿದೆ. ದಲಿತರು ಹೇಗೆ ರಾಜಕೀಯ ಪಾಲ್ಗೊಳ್ಳುವಿಕೆಯ ಹಕ್ಕನ್ನು ಪಡೆದುಕೊಳ್ಳುತ್ತಿದ್ದಾರೆ. ರಾಜಕೀಯ ಪಾಲ್ಗೊಳ್ಳುವಿಕೆಯ ಮೂಲಕ ದಲಿತರ ಸಬಲೀಕರಣ ಹೊಂದುತ್ತಿದ್ದಾರೆಯೇ ? ಎನ್ನುವ ಚರ್ಚೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಯಿತು. ಅಶೋಕ ಮೆಹತಾರವರ ವರದಿಯನ್ನು ಆಧರಿಸಿ ೧೯೮೫ರಲ್ಲಿ ಕರ್ನಾಟಕ ಪಂಚಾಯತ್ ಅಧಿನಿಯಮವನ್ನು ರೂಪಿಸಲಾಯಿತು. ಇದು ದೇಶದ ಪ್ರಪ್ರಥಮ ವೈಜ್ಞಾನಿಕ ಕಾಯ್ದೆ ಎಂದು ಹೆಸರು ಪಡೆಯಿತು. ಇದೇ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಮಹಿಳೆಯರಿಗೆ ಶೇ.೨೫ರಷ್ಟು ಸ್ಥಾನಗಳನ್ನು ಮತ್ತು ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯವನ್ನುನೀಡಲಾಯಿತು.

೧೯೯೩ರಲ್ಲಿ ಜಾರಿಗೊಳಿಸಲಾದ ೭೩ನೇ ತಿದ್ದುಪಡಿ ಶೇ. ೩೩.೩ ರಷ್ಟು ಸ್ಥಾನಗಳನ್ನು ಅನುಸೂಚಿತ ಜಾತಿಯವರಿಗೆ ಮೀಸಲಾತಿ ಕಡ್ಡಾಯಗೊಳಿಸಲಾಯಿತು. ರಾಜ್ಯದ ಮೂರು ಸ್ತರಗಳ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಶೇ. ೨೩ರಷ್ಟು ಪ್ರಾತಿನಿಧ್ಯವನ್ನು ಕಡ್ಡಾಯಗೊಳಿಸಲಾಯಿತು. ಈ ಎಲ್ಲ ಕ್ರಮಗಳ ಹಿನ್ನೆಲೆಯಲ್ಲಿ ದಲಿತರು

ಹೇಗೆ ಸಕ್ರಿಯವಾಗಿ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲಾಯಿತು.

ದಲಿತರು ಎಂಬ ಶಬ್ದವು ಅತ್ಯಂತ ವ್ಯಾಪಕವಾದ ಪರಕಲ್ಪನೆಯಾಗಿದೆ. ದಲಿತರು ಎಂಬ ಪದವನ್ನು ಪರಿಶಿಷ್ಟ ಜಾತಿಗೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಭಾರತದಲ್ಲಿ ಅಸ್ಪೃಶ್ಯರನ್ನು ದಲಿತರೆಂದು ಕರೆಯಲಾಗುತ್ತಿದೆ. ಜಾತಿ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಭಾರತೀಯ ಸಮಾಜದಲ್ಲಿ ದಲಿತರನ್ನು ತಾರತಮ್ಯಕ್ಕೆ ಈ ಶೋ಼ಷಣೆಗೆ ಒಳಪಡಿಸಲಾಗಿದೆ. ಭಾರತ ಭಾರತದ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕನ್ನು ದಲಿತರನ್ನು ಸುಲಭವಾಗಿ ಶೋಷಣೆಗೆ ಈಡು ಮಾಡಲಾಗುತ್ತದೆ. ಇಂತಹ ದಲಿತ ಸಮುದಾಯ ರಾಜಕೀಯದಲ್ಲಿ ಹೇಗೆ ಪಾಲ್ಗೊಳ್ಳುತ್ತಿದ್ದಾರೆ ಎಂಬುದನ್ನು ಅಧ್ಯಯನ ಕೈಗೊಂಡಿದೆ.

ರಾಜಕೀಯ ಸಹಭಾಗಿತ್ವ ಎನ್ನುವುದು ಆಳುವವರ್ಗವನ್ನು ಆಯ್ಕೆ ಮಾಡುವಲ್ಲಿ ಜನತೆಯು ತೋರಿಸುವ ಸಕ್ರಿಯ ಪಾಲ್ಗೊಳ್ಳುವಿಕೆಯ ಸ್ವಯಂ ಚಟುವಟಿಕೆಗಳಾಗಿದ್ದು, ಇದರ ಜೊತೆಗೆ ಅಧಿಕಾರ ಸ್ಥಾನಗಳನ್ನು ಪಡೆದುಕೊಂಡು ನಿರ್ಣಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಚಟುವಟಿಕೆಗಳಿಗೂ ಸಂಬಂಧಿಸಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲಾವಾರು ದಲಿತರು ಗ್ರಾಮ ಪಂಚಾಯತಿಯ ನಿರ್ಣಯ ಪ್ರಕ್ರಿಯೆಯಲ್ಲಿ ಹೇಗೆ ಭಾಗವಹಿಸುತ್ತಾರೆ. ಈ ಗ್ರಾಮ ಪಂಚಾಯತಿ ಅಧಿಕಾರ ಸ್ಥಾನದಲ್ಲಿರುವ ಅಧ್ಯಕ್ಷರುಗಳು ಹೇಗೆ ಅಧಿಕಾರವನ್ನು ನಿರ್ವಹಿಸುತ್ತಾರೆ ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಿಗೆ ಗ್ರಾಮ ಪಂಚಾಯಿತಿಗಳಲ್ಲಿ ನಿಗದಿಪಡಿಸಲಾಗಿರುವ ಮೀಸಲಾತಿಯು ಪ್ರಮಾಣದ ಅರಿವು ಇಲ್ಲ. ಇದರ ಜೊತೆಗೆ ಮೀಸಲಾತಿ ಪ್ರಮಾಣದ ಬಗ್ಗೆ ಬಹುತೇಕ ಪ್ರತಿನಿಧಿಗಳಿಗೆ ಸ್ಪಷ್ಟವಾದ ಗ್ರಹಿಕೆ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ವಿವಿಧ ಸಂಘಟನೆಗಳು ಅಸ್ತಿತ್ವದಲ್ಲಿದ್ದು, ಅವುಗಳು ದಲಿತರ ವಿವಿಧ ಸಮಸ್ಯೆಗಳ ಬಗ್ಗೆ ಹೋರಾಟಗಳನ್ನು ಕೈಗೊಳ್ಳುತ್ತಿವೆ. ಆದರೆ ಬಳ್ಳಾರಿಯ ದಲಿತ ಪ್ರತಿನಿಧಿಗಳಿಗೆ ಈ ಸಂಬಂಧವಾಗಿ ಅರಿವು ಇಲ್ಲ. ದಲಿತ ಸಂಘರ್ಷ ಸಮಿತಿಯು ದಲಿತರಿಗೆ ಸಂಬಂಧಿಸಿದ ಮತಾಂತರ, ಜಾತಿ ನಿರ್ಮೂಲನಾ ಚಳುವಳಿ, ಸಾಮಾಜಿಕ ತಾರತಮ್ಯ, ಮುಂತಾದ ಸಮಸ್ಯೆಗಳ ವಿರುದ್ಧ ಹೋರಾಟ ಮಾಡಿ ದಲಿತ ಸಮುದಾಯದ ಸಾಮಾಜಿಕ ಅಥವಾ ಆರ್ಥಿಕ ಜೀವನದಲ್ಲಿ ಪರಿವರ್ತನೆ ತರಲು ಕಾರಣವಾಗಿದೆ. ಆದರೆ ಬಳ್ಳಾರಿ ಜಿಲ್ಲೆಯ ಬಹುಸಂಖ್ಯಾತ ಪ್ರತಿನಿಧಿಗಳು ಈ ಸಂಘಟನೆಯ ಸದಸ್ಯತ್ವ ಪಡೆದಿಲ್ಲ. ಮತ್ತು ಇತ್ತೀಚಿಗೆ ದಲಿತ ಸಂಘರ್ಷ ಸಮಿತಿಯ ಬಗ್ಗೆ ಅಪನಂಬಿಕೆ ಮೂಡಲು ಕಾರಣವಾಗಿದೆ. ೨೧ನೇ ಶತಮಾನದ ಕಾಲಘಟ್ಟದಲ್ಲಿ ಬಳ್ಳಾರಿ ಜಿಲ್ಲೆಯ ಗ್ರಾಮಗಳಲ್ಲಿ

ಅಸ್ಮಿತೆ ಜೀವಂತಿವಿದೆ. ಇದು ಸಂವಿಧಾನಾತ್ಮಕವಾಗಿ ಆಯ್ಕೆಗೊಂಡ ಪ್ರತಿನಿಧಿಗಳನ್ನು ಬಿಟ್ಟಿಲ್ಲ. ಹಾಗಾಗಿ ದಲಿತ ಪ್ರತಿನಿಧಿಗಳು ದೇವಸ್ಥಾನ, ಹೋಟೆಲ್ ಮತ್ತು ಪಂಚಾಯತ್‌ಗಳನ್ನು ಅಸ್ಪೃಶ್ಯತೆಯನ್ನು ಎದುರಿಸುತ್ತಿದ್ದಾರೆ. ದಲಿತ ಪ್ರತಿನಿಧಿಗಳಿಗೆ ಅಸ್ಮಿತೆ ಗ್ರಹಿಕೆ ಅತ್ಯಂತ ಕಡಿಮೆ ಮಟ್ಟದಲ್ಲಿದ್ದು, ದಲಿತರ ವಿಮೋಚನೆಗಾಗಿ ಹೋರಾಡಿದ ನಾಯಕರನ್ನು ಹೆಚ್ಚಾಗಿ ಗುರುತಿಸುವುದಿಲ್ಲ. ಸಂವಿಧಾನದ ೭೩ನೇ ತಿದ್ದುಪಡಿಯ ದಲಿತರಿಗೆ ಸದಸ್ಯ, ಅಧ್ಯಕ್ಷರ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನೀಡಿದ್ದು, ಅವರು ಸಕ್ರೀಯವಾಗಿ ಭಾಗವಹಿಸುವಂತೆ ಮಾಡುವ ಕ್ರಮಗಳನ್ನು ಕಐಗೊಂಡಿದ್ದು, ಆದರೆ ಬಳ್ಳಾರಿ ಜಿಲ್ಲೆಯ ದಲಿತ ಪ್ರತಿನಿಧಿಗಳಿಗೆ ೭೩ನೇ ಸಾಮಾನ್ಯ ತಿದ್ದುಪಡಿಯ ಆಶಯಗಳು, ಗ್ರಾಮ ಸ್ವರಾಜ್ಯ , ವಾರ್ಡ್ ಸಭೆ, ಮತ್ತು ಜನವಸತಿ ಸಭೆಗಳು ಗ್ರಾಮ ಸಭೆಯ ಅರಿವು, ಗ್ರಾಮ ಪಂಚಾಯಿತಿ ಸಭೆ ನಿರ್ವಹಣೆಗೆ ಬೇಕಾಗಿರುವ ಕೋರಂ, ಸ್ಥಾಯಿ ಸಮಿತಿಗಳ ಮಹತ್ವ, ಹಾಗೂ ಸಾಮಾಜಿಕ ನ್ಯಾಯ ಸಮಿತಿಗಳ ಮಹತ್ವ ಹಾಗೂ ಗ್ರಾಮ ಪಂಚಾಯತಿ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಅರಿವು ಇಲ್ಲ. ಇದರ ಜೊತೆಗೆ ದಲಿತ ಪ್ರತಿನಿಧಿಗಳು ಮತ್ತು ಅಧ್ಯಕ್ಷರುಗಳು ಅಧಿಕಾರ ಪ್ರಕ್ರಿಯೆಯಲ್ಲಿ ಹೇಗೆ ಭಾಗವಹಿಸುತ್ತಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಅಧ್ಯಯನದ ಫಲಿತಗಳು ಹೇಳುವ ಪ್ರಕಾರ ದಲಿತ ಪ್ರತಿನಿಧಿಗಳು ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳನ್ನು ಆಯೋಜಿಸುತ್ತಿಲ್ಲ. ಗ್ರಾಮ ಸಭೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿಲ್ಲ. ಗ್ರಾಮ ಪಂಚಾಯಿತಿ ಸಭೆಗಳಲ್ಲಿ ನಿಯಮಿತವಾಗಿ ಭಾಗವಹಿಸುತ್ತಿಲ್ಲ. ದಲಿತ ಸಮುದಾಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವಲ್ಲಿ ಸಕ್ರಿಯವಾಗಿಲ್ಲ. ನಿರ್ಣಯ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿಲ್ಲ ಮತ್ತು ದಲಿತರ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಗೊತ್ತುವಳಿಗಳನ್ನು ಮಂಡಿಸಲು ಸಾಧ್ಯವಾಗಿಲ್ಲ. ಹಾಗಾಗಿ ದಲಿತ ಪ್ರತಿನಿಧಿಗಳು ದಲಿತ ಸಮುದಾಯದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲರಾಗಿದ್ದಾರೆ. ದಲಿತ ಅಧ್ಯಕ್ಷರುಗಳು ಸ್ವತಂತ್ರವಾಗಿ ಗ್ರಾಮ ಪಂಚಾಯತಿ ಸಭೆಯನ್ನು ಕರೆಯುವ ಅಧಿಕಾರವನ್ನು ನಿರ್ವಹಿಸುತ್ತಿಲ್ಲ. ಪಂಚಾಯತ್ ಸಭೆಗಳ ಅಧ್ಯಕ್ಷತೆ ವಹಿಸುವ ನಡಾವಳಿಗಳಿಗೆ ಸ್ವಾತಂತ್ರವಾಗಿ ಸಹಿ ಮಾಡುವ, ಗುತ್ತಿಗೆ ಮತ್ತು ಅನುದಾನಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಅಧಿಕಾರವನ್ನು ಬಳಸುವಲ್ಲಿ ವಿಫಲರಾಗಿದ್ದಾರೆ. ಈ ಅಧಿಕಾರವನ್ನು ದಲಿತರ ಅಧ್ಯಕ್ಷರುಗಳ ಹೆಸರಿನಲ್ಲಿ ಅಧಿಕಾರಿಶಾಹಿ ವರ್ಗ ಮತ್ತು ಮೇಲ್ಜಾತಿ ಸಮುದಾಯಗಳು ಬೇನಾಮಿಯಾಗಿ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ. ಹಾಗಾಗಿ ದಲಿತ ಸಮುದಾಯದ ಸಮಸ್ಯೆಗಳಿಗೆ ಪರಿಹಾರಗಳು ಸಿಗುತ್ತಿಲ್ಲ.

ಪ್ರಶ್ನಾವಳಿಗಳು

ದಲಿತ ಪಂಚಾಯತ್ ಪ್ರತಿನಿಧಿಗಳ ಪ್ರಶ್ನಾವಳಿ

೧) ಪ್ರತಿನಿಧಿಯ ಹೆಸರು ______________________

೨) ಲಿಂಗ ______________________

೩) ವಯಸ್ಸು ______________________

೪) ಶಿಕ್ಷಣ ______________________

೫) ವೃತ್ತಿ ______________________

೬) ಭೂ ಒಡೆತನ ______________________

೭) ವಾರ್ಷಿಕ ಆದಾಯ ______________________

೮) ತರಬೇತಿ ______________________

೧) ನೀವು ಎಷ್ಟನೆ ಬಾರಿಗೆ ಸದಸ್ಯರಾಗಿ ಚುನಾಯಿತರಾಗಿದ್ದೀರಿ ?

ಎ) ಮೊದಲಬಾರಿ ಬಿ) ಎರಡನೇ ಬಾರಿ ಸಿ) ಮೂರನೇ ಬಾರಿ ಡಿ) ಇತರೆ

೨) ನೀವು ರಾಜಕೀಯ ಹಿನ್ನೆಲೆ ಇರುವ ಕುಟುಂಬಕ್ಕೆ ಸೇರಿದ್ದೀರಾ

ಎ) ಹೌದು ಬಿ) ಇಲ್ಲ

ಹೌದಾದರೆ

–ನಿಮ್ಮ ಕುಟುಂಬದ ಯಾವ ಸದಸ್ಯರು ರಾಜಕಾರಣದಲ್ಲಿರು?

ಎ) ತಂದೆ ಬಿ) ತಾಯಿ ಸಿ) ಸಹೋದರರು ಡಿ) ಸಹೋದರಿಯರು ಇ) ಇತರೆ

೩) ನೀವು ರಾಜಕೀಯ ಸಂಘಟನೆಗಳ ಸದಸ್ಯತ್ವ ಪಡೆದಿದ್ದೀರಾ ?

ಎ) ಹೌದು ಬಿ) ಇಲ್ಲ

ಹೌದಾದರೆ ಯಾವ ಸಂಘಟನೆಗಳ ಸದಸ್ಯತ್ವ ಪಡೆದಿದ್ದೀರಾ ?

ಎ) ದಲಿತ ಸಂಘರ್ಷ ಸಮಿತಿ ಬಿ) ವಿದ್ಯಾರ್ಥಿ ಸಂಘಟನೆ ಸಿ) ರೈತ ಸಂಘಟನೆ ಡಿ) ಇತರೆ

೪) ನೀವು ರಾಜಕೀಯ ಪಕ್ಷಗಳ ಸದಸ್ಯತ್ವ ಪಡೆದಿದ್ದೀರಾ ?

ಎ) ಹೌದು ಬಿ) ಇಲ್ಲ

– ಹೌದಾದರೆ ಯಾವ ಪಕ್ಷದ ಸದಸ್ಯತ್ವ ಪಡೆದಿದ್ದೀರಾ?

ಎ) ಬಿಎಸ್‌ಪಿ ಬಿ) ಕಾಂಗ್ರೆಸ್ ಸಿ) ಬಿಜೆಪಿ ಡಿ) ಜನತಾದಳ ಇ) ಇತರೆ

ದಲಿತರ ಅಸ್ಥಿರತೆಯ ಬಗ್ಗೆ ದಲಿತ ಪ್ರತಿನಿಧಿಗಳ ಗ್ರಹಿಕೆ

೧) ದಲಿತರಿಗೆ ಮೀಸಲಾತಿಯಿಂದ ಉಪಯೋಗವಿದೆಯೆಂದು ಭಾವಿಸುತ್ತೀರಾ ?

ಎ) ಹೌದು ಬಿ) ಇಲ್ಲ

೨) ಪಂಚಾಯತ್‌ಗಳಲ್ಲಿ ದಲಿತರಿಗೆ ನಿಗದಿಪಡಿಸಿದ ಶೇಕಡ ೩೩.೩ ರಷ್ಟು ಪ್ರಮಾಣ ಸರಿಯಾಗಿದೆಯೆಂದು ಭಾವಿಸುತ್ತೀರಾ?

ಎ) ಹೌದು ಬಿ) ಇಲ್ಲ

– ಇಲ್ಲವಾದರೆ ಎಷ್ಟು ಪ್ರಮಾಣದ ಮೀಸಲಾತಿ ಬಯಸುತ್ತೀರಿ

ಎ) ಶೇ. ೫೦ ರಷ್ಟು ಬಿ) ಶೇ.೭೫ರಷ್ಟು ಸಿ) ಇತರೆ

೩) ದಲಿತರ ಅಭಿವೃದ್ಧಿಗಾಗಿ ದಲಿತ ಸಂಘಟನೆಗಳು ಇರಬೇಕೆಂದು ಬಾವಿಸುತ್ತೀರಾ?

ಎ) ಹೌದು ಬಿ) ಇಲ್ಲ

೪) ದಲಿತ ಸಂಘರ್ಷ ಸಮಿತಿಯು ದಲಿತರ ಸಮಾಜೋ ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿದೆಯೇ?

ಎ) ಹೌದು ಬಿ) ಇಲ್ಲ

– ಹೌದಾದರೆ ಯಾವ ರೀತಿ ಪ್ರಭಾವಿಸಿದೆ

ಎ) ಇತರೆ ಸಮುದಾಯದವರು ಕಿರುಕುಳ ನೀಡಿದರೆ ನಿಮ್ಮ ಬೆಂಬಲಕ್ಕೆ ಬರುತ್ತಾರೆ.

ಬಿ) ಹೊಲಗದ್ದೆಗಳ ವ್ಯಾಜ್ಯಗಳಾದಾಗ ವಿವಾದ ಪರಿಹರಿಸುತ್ತಾರೆ.

ಸಿ) ಸರ್ಕಾರಿ ಇಲಾಖೆಗಳು ಮತ್ತು ಬ್ಯಾಂಕುಗಳಿಂದ ಸಾಲ ಕೊಡಿಸುತ್ತಾರೆ.

ಡಿ) ಸರ್ಕಾರಿ ಇಲಾಖೆಗಳಲ್ಲಿ ನಿಮ್ಮ ಕೆಲಸ ವಿಳಂಬವಾದಾಗ ಸಹಾಯ ಮಾಡುತ್ತಾರೆ.

ಇಲ್ಲವಾದರೆ ಕಾರಣವೇನು?

ಎ) ದಲಿತ ಸಂಘರ್ಷ ಸಮಿತಿಯಲ್ಲಿ ವಿವಿಧ ಬಣಗಳಾಗಿ ಇರುವುದರಿಂದ ಪರಿಹಾರ ಕೈಗೊಂಡಿಲ್ಲ

ಬಿ) ನಮ್ಮ ಸಮಸ್ಯೆಗಳಿಗೆ ಬೇಗ ಸ್ಪಂದಿಸುವುದಿಲ್ಲಾ

ಸಿ) ಸುಳ್ಳು ಆಶ್ವಾಸನೆ ನೀಡುತ್ತಾರೆ

ಡಿ) ಕೆಲವು ನಾಯಕರು ಹಣ ಪಡೆದರು ಸಹಾಯ ಮಾಡುವುದಿಲ್ಲ

ಇ) ಇತರೆ ಸಮುದಾಯದ ಸಮಸ್ಯೆಗಳಿಗೆ ಹೆಚ್ಚು ಸ್ಪಂದಿಸುತ್ತಾರೆ.

೦೫) ಅಸ್ಪೃಶ್ಯತೆ ಇಂದಿಗೂ ಜೀವಂತವಿದೆಯೆಂದು ಭಾವಿಸುತ್ತೀರಾ?

ಎ) ಹೌದು ಬಿ) ಇಲ್ಲ

-- ಹೌದಾದರೆ ಅಸ್ಪೃಶ್ಯತೆಯನ್ನು ಎಲ್ಲೆಲ್ಲಿ ಆಚರಿಸಲಾಗುತ್ತಿದೆ.

ಎ) ಹೋಟೆಲ್‌ಗಳಲ್ಲಿ ಬಿ) ದೇವಸ್ಥಾನಗಳಲ್ಲಿ ಸಿ) ಶಾಲೆಗಳಲ್ಲಿ ಡಿ) ಆಸ್ಪತ್ರೆಗಳಲ್ಲಿ ಇ) ಪಂಚಾಯತ್‌ಗಳಲ್ಲಿ ಎಫ್) ಸರ್ಕಾರಿ ಕಚೇರಿಯಲ್ಲಿ ಜಿ) ಇತರೆ

೦೬) ದಲಿತರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಪಕ್ಷಗಳನ್ನು ಹೆಸರಿಗೆ

ಎ) ಬಿಎಸ್‌ಪಿ ಬಿ) ಆರ್‌ಪಿಐ ಸಿ) ದಲಿತ ಪ್ಯಾಂಥರ್ ಡಿ) ಲೋಕಶಕ್ತಿ ಪಕ್ಷ

೦೭) ಭಾರತದಲ್ಲಿ ದಲಿತರ ವಿಮೋಚನೆಗಾಗಿ ಹೋರಾಡಿರುವುದನ್ನು ಹೆಸರಿಸಿ?

ಎ) ಒಂದು ಹೆಸರು ಬಿ) ಎರಡು ಹೆಸರು ಸಿ) ಮೂರು ಹೆಸರು

ಡಿ) ಮೂರಕ್ಕಿಂತ ಹೆಚ್ಚು ಹೆಸರು

೦೮) ನಿಮ್ಮ ಪಂಚಾಯಿತಿಯ ಎಷ್ಟು ಸ್ಥಾನಗಳಲ್ಲಿ ದಲಿತರಿಗೆ ಮೀಸಲಾತಿ ನೀಡಲಾಗಿದೆ ?

ಎ) ಸರಿಯಾದ ಉತ್ತ ಬಿ. ತಪ್ಪು ಉತ್ತರ

ಪಂಚಾಯತ್ ರಾಜ್ ಸಂಸ್ಥೆಗಳ ಕಾನೂನು ರಚನೆ, ಕಾರ್ಯನಿರ್ವಹಣೆ ಮತ್ತು ಅಧಿಕಾರ ಕಾರ್ಯದರ್ಶಿ ಬಗ್ಗೆ ದಲಿತ ಪ್ರತಿನಿಧಿಗಳ ಅರಿವು

೧) ೭೩ನೇ ಸಂವಿಧಾನ ತಿದ್ದುಪಡಿಯ ಬಗ್ಗೆ ತಮಗೇನು ತಿಳಿದಿದೆ?
ಎ) ಪೂರ್ಣ ತಿಳಿದಿದೆ ಬಿ) ಸ್ವಲ್ಪ ತಿಳಿದಿದೆ ೩) ತಿಳಿದಿಲ್ಲಾ

೨) ಗ್ರಾಮ ಸ್ವರಾಜ್ಯದ ಘಟಕಗಳು ಯಾವುವು?

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ ಸಿ) ಗೊತ್ತಿಲ್ಲ

೩) ವಾರ್ಡ್ ಸಭೆಗಳು ಮತ್ತು ಜನವಸತಿ ಸಭೆಗಳು ಎಷ್ಟು ದಿನಗಳಿಗೊಮ್ಮೆ ಕರೆಯಲಾಗುತ್ತಿದೆ ?

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ

೪) ವಾರ್ಡ್ ಸಭೆಯಲ್ಲಿ ಚರ್ಚೆಯಾಗುವ ವಿಷಯಗಳು ಯಾವುವು ?

ಎ) ಸರಿಯಾದ ಉತ್ತರ ಬಿ) ಸ್ವಲ್ಪಮಟ್ಟಿಗೆ ಸರಿಯಾಧ ಉತ್ತರ ಸಿ) ಸರಿಯಧ ಉತ್ತರವಿಲ್ಲ

೫) ವಾರ್ಡ್ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆಯೇ?

ಎ) ಹೌದು ಬಿ) ಇಲ್ಲ ಸಿ) ಗೊತ್ತಿಲ್ಲ

೬) ನೀವೂ ಸದಸ್ಯರಾಗಿ ಜನವಸತಿ ಸಭೆಗಳನ್ನು ಆಯೋಜಿಸಿದ್ದೀರಾ?

ಎ) ಹೌದು ಬಿ) ಇಲ್ಲ ಸಿ) ಗೊತ್ತಿಲ್ಲ

-ಹೌದಾದರೆ

ಎ) ಜನವಸತಿ ಸಭೆಗಳಲ್ಲಿ ಯಾಔ ಸಂಗತಿಗಳನ್ನು ಚರ್ಚಿಸಲಾಗುತ್ತದೆ.

ಬಿ) ಸರಿಯಾದ ಉತ್ತರ ಬಿ) ಅಸ್ಪಷ್ಟ ಉತ್ತರ ಸಿ ತಪ್ಪು ಉತ್ತರ

೭) ಗ್ರಾಮಸಭೆಯನ್ನು ಎಷ್ಟು ದಿನಗಳಿಗೊಮ್ಮೆ ಕರೆಯಲಾಗುತ್ತದೆ

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ

೮) ಗ್ರಾಮಸಭೆಯ ಸದಸ್ಯರು ಯಾರು?

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ

೯) ಗ್ರಾಮ ಸಭೆಯ ಅಧಿಕಾರಿಗಳು ಯಾರು?

ಎ) ಸ್ಪಷ್ಟ ಗ್ರಹಿಕೆ ಬಿ) ಅಸ್ಪೃಶ್ಯ ಗ್ರಹಿಕೆ

೧೦) ಗ್ರಾಮ ಪಂಚಾಯತ್‌ಗಳಲ್ಲಿ ಅನುಸೂಚಿತ ಜಾತಿಗಳಿಗೆ ಎಷ್ಟು ಪ್ರಮಾಣದ ಮೀಸಲಾತಿ ನೀಡಲಾಗಿದೆ.

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ

೧೧) ಗ್ರಾಮ ಪಂಚಾಯಿತಿ ಸಭೆಗೆ ಇರಬೇಕಾದ ಕೋರಂ ಎಷ್ಟು?

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ

೧೨) ಗ್ರಾಮ ಪಂಚಾಯಿತಿಯ ಸಭೆಯನ್ನು ಎಷ್ಟು ದಿನಗಳಿಗೊಮ್ಮೆ ಕರೆಯಲಾಗುತ್ತದೆ ?

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ

೧೩) ಗ್ರಾಮ ಪಂಚಾಯಿತಿಯಲ್ಲಿ ಎಷ್ಟು ಸ್ಥಾಯಿ ಸಮಿತಿಗಳಿವೆ?

ಎ) ಸರಿಯಾದ ಉತ್ತರ ಬಿ) ತಪ್ಪು ಉತ್ತರ

೧೪) ಸಾಮಾಜಿಕ ನ್ಯಾಯ ಸಮಿತಿಗೆ ಯಾರು ಅಧ್ಯಕ್ಷರಾಗಿರುತ್ತಾರೆ?

ಎ) ಸರಿಯಾಧ ಉತ್ತರ ಬಿ) ತಪ್ಪು ಉತ್ತರ

೧೫) ಸದಸ್ಯರಾಗಿ ನಿಮ್ಮ ಕರ್ತವ್ಯಗಳು ಮತ್ತು ಜವಾಬ್ದಾರಿಗಳೇನು?

ಎ) ಉತ್ತಮ ಅರಿವು ಬಿ) ಕನಿಷ್ಠ ಅರಿವು

೧೬) ಒಟ್ಟಾರೆ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಮತ್ತು ಜವಾಬ್ದಾರಿಗಳೇನು?

ಎ) ಉತ್ತಮ ಅರಿವು ಬಿ) ಕನಿಷ್ಠ ಅರಿವು

೧೭) ಸಾಮಾಜಿಕ ನ್ಯಾಯ ಸಮಿತಿಯ ಅಧಿಕಾರಿಗಳು ಮತ್ತು ಜವಾಬ್ದಾರಿಗಳೇನು?

ಎ) ಉತ್ತಮ ಗ್ರಹಿಕೆ ಬಿ) ಕನಿಷ್ಠ ಗ್ರಹಿಕೆ

ಗ್ರಂಥಋಣ

ಗ್ರಂಥ ಋಣ

ಅಕಿನ್‌ಚನ್ ಎಸ್., ಕಾಸ್ಟ್, ಕ್ಲಾಸ್ ಆಂಡ್ ಪೊಲಿಟಿಕ್ಸ್, ನ್ಯೂಡೆಲ್ಲಿ, ಗ್ಯಾನ್ ಪಬ್ಲಿಪಿಂಗ್ ಹೌಸ್, ೧೯೯೫

ಅಬ್ದುಲ್ ಅಜೀಜ್, ಡೆಮಾಕ್ರೆಟಿಕ್ ಡಿಸೆಂಟ್ರಲೈಜೇಷನ್–ಎಕ್ಸ್‌ಪಿರಿಯನ್ಸ್ ಆಫ್ ಕರ್ನಾಟಕ, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಸೆಪ್ಟಂಬರ್ ೨೩, ೨೦೦೦

ಅರಸಚನ್‌ಸಿ.ಎಸ್., ಕ್ಯಾಸ್ಟ್, ಕ್ಲಾಸ್ ಆಂಡ್ ಪೊಲಿಟಿಕ್ಸ್ , ನ್ಯೂಡೆಲ್ಲಿ, ಗ್ಯಾನ್ ಪಬ್ಲಿಕೆಷನ್ ಹೌಸ್, ೧೯೯೫, **ಅರುಂಧತಿ ರಾಯ್**, ದಲಿತರ ದಮನಕ್ಕೆ ಜಾತಿ ಪದ್ಧತಿಯ ಅಸ್ತ್ರ : ಎ.ಎಸ್.ಪುತ್ತಿಗೆ,(ಸಂಪಾದಕ) ವಾರ್ತಾಭಾರತಿ, ೧೪ನೇ ವಾರ್ಷಿಕೋತ್ಸವ ವಿಶೇಷಾಂಕ, ಅಕ್ಟೋಬರ್ ೨೦೧೬,

ಆಲಿವರ್ ಮೆಂಡಲ್‌ಸನ್ ಅಂಡ್ ಮಾರಿಕ ವಿಜಯಾನೆ, ದಿ ಅನ್‌ಟಚೆಬಲ್ಸ್: ಸಬಾರ್ಡಿನೇಷನ್, ಪವರ್ಟಿ ಆಂಡ್ ದಿ ಸ್ಟೇನ್ ಇನ್ ಮಾಡರ್ನ್ ಇಂಡಿಯ, ಯಂ.ಕೆ. ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೧೯೯೮, ಅಲ್ತೇಕರ್ ಎ.ಎಸ್., ಸ್ಟೇಟ್ ಆಂಡ್ ಗವರ್ನಮೆಂಟ್ ಇನ್ ಏನ್ಸಿಯಂಟ್ ಇಂಡಿಯಾ, ಮೋತಿಲಾಲ್ ಬನಾರಸಿ ದಾಸ್ ಪಬ್ಲಿಷರ್ಸ್, ಡೆಲ್ಲಿ, ೧೯೭೭,

ಇಕ್ಬಾಲ್ ನರೇನ್, "ಡೆಮಾಕ್ರಟಿಕ್ ಡಿಸೆಂಟ್ರಲೈಜೇಷನ್, ದ ಐಡಿಯಾ, ದ ಇಮೇಜ್, ಆಂಡ್ ದ ರಿಯಾಲಿಟಿ," ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಅಡ್ಮಿಮಿನಿಸ್ಟ್ರೇಷನ್, ಸಂಪುಟ.೯, ಸಂ.೧, ಜನವರಿ–ಮಾರ್ಚ್, ೧೯೬೩

ಇಮ್ಯಾನ್ಯುಯಲ್ ನಹರ್,"ರೆಸ್ಟೋರೇಷನ್ ಅಫ್ ಹ್ಯೂಮನ್‌ರೈಟ್ಸ್ ಆಂಡ್ ಡಿಗ್ನಿಟಿ ಟು ದಲಿತ್ಸ್: ಮೇನ್‌ಸ್ಟ್ರೀಮ್, ಸಂಪುಟ ಸಂಖ್ಯೆ ಫಿಐಗಿ, ಏಪ್ರಿಲ್ ೨೧, ೨೦೦೭,

ಇಂದಿರಾ ಎಂ., "ಕಾಸ್ಟ್ ಆಂಡ್ ವುಮೆನ್ ಪಾರ್ಟಿಸಿಪೇಷನ್ ಇನ್ ಲೇಬರ್ ಮಾರ್ಕೆಟ್: ಎ ಕೇಸ್ ಸ್ಟಡಿ ಆಫ್ ಲ್ಯಾಂಡ್ ಲೆಸ್ ಲೇಬರ್ಸ್", ಸಿ.ಚಕ್ರಪಾಣಿ ಮತ್ತು ಎಸ್.ವಿಜಯಕುಮಾರ್,(ಸಂ), ಛೇಂಜಿಂಗ್ ಸ್ಟೇಟಸ್ ಆಂಡ್ ರೋಲ್ ಆಫ್ ವುಮೆನ್ ಇನ್ ಇಂಡಿಯನ್ ಸೊಸೈಟಿ, ಡೆಲ್ಲಿ, ಎಂ.ಡಿ.ಪಬ್ಲಿಕೇಷನ್ಸ್, ೧೯೯೪,

ಎಲಿಯನಾರ್ ಜೆಲಿಯಟ್, ಫ್ರಂ ಅನ್‌ಟಚೆಬಲ್ ಟು ದಲಿತ್ – ಎಸ್ಸೆ ಆನ್ ದಿ ಅಂಬೇಡ್ಕರ್ ಮೂವ್‌ಮೆಂಟ್, ನ್ಯೂಡೆಲ್ಲಿ, ಮನೋಹರ್ ಪಬ್ಲಿಕೇಷನ್, ೧೯೯೨,

ಕಾನ್ಸಟಿಟೂಯೆಂಟ್ ಅಸೆಂಬ್ಲಿ ಡಿಬೇಟ್ಸ್, ಉಲ್ಲೇಖ:ಎಸ್.ಪಿ.ಜೈನ್, ಇನ್ಸಿಟಿಟ್ಯೂಷನಲೈಜೇಷನ್ ಆಫ್ ಗ್ರಾಸ್ ರೂಟ್ಸ್ ಗವರ್ನೆನ್ಸ್ ಇನ್ ಇಂಡಿಯಾ, ಸುಂದರಾಮ್ (ಸಂ) (ಸುಂದರಾಮ್, (ಸಂ) ಪಾರ್ಟಿಸಿಪೇಷನ್, ಡಿಸೆಂಟ್ರಲೈಜೇಷನ್ ಪ್ಲಾನಿಂಗ್ ಆಂಡ್ ಪಂಚಾಯತಿ ರಾಜ್ ಇನ್ ಇಂಡಿಯಾ: ಎ ರಿವಿವ್ಯೂ, ಎಸ್.ಪಿ.ಜೈನ್, ಡೈನಮಿಕ್ಸ್ ಆಫ್ ಗ್ರಾಸ್ ರೂಟ್ಸ್, ಗವರ್ನೆನ್ಸ್ ಇನ್ ಇಂಡಿಯಾ: ಡ್ರೀಮ್ಸ್ ಆಂಡ್ ರಿಯಾಲಿಟೀಸ್, ನ್ಯೂಡೆಲ್ಲಿ, ಕಾನಿಷ್ಕ ಪಬ್ಲಿಷರ್ಸ್ ಆಂಡ್ ಡಿಸ್ಟ್ರಿಬೂಟರ್ಸ್, ೨೦೦೭,

ಕಿತ್ತೂರ್ ಎ.ಟಿ ಆಂಡ್ ಹರೀಶ್ ರಾಮಸ್ವಾಮಿ, 'ಪಂಚಾಯತ್‌ರಾಜ್ ಇನ್ ಕರ್ನಾಟಕ ಆಂಡ್ ಎಂಪೀರಿಕಲ್ ಇವಾಲ್ಯೂವೇಷನ್, ಕರ್ನಾಟಕ ಗವರ್ನಮೆಂಟ್ ಆಂಡ್ ಪೊಲಿಟಿಕ್ಸ್, ಹರೀಶ್ ರಾಮಸ್ವಾಮಿ, ಎಸ್.ಎಸ್.ಪಟಗುಂಡಿ, ಆಂಡ್ ಎಸ್.ಎಚ್.ಪಾಟೀಲ್, (ಸಂ) ನ್ಯೂಡೆಲ್ಲಿ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, ೨೦೦೭,

ಕಿರಣ್ ಶುಕ್ಲಾ, ಕಾಸ್ಟ್ ಪೊಲಿಟಿಕ್ಸ್ ಇನ್ ಇಂಡಿಯಾ: ಎ ಕೇಸ್ ಸ್ಟಡೀ ಆಫ್ ಬಿಹಾರ್, ಡೆಲ್ಲಿ, ಮಿತ್ತಲ್ ಪಬ್ಲಿಷರ್ಸ್, ೧೯೮೭,

ಕೌಟಿಲ್ಯನ ಅರ್ಥಶಾಸ್ತ್ರ, ಕನ್ನಡಕ್ಕೆ ಆರ್.ಶ್ಯಾಮಾಶಾಸ್ತ್ರಿ, ಪುಸ್ತಕ ಸಂ.೩, ೧೨ನೇ ಅಧ್ಯಾಯ,

ಗ್ರಾನ್‌ವಿಲ್ಲೆ ಆಸ್ಟಿನ್, ದ ಇಂಡಿಯನ್ ಕಾನ್‌ಸ್ಟಿಟ್ಯೂಷನ್ : ಕಾರ್ನರ್ ಸ್ಟೋನ್ ಆಫ್ ಎ ನೇಷನ್, ಡೆಲ್ಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೭೨,

ಗಾಜಿರೆಡ್ಡಿ ಎಂ, ಆಂಡ್ ಮಧುಸೂದನ ಬಂಡಿ, ದ ಸ್ಟೇಟಸ್ ಆಫ್ ಪಂಚಾಯತ್ ರಾಜ್ ಇನ್ಸಿಟಿಟ್ಯೂಷನ್ ಇನ್ ಆಂಧ್ರಪ್ರದೇಶ ಆಂಡ್ ಕರ್ನಾಟಕ: (ಸುಂದರಾಮ್, (ಸಂ) ಪಾರ್ಟಿಸಿಪೇಷನ್, ಡಿಸೆಂಟ್ರಲೈಜೇಷನ್ ಪ್ಲಾನಿಂಗ್ ಆಂಡ್ ಪಂಚಾಯತಿ ರಾಜ್ ಇನ್ ಇಂಡಿಯಾ: ಎ ರಿವಿವ್ಯೂ, ಎಸ್.ಪಿ.ಜೈನ್, ಡೈನಮಿಕ್ಸ್ ಆಫ್ ಗ್ರಾಸ್ ರೂಟ್ಸ್, ಗವರ್ನೆನ್ಸ್ ಇನ್ ಇಂಡಿಯಾ: ಡ್ರೀಮ್ಸ್ ಆಂಡ್ ರಿಯಾಲಿಟೀಸ್, ನ್ಯೂಡೆಲ್ಲಿ, ಕಾನಿಷ್ಕ ಪಬ್ಲಿಷರ್ಸ್ ಆಂಡ್ ಡಿಸ್ಟ್ರಿಬೂಟರ್ಸ್, ೨೦೦೭,

ಗುರುಮೂರ್ತಿಯು., ಪಂಚಾಯತ್ ರಾಜ್ ಆಂಡ್ ವೀಕರ್ ಸೆಕ್ಷನ್ಸ್, ನ್ಯೂಡೆಲ್ಲಿ, ಆಶಿಷ್ ಪಬ್ಲಿಕೇಷನ್ಸ್, ೧೯೮೭,

ಗೇಲ್‌ಓಂವೆಟ್, 'ದಲಿತ ವಿಜನ್ಸ್: ದ ಆ್ಯಂಟಿ ಕಾಸ್ಟ್ ಮೂವ್‌ಮೆಂಟ್ ಆಂಡ್ ದ ಕನಸ್ಟ್ರಕ್ಷನ್ ಆಫ್ ಎನ್ ಇಂಡಿಯನ್ ಐಡೆಂಟಿಟಿ, ನ್ಯೂಡೆಲ್ಲಿ, ಓರಿಯೆಂಟ್, ಲಾಂಗ್‌ಮನ್, ೧೯೯೫,

.**ಗೆಹಲಾಟ್ ಎನ್.ಎಸ್,** "ದ ಪ್ಲೈಟ್ ಆಫ್ ಹ್ಯೂಮನ್ ರೈಟ್ಸ್ ಆಫ್ ಅನ್‌ಟಚಬಲ್ಸ್ ಆಂಡ್ ದಲಿತ್ಸ್ ಇನ್ ಇಂಡಿಯಾ: ಸಂ ಏರಿಯಾಸ್ ಆರ್‌ಟುಬಿ ಫೋಕಸ್ಡ್" ಜೇನಬ್‌ಬಾನು (ಸಂ) ಡಿಕ್ಲೈನ್ ಆಂಡ್ ಫಾಲ್ ಆಫ್ ಇಂಡಿಯನ್ ಪೊಲಿಟಿಕ್ಸ್, ಕಾನಿಶ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೯೯,

ಗೋಪಾಲ್ ಗುರು, "ಬಿ.ಪೊಲಿಟಿಕ್ಸ್, ಆಫ್ ನೇಮಿಂಗ್", ಸೆಮಿನಾರ್, ಸಂ.೪೭೧, ನವೆಂಬರ್, ೧೯೯೮,

ಘನಶ್ಯಾಮ್ ಷಾ, "ದಲಿತ್ ಮೂವ್‌ಮೆಂಟ್ ಅಂಡ್ ಸರ್ಚ್ ಆಫ್ ಐಡೆಂಟಿಟಿ" ಘನಶ್ಯಾಮ್ ಷಾ (ಸಂ), ದಲಿತ್ ಐಡೆಂಟಿಟಿ ಆಂಡ್ ಪೊಲಿಟಿಕ್ಸ್, ನ್ಯೂಡೆಲ್ಲಿ, ಸೇಜ್ ಪಬ್ಲಿಕೇಷನ್ಸ್, ೨೦೦೧,

ಘನಶ್ಯಾಂ ಷಾ, ಪೊಲಿಟಿಕ್ಸ್ ಆಫ್ ಷೆಡ್ಯೂಲ್ಡ್ ಕಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್, ಬಾಂಬೆ, ವೋರ ಅಂಡ್ ಕಂಪನಿ, ೧೯೭೫,

ಘೋಷ್ ಜಿ.ಕೆ.ಮತ್ತು ಶುಕ್ಲಾ ಘೋಷ್, ದಲಿತ್ ವುಮನ್, ನ್ಯೂಡೆಲ್ಲಿ, ಎಪಿಎಚ್ ಪಬ್ಲಿಷಿಂಗ್ ಕಾರ್ಪೋರೇಷನ್, ೧೯೯೭

ಚಂಡೀದಾಸ್ ಆರ್., ಹೌ ಕ್ಲೋಸ್ ಟು ಇಕ್ವಾಲಿಟಿ ಆಫ್ ಶೆಡ್ಯೂಲ್ಡ್ ಕಾಸ್ಟ್, ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ ಸಂ.೪, ಸಂಖ್ಯೆ ೨೪, ಜೂನ್ ೧೯೬೯,

ಚಂದ್ರಶೇಖರ್ ಟಿ.ಆರ್., ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ– ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಜಯಶ್ರೀ ಮಂಗೂಬಾಯಿ, ಅಲೋಷಿಯಸ್ ಇರುದಯಮ್, ಎಮ್ಮ ಸಿಡೆಹ್ಯಮ್, ದಲಿತ ವುಮೆನ್ಸ್ ರೈಟ್ಸ್ ಟು ಪೊಲಿಟಿಕಲ್ ಪಾರ್ಟಿಸಿಪೇಷನ್ ಇನ್ ರೂರಲ್ ಪಂಚಾಯತ್ ರಾಜ್, ಎ ಸ್ಟಡೀ ಆಫ್ ಗುಜರಾತ್ ಆಂಡ್ ತಮಿಳ್‌ನಾಡು, ಮಧುರೈ, ಇನ್ಸಿಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಎಜುಕೇಷನ್, ಆ್ಯಕ್ಷನ್ ಆಂಡ್ ಸ್ಟಡೀಸ್, ೨೦೦೯,

ಜಾನ್ ಕ್ಯಾಂಪಬೆಲ್, ರಿಲೀಜಿಯಸ್ ಫೆಸ್ಟಿವಲ್ಸ್ ಆಂಡ್ ಕಾಸ್ಟ್ ಸಿಸ್ಟಮ್ ಇನ್ ಇಂಡಿಯಾ, ನ್ಯೂಡೆಲ್ಲಿ, ಖಾನಾ ಪಬ್ಲಿಷರ್ಸ್, ೨೦೦೩,

ಜಾರ್ಜ್ ಮ್ಯಾಥ್ಯೂವ್, ಪವರ್ ಟು ದ ಪೀಪಲ್, ಎಂ.ಕೆ.ಸಂತಾನಂ (ಸಂ), ಫಿಫ್ಟಿ ಈಯರ್ಸ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್, ನ್ಯೂಡೆಲ್ಲಿ, ಪಬ್ಲಿಕೇಷನ್, ಡಿವಿಜನ್ ಮಿನಿಸ್ಟ್ರೀ ಆಫ್ ಇನ್‌ಫರ್ ಮೇಷನ್ ಆಂಡ್ ಬ್ರಾಡ್ ಕಾಸ್ಟಿಂಗ್ ಗೌರ್ನಮೆಂಟ್ ಆಫ್ ಇಂಡಿಯಾ, ೨೦೦೦

ಜಾಧವ್ ಎ.ಎಸ್., "ದಲಿತ್ ಅಮಾಂಗ್ ದಲಿತ್ಸ್: ಶೆಡ್ಯೂಲ್ಡ್ ಕಾಸ್ಟ್ ಆಂಡ್ ಶೆಡ್ಯೂಲ್ಡ್ ಟ್ರೈಬ್ಸ್ ವುಮೆನ್": ಜೋಗ್‌ದಂದ್, ಪಿ.ಜಿ.,(ಸಂಪಾದಿತ) ರಿಜರ್ವೇಷನ್ ಪಾಲಿಸಿ ಆಂಡ್ ದ ಎಂಪವರ್‌ಮೆಂಟ್ ಆಫ್ ದಲಿತ್ಸ್, ಮಿಖಾಯಿಲ್ ಎಸ್.ಎಂ.(ಸಂ). ದಲಿತ್ಸ್ ಇನ್ ಮಾಡ್ರನ್ ಇಂಡಿಯಾ: ವಿಜನ್ಸ್ ಆಂಡ್ ವ್ಯಾಲೂಸ್, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೨೦೦೭

ಜೋಸೆಫ್ ಬೆಂಜಮಿನ್, ಶೆಡ್ಯೂಲ್ಡ್ ಕಾಸ್ಟ್ ಇನ್ ಇಂಡಿಯನ್ ಪೊಲಿಟಿಕ್ಸ್ ಆಂಡ್ ಸೊಸೈಟಿ, ಡೆಲ್ಲಿ, ಇಎನ್‌ಎಸ್ ಪಬ್ಲಿಕೇಷನ್, ೧೯೮೯,

ಜೇಮ್ಸ್ ಮ್ಯಾಸ್ಸೆ, ಡೌನ್‌ಟ್ರೋನ್ ದ ಸ್ಟ್ರಗಲ್ ಆಫ್ ಇಂಡಿಯಾಸ್ ದಲಿತ್ಸ್ ಫಾರ್ ಐಡೆಂಟಿಟಿ, ಸಾಲಿಸ್ಯಾರಿಟಿ ಆಂಡ್ ಡೆಲಿಬರೇಷನ್, ಜಿನೆವಾ, ಡಬ್ಲ್ಯೂಸಿಸಿ ಪಬ್ಲಿಕೇಷನ್, ೧೯೯೭,

ಜಂಗಮ್ ಆರ್.ಟಿ., ಟೆಕ್ಸ್ಟ್ ಬುಕ್ ಆಫ್ ಪೊಲಿಟಿಕಲ್ ಸೋಷಿಯಾಲಜಿ, ನ್ಯೂಡೆಲ್ಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೮೨,

ದ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯಿತಿ ಆಂಡ್ ನ್ಯಾಯ ಪಂಚಾಯತ್ ಆ್ಯಕ್ಟ್, ೧೯೮೩.

ದಾಸ್, ಇಂಡಿಯನ್ ದಲಿತ್ಸ್–ವಾಯ್ಸ್, ವಿಜನ್ ಅಂಡ್ ಪಾಲಿಟಿಕ್ಸ್, ನ್ಯೂಡೆಲ್ಲಿ, ಗ್ಲೋಬಲ್ ವಿಜನ್ ಪಬ್ಲಿಷಿಂಗ್ ಹೌಸ್, ೨೦೦೪,

ದಿವಾಕರ್ ಎಂ.ಎನ್, "ದಲಿತ್ ಕ್ವಷ್ಚನ್ ಆಫ್ ಇನ್‌ಇಕ್ವಾಲಿಟಿ, ಎಕ್ಸ್‌ಪ್ಲಾಯ್‌ಟೇಷನ್, ಆಂಡ್ ಮಾರಲೈಜೇಷನ್, : ಎ ಮೈಕ್ರೋ ವ್ಹೀವ್, ಆಫ್ ಗ್ರೌಂಡ್ ರಿಯಾಲಿಟೀಸ್", ದಿ ಮ್ಯಾನ್ ಆಂಡ್ ಡೆವಲಪ್‌ಮೆಂಟ್, ವಾ.ಸಂ.೨೧, ಸಂ.೩, ಸೆಪ್ಟಂಬರ್, ೧೯೯೯,

ದುರ್ಗದಾಸ್ ಬಸು, ಇಂಟ್ರಡಕ್ಷನ್ ಟು ದ ಕಾನ್ಸಿಟಿಟ್ಯೂಷನ್ ಆಫ್ ಇಂಡಿಯಾ, ನ್ಯೂಡೆಲ್ಲಿ, ವಾಡ್ವಾ ಆಂಡ್ ಕಂಪನಿ, ಲಾ ಪಬ್ಲಿಕೇಷನ್ಸ್, ೨೦೦೭,

.**ನಖ್ವಿ, ಎಸ್.ಕ್ಯೂ.,** ಎಸೋಶಿಯಲ್ ಚೇಂಜ್ ಅಂಡ್ ಪೊಲಿಟಿಕಲ್ ಪಾರ್ಟಿಸಿಪೇಷನ್, ನ್ಯೂಡೆಲ್ಲಿ, ಕಾಮನ್‌ವೆಲ್ತ್ ಪಬ್ಲಿಕೇಷನ್, ೧೯೮೯,

ನರೇಂದ್ರಕುಮಾರ್, ಆಂಡ್ ಮನೋಜ್‌ರಾಜ್, ದಲಿತ್ ಲೀಡರ್‌ಶಿಪ್ ಇನ್ ಪಂಚಾಯತ್ ಎ ಸ್ಟಡಿ ಆಫ್ ಫೋರ್ ಸ್ಟೇಟ್ಸ್–ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೧೯೯೫,

ನಾಯ್ಡು ಆರ್.ವಿ.ಕೆ, ಎಂಪವರ್‌ಮೆಂಟ್ ಶೆಡ್ಯೂಲ್ಡ್ ಕಾಸ್ಟ್ (ದಲಿತ ಸ್ಟಡೀಸ್), ಡೆಲ್ಲಿ, ಕಲ್ಪಾಜ್ ಪಬ್ಲಿಕೇಷನ್, ೨೦೦೪,

ನೇರಿ ಕರ್ನೇಲಿಯಾ – ಕರ್ನಾಟಕ ಗ್ರಾಮ ಪಂಚಾಯತ್‌ಗಳು ಗ್ರಾಮಸ್ವರಾಜ್ಯದೆಡೆಗೆ ಕರ್ನಾಟಕ ಜರ್ನಲ್ ಆಫ್ ಪೊಲಿಟಿಕ್ಸ್– ಪೊಲಿಟಿಕಲ್ ಸೈನ್ಸ್ ಟೀಚರ್ಸ್ ಅಕಾಡೆಮಿ ಮೈಸೂರು,ಇಸ್ಯೂ ನಂ.೧೧, ಸಂಪುಟ ೧, ಡಿಸೆಂಬರ್ ೨೦೦೯.

ನಿನಿಯಾನ್ ಸ್ಮಾರ್ಟ್, "ರಿಲಿಜಿಯನ್ ಅಂಡ್ ಪೊಲಿಟಿಕ್ಸ್" ಜೋಯಲ್ ಕ್ರಿಯಾಗರ್ (ಸಂ) ಪೊಲಿಟಿಕ್ಸ್ ಆಫ್ ದ ವರ್ಲ್ಡ್, ನ್ಯೂಯಾರ್ಕ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ೨೦೦೧, ಪು–೭೨೨

ಪದ್ಮಿನಿ ನಾರಾಯಣ್, ರಿಜರ್ವೇಷನ್ ಇನ್ ಪೊಲಿಟಿಕ್ಸ್ ಆಂಡ್ ಶೆಡ್ಯೂಲ್ಡ್ ಕಾಸ್ಟ್ ಎಲೈಟ್ಸ್, ವಿ.ಪಿ.ಸಿಂಗ್ ಆಂಡ್ ಬಿ.ಸಿ.ಅಗರವಾಲ್, (ಸಂಪಾದಿತ) ರಿಜರ್ವೇಷನ್ ಪಾಲಿಸಿ: ಪ್ರೋಗ್ರಾಮ್ಸ್ ಆಂಡ್ ಇಶ್ಯೂಸ್, ಜೈಪುರ್, ರಾವತ್ ಪಬ್ಲಿಕೇಷನ್, ೧೯೮೬,

ಪಂಚಮಿತ್ರ ವೆಬ್‌ಸೈಟ್

ಪಾಮರ್ ಎನ್.ಡಿ., ಎಲೆಕ್ಷನ್ಸ್ ಅಂಡ್ ಪೊಲಿಟಿಕಲ್ ಡೆವಲಪ್‌ಮೆಂಟ್ –ದ ಸೌತ್ ಏಷ್ಯನ್ ಎಕ್ಸ್‌ಪೀರಿಯನ್ಸ್, ನ್ಯೂ ಡೆಲ್ಲಿ, ವಿಕಾಸ್ ಪಬ್ಲಿಕೇಷಿಂಗ್ ಹೌಸ್, ೧೯೭೬,

ಪೀಟರ್ ರೊನಾಲ್ಡ್ ಡಿಸೋಜಾ, "ಡಿಸೆಂಟ್ರಲೈಜೇಷನ್ ಆಂಡ್ ಲೋಕಲ್ ಗವರ್ನಮೆಂಟ್: ದ ಸೆಕೆಂಡ್ ವಿಂಡ್ ಆಫ್ ಡೆಮಾಕ್ರಸಿ ಇನ್ ಇಂಡಿಯಾ", ಜೋಯಾಹಸನ್, ಈ.ಶ್ರೀಧರನ್ ಆಂಡ್ ಸುದರ್ಶನ್, (ಸಂ), ಇಂಡಿಯಾಸ್ ಲಿವಿಂಗ್ ಕಾನ್ಸಿಟಿಟ್ಯೂಷನ್, ಐಡಿಯಾಸ್, ಪ್ರಾಕ್ಟೀಸಸ್, ಕಾಂಟ್ರವರ್ಸಿಸ್,ಡೆಲ್ಲಿ, ಪರ್ಮನೆಂಟ್ ಬ್ಲಾಕ್, ೨೦೦೨,

ಪಾಲ್, ಜಯಲ್ ವಿಷ್ಣುಮಹಾಪಾತ್ರ, ಸುಧಾಪೈ (ಸಂ), ಇಂಟ್ರಾಗೇಟಿಂಗ್ ಸೋಷಿಯಲ್ ಕ್ಯಾಪಿಟಲ್, ದ ಇಂಡಿಯನ್ ಎಕ್ಸಪೀರಿಯನ್ಸ್, ನ್ಯೂಡೆಲ್ಲಿ, ಸಚ್ಚಿದಾನಂದ ಪಬ್ಲಿಕೇಷನ್, ೨೦೦೪

ಪೀಟರ್ ರೋನಾಲ್ಡ್ ಡಿಸೋಜ, ದ ಸ್ಟ್ರಗಲ್ ಫಾರ ಲೋಕಲ್ ಗವರ್ನಮೆಂಟ್ ಇಂಡಿಯನ್ ಡೆಮಾಕ್ರಸಿಸ್ ನ್ಯೂಫೇಸ್, ಪಬ್ಲೀಷರ್ಸ್, ದ ಜರ್ನಲ್ ಆಫ್ ಫೆಡರಲಿಸಂ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೨೦೦೩, ಸಂಪು. ಸಂ. ೩೩, ಸಂಖ್ಯೆ ೪ ಪು. ಸಂ.(೧೯–೧೮)

ಪ್ರತ್ಯುಷ್ಣ ಪಟ್ನಾಯಕ್, ಅಫಿರ್‌ಮೇಟಿವ್ ಯಾಕ್ಷನ್ ಆಂಡ್ ರೆಪ್ರೆಂಜಂಟೇಷನ್ ಆಫ್ ವೀಕರ್ ಸೆಕ್ಷನ್, ಪಾರ್ಟಿಸಿಪೇಷನ್ ಆಂಡ್ ಅಕೌಂಟಬಿಲಿಟಿ ಇನ್ ಓರಿಸ್ಸಾ ಪಂಚಾಯತ್, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಅಕ್ಟೋಬರ್ ೨೯, ೨೦೦೫. ನಾಗೇಶ್ವರರಾವ್, ಎ, ಡೆಮಾಕ್ರೆಟಿಕ್ ಡಿಸೆಂಟ್ರಲೈಜೇಷನ್ ಆಂಡ್ ಎಂಪವರ್‌ಮೆಂಟ್ ಆಫ್ ದಲಿತ್ಸ್: ಎ. ಡಯಾಕ್ರಾನಿಕ್ ಸ್ಟಡೀ ಆಫ್ ಟು ವಿಲೇಜ್ ಇನ್ ಆಂಧ್ರಪ್ರದೇಶ ಡಿಪಾಟ್‌ಮೆಂಟ್ ಆಫ್ ಪೊಲಿಟಿಕಲ್ ಸೈನ್ಸ್, ಸ್ಕೂಲ್ ಆಫ್

ಸೋಷಿಯಲ್ ಸೈನ್ಸ್‌ಸ್, ಯೂನಿವರ್ಸಿಟಿ ಆಫ್ ಹೈದರಾಬಾದ್‌ಗೆ, ಪಿಎಚ್.ಡಿ ಪದವಿಗಾಗಿ ಸಲ್ಲಿಸಲಾದ ಅಪ್ರಕಟಿತ ಪಿಹೆಚ್.ಡಿ ಮಹಾ ಪ್ರಬಂಧ, ೨೦೧೧,

ಪುರಾನೆ, ಕೆ.ಡಿ, ಅನ್‌ಟಚಬಲ್ಸ್ ಆಂಡ್ ಲಾ-ದ ಗ್ರೌಂಡ್ ರಿಯಾಲಿಟಿ, ನ್ಯೂಡೆಲ್ಲಿ, ಗ್ಯಾನ್ ಪಬ್ಲಿಷಿಂಗ್ ಹೌಸ್, ೨೦೦೧,

ಪುಂದಿರ್ ಜೆ.ಕೆ, ಛೇಂಜಿಂಗ್ ಪ್ಯಾಟ್ರನ್ ಆಫ್ ಶೆಡ್ಯೂಲ್ಡ್ ಕಾಸ್ಟ್, ರಾವತ್ ಪಬ್ಲಿಕೇಷನ್, ಜೈಪುರ್, ೧೯೯೭

ಡಿ.ಎಲ್.ಶೇಟ್, ರಿಜರ್‌ವೇಷನ್ ಪಾಲಿಸಿ ರಿನಿಜಿಬೇಕ್ ಡಾ. ಗುರುಪ್ರೀತ್ ಮಹಾಜನ್ (ಸಂ) ಡೆಮಾಕ್ರಸಿ, ಡಿಫರೆನ್ಸ್/ ಆಂಡ್ ಸೋಷಿಯಲ್ ಜಸ್ಟೀಸ್, ದೆಹಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೮,

ಪೂನಮ್ ವತ್ಸ, ಪೊಲಿಟಿಕಲ್ ಪಾರ್ಟಿಸಿಪೇಷನ್ ಆಂಡ್ ಕ್ಯಟಿಟೂಡಿನಲ್ ಟ್ರಾನ್ಸ್‌ಫರ್ಮೇಷನ್ ಆಫ್ ರೂರಲ್ ವುಮೆನ್, ಡೆಲ್ಲಿ, ಅಭಿಜಿತ್ ಪಬ್ಲಿಕೇಷನ್, ೨೦೦೪,

ಬಷಿರುದ್ದೀನ್ ಅಹ್ಮದ್, "ಓಟಿಂಗ್ ಇನ್ ಇಂಡಿಯಾ– ಖಖ– ಪೊಲಿಟಿಕಲ್ ಸ್ಟ್ರಟಿಫಿಕೇಷನ್ ಆಫ್ ಇಂಡಿಯ" ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,(ವಾರ್ಷಿಕ ಸಂಖ್ಯೆ) ಜನವರಿ ೧೯೭೧,

ಬಲವಂತರಾಯ್ ಮೆಹತಾ ಕಮಿಟಿ ರಿಪೋರ್ಟ್ ಸೆಕ್ಷನ್ ೨, ಪ್ಯಾರ ೨, ನ್ಯೂಡೆಲ್ಲಿ, ಪ್ಲಾನಿಂಗ್ ಕಮಿಷನ್, ಗವರ್ನಮೆಂಟ್ ಆಫ್ ಇಂಡಿಯಾ, ೧೯೫೮

ಭಾಟ್ನಾಗಾರ್: ರೂರಲ್ ಲೋಕಲ್ ಗವರ್ನಮೆಂಟ್ ಇನ್ ಇಂಡಿಯಾ, ನ್ಯೂಡೆಲ್ಲಿ, ಲೈಟ್ ಆಂಡ್ ಲೈಫ್ ಪಬ್ಲಿಷರ್ಸ್, ೧೯೭೮,

ಮಹಾತ್ಮಾ ಗಾಂಧಿ, ಹರಿಜನ್, ಜನವರಿ ೧೮, ೧೯೪೮,

ಮಹಾರಿಯಾ ಎಸ್.ಎಲ್., ಹೆಲ್ಪಿಂಗ್ ವೀಕರ್ ಸೆಕ್ಷನ್, ಕುರುಕ್ಷೇತ್ರ, ಸಂಪುಟ ಸಂಖ್ಯೆ ೨೪, ಸಂಖ್ಯೆ ೧೨, ೧೯೭೮,

ಮಹಿಂದ್ರಸಿಂಗ್ ಪಿ. ಕಾನ್ಸಿಟಿಟ್ಯೂಷನ್ ಆಫ್ ಇಂಡಿಯಾ, ಲಕ್ನೋ, ಈಸ್ಟರ್ನ್ ಬುಕ್ ಕಂಪನಿ, ೨೦೦೧,

ಮಾಳವಿಕ ಎಂ.ದೇಶಪಾಂಡೆ ಮತ್ತು ಎಸ್.ಎಸ್.ಪಟಗುಂಡಿ, ರೆಪ್ರೆಂಜೆಂಟೇಷನ್ ಆಫ್ ವುಮೆನ್ ಇನ್ ಲೋಕಲ್ ಗವರ್ನಮೆಂಟ್ ವಿಥ್ ಸ್ಪೇಷೆಲ್ ರೆಫೆರೆನ್ಸ್ ಟು ಕರ್ನಾಟಕ, ಕರ್ನಾಟಕ

ಗವರ್ನಮೆಂಟ್ ಆಂಡ್ ಪಾಲಿಟಿಕ್ಸ್, (ಸಂ), ಹರೀಶ್ ರಾಮಸ್ವಾಮಿ ಮತ್ತು ಇತರರು, ಕಾನ್ಸೆಪ್ಟ್ ಪಬ್ಲಿಷಿಕಂಗ್ ಕಂಪನಿ, ನ್ಯೂಡೆಲ್ಲಿ, ೨೦೦೭,

ಮಾರ್ಕ್ ಜುಗೆನ್ಸ್‌ಮೇಯರ್, ರಿಲಿಜಿಯನ್ ರೆಬೆಲ್ ಇನ್ ಪಂಜಾಬ್: ದಿ ಸೋಷಿಯಲ್ ವಿಜನ್ ಆಂಡ್ ಅನ್‌ಟಚೆಬಿಲಿಟಿ, ನ್ಯೂಡೆಲ್ಲಿ, ಅಜಂತಾ ಪಬ್ಲಿಕೇಷನ್ಸ್, ೧೯೯೮,

ವಿವೇಕ್ ಕುಮಾರ್, ಮೋರ್ವೋರ್ಕ್ತ೧೯೭೩ರ ದಲಿತ ಪ್ಯಾಂಥರ್ ಚಳುವಳಿಯು ಪ್ರಕಟಿಸಿದ "ದಲಿತ ಯಾರು?" ಎಂಬ ಪ್ರಣಾಳಿಕೆಯನ್ನು ಪ್ರಕಟಿಸಿದೆ.

ಮ್ಯಾಕ್ ಕ್ಲೋಸ್ಕಿ, ಹೆಚ್.,"ಪೊಲಿಟಿಕಲ್ ಪಾರ್ಟಿಸಿಪೇಷನ್" ಎನ್‌ಸೈಕ್ಲೋಪಿಡಿಯಾ, ಆಫ್ ಸೋಷಿಯಲ್ ಸೈನ್ಸಸ್ ನ್ಯೂಯಾರ್ಕ್, ಕಾಲಿಯರ್, ಮ್ಯಾಗ್‌ಮಿಲನ್, ೧೯೬೮,

ಮಿಖಾಯಿಲ್ ರುಷ್ ಆಂಡ್ ಪಿಲಿಪ್ಸ್ ಅತೋಫ್, "ಇಂಟ್ರಡಕ್ಷನ್ ಟು ಪೊಲಿಟಿಕಲ್ ಸೋಷಿಯಾಲಜಿ– ವೆಸರ್ನ್ ಪ್ರಿಂಟಿಂಗ್ ಸರ್ವಿಸ್, ೧೯೭೧,

ವಿಮಲ್ ಥೋರೋಟ್, "ದಲಿತ್ ವುಮೆನ್ ಆಂಡ್ ಹ್ಯೂಮನ್‌ರೈಟ್ಸ್: ಸಮ್ ನೆಗ್ಲೆಕ್ಟೆಡ್ ಇಶ್ಯೂಸ್," ಭಾರ್ಗವ ಆಂಡ್ ಆರ್.ಎಂ.ಪಾಲ್ (ಸಂ), ಹ್ಯೂಮನ್‌ರೈಟ್ಸ್ ಆಫ್ ದಲಿತ್ಸ್: ಸೊಸೈಟಲ್ ವೈಯಾಲೇಷನ್, ನ್ಯೂಡೆಲ್ಲಿ, ಗ್ಯಾಂಗ್ ಪಬ್ಲಿಷಿಂಗ್ ಹೌಸ್, ೧೯೯೯,

ಮುಖ್ಯೋಪಾಧ್ಯಾಯ ಎ.ಕೆ., ಪೊಲಿಟಿಕಲ್ ಸೋಷಿಯಾಲಜಿ, ಕಲ್ಕತ್ತಾ, ಕೆ.ವಿ.ಭಾಗ್ಚಿ ಆಂಡ್ ಕಂಪನಿ, ೧೯೮೦,

ಮುಮ್ತಾಜ್ ಅಲಿಖಾನ್, ಷೆಡ್ಯೂಲ್ಡ್ ಕಾಸ್ಟ್ಸ್ ಅಂಡ್ ದೇರ್ ಸ್ಟೇಟಸ್ ಇನ್ ಇಂಡಿಯಾ, ನ್ಯೂಡೆಲ್ಲಿ, ಉಪ್ಪಲ್ ಪಬ್ಲಿಷಿಂಗ್ ಹೌಸ್, ೧೯೮೦

ಯತೀಂದ್ರಸಿಂಗ್ ಸಿಸೋಡಿಯಾ, ಪಂಚಾಯತ್ ರಾಜ್ ಇನ್ ಟ್ರೈಬಲ್ ರೀಜನ್ ಆಫ್ ಮಧ್ಯಪ್ರದೇಶ್; ಲಾ ಆಂಡ್ ಪ್ರಾಕ್ಟೀಸಿಂಗ್ ಫಂಕ್ಷನಿಂಗ್ ಆಫ್ ಪಂಚಾಯತ್ ರಾಜ್ ಸಿಸ್ಟಮ್, ಯತೀಂದ್ರಸಿಂಗ್ ಸಿಸೋಡಿಯಾ (ಸಂ), ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ, ೨೦೦೫,

ರಜನಿ ಕೊಠಾರಿ, ಕಾಸ್ಟ್ ಇನ್ ಇಂಡಿಯನ್ ಪೊಲಿಟಿಕ್ಸ್, ಡೆಲ್ಲಿ, ಓರಿಯಂಟ್ ಲಾಂಗ್‌ಮನ್, ಪಬ್ಲಿಕೇಷನ್, ೧೯೫೪

ರಂಜಿತ್ ರಾಜ್ಯಾಧ್ಯಕ್ಷ, ಎನ್‌ಸೈಕ್ಲೋಪಿಡಿಯ ಆಫ್ ಸೋಶಿಯಲ್ ಪ್ರಾಬ್ಲಮ್ಸ್, ಆಂಡ್ ಸೋಶಿಯಲ್ ಚೇಂಜ್, ನ್ಯೂಡೆಲ್ಲಿ, ಡಾಮಿನೆಂಟ್ ಪಬ್ಲಿಷರ್ಸ್, ೨೦೦೪,

ರಾಮ್‌ಶ್ರೇಯರ್, ದಲಿತ ಡೆವಲಪ್‌ಮೆಂಟ್ ಡೆಮಾಕ್ರೆಸಿ, ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೨೦೦೦,

ರಾಬ್ಸನ್ ಡಬ್ಲ್ಯೂ.ಎ., ಎನ್ಸೈಕ್ಲೋಪಿಡಿಯಾ ಆಫ್ ಸೋಷಿಯಲ್ ಸೈನ್ಸಸ್,

ರಾಮ್ ಶ್ರೀಯರ್ ರಾಯ್, ದಲಿತ ಡೆವಲಪ್‌ಮೆಂಟ್ ಅಂಡ್ ಡೆಮಾಕ್ರಸಿ, ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೨೦೦೦

ರಿಪೋರ್ಟ್ ಆನ್ ದ ಕರ್ನಾಟಕ ಪಂಚಾಯತ್ ರಾಜ್ ಆ್ಯಕ್ಟ್ ಅಮೆಂಡ್‌ಮೆಂಟ್ ಕಮಿಟಿ,

ರಿಪೋರ್ಟ್ ಆಫ್ ನ್ಯಾಷನಲ್ ಕಮಿಷನ್ ಫಾರ್ ಎಸ್‌ಸಿಸ್ ಆಂಡ್ ಎಸ್‌ಟಿಸ್, ಉಲ್ಲೇಖ: ಅಂಕಿತ್ ಮಿಶ್ರಾ, ಎಂಪವರ್‌ಮೆಂಟ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್ ಥ್ರೂ ರಿಜರ್ವೇಷನ್ ಪಾಲಿಸಿ ವಿಥ್ ರೆಫೆರೆನ್ಸ್ ಟು ಡಾ.ಬಿ.ಆರ್.ಅಂಬೇಡ್ಕರ್ಸ್, ವಿಷನ್ ಆಂಡ್ ಚಾಲೆಂಜಸ್, ಇನ್ ಕರೆಂಟ್ ಸೋಷಿಯೋ ಲೀಗಲ್ ಮಿಲಿವ್, ಕಾನೂನು ವಿಭಾಗ, ಅಲಿಘಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೧೨,

ದ ಪ್ರಾಬ್ಲಮ್, ಸೆಮಿನಾರ್, ಸಂಪುಟ ಸಂ: ೪೭೧, ನವೆಂಬರ್, ೧೯೯೮,

ಲೀಲಾ ವಸಾರಿಯ **"**ದ ಹರಿಜನ್ಸ್ ವರ್ಸನಿಂಗ್ ಪ್ಲೈಟ್**"** ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾ. ಸಂ.೯, ಸಂ.೫, ಫೆಬ್ರವರಿ, ೧೯೭೯

ಲೆಸ್ಟರ್ ಡಬ್ಲ್ಯೂ ಮಿಲ್‌ಬ್ರಾತ್, ಪೊಲಿಟಿಕಲ್ ಪಾರ್ಟಿಸಿಪೇಷನ್–ಹೌ ಆಂಡ್ ವೈ ಡು ಪೀಪಲ್ ಗೆಟ್ ಇನ್‌ವಾಲ್ವಡ್ ಇನ್ ಪಾಲಿಟಿಕ್ಸ್, ಚಿಕಾಗೋ, ರ್‍ಯಾಂಡ್ ಮ್ಯಾಕ್‌ನಲ್ಲಿ, ಪಬ್ಲಿಷಿಂಗ್, ೧೯೭೭

ಲಿಟೆನ್‌ಜಿ.ಕೆ, ಡೆವಲಪ್‌ಮೆಂಟ್ ಡೆವಲೂಷನ್ ಆಂಡ್ ಡೆಮಾಕ್ರಸಿ; ವಿಲೇಜ್ ಡಿಸ್ಕೋರ್ಸ್, ಇನ್ ವೆಸ್ಟ್ ಬೆಂಗಾಲ್, ಸೇಜ್ ಪಬ್ಲಿಕೇಷನ್, ನ್ಯೂಡೆಲ್ಲಿ, ೧೯೯೬

ವಸಂತ ದೇಸಾಯಿ, ಪಂಚಾಯತ್ ರಾಜ್: ಪವರ್ ಟು ದ ಪೀಪಲ್, ಬಾಂಬೆ, ಹಿಮಾಲಯ ಪಬ್ಲಿಕೇಷನ್ಸ್, ೧೯೯೦,

ವಿಜಯಕುಮಾರ್, ಶೆಡ್ಯೂಲ್ಡ್ ಕಾಸ್ಟ್ ಪಂಚಾಯತ್ ಪ್ರಧಾನ್ಸ್ ಇನ್ ಇಂಡಿಯಾ: ಎ ಸ್ಟಡೀ ಆಫ್ ವೆಸ್ಟರ್ನ್ ಉತ್ತರ ಪ್ರದೇಶ್, ಡೆಲ್ಲಿ, ಅಜಂತಾ ಪಬ್ಲಿಕೇಷನ್ಸ್, ೧೯೮೯

ವಿವೇಕ್ ಕುಮಾರ್, ಸಿಚುಯೇಟಿಂಗ್ ದಲಿತ್ಸ್ ಇನ್ ಇಂಡಿಯನ್ ಸೊಸೈಟಿ, ಸೋಷಿಯಲಾಜಿಕಲ್ ಬುಲಿಟಿನ್, ಸಂಪುಟ ಸಂ.೫೪., ಸಂ.೩, ಸೆಪ್ಟಂಬರ್–ಡಿಸೆಂಬರ್, ೨೦೧೫,

ವೆಂಕಟರಂಗಯ್ಯ ಎಂ.ಮತ್ತು ಎಂ.ಪಟ್ಟಾಭಿರಾಮ್, ಲೋಕಲ್ ಗವರ್ನಮೆಂಟ್ ಇನ್ ಇಂಡಿಯಾ, ಅಲೈಡ್ ಪಬ್ಲಿಷರ್ಸ್, ಬಾಂಬೆ, ೧೯೬೯,

ವೆಂಕಟರವಿ, ಆರ್.ಎ ಸ್ಟಡೀ ಆನ್ ಸೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ಸ್ ಇನ್ ಪಂಚಾಯತ್ ರಾಜ್ ಇನ್ಸಿಟಿಟ್ಯೂಷನ್ ಇನ್ ನೆಲ್ಲೂರು ಡಿಸ್ಟ್ರಿಕ್ ಆಫ್ ಆಂಧ್ರಪ್ರದೇಶ, ಸ್ಟಡೀ ರಿಪೋರ್ಟ್, ಕೌನ್ಸಿಲ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್, ಹೈದರಾಬಾದ್, ೨೦೦೨,

.ಶ್ಯಾಮಲ, ಸಿ.ಕೆ "ಎಲೆಕ್ಟೆಡ್ ರೆಪ್ರೆಂಜೆಂಟೇಷನ್ ಇನ್ ರೂರಲ್ ಡಿಸೆಂಟ್ರಲೈಜ್ಡ್ ಗವರ್ನೆನ್ಸ್: ಸೋಷಿಯೋ ಎಕನಾಮಿಕ ಅನಾಲಿಸಿಸ್ ಆಫ್ ಜಿಲ್ಲಾ ಪಂಚಾಯತ್ ಮೆಂಬರ್ಸ್ ಆಫ್ ಕರ್ನಾಟಕ, ಮ್ಯಾನ್ ಆಂಡ್ ಡೆವಲಪ್‌ಮೆಂಟ್, ಸಂಪುಟ ಸಂ.೨೩, ಸಂ.೨, ಜೂನ್ ೨೦೦೧,

ಶ್ಯಾಮ್‌ನಂದನ್ ಚೌಧರಿ, ದಲಿತ್ ಆಂಡ್ ಟ್ರೈಬಲ್ ಲೀಡರ್‌ಶಿಪ್ ಇನ್ ಪಂಚಾಯತ್, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, ೨೦೦೪

ಶಿವ ಬಿ.ರಾವ್, ಸಂಪಾದಿತ, "ದ ಫ್ರೇಮಿಂಗ್ ಆಫ್ ಇಂಡಿಯಾಸ್ ಕಾನ್ಸಿಟಿಟ್ಯೂಷನ್, ನ್ಯೂಡೆಲ್ಲಿ, ಮನೋಹರ್ ಪಬ್ಲಿಕೇಷನ್, ೧೯೬೮,

ಸಂತೋಷ ಕುಮಾರ್‌ವಿ., ಸೋಷಿಯಲ್ ಜಸ್ಟೀಸ್ ಆಂಡ್ ಪಾಲಿಟಿಕ್ಸ್, ಆಫ್ ರಿಜರ್ವೇಷನ್ ಇನ್ ಇಂಡಿಯಾ, ದ ಪೋಸ್ಟ್ ಮಂಡಲ್, ನ್ಯೂಡೆಲ್ಲಿ, ಮಿತ್ತಲ್ ಪಬ್ಲಿಕೇಷನ್, ೧೯೯೯.

ಸರ್ಕಾರ್, ಟಿ. "ರೆಫ್ಲೆಕ್ಷನ್ ಆಫ್ ಬೈರಾತಿ ರೇಪ್ ಕೇಸ್", ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲೀ, ಸಂಪುಟ ಸಂ.೧೬, ಸಂಖ್ಯೆ ೦೩, ಫೆಬ್ರವರಿ ೨, ೧೯೮೧.

ಸಿಂಗ್, ಪಿ.ಬಿ. "ಡಿಪ್ರೈವೇಷನ್ ಅಂಡ್ ಪೊಲಿಟಿಕಲ್ ಕ್ಯಾನ್ಷಿಯಸ್‌ನೆಸ್" ಬಿ.ಕೆ.ನಾರ್ಲ (ಸಂ), ಪೊಲಿಟಿಕಲ್ ಸೋಶಿಯಾಲಜಿ, ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೧೯೯೯

ಸತೀಶ್ ಸಬರ್ವಾಲ್, "ದ ರಿಸರ್ವ್ಡ್ ಕಾನ್ಸ್ಟಿಟ್ಯೂಯನ್ಸಿ ಕ್ಯಾಂಬಿನೇಟ್ಸ್ ಅಂಡ್ ಕಾನ್ಸಿಕ್ಯೂನ್ಸೀಸ್, ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ವಾ.ಸಂ.೭, ಸಂ.೨, ೧೯೭೨,

ಸಾಹಿಬ್ ಸಿಂಗ್ ಮತ್ತು ಸ್ವಿಂದುರ್ ಸಿಂಗ್, ಲೋಕಲ್ ಗವರ್ನಮೆಂಟ್ ಇನ್ ಇಂಡಿಯಾ, ನ್ಯೂ ಅಕಾಡೆಮಿಕ್ ಪಬ್ಲಿಷಿಂಗ್ ಕಂಪನಿ, ೨೦೦೭,

ಸಂಪಾ ಗುಹಾ, ಪೊಲಿಟಿಕಲ್ ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಛೇಂಜಿಂಗ್ ಸೊಸೈಟಿ, ನ್ಯೂಡೆಲ್ಲಿ, ಇಂಟರ್-ಇಂಡಿಯಾ ಪಬ್ಲಿಕೇಷನ್, ೧೯೯೬,

ಸಿಡ್ನಿ ವೆರ್ಬ ಮತ್ತು ಇತರರು, ಪಾರ್ಟಿಸಿಪೇಷನ್ ಆಂಡ್ ಇಕ್ವಾಲಿಟಿ, ಏ ಸೆವೆನ್ ನೇಷನ್ ಕಂಪ್ಯಾರಿಜನ್, ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೧೯೭೮,

ಸಿಂಗ್‌ಪಿ.ಬಿ., ಡಿಪ್ರೈವೇಷನ್ ಆಂಡ್ ಪೊಲಿಟಿಕಲ್ ಕಾನ್ಷಿಯಸ್‌ನೆಸ್, ಬಿ.ಕೆ.ನಾಗ್ಲಾ (ಸಂ), ಪೊಲಿಟಿಕಲ್ ಸೋಷಿಯಾಲಜಿ ನ್ಯೂಡೆಲ್ಲಿ, ರಾವತ್ ಪಬ್ಲಿಕೇಷನ್, ೧೯೯೯,

ಸುಂದರಾಮ್ ಡಿ., ಗ್ರಾಸ್ ರೂಟ್ಸ್ ಗವರ್ನೆನ್ಸ್ ಇನ್ ಇಂಡಿಯಾ, "ಎ ಡ್ರೀಮ್ ಆರ್ ರಿಯಾಲಿಟಿ, ೯, ಡೈನಾಮಿಕ್ಸ್ ಆಫ್ ಗ್ರೇಟ್ ರೆಸ್ಟ್ ಗವರ್ನೆನ್ಸ್ ಇನ್ ಇಂಡಿಯಾ, ಡ್ರೀಮ್ಸ್ ಆಂಡ್ ರಿಯಾಲಿಟೀಸ್, (ಸಂ), ಡಿ.ಸುಂದರರಾಮ್, ಕಾನಿಷ್ಕ ಪಬ್ಲಿಷರ್ಸ್, ಡಿಸ್ಟ್ರೀಬೂಟರ್ಸ್, ನ್ಯೂಡೆಲ್ಲಿ, ೨೦೦೭,

ಸುಧಾ ಪೈ, ಸೋಷಿಯಲ್ ಕ್ಯಾಪಿಟಲ್ ಪಂಚಾಯತ್ಸ್ ಆಂಡ್ ಗ್ರಾಸ್ ರೂಟ್ ಡೆಮಾಕ್ರಸಿ: ದ ಪೊಲಿಟಿಕ್ಸ್ ಆಫ್ ದಲಿತ್ ಅಸರ್ಸನ್ ಇನ್ ಟು ಡಿಸ್ಟ್ರಿಕ್ಟ್ ಅಫ್ ಉತ್ತರ ಪ್ರದೇಶ, ದ್ವೈಪಾಯನ್ ಭಟ್ಟಾಚಾರ್ಯ, ನೀರಜಗೋ ಸೋಷಿಯಲ್ ಥೇಂಚ್, ನ್ಯೂಡೆಲ್ಲಿ, ಡಾಮಿನೆಂಟ್ ಪಬ್ಲಿಷರ್ಸ್, ೨೦೦೪,

ಸುಮತಿ ಎಸ್ ಆಂಡ್ ವಿ.ಸುದರ್ಶನ್, ವಾಟ್ ಡಜ್ ದ ನ್ಯೂ ಪಂಚಾಯತ್ ಸಿಸ್ಟಮ್ ಗ್ಯಾರಂಟಿ– ಎ ಕೇಸ್ ಸ್ಟಡಿ ಆಫ್ ಪಾಪಪಟ್ಟಿ, ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಸಂಪುಟ. ಸಂ. – ಆಗಸ್ಟ್ ೨೦ ೨೦೦೫,

.ಶ್ರೀವಾಸ್ತವ ಕೆ.ಬಿ, "ಪಂಚಾಯತ್‌ರಾಜ್ ಇನ್ ಇಂಡಿಯಾ: ಟಿಲ್ ಬ್ರಿಟಿಷ್ ಪಿರಿಯಡ್", ಪಂಚಾಯತ್ ಸಂದೇಶ್, ಸಂಪುಟ ಸಂಖ್ಯೆ ೧೫೧೪, ಸಂಖ್ಯೆ ೧೧, ಫೆಬ್ರವರಿ, ೧೯೮೫ ಪು. ಸಂ.೭

ಹೆರಾಲ್ಡ್ ಜೆ.ಲಾಸ್ಕಿ, ಗ್ರಾಮರ್ ಆಫ್ ಪೊಲಿಟಿಕ್ಸ್, ಡೆಲ್ಲಿ, ೧೯೭೯, ಎಸ್.ಚಾಂದ್ ಆಂಡ್ ಕಂಪನಿ,



ಅಧ್ಯಯನ ವಿಭಾಗ